గమక కళానిధి



సంపాదకురు: జయా రాజశేఖర్

ಗಮಕ ಕಲಾನಿಧಿ

ಸಂಪಾದಕಿ :

ಶ್ರೀಮತಿ ಜಿ. ವಿ. ಜಯಾರಾಜಶೇಖರ್ ಎಂ. ಎ.

1989

ಡಾ|| ಜೋಳದರಾಶಿ ಅಭಿನಂದನ ಸಮಿತಿ
6, 15ನೇ ಕ್ರಾಸ್, 3ನೇ ಬ್ಲಾಕ್, ಜಯನಗರ
ಬೆಂಗಳೂರು - 560 011
ದೂರವಾಣಿ : 605424

GAMAKA KALANIDHI- A Felicitation volume containing articles by various writers on the life and works of Dr. Joladarashi Doddanagowda.

Published by : Dr. Joladarashi Doddanagowda Abhinandana Samiti, 6, 15th Cross, 3rd Block, Jayanagar, Bangalore-11.

Printed at : M/s. Lotus Printers, Rajajinagar, Industrial Town, Bangalore - 560 044.

Pages : viii+241 Price Rs. : 40-00

First Edition : 1989

ರಕ್ಷಾಪುಟ ವಿನ್ಯಾಸ : ಶ್ರೀ ಕಮಲೇಶ್

ಚಿತ್ರಗಳು : ಶ್ರೀ ಹೆಚ್. ಚನ್ನವೀರಗೌಡ
ಡಾ|| ಹೆಚ್. ಚಂದ್ರಶೇಖರ್

ಬೆಲೆ : ನಲವತ್ತು ರೂಪಾಯಿಗಳು

ಮುದ್ರಣ :
ಮೆ|| ಲೋಟಸ್ ಪ್ರಿಂಟರ್ಸ್
32/25, ಕೈಗಾರಿಕಾ ನಗರ, ರಾಜಾಜಿನಗರ
ಬೆಂಗಳೂರು – 560 044

ಪ್ರಸ್ತಾವನೆ

ಶರಣ ಕವಿಯಾಗಿ, ಕಲಾವಿದನಾಗಿ, ನಟನಾಗಿ, ನಾಟಕಕಾರನಾಗಿ, ಗಮಕಿಯಾಗಿ, ಪ್ರವಚನಕಾರನಾಗಿ, ವ್ಯಾಖ್ಯಾನಪಟುವಾಗಿ ಐದು ದಶಕಗಳಿಂದಲೂ ನಾಡು, ನುಡಿಯ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಡಾ॥ ಜೋಳದರಾಶಿ ದೊಡ್ಡನ ಗೌಡರದು ಸಾರ್ಥಕ ಬದುಕು.

ಅವರು ಕೈಯಾಡಿಸದಿರುವ ಸಾಹಿತ್ಯ ಪ್ರಕಾರಗಳು ಕಡಿಮೆ. ಬಹುಶಃ ಅವರು ಗಮಕ ಕ್ಷೇತ್ರದಲ್ಲಿ ಪ್ರಸಿದ್ಧರಾದುದರಿಂದ ಸಾಹಿತ್ಯ ವಿಮರ್ಶಕರ ನೋಟಕ್ಕೆ ಹೆಚ್ಚು ಸಿಕ್ಕಲಿಲ್ಲವೋ ಏನೋ. ಅವರ ಆತ್ಮಕಥೆ "ನಂದೇ ನಾನೋದಿದೆ" ನಿರ್ಭೀತ ಮನಸ್ಸಿನ "ನಿರ್ಭಯರಾಗ್ರುಘ್ಳು!"

ಕಾವ್ಯಲೋಕದಲ್ಲಿಯೇ ಹೆಚ್ಚು ವಿಹರಿಸುವ ಶ್ರೀ ಗೌಡರು ಜೀವನಕಲೆಯನ್ನು ಕಡೆಗಣಿಸಿದವರಲ್ಲ. ಅವರ ಸಾಹಿತ್ಯದಲ್ಲಿ ಬಾರದ ವಿಷಯಗಳೇ ಇಲ್ಲ. ದೇವಾನು ದೇವತೆಗಳು, ಶರಣ ಶರಣೆಯರು, ರಾಜಕಾರಣಿಗಳು, ಸಾಮಾನ್ಯ ರೈತರು, ಸ್ತ್ರೀಯರು, ಎಳೆಯ ಮಕ್ಕಳು, ಪ್ರಕೃತಿ...ಹೀಗೆ ಎಲ್ಲರೂ, ಎಲ್ಲವೂ ಇವೆ. ಇವರ "ಬಯಲ ಗಳಿಕೆಯ ಬೆಳಗು" ಕನ್ನಡ ಸಾಹಿತ್ಯಲೋಕಕ್ಕೆ ಒಂದು ಅನರ್ಘ್ಯ ಕೊಡುಗೆ.

ಡಾ॥ ಜೋಳದರಾಶಿ ದೊಡ್ಡನಗೌಡರಿಗೆ ಬಿರುದು, ಬಾವಲಿಗಳು, ಪ್ರಶಸ್ತಿಗಳು ತಾವಾಗಿಯೇ ಹುಡುಕಿಕೊಂಡು ಬಂದವು. "ಗಮಕ ಕಲಾನಿಧಿ"–"ಗಮಕ ಗಂಧರ್ವ" "ಶರಣಕವಿ"–ಇವು ಅವರ ಬಿರುದುಗಳಲ್ಲಿ ಕೆಲವು. ಸಂದ ಸನ್ಮಾನಗಳಿಗೆ ಲೆಕ್ಕವಿಲ್ಲ, ಬಂದ ಬಹುಮಾನಗಳಿಗೆ ಸಂಖ್ಯೆಯಿಲ್ಲ.

ಸಣ್ಣ ಹಳ್ಳಿಯಲ್ಲಿ ಹುಟ್ಟಿ, ಕೇವಲ ನಾಲ್ಕನೆಯ ತರಗತಿಯವರೆಗೆ ವಿದ್ಯೆ ಕಲಿತು, ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ವಿಶಿಷ್ಟ ಸಾಧನೆ ಶ್ರೀಗೌಡರದು. ಶ್ರೀಗೌಡರಿಗೆ ಇದೇ ಜುಲೈ ತಿಂಗಳಿಗೆ 79 ವರ್ಷಗಳು ತುಂಬುತ್ತಿವೆ. 80ನೆಯ ವರ್ಷದಲ್ಲಿ ಪಾದಾರ್ಪಣೆ ಮಾಡಲಿರುವ ಈ ಶುಭ ಸಂದರ್ಭದಲ್ಲಿ "ಗಮಕ ಕಲಾನಿಧಿ" ಅಭಿನಂದನಗ್ರಂಥ ಪ್ರಕಟಿಸಬೇಕೆಂಬ ಉತ್ಕಟೇಚ್ಛೆ ಉಂಟಾಯಿತು. ಆ ಆಶಯದ ಫಲ ಈ "ಗಮಕ ಕಲಾನಿಧಿ".

ಡಾ॥ ಜೋಳದರಾಶಿ ದೊಡ್ಡನಗೌಡರ ಬದುಕು, ಬರಹಗಳ ಕಿರುಪರಿಚಯ ಮಾಡಿಕೊಡುವುದು ಈ ಗ್ರಂಥದ ಉದ್ದೇಶ. ಒಟ್ಟು ನಾಲ್ಕು ಭಾಗಗಳಲ್ಲಿರುವ ಈ ಗ್ರಂಥದಲ್ಲಿ ಮೊದಲ ಭಾಗ ಅವರ ವ್ಯಕ್ತಿಪರಿಚಯ, ಸ್ನೇಹ, ಸಂಬಂಧಗಳ ಬಳ್ಳಿಯ ಚಿಗುರು. ಎರಡನೆಯ ಭಾಗದಲ್ಲಿ ಅವರ ಬರಹಗಳ ಸಾಹಿತ್ಯಕ ವಿಮರ್ಶೆಗಳು ಇವೆ.

ಮೂರನೆಯ ಭಾಗದಲ್ಲಿ ಅವರ ಬಗೆಗೆ ಅರ್ಪಿಸಿರುವ ಕವನಕುಸುಮಗಳಿದ್ದರೆ, ನಾಲ್ಕ ನೆಯ ಭಾಗದಲ್ಲಿ ಅವರಿಗೆ ಪ್ರಿಯವಾದ–ಗಮಕ (ಅವರೇ ಬರೆದ ಒಂದು ಲೇಖನ ಇದಕ್ಕಾಗಿ ಉಪಯೋಗಿಸಿಕೊಂಡಿದ್ದೇನೆ) ಸಂಗೀತ, ಸಾಹಿತ್ಯದ ಸಮನ್ವಯ, ಭಕ್ತಿ ಸಂಗೀತ, ರಂಗ ನಾಟಕದ ತುಣುಕು, ಮತ್ತು ರಾಷ್ಟ್ರಪ್ರೇಮ–ಇವುಗಳ ಸಾಂಕೇತಿಕ ಬರಹಗಳಿವೆ.

ಒಬ್ಬರೇ ವ್ಯಕ್ತಿಯ ಮತ್ತು ಅವರ ಬರಹಗಳ ಬಗೆಗೆ ಬರೆದಿರುವುದರಿಂದ 40 ಜನ ಲೇಖಕ, ಲೇಖಕಿಯರು ಬರೆದಿರುವ ಈ 41 ಲೇಖನಗಳಲ್ಲಿ ಪುನರುಕ್ತಿ ಬರುವುದು ಸಹಜ. ಆದರೆ ಪ್ರತಿಯೊಬ್ಬರ ಭಾವ, ಭಾಷೆ, ಶೈಲಿ–ಗಳಲ್ಲಿ ವ್ಯತ್ಯಾಸವೂ ಅಷ್ಟೇ ಸಹಜ. ಇಂತಹ ಗ್ರಂಥ ಸಂಪಾದನೆಯ ಮಿತಿಯನ್ನು ಓದುಗರು, ವಿಮರ್ಶಕರು ಗಮನಿಸಬೇಕೆಂದು ಕೋರುತ್ತೇನೆ.


ಹೆಣ್ಣು ಮಕ್ಕಳೇ ಕಾರ್ಯಕಾರಿ ಸಮಿತಿಯ ಸದಸ್ಯೆಯರಾಗಿ ಪ್ರಕಟಿಸುತ್ತಿರುವ ಈ ಗ್ರಂಥಕ್ಕೆ ನೆರವಾದವರು 40 ಜನ ಲೇಖಕ, ಲೇಖಕಿಯರು.

ಆರ್ಥಿಕ ಸಹಾಯ, ಸಹಕಾರ, ಸದವಕಾಶ ನೀಡಿದವರು ಅನೇಕ ಜನ ಸೋದರ-ಸೋದರಿಯರು ಹಾಗೂ ಸಂಘ ಸಂಸ್ಥೆಯವರು. ಗ್ರಂಥ ಪ್ರಕಟಣೆಗೆ ಒಪ್ಪಿಗೆ ನೀಡಿದವರು, ಡಾ॥ ಜೋಳದರಾಶಿ ದೊಡ್ಡನಗೌಡರು. ಬೇಕಾದ ಮಾಹಿತಿಗಳು, ಅನೇಕ ಚಿತ್ರಗಳನ್ನು ಒದಗಿಸಿದವರು ಶ್ರೀ ಹೆಚ್. ಚನ್ನವೀರಗೌಡರು ಮತ್ತೆ ಕೆಲವು ಚಿತ್ರ ಗಳನ್ನು ಒದಗಿಸಿದವರು ಡಾ॥ ಎಚ್. ಚಂದ್ರಶೇಖರ್, ಆಕರ್ಷಕ ರಕ್ಷಾಕವಚ ಬರೆದು ಕೊಟ್ಟವರು ಕಲಾವಿದ ಶ್ರೀ ಕಮಲೇಶ್. ಪುಸ್ತಕವನ್ನು ಚಂದವಾಗಿ ಮುದ್ರಿಸಿ ಕೊಟ್ಟವರು "ಲೋಟಸ್ ಪ್ರಿಂಟರ್ಸ್"ನ ಶ್ರೀ ಸೋಮಶೇಖರ್ ಮತ್ತು ಪ್ರೆಸ್ಸಿನ ಕೆಲಸ ಗಾರರು. ಇವರಿಗೆಲ್ಲಾ ಹೃತ್ಪೂರ್ವಕ ವಂದನೆಗಳು.

ಜಯಾ ರಾಜಶೇಖರ್

ಸಂಪಾದಕಿ


ಒಳಗಿನ ಪುಟಗಳಲ್ಲಿ....



ಗಮಕ ಕಲಾನಿಧಿ ಜೋಳದರಾಶಿ
ಡಾ॥ ಕೆ. ದೊಡ್ಡನಗೌಡರು



ರಾಜ್ಯ ಪ್ರಶಸ್ತಿಯೊಂದಿಗೆ ಶ್ರೀ ಗೌಡರು



ಎಪ್ಪತ್ತೆಂಟು ವಸಂತಗಳನ್ನು ಕಂಡ ನಗು




ಶೂನ್ಯ ಸಂಪಾದನೆಯ ಪ್ರವಚನ ನಡೆಸಲು
ಪ್ರೇರೇಪಿಸಿದ ಗುರುದ್ವಯರು
ಶ್ರೀ ಗುರು ಮೃತ್ಯುಂಜಯಪ್ಪಗಳು – ಮಹಾಂತಪ್ಪಗಳು
ಧಾರವಾಡ ಮುರುಘಾಮಠ.




ಶ್ರೀ ಕೆ. ಪೊಂಪನಗೌಡರು, ಶ್ರೀ ಗೌಡರ ತಂದೆ.



ಶ್ರೀಮಂತಿ ಕೆ. ಹನುಮವ್ವ ಗೌಡತಿ, ಶ್ರೀ ಗೌಡರ ಕುಟುಂಬ.



ಆರಾಧ್ಯ ದೈವ ಶ್ರೀ ರಾಮೇಶ ದೇವಸ್ಥಾನದಲ್ಲಿ ಭಜನೆ.



ಶ್ರೀ ಗೌಡರು.



ಷಷ್ಟಿಪೂರ್ತಿ ಸಮಾರಂಭ – ಕಂಪ್ಲಿಯಲ್ಲಿ
ಪಂಡಿತ ವೈ. ನಾಗೇಶಶಾಸ್ತ್ರಿ ದಂಪತಿಗಳು,
ಶ್ರೀ ದೊಡ್ಡನಗೌಡ ದಂಪತಿಗಳು.



ಜಗದ್ಗುರು ಮಲ್ಲಿಕಾರ್ಜುನ ಮುರುಘಾರಾಜೇಂದ್ರ
ಮಹಾಸ್ವಾಮಿಗಳು, ಚಿತ್ರದುರ್ಗ ಇವರಿಂದ
ಸನ್ಮಾನ – ದಾವಣಗೆರೆಯಲ್ಲಿ.



ಶ್ರೀ ಮಹಾಂತಸ್ವಾಮಿಗಳು, ಮುರುಘಾಮಠ, ಧಾರವಾಡ
ಇವರಿಂದ ಆಶೀರ್ವಾದ (ಸನ್ಮಾನ).




"ನಂದೇ ನಾನೋದಿದೆ" ಗ್ರಂಥ ಬಿಡುಗಡೆ ಸಮಾರಂಭ
ಚೇಳ್ಳಗುರ್ಕಿ ಶ್ರೀ ಎರ್ರಿಸ್ವಾಮಿಗಳ ಮಠದಲ್ಲಿ.
ಜಗದ್ಗುರು ಸಂಗನಬಸವಸ್ವಾಮಿಗಳು
ಕೊಟ್ಟೂರುಸ್ವಾಮಿ ಮಠ, ಬಳ್ಳಾರಿ–ಹೊಸಪೇಟೆ.




ತೋಂಟದಾರ್ಯ ಜಗದ್ಗುರು ಸಿದ್ಧಲಿಂಗಸ್ವಾಮಿಗಳಿಂದ
ಸನ್ಮಾನ ಪತ್ರ ಸಮರ್ಪಣೆ – ಗದಗಿನಲ್ಲಿ.



ವಜ್ರೋತ್ಸವ – ಗದಗಿನ ತೋಂಟದಾರ್ಯ ಮಠದಲ್ಲಿ
ಜಗದ್ಗುರು ತೋಂಟದ ಸಿದ್ಧಲಿಂಗಸ್ವಾಮಿಗಳಿಂದ
ಆಶೀರ್ವಾದ.




ಶ್ರೀಮತಿ ಜಯಮ್ಮ ತನ್ನ ಬಳಗದವರೊಂದಿಗೆ
ಜೋಳದರಾಶಿಗೆ ಬಂದಾಗ ಶ್ರಿ ಗೌಡರ ಬಳಗದವರೊಂದಿಗೆ.



ಶ್ರೀ ವೈ. ಮಹಾಬಲೇಶ್ವರಪ್ಪ – ಶ್ರೀ ಜೋಳದರಾಶಿ
ದೊಡ್ಡನಗೌಡರ ಷಷ್ಠಿಪೂರ್ತಿ ಟ್ರುಸ್ಟ್ ಕಮಿಟಿಯಂವರು
ಕಲಾವಿದರಿಗೆ ಸನ್ಮಾನಿಸಿದ್ದು – ಜೋಳದರಾಶಿಯಲ್ಲಿ.



ಮಿತ್ರ ಶ್ರೀ ಹನುಮಂತಶಾಸ್ತ್ರಿಗಳು–ಕಡಪ ಇವರೊಂದಿಗೆ.



ಪ್ರಥಮ ಗಮಕ ಸಮ್ಮೇಳನ, ಅಧ್ಯಕ್ಷರು
ಜಿ. ನಾರಾಯಣ – ಡಿ. ವಿ. ಗುಂಡಪ್ಪನವರು.
(ಕುಳಿತಿರುವವರು)




ಷಷ್ಟ್ಯಬ್ದಪೂರ್ತಿ ಸಮಾರಂಭ, ಬಳ್ಳಾರಿ
ಶ್ರೀ ದೊಡ್ಡನಗೌಡ ದಂಪತಿಗಳು,
ವೈ. ಮಹಾಬಲೇಶ್ವರಪ್ಪ ಮತ್ತು ಚಿಕ್ಕಜೋಗಿಹಳ್ಳಿ
ವೆಂಕಟಸ್ವಾಮಿ.



ಶ್ರೀ ಭೀಮಪ್ಪಶೆಟ್ಟಿ ಮತ್ತು ಶ್ರೀಮತಿ ರಂಗಮ್ಮ
ಲಲಿತಕಲಾ ಟ್ರಸ್ಟ್, ಬಳ್ಳಾರಿ ಇವರು ಸನ್ಮಾನಿಸಿದ್ದು,
ಶ್ರೀ ಬಾಲಮುರಳಿಕೃಷ್ಣ ಇವರಿಂದ.



ಕರ್ನಾಟಕ ರಾಜ್ಯ ಪ್ರಶಸ್ತಿ,
ಜೋಳದರಾಶಿಗೆ ಬಂದು ಮನೆಯಲ್ಲಿ ಸತ್ಕರಿಸಿದ್ದು,
ಸಂ॥ ಇಲಾಖೆ ನಿರ್ದೇಶಕ ಚಂದ್ರಹಾಸಗುಪ್ತರಿಂದ.



ಹಂಪಿಯಲ್ಲಿ ದಸರಾ ಮಹೋತ್ಸವದಲ್ಲಿ ಸನ್ಮಾನ,
ರಾಜ್ಯಪಾಲರಿಂದ.



ಹಂಪಿಯಲ್ಲಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದು,
ರಾಜ್ಯಪಾಲ ವೆಂಕಟಸುಬ್ಬಯ್ಯ, ಮುಖ್ಯಮಂತ್ರಿ
ಬೊಮ್ಮಾಯಿ ಇವರೊಂದಿಗೆ.



ಕಲ್ಬುರ್ಗಿಯಲ್ಲಿ ನಡೆದ ಅಖಿಲ ಕರ್ನಾಟಕ ಐದನೆಯ
ಜಾನಪದ ಸಮ್ಮೇಳನದಲ್ಲಿ ಗೌಡರಿಗೆ
ಡಾ॥ ಆರ್. ಸಿ. ಹಿರೇಮಠರಿಂದ ಸನ್ಮಾನ.



"ವಚನಾಮೃತ" ಗ್ರಂಥ ಬಿಡುಗಡೆ ಸಮಾರಂಭ,
ಹೈದರಾಬಾದ್
ಬೆಜವಾಡ ಗೋಪಾಲರೆಡ್ಡಿಯವರೊಂದಿಗೆ.



ತೆಲುಗು ವಿಶ್ವವಿದ್ಯಾಲಯ ಹೈದರಾಬಾದು - ಇವರಿಂದ
ಸನ್ಮಾನ, ಕುಲಪತಿ ತೂಮಾಟ ದೊಣಪ್ಪನವರಿಂದ.



1985ರಲ್ಲಿ ಕಲ್ಬುರ್ಗಿ ವಿಶ್ವವಿದ್ಯಾಲಯದ
ಗೌರವ ಡಾಕ್ಟರೇಟ್ ಪದವಿ.



ಕನಕದಾಸ ನಾಟಕದಲ್ಲಿ ಕನಕದಾಸರ ಪಾತ್ರ.



ಶ್ರೀ ಗೌಡರ ಕೆಲವು ಕೃತಿಗಳು.

ಜೋಳದರಾಶಿಯವರ ಬದುಕು

ಗಮಕ ಕಲಾನಿಧಿ–
ಗಮಕ ಗಂಧರ್ವ–ಶರಣ ಕವಿ

ಎಚ್. ಚನ್ನವೀರಗೌಡ, ಜೋಳದರಾಶಿ

ಗಮಕ ಕಲಾನಿಧಿ–ಗಮಕ ಗಂಧರ್ವ–ಶರಣಕವಿ ಮುಂತಾದ ಬಿರುದಾಂಕಿತರಾದ ಜೋಳದರಾಶಿ ಡಾ॥ ಕೆ. ದೊಡ್ಡನಗೌಡರನ್ನು ಅರಿಯುವುದಾಗಲಿ ಅವರನ್ನು ಕುರಿತು ಬರೆಯುವುದಾಗಲಿ ಅಷ್ಟು ಸುಲಭದ ಕಾರ್ಯವಲ್ಲ. ಅವರು ಬಹುಮುಖ ವ್ಯಕ್ತಿತ್ವ ವುಳ್ಳವರು. ಪ್ರತಿಭಾ ವಿಶೇಷಿಗಳು. ಕಲೆ-ಸಂಗೀತ-ಗಮಕ-ಸಾಹಿತ್ಯ-ನಟನೆ ಹೀಗೆ ನಾನಾರಂಗಳಲ್ಲಿ ಅರಿತ ನುರಿತ ಪ್ರತಿಭಾಸಂಪನ್ನರು. ಇವೆಲ್ಲಕ್ಕೂ ಕಳಸಪ್ರಾಯ ವೆಂಬಂತೆ ತತ್ವಾನ್ವೇಷಿಗಳು-ದಾರ್ಶನಿಕರು-ಕಲಾಜೀವಿಗಳು.

ಜನನ–ಬಾಲ್ಯ:

ಕೆಲವರು ಹುಟ್ಟಿಪಡೆದವರು. ಇನ್ನು ಕೆಲವರು ಪಡೆದು ಹುಟ್ಟಿದವರು. ಶ್ರೀ ಗೌಡರ ಪಡೆದೇಹುಟ್ಟಿ–ಪಡೆದದ್ದನ್ನು ಸಾಧಿಸಿ ಸಿದ್ಧಿಸಿಕೊಂಡು ಪ್ರಸನ್ನತೆಯನ್ನು ಹೊಂದಿದವರು. ಬಳ್ಳಾರಿ ಜಿಲ್ಲೆಯ ಜೋಳದರಾಶಿ ಎಂಬ ಚಿಕ್ಕ ಹಳ್ಳಿಯಲ್ಲಿ ಶ್ರೀಮಂತ ರೈತ ಕುಟುಂಬದಲ್ಲಿ 27–8–1910ರಲ್ಲಿ ಹುಟ್ಟಿದರು. ತಂದೆ ಪಂಪನ ಗೌಡರು. ತಾಯಿ ರುದ್ರಮ್ಮನವರು. ಇವರಿಗೆ ನೀಲಮ್ಮನೆಂಬ ಒಬ್ಬ ಸಹೋದರಿ

ಮಾತ್ರ. ತಾಯಿ ರೇವಮ್ಮನವರು ಇವರ ಬಾಲ್ಯದಲ್ಲಿಯೇ ತೀರಿಕೊಂಡಿದ್ದರಿಂದ ಅವ್ವನವರಾದ ನಾಗಮ್ಮ–ಭೋಗಮ್ಮನಿಂದ ಪೋಷಣೆಗೊಂಡರು.

ವಿದ್ಯಾಭ್ಯಾಸ :

ಶ್ರೀ ಗೌಡರ ವಿದ್ಯಾಭ್ಯಾಸ ಆಗಿನ ಕಾಲದ ಏಡೆಡ್ ಶಾಲೆಯಲ್ಲಿ ಅವರ ಹಳ್ಳಿಯಲ್ಲಿಯೇ ನಡೆಯಿತು. ವಿದ್ಯಾಗುರುಗಳು ಷಡಕ್ಷರಸ್ವಾಮಿಗಳು– ಮಠಪತಿ ರುದ್ರಯ್ಯನವರು. ಅಂದಿನ ವಿದ್ಯಾಭ್ಯಾಸ ಕಟ್ಟುನಿಟ್ಟಾಗಿ ಕ್ರಮದಿಂದ ಕೂಡಿದ್ದಿತು. ಕಡ್ಡಾಯವಾಗಿ ಅಮರಕೋಶ-ಬಾಲವ್ಯಾಕರಣ-ಧನಂಜಯನಿಘಂಟು-ನಿಜಲಿಂಗಶತಕ ಸುಮತಿಶತಕ ಮುಂತಾದವುಗಳನ್ನು ಕಂಠಪಾಠ ಮಾಡಿಸುತ್ತಿದ್ದರು. ಭಾಗವತ-ರಾಮಾಯಣ-ಭಾರತ-ಜೈಮಿನಿಭಾರತ-ರಾಜಶೇಖರ-ಹರಿಶ್ಚಂದ್ರಕಾವ್ಯಗಳನ್ನು ರಾಗದಿಂದ ಓದುವುದನ್ನು ಹೇಳಿಕೊಡುತ್ತಿದ್ದರು. ಇದು ಮಾತ್ರ ಗೌಡರಿಗೆ ತುಂಬಾ ಪ್ರಿಯವಾಗಿ ಗುರುಗಳ ಮನಸ್ಸಿಗೆ, ಗ್ರಾಮದ ಹಿರಿಯರ ಮನಸ್ಸಿಗೆ ಪ್ರಿಯವಾಗುವಂತೆ ಕಾವ್ಯ ವಾಚನ ಮಾಡುತ್ತಿದ್ದರು. ಮುಂದೇ ಇದೇ ಗಮಕವೆಂದು ಅರಿತು ಕಾವ್ಯ ವಾಚನದಲ್ಲಿ ಅವರದೇ ಆದ ಗಮಕ ಶೈಲಿ ಬೆಳೆಯಲು ಸಹಾಯವಾಯಿತು. ಇವರ ಈ ಎಲ್ಲಾ ಶಿಕ್ಷಣ ನಾಲ್ಕನೇ ತರಗತಿಗೆ ಮುಗಿಯಿತು. ಇವರ ಹೆಸರಿನ ಮುಂದೆ ಎ. ಬಿ. ಸಿ. ಡಿ ಗಳ ಗೊಂದಲವೇ ಇಲ್ಲ. ಶಾಲೆಯ ಓದಿಗಿಂತ ಲೋಕದ ಓದು ಓದಿದ್ದೇ ಹೆಚ್ಚು ಗೌಡರು.

ನಾಟಕರಂಗ ಪ್ರವೇಶ :

ನೇಗಿಲು ಹಿಡಿದು ಅನ್ನದಾತನಾಗಬೇಕಾದ ಕೈ ಲೇಖನಿ ಹಿಡಿದು ಜ್ಞಾನದಾತನಾದ. ಶಾಲೆಯಲ್ಲಿ ಓದುತ್ತಿರುವಾಗಲೇ ಸಾಹಿತ್ಯದಲ್ಲಿ ಅಭಿರುಚಿ ಪಡೆದು ಕವನಗಳನ್ನು ರಚಿಸಿ ಹಾಡುತ್ತಿದ್ದರು. ಕಲೆಯು ಮನೋವೃತ್ತಿಯಾಗಿ ಪರಿಣಮಿಸಿ, ಆರೇಳು ವರ್ಷಗಳಿರುವಾಗಲೇ ನಾಟಕದಲ್ಲಿ ಅಭಿನಯಿಸಿ ಜನರಿಂದ ಮೆಚ್ಚುಗೆ ಪಡೆದಿದ್ದರು. ಪ್ರಾರಂಭದ ನಾಟಕ ಗುಣಗಳು–ವಿಡಪನ ಕಲ್ಲು ಹನುಮಂತಪ್ಪನವರು, ಜೋಳದರಾಶಿ ಕಿಡಿಗಣ್ಣಯ್ಯನವರು. ಶಾಲೆ ಬಿಟ್ಟ ತರುವಾಯ ತಮ್ಮ ಗ್ರಾಮದವರನ್ನೇ ಕೂಡಿಸಿಕೊಂಡು ನಾಟಕ ಸಂಸ್ಥೆಯನ್ನು ಕಟ್ಟಿ, ಅನೇಕ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಗ್ರಾಮಗಳಲ್ಲಿ ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿ ಕೀರ್ತಿಗಳಿಸಿದರು. ಇವರಿಗೆ ಪ್ರೋತ್ಸಾಹ-ಸಹಕಾರವಿತ್ತವರು ದಿವಂಗತ ಚಾಕಬಂಡೆ ತಿಪ್ಪಯ್ಯನವರು. ಇವರು ಕಲಾಪ್ರಪೂರ್ಣ ಬಳ್ಳಾರಿ ರಾಘವರ ಆರ್ಟ ಲವರ್ಸ್ ಲೀಗಿನ ಖ್ಯಾತ ನಟರಾಗಿದ್ದರು. ಅಂದು ಶ್ರೀ ಗೌಡರು ಅಭಿನಯಿಸಿದ ಶ್ರೀ ಕೃಷ್ಣ (ಗರುಡ ಗರ್ವಭಂಗ ನಾಟಕ) ನಾರದ-(ಜಲಂಧರ ನಾಟಕ) ಪಾತ್ರಗಳು ಜನರ ಮನಸ್ಸಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿವೆ.

ರಾಘವರ ಒಡನಾಟ :

ಈ ನಾಟಕಗಳ ಖ್ಯಾತಿ ಬಳ್ಳಾರಿಗೂ ಹಬ್ಬಿ ಶ್ರೀ ರಾಘವರವರೆಗೂ ಮುಟ್ಟಿತು. ಒಮ್ಮೆ ಶ್ರೀ ರಾಘವರು ಇವರ ನಾಟಕವನ್ನು ನೋಡಿ ಮೆಚ್ಚಿ ಆನಂದಗೊಂಡು ರಂಗ ಭೂಮಿಯ ಮೇಲೆ ಬಂದು ಪ್ರಶಂಸಿಸಿ ಆಶೀರ್ವದಿಸಿದರು. ಕೆಲವು ಕಾಲ ಕಳೆದ ಮೇಲೆ ರಾಘವರ ಇಚ್ಛೆಯಂತೆ ಅವರ ನಾಟಕ ಸಮಿತಿ "ಆರ್ಟ ಲವರ್ಸ್ ಲೀಗ್"ನಲ್ಲಿ 1935 ರಲ್ಲಿ ಸೇರಿದರು. ಶ್ರೀ ರಾಘವರೊಂದಿಗೆ ಆಂಧ್ರ-ಕರ್ನಾಟಕಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿದ್ದಲ್ಲದೆ, ಮದ್ರಾಸ್ ಮಹಾನಗರದಲ್ಲಿಯೂ ಪ್ರದರ್ಶನಗಳನ್ನು ನೀಡಿ ಪ್ರಸಿದ್ಧಿ ಪಡೆದರು. ಬಸವೇಶ್ವರ-ಕೃಷ್ಣ-ನಾರದ ಕಬೀರ ಮುಂತಾದ ಭಕ್ತಿ ಪ್ರಧಾನ ವಾದ ಪಾತ್ರಗಳನ್ನೇ ಪ್ರಧಾನವಾಗಿ ಅಭಿನಯಿಸುತ್ತಿದ್ದರು. ಇವರ ಕಬೀರ ಪಾತ್ರ ಆಂಧ್ರದಲ್ಲಿ ಜನಜನಿತವಾಗಿ "ಕಬೀರು ಗೌಡು" ಎಂದೇ ಬೆಜವಾಡ ಗೋಪಾಲರೆಡ್ಡಿ ಯವರು ಇಂದಿಗೂ ಕರೆಯುತ್ತಿದ್ದಾರೆ.

ನಾಟ್ಯಗುರು-ಸಾಹಿತ್ಯಗುರು-ಆಧ್ಯಾತ್ಮಿಕ ಗುರುಗಳು :

ಅಭಿನಯ-ಸಂಗೀತ-ಕಲೆಗಳು ಅಭಿವೃದ್ಧಿ ಹೊಂದಲು, ನಾಟಕ ಕಲೆಯಲ್ಲಿ ಪೂಜ್ಯಬುದ್ಧಿ ಉಂಟಾಗಲು ಶ್ರೀ ರಾಘವರು ಕಾರಣರಾಗಿ ನಾಟ್ಯಗುರುಗಳಾಗಿ ಶ್ರೀ ಗೌಡರ ಜೀವನದಲ್ಲಿ ಸ್ಥಿರವಾಗಿ ನಿಂತರು. ಸಾಹಿತ್ಯ ಗುರುಗಳಾಗಿ ಪಂಡಿತ ವೈ. ನಾಗೇಶ ಶಾಸ್ತ್ರಿಗಳು, ಚಾಸ್ಕರಾಚಾರ್ಯ ಶ್ರೀ ರಾಮಚಂದ್ರ ಸ್ವಾಮಿಗಳು ದೊರೆತರು. ಆಧ್ಯಾತ್ಮಿಕ ಗುರುಗಳಾಗಿ ಶ್ರೀ ಮ. ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿ ಗಳು ದೊರೆತು ಶ್ರೀ ಗೌಡರ ಜೀವನದಲ್ಲಿ ಮಹತ್ತರ ಬದಲಾವಣೆಗೆ ಕಾರಣರಾದರು.

ಕಲಾಸೇವೆ :

ಶ್ರೀ ಗೌಡರು ನಾಟಕ ಕಲೆಗಾಗಿ ಅವರ ಪುರೋಭಿವೃದ್ಧಿಗಾಗಿ ದುಡಿದ ನಿಸ್ವಾರ್ಥ ಕಲಾವಿದರು. 1948 "ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಲಾಪರಿಷತ್ತು." ಎಂಬ ಸಂಸ್ಥೆಯನ್ನು ಸ್ಥಾಪಿಸಿದಲ್ಲದೆ, ಶ್ರೀ ಗರುಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಶ್ರೀ ಗುಬ್ಬಿವೀರಣ್ಣನವರ ಉದ್ಘಾಟನೆಯೊಂದಿಗೆ ಪ್ರಥಮ ಪರಿಷತ್ತು ಜೋಳದರಾಶಿ ಯಲ್ಲಿಯೇ ನಡೆಸಿದರು. ತರುವಾಯ ಬಳ್ಳಾರಿಯಲ್ಲಿ ಶ್ರೀ ಆರ್. ನಾಗೇಂದ್ರರಾಯರ ಅಧ್ಯಕ್ಷತೆಯಲ್ಲಿ ಎರಡನೇ ಪರಿಷತ್ತು ಶ್ರೀ ಅ. ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಣೇಕಲ್ (ಇಂದು ಆಂಧ್ರಪ್ರದೇಶದಲ್ಲಿ ಸೇರಿದೆ)ನಲ್ಲಿ ಮೂರನೇ ಪರಿಷತ್ತು ಯಶಸ್ವಿ ಯಾಗಿ ನಡೆಸಿದರು. ಹೀಗೆ ಕಲಾಭಿವೃದ್ಧಿಗಾಗಿ ಕೈಕೊಂಡ ಕಾರ್ಯಗಳು ವ್ಯಾಪಕ ಗೊಂಡು, ಅನೇಕ ಪಂಡಿತರಿಂದ ಕಲಾವಿದರಿಂದ ಲೇಖನಗಳು ಸಂಗ್ರಹಿಸಿ, ಜಿಲ್ಲೆಯ ಕಲಾವಿದರ ಪರಿಚಯವನ್ನೊಳಗೊಂಡ "ಕಲಾ" ಎಂಬ ಪುಸ್ತಕವನ್ನು ಪ್ರಕಟಿಸಿದರು. ಶ್ರೀ ಗೌಡರಂದು ಮಾಡಿದ ಮಹತ್ಕಾರ್ಯ ಇಂದಿನವರಿಗೆ ಮಾರ್ಗದರ್ಶನವಾಗಿದೆ.

ರಾಘವ ಸ್ಮಾರಕ ಸಮಿತಿ ಸ್ಥಾಪನೆ :

1946ರಲ್ಲಿ "ಕಲಾ ಪ್ರಪೂರ್ಣ" ರಾಘವರು ದಿವಂಗತರಾದಮೇಲೆ 'ರಾಘವ ಮೆಮೋರಿಯಲ್ ಅಸೋಸಿಯೇಷನ್' ಸ್ಥಾಪಿಸಿ ರಾಘವರ ಹೆಸರಿನಲ್ಲಿ ಒಂದು ನಾಟಕ ಭವನವನ್ನು ಬಳ್ಳಾರಿಯಲ್ಲಿ ನಿರ್ಮಾಣಮಾಡಲು ನಿಶ್ಚಯಿಸಿದರು. ನಿಧಿ ಸಂಗ್ರಹ ಕ್ಕಾಗಿ ನಾಟಕ ಸಂಸ್ಥೆಯನ್ನು ಕಟ್ಟಿದರು. ನಾಡಿನಲ್ಲಿ ನಾಟಕಗಳನ್ನು ಪ್ರದರ್ಶಿಸಿ ಹಣ ಸಂಗ್ರಹಿಸಿದರು. ಅಂದಿನ ಕಲೆಕ್ಟರ್ ಶ್ರೀ ಅನಂತರಾಮ್, ಜಿಲ್ಲಾ ನ್ಯಾಯಾಧೀಶ ರಾದ ಶ್ರೀ ಮ್ಯಾಕ್ ಸಾಹೇಬರು, ವೀರಶೈವ ಕಾಲೇಜ್ ಪ್ರಿನ್ಸಿಪಾಲರಾಗಿದ್ದ ಶ್ರೀ ಯು. ಛಾಯಪ್ಪನವರು ಶ್ರೀ ನಿಪ್ಪಾಣಿ ವೆಂಕಟರಾಯರು, ಶ್ರೀ ಹೆಚ್. ಲಿಂಗಾರೆಡ್ಡಿ ಯವರು, ಶ್ರೀ ಗೂಳಪ್ಪನವವರು, ಶ್ರೀ ಡಿ. ವೇಣುಗೋಪಾಲಾಚಾರ್ಯರು, ಶ್ರೀ ಬಾಷೀದ್‌ಸಾಬ್‌ರು ಮುಂತಾದ ಮುಖಂಡರು ಕಮಿಟಿಯಲ್ಲಿದ್ದು, ನಾಟಕ ಭವನ ನಿರ್ಮಾಣಕ್ಕೆ ಅವಿಶ್ರಾಂತವಾಗಿ ದುಡಿದರು. ಅವರೆಲ್ಲರ ದುಡಿಮೆಯ ಪ್ರತೀಕವೇ ಬಳ್ಳಾರಿಯಲ್ಲಿ ಇಂದು ವಿಜೃಂಭಿಸುವ 'ರಾಘವ ಕಲಾಮಂದಿರ.' ಶ್ರೀ ಗೌಡರು ಕಲಾಮಂದಿರದ ನಿರ್ಮಾಣಕ್ಕೆ ದುಡಿದು ತಮ್ಮ ನಾಟ್ಯಗುರು ರಾಘವರ ಗುರುಋಣ ವನ್ನು ತೀರಿಸುವಲ್ಲಿ ಕೃತಾರ್ಥತೆ ಪಡೆದಿದ್ದಾರೆ. ಹಾಗು ರಾಘವರ ಜೀವನ ಚರಿತ್ರೆ ಬರೆದು ಧನ್ಯತೆ ಹೊಂದಿದ್ದಾರೆ.

ಸಮಾಜ ಸುಧಾರಣೆ :

ಸಮಾಜ ಸುಧಾರಕರಾಗಿ ತಾವು ಹುಟ್ಟಿದ ಮೋಟಾಟಿ ಲಿಂಗಾಯತರನ್ನು ಒಂದುಗೂಡಿಸುವಲ್ಲಿ ಸಂಘವನ್ನೇ ಸ್ಥಾಪಿಸಿ-ಕುಲಾಚಾರಗಳಲ್ಲಿರುವ ಮೂಢನಂಬಿಕೆ ಗಳನ್ನು-ಹಲವು ಕೆಟ್ಟ ಪದ್ಧತಿಗಳನ್ನು ನೀಗಿಸುವಲ್ಲಿ ಮಾರ್ಗದರ್ಶನ ಮಾಡಿದರು. ಇಂದು ತಾರತಮ್ಯಭಾವವಳಿದು ವೀರಶೈವಾಚಾರದಲ್ಲಿಯ ಧರ್ಮಾಚರಣೆಗಳು ತಿಳಿದು ಜನಾಂಗದಲ್ಲಿ ಸುಧಾರಣೆಯಾಗುವಂತೆ ಆಯಿತು.

ಪಂಚಾಯತಿರಂಗ–ಗ್ರಾಮ ಸುಧಾರಣೆ :

ಗ್ರಾಮಪಂಚಾಯತಿಯ ಅಧ್ಯಕ್ಷರಾಗಿ ಸುಮಾರು 28 ವರುಷಗಳು ಕೆಲಸ ಮಾಡಿದ್ದಾರೆ. ಪಂಚಾಯತಿಗೆ ಯಾವ ನಿರ್ದಿಷ್ಟವಾದ ಆದಾಯವಿಲ್ಲದಾಗ ಸ್ವತಹ ತಾವೇ ಪಂಚಾಯತಿಯಿಂದ ಶಾಲೆಯನ್ನು ನಡೆಸುತ್ತಿದ್ದರು. ಇಂತಹ ಆರ್ಥಿಕ ದುಸ್ಥಿತಿ ಯಲ್ಲಿಯೂ ಪಂಚಾಯತಿಗೆ ಉತ್ತಮವಾದ ಲೈಬ್ರರಿಯನ್ನು-ಪಂಚಾಯತಿಭವನವನ್ನು ನಿರ್ಮಾಣ ಮಾಡಿದರು. ತಮ್ಮ ಸ್ವಂತ ಖರ್ಚಿನಿಂದ 'ರಮೇಶ ಕಲಾಮಂದಿರ'ವೆಂಬ ಭವನವನ್ನು ಕಟ್ಟಿ ಅಲ್ಲಿ ಶಾಲೆ ನಡೆಯಲು ಏರ್ಪಡಿಸಿದರು. ಈ ಕಲಾಭವನವು ನಾಟಕ ಮುಂತಾದ ವಿವಿಧ ಕಲಾಪ್ರದರ್ಶನಗಳಿಗೆ ಉಪಯೋಗವಾಗುವಂತೆ ಮುಂಭಾಗ ದಲ್ಲಿ ಬಯಲುರಂಗಭೂಮಿಯಿಂದ ಕೂಡಿದೆ. ಪಟ್ಟಣಗಳಲ್ಲಿ ಪುರಭವನವಿದ್ದಂತೆ ಈ

ಭವನವು ಹಳ್ಳಿಯ ವಿವಿಧ ಕಾರ್ಯ ಕಲಾಪಗಳಿಗೆ ಉಪಯೋಗವಾಗುತ್ತಿದೆ. ಈ ಎಲ್ಲಾ ವ್ಯವಸ್ಥೆ ಸಕ್ರಮವಾಗಿ ನಡೆಯಲು ರಾಮೇಶ್ ಟ್ರಸ್ಟ್ ಕಮಿಟಿಯನ್ನು ಸ್ಥಾಪಿಸಿ (ರಿಜಿಸ್ಟರ್ಡ್) ಕಮಿಟಿಗೆ 25 ಎಕರೆ (ಇಪ್ಪತ್ತೈದುಎಕರೆ) ಜಮೀನನ್ನು ನೀಡಿದ್ದಾರೆ. ಅಲ್ಲದೆ, ಸರ್ಕಾರಿ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿ, ಆಸ್ಪತ್ರೆ ನಡೆಯುವ ಏರ್ಪಾಟು ಮಾಡಿ 1957ರಲ್ಲಿ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾದರು. ಅಂದು ಶ್ರೀ ಗೌಡರು ಮಾಡಿದ ಗ್ರಾಮ ಸುಧಾರಣೆಗಳು ಅಭಿವೃದ್ಧಿಗೊಂಡು, ಇಂದಿಗೂ ಅವರ ಮಾರ್ಗದರ್ಶನದಲ್ಲಿಯೇ ನಡೆದುಕೊಂಡು ಬರುತ್ತಿವೆ.

ಗಮಕಕಲೆ–ಪ್ರಶಸ್ತಿಗಳು :

ಶ್ರೀ ಗೌಡರು ನಟರಾಗಿ ಪ್ರಸಿದ್ಧರಾದಂತೆ ಗಮಕಿಯಾಗಿ ನಾಡಿನಲ್ಲಿ ಹೆಚ್ಚು ಪ್ರಸಿದ್ಧಿಯಾಗಿದ್ದಾರೆ. ಇವರ ಗಮಕಕ್ಕೆ ಯಶಸ್ವಿಯಾಗಿ ಹಾರ್ಮೋನಿಯಂ ಬಾರಿಸುತ್ತಿದ್ದ ಶ್ರೀ ಟಿ. ಕುಮಾರಸ್ವಾಮಿಯವರೊಂದಿಗೆ ನಾಡಿನ ಬಹುಭಾಗಗಳಲ್ಲಿ ಸಂಚರಿಸಿ ಕಾವ್ಯವಾಚನ ಮಾಡಿದ್ದಾರೆ. ಕಾವ್ಯವಾಚನದ ರಸಗಂಗೆಯಲ್ಲಿ ಶ್ರೋತೃಗಳೊಂದಿಗೆ ತಾವೂ ಮಿಂದು ರಸೋಪಾಸನೆ ಮಾಡಿದ್ದಾರೆ. ನಾಡಿನ ಮಹಾಜನರು-ಪಂಡಿತರು -ಪೀಠಾಧಿಪತಿಗಳು-ಸಂಘಸಂಸ್ಥೆಗಳು, 'ಗಮಕ ಕಲಾನಿಧಿ', 'ಗಮಕಕಲಾ ಪ್ರವೀಣ', 'ಗಮಕ ಗಂಧರ್ವ', 'ಶರಣಕವಿ' ಬಿರುದುಗಳಿತ್ತು ಗೌರವಿಸಿದ್ದಾರೆ.

ಕರ್ನಾಟಕ ಸಂಗೀತ ನಾಟಕ ಅಕಡಮಿ 1966ರಲ್ಲಿ ಪ್ರಶಸ್ತಿಯನ್ನಿತ್ತು ಸನ್ಮಾನಿಸಿದೆ. ಆಂಧ್ರ ನಾಟಕ ಕಲಾ ಪರಿಷತ್ತು, 'ವಿಜಯಪತ್ರ' ನೀಡಿ ಸತ್ಕರಿಸಿದೆ. ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದಲ್ಲಿ ಗೌರವಿಸಿದ್ದಾರೆ. 1983ರಲ್ಲಿ ಸಾಹಿತ್ಯ ಅಕಡೆಮಿಯು ಗಮಕ ಕಲೆಗೆ ಪ್ರಶಸ್ತಿ ನೀಡಿ ಸತ್ಕರಿಸಿತು. 1985ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯ ಗೌರವ ಡಿ. ಲಿಟ್ ನೀಡಿ ಸನ್ಮಾನಿಸಿತು. 1986ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಪ್ರಶಸ್ತಿ ನೀಡಿತು. 1987ರಲ್ಲಿ ತೆಲುಗು ವಿಶ್ವವಿದ್ಯಾಲಯ, ಹೈದರಾಬಾದು ಇವರು ಶ್ರೀ ಗೌಡರ "ಕ್ರಾಂತಿಪುರುಷ ಬಸವಣ್ಣ" ನಾಟಕವನ್ನು ತೆಲುಗಿಗೆ ಅನುವಾದಿಸಿ ಕನ್ನಡ–ತೆಲುಗು ಎರಡನ್ನೂ ಸಂಯುಕ್ತವಾಗಿ ಪ್ರಕಟಿಸಿ ಶ್ರೀ ಗೌಡರನ್ನು ಅತ್ಯಂತ ಅಪ್ಯಾಯಮಾನವಾಗಿ, ಸ್ಮರಣೀಯವಾಗಿ ಗೌರವಿಸಿತು. ಇತ್ತೀಚೆಗೆ ಶ್ರೀಗೌಡರ "ಅನುಭವಾಲು–ಜ್ಞಾಪಕಾಲು" ಪ್ರಕಟಿಸಿದ್ದಾರೆ ತೆಲುಗು ವಿಶ್ವವಿದ್ಯಾಲಯದವರು.

ನಾಟಕಕಾರ–ಸಾಹಿತಿ :

ನಟರಾಗಿ ಪ್ರಸಿದ್ಧರಾದಂತೆ ನಾಟಕಕಾರರಾಗಿಯೂ ಪ್ರಸಿದ್ಧರಾಗಿ ಹಲವಾರು ನಾಟಕಗಳನ್ನು ರಚಿಸಿದ್ದಾರೆ. 'ಕನಕದಾಸ', 'ಕ್ರಾಂತಿಪುರುಷ ಬಸವಣ್ಣ', ನಾಟಕಗಳು ಮಾತ್ರ ಪ್ರಕಟವಾಗಿ ಅನೇಕ ನಾಟಕಗಳು ಪ್ರದರ್ಶನಗೊಂಡು ಖ್ಯಾತಿಗಳಿಸಿವೆ. ಇನ್ನೂ ಹಲವು ನಾಟಕಗಳು ಪ್ರಕಟಗೊಳ್ಳದೆ ಹಾಗೆಯೆ ಉಳಿದಿವೆ.

ನಾಟಕ ರಚನೆಗಳಲ್ಲದೆ-ಸಾಹಿತ್ಯ ರಚನೆಗಳಲ್ಲಿ ಖ್ಯಾತಿಗಳಿಸಿದ್ದಾರೆ. ತಾತ್ವಿಕ ಸಾಹಿತ್ಯದಲ್ಲಿ, ಮುಖ್ಯವಾಗಿ ವಚನ ಸಾಹಿತ್ಯದಲ್ಲಿ ಸತತ ವ್ಯಾಸಂಗಿಗಳಾಗಿ ವಚನಗಳನ್ನು-ಕವನಗಳನ್ನು ಇತರ ಕೃತಿಗಳನ್ನು ಕನ್ನಡ-ತೆಲುಗಿನಲ್ಲಿ ಬರೆದಿದ್ದಾರೆ. ಅವರ ಜೀವನ ಚರಿತ್ರೆ 'ನಂದೇನಾನೋದಿದೆ' ನೋಡಿದಾಗ ಶ್ರೀ ಗೌಡರ ಬಹುಮುಖ ಪಾಂಡಿತ್ಯ-ಪ್ರತಿಭೆಗಳು ತಿಳಿಯುತ್ತವೆ. ಶೂನ್ಯ ಸಂಪಾದನೆಗೆ ಸಮಗ್ರವಾಗಿ ವ್ಯಾಖ್ಯಾನ ಬರೆದು ತಾವೇ ಪ್ರಕಟಿಸಿ ಧಾರ್ಮಿಕ ಸಾಹಿತ್ಯಕ್ಕೆ ಕೊಡುಗೆಯಾಗಿ ಕೊಟ್ಟಿದ್ದಾರೆ. ತೆಲುಗಿನಲ್ಲಿಯೂ ಶೂನ್ಯ ಸಂಪಾದನೆಗೆ ವ್ಯಾಖ್ಯಾನ ಬರೆದು ತೆಲುಗು ವಿಶ್ವ ವಿದ್ಯಾಲಯಕ್ಕೆ ನೀಡಿದ್ದಾರೆ. ಸುಮಾರು 40ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಪ್ರಕಟನೆಗೊಳ್ಳಬೇಕಾದವು ಕೆಲವು ಇವೆ.

ತತ್ವಾನ್ವೇಷಣೆ :

ಸುಮಾರು 30 ವರುಷಗಳಿಂದ ಪರಮಪೂಜ್ಯ ಶ್ರೀ ಮೃತ್ಯುಂಜಯಪ್ಪಗಳು-ಧಾರವಾಡ. ಇವರ ನಿರೂಪ ಹೊತ್ತು, 'ಶೂನ್ಯ ಸಂಪಾದನೆ'ಯ ಪ್ರವಚನ ಸೇವೆಯನ್ನು ನಾಡಿನಾದ್ಯಂತ ಮಾಡಿ ಶ್ರೀಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದಾರೆ. ಶೂನ್ಯ ಸಂಪಾದನೆಯೆಂದರೆ ದೊಡ್ಡನಗೌಡರು–ದೊಡ್ಡನ ಗೌಡರೆಂದರೆ ಶೂನ್ಯ ಸಂಪಾದನೆ ಎನ್ನುವಷ್ಟು ಜನಜನಿತರಾಗಿದ್ದಾರೆ ಶ್ರೀಗೌಡರು. ನಾಟಕ–ಸಂಗೀತ–ಸಾಹಿತ್ಯ, ಗಮಕಕಲೆಗಳೆಲ್ಲವೂ ಈ ಶೂನ್ಯ ಸಂಪಾದನೆಯ ಪ್ರವಚನದಲ್ಲಿ ಮಿಳಿತವಾಗಿ ಶ್ರೋತೃಗಳಿಗೆ ಮನಮುಟ್ಟುವಂತಾಗಿದೆ. ಶೂನ್ಯಸಂಪಾದನೆಯ ಪ್ರವಚನಗಳನ್ನು ಕ್ಯಾಸೆಟ್‌ಗಳಲ್ಲಿ ಧ್ವನಿಮುದ್ರಿಸಿ ಕಾಯ್ದಿರಿಸಿದ್ದಾರೆ.

ಷಷ್ಠ್ಯಪೂರ್ತಿ ಸಮಾರಂಭ–ದತ್ತಿನಿಧಿ ಸ್ಥಾಪನೆ :

1970 ರಲ್ಲಿ ಷಷ್ಠ್ಯಪೂರ್ತಿಸಮಾರಂಭ ಅತ್ಯಂತ ವೈಭವದಿಂದ ನಡೆದು ಅಭಿಮಾನಿಗಳಿಂದ ಶೇಖರಿಸಲ್ಪಟ್ಟ ನಿಧಿಯನ್ನು, ಸಾರ್ವಜನಿಕರಿಗೇ ಉಪಯೋಗವಾಗಲೆಂಬ ಉದ್ದೇಶದಿಂದ, ಅರ್ಪಿಸಿದ ಹತ್ತುಸಾವಿರ ರೂಪಾಯಿಗಳನ್ನು ನಿಧಿಯಾಗಿ ಕೊಟ್ಟಿದ್ದಾರೆ. ತರುವಾಯ ಇವರ ಆಪ್ತಮಿತ್ರರಾದ ರಾವ್‌ಬಹದ್ದೂರ್ ವೈ. ಮಹಾಬಲೇಶ್ವರಪ್ಪನವರ ಷಷ್ಠ್ಯಪೂರ್ತಿನಿಧಿಯೂ ಸಾರ್ವಜನಿಕರಿಗೇ ಕೊಟ್ಟಾಗ–ಈ ಎರಡು ನಿಧಿಗಳನ್ನು ಸಂಯುಕ್ತವಾಗಿ ಕೂಡಿಸಿ "ಶ್ರೀ ವೈ. ಮಹಾಬಲೇಶ್ವರಪ್ಪ, ಶ್ರೀ ಜೋಳದರಾಶಿ ದೊಡ್ಡನಗೌಡ ದತ್ತಿನಿಧಿ"ಎಂಬ ಹೆಸರಿನಿಂದ (ರಿಜಿಸ್ಟರ್ಡ್ ಟ್ರಸ್ಟ್) ಕಮಿಟಿಯನ್ನು ಸ್ಥಾಪಿಸಿ, ಸಾಹಿತ್ಯ–ಸಂಗೀತ–ಕಲೆ ಮತ್ತು ಅಶಕ್ತ, ಕಲಾವಿದರಿಗೆ ಸಹಾಯವಾಗಿ, ಸದ್ವಿನಿಯೋಗವಾಗುವಂತೆ ಏರ್ಪಡಿಸಿದ್ದಾರೆ.

ಸಮದರ್ಶಿ :

ನಾಟಕ–ಸಂಗೀತ–ಸಾಹಿತ್ಯ–ಗಮಕ ಕಲೆಗಳ ಸಂಗಮವಾಗಿದ್ದಾರೆ ಶ್ರೀ ಗೌಡರು ಹಳ್ಳಿಯಲ್ಲಿಯೇ ಇದ್ದು ಎಲ್ಲವನ್ನು ಸಾಧಿಸಿದ್ದಾರೆ. ನಾಟಕ ಕಲೆ ಅವರ ಮನೋವೃತ್ತಿಯಾಗಿದ್ದರೆ ಸಾಹಿತ್ಯ-ಗಮಕ ಅವರ ಪರಿಣಾಮಕಾರಿ ಪ್ರವೃತ್ತಿಯಾಗಿದೆ. ತತ್ವಾನ್ವೇಷಣೆ ಅವರ ನಿವೃತ್ತಿ ಮಾರ್ಗವಾಗಿದೆ. ಈ ಮೂರರಲ್ಲಿಯೂ ತಮ್ಮದೇ ಆದ ನಿಲವನ್ನ ಒಲವನ್ನ ಬೆಳಸಿಕೊಂಡಿದ್ದಾರೆ. ಈ ಎಲ್ಲಾ ಯಶಸ್ಸಿಗೆ ಎಲೆಯ ಮರೆಯ ಫಲದಂತೆ ಇವರ ಕುಟುಂಬ ಶ್ರೀಮತಿ ಹನುಮಕ್ಕಗೌಡತಿಯವರ ತ್ಯಾಗವೇ ಕಾರಣ. ಇವರ ಕಲೆಗೂ ನೆಲೆಗೂ ಪೋಷಕರಾಗಿದ್ದವರು 1976ರಲ್ಲಿ ಲಿಂಗೈಕ್ಯರಾದರು. ಇದು ಗೌಡರ ಜೀವನದಲ್ಲಿ ತುಂಬಲಾರದ ಕೊರತೆ. ಶ್ರೀ ಗೌಡರಿಗೆ ಅಳಿದು ಹೋಗುವ ಪಿಂಡಸಂತಾನಗಳಿಲ್ಲ. ಇವರದು ಶಾಶ್ವತವಾಗಿ ಉಳಿಯುವ ಕಲಾಸಂತಾನ-ಕಾವ್ಯಸಂತಾನ. ಕಾಲಾನುಗುಣವಾಗಿ ಬರುವ ಬದಲಾವಣೆಗಳಿಗೆ ಹೊಂದಿಕೊಂಡು ಸಿಹಿ–ಕಹಿಗಳ ಜೀವನಾನುಭವದಲ್ಲಿ ಸ್ಥಿತ ಪ್ರಜ್ಞರಾಗಿ, ಶೂನ್ಯಸಂಪಾದನೆಯ ತತ್ವಾನ್ವೇಷಣೆಯಲ್ಲಿ ಕಾಲ ಕಳೆಯುತ್ತಿದ್ದಾರೆ.

ಕಾಯುವ ದಂಡಿಗೆ ನೂಡಿದ ಕಾವ್ಯ ದಾಸೋಹಿ

ಡಾ॥ ಹೆಚ್. ಚಂದ್ರಶೇಖರ್

ಹುಟ್ಟಿದ್ದು ರೈತ ಕುಟುಂಬದಲ್ಲಿ ; ಓದಿದ್ದು ಕೇವಲ ನಾಲ್ಕನೇ ವರ್ಗದವರೆಗೆ, ಸ್ವಂತ ಸಾಧನೆಯ ಬಲದಿಂದ ಉಭಯ ಭಾಷಾ ಕವಿಯಾಗಿ, ಲೇಖಕನಾಗಿ, ಗಮಕಿಯಾಗಿ, ನಟನಾಗಿ ಗಳಿಸಿದ್ದು ಅಚ್ಚರಿ ಪಡುವಷ್ಟು ಖ್ಯಾತಿ. ಹತ್ತು ಹಲವು ಪ್ರಶಸ್ತಿಗಳು ಕೊನೆಗೆ (1985) ಕಲ್ಬುರ್ಗಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಸಣ್ಣ ಹಳ್ಳಿಯಾದ ಜೋಳದರಾಶಿಯನ್ನು ಹುಡುಕಿಕೊಂಡು ಬಂದವು. ಈ ಸಾಧನೆ ಮತ್ತು ಸಿದ್ಧಿಯನ್ನು ಪಡೆದವರು 78 ವಯಸ್ಸಿನ ಡಾ॥ ಜೋಳದರಾಶಿ ದೊಡ್ಡನ ಗೌಡರು.

ಗೌಡರನ್ನು ನಾನು ಮೊದಲು ನೋಡಿದ್ದು ಧಾರವಾಡದಲ್ಲಿ (1961-62). ಹಿಂದಕ್ಕೆ ಬಾಚಿರುವ ಬೆಳ್ಳಿ ಕೂದಲು, ಚೂಪನೆ ಗಿಳಿ ಮೂಗು, ತೇಜಸ್ವಿ ಕಣ್ಣುಗಳು, ಹಣೆಯ ಮೇಲೆ ವಿಭೂತಿ, ಕಂಚಿನ ಕಂಠ, ಇವುಗಳು ಯಾರನ್ನೂ ಸೆರೆ ಹಿಡಿದು, ನೋಡುವವರ ಮತ್ತು ಕೇಳುವವರ ಹೃದಯದಲ್ಲಿ ಪೂಜ್ಯ ಭಾವನೆಯನ್ನು ಹುಟ್ಟಿಸುವಂಥ ವ್ಯಕ್ತಿ ವಿಶೇಷಗಳು. ಈಗ ದೇಹಕ್ಕೆ ಕೊಂಚ ವಯಸ್ಸಿನ ಅಚ್ಚು ಬಿದ್ದಿದ್ದರೂ, ಇಂದಿಗೂ ಈ ವ್ಯಕ್ತಿ ವಿಶೇಷಗಳು ಕಂದಿಲ್ಲ, ಕುಂದಿಲ್ಲ.

ಇವರ ಪ್ರವಚನದಿಂದ ಪ್ರಭಾವಿತನಾದ ನಾನು ವೈಯುಕ್ತಿಕ ಪರಿಚಯು ಮತ್ತು ನಿಕಟ ಸಂಪರ್ಕ ಪಡೆದದ್ದು 1987 ರಿಂದ ಈಚೆಗೆ. ನಾನು ಬಳ್ಳಾರಿಯಲ್ಲಿ ಇರುವಾಗ ಮತ್ತು ಬಳ್ಳಾರಿಯನ್ನು ಬಿಟ್ಟ ನಂತರ ಹಲವಾರು ಸಲ ಶ್ರೀ ಗೌಡರನ್ನು ಭೇಟಿಯಾಗಿದ್ದೇನೆ. ಪ್ರತಿ ಸಲವೂ 3-4 ತಾಸುಗಳ ಕಾಲ ಅವರೊಡನೆ ಚರ್ಚಿಸಿದ್ದೇನೆ ಮತ್ತು ಚರ್ಚೆಯಿಂದ ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಬೆಳೆದ ಗೌರಿಶಂಕರ ಶಿಖರವನ್ನು ಕಂಡಷ್ಟು ಸಂತಸ ಪಟ್ಟಿದ್ದೇನೆ.

ಭಕ್ತಿಯ ಕಲಾರತ್ನ

ಶ್ರೀ ದೊಡ್ಡನಗೌಡರು ತಮ್ಮ ಹಳ್ಳಿಯ ಸ್ನೇಹಿತರೊಡಗೂಡಿ ಹವ್ಯಾಸಕ್ಕಾಗಿ ನಾಟಕಗಳನ್ನು ಆಡಲು ಪ್ರಾರಂಭಿಸಿದರು. ಮೊದಲಿಗೆ ಹೆಸರನ್ನು ತಂದ ನಾಟಕ "ಗರುಡ ಗರ್ವ ಭಂಗ". ಆದರೆ ನಟನ ಕಲೆಯ ಒಳ ಹೊರಗನ್ನು ತಿಳಿಸಿದವರು ಅದರ ಬಗ್ಗೆ ತರಬೇತು ನೀಡಿದವರು ದಿ. ಬಳ್ಳಾರಿ ರಾಘವರು. ರಾಘವರ ಸಂಪರ್ಕ ಬರುವಷ್ಟರಲ್ಲಿ ಗೌಡರು ನಟರೆಂದು ಹೆಸರನ್ನು ಗಳಿಸಿ ನಾಟಕ ಕಂಪನಿ (ಹವ್ಯಾಸಿ ಗುಂಪು) ಕಟ್ಟಿ ಕೈ ಸುಟ್ಟುಕೊಂಡು ಊರನ್ನು ಸೇರಿದ್ದರು. ರಾಘವರು ಇವರನ್ನು ತಮ್ಮ ನಾಟಕ "ಭಕ್ತ ಮಾರ್ಕಂಡೇಯ" ನಾಟಕದಲ್ಲಿ ಅಭಿನಯಿಸಲು ಆಮಂತ್ರಿಸಿದಾಗ ಗೌಡರು ಇದಕ್ಕೆ "ನಮ್ಮ ತಂದೆಯ ಒಪ್ಪಿಗೆ ಬೇಕು" ಎಂದರು. ಅಷ್ಟೊತ್ತಿಗಾಗಲೇ ಬಹು ಪ್ರಖ್ಯಾತರಾದ ರಾಘವರು (ಅವರು ವೃತ್ತಿಯಿಂದ ಪ್ರಸಿದ್ಧ ವಕೀಲರು) ಗೌಡರ ತಂದೆ ದಿ. ಪಂಪನಗೌಡರನ್ನು ಭೇಟಿಯಾಗಿ "ನಿಮ್ಮ ಹುಡುಗನನ್ನು ನನ್ನ ಮಗನನ್ನಾಗಿ ನೋಡಿಕೊಳ್ಳುತ್ತೇನೆ. ಮುಂದೆ ಬರುವ ಹುಡುಗನನ್ನು ತಡೆಯಬೇಡಿ" ಎಂದರು. ರಾಘವರ ಮಾತು ಶತಕ ಸತ್ಯವಾಯಿತು. ರಾಘವರ ಒಡನಾಟದಲ್ಲಿ ಗೌಡರು ಅವರಿಂದ ನಟನಾ ಕಲೆಯ ಬಗ್ಗೆ ಬಹಳಷ್ಟು ಕಲಿತರು. ಗುರು ರಾಘವರು ನೈಸರ್ಗಿಕ ಕಚ್ಚಾ ವಜ್ರಕ್ಕೆ ಸಾಣೆ ಹಿಡಿದು ಪ್ರಜ್ವಲಿಸುವಂತೆ ಮಾಡಿದರು. ಗೌಡರು ನಟರಾಗಿ ಕನ್ನಡ ಮತ್ತು ತೆಲುಗಿನಲ್ಲಿ ಹಲವಾರು ನಾಟಕಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ಒಂದು ಸಲ ಇವರ ನಟನೆಯನ್ನು ನೋಡಿದ ಗುರುಗಳೇ "ಇವರು ಗೌಡರಲ್ಲ ಕನಕದಾಸರು....ಇದೊಂದು ನಮ್ಮ ದೇಶದ ಭಕ್ತಿಯ ಕಲಾರತ್ನ...." ಎಂದು ಹೇಳಿ ರಂಗಭೂಮಿಯ ಮೇಲೆ ಪ್ರೇಕ್ಷಕರೆದುರಿಗೇ ಗೌಡರನ್ನು ಅಪ್ಪಿಕೊಂಡರು. ಆಂಧ್ರ ಪ್ರದೇಶದ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಡಾ॥ ಬಿ. ಗೋಪಾಲ ರೆಡ್ಡಿಯವರು ಉನ್ನತಸ್ಥಾನ ಪಡೆದವರು. ಇವರು ಗೌಡರ ಕಬೀರನ ಪಾತ್ರವನ್ನು ನೋಡಿ ಬಹು ಮೆಚ್ಚಿಕೊಂಡು ಭೇಟಿಯಾದಾಗಲೆಲ್ಲಾ "ಕಬೀರಗಾರು, ಬಾಗುನ್ನಾರಾ" (ಕಬೀರ್‌ರವರೇ ಚೆನ್ನಾಗಿದ್ದೀರಾ) ಎಂದು ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿದ್ದರು. ಗೌಡರು ಯಾವುದೇ ಪಾತ್ರವನ್ನು ಧರಿಸಲಿ ಆಯಾ ಪಾತ್ರದ ವೈಶಿಷ್ಟ್ಯತೆಗಳನ್ನು ಅರಿತು ಅವುಗಳೊಡನೆ ತಾದಾತ್ಮ್ಯತೆಯನ್ನು ಹೊಂದಿ ಅಭಿನಯಿಸುತ್ತಿದ್ದರು. ಅಂತೆಯೇ

ಅವರಿಗೆ ಕರ್ನಾಟಕಾಂಧ್ರ ರಂಗಭೂಮಿಗಳೆರಡರಲ್ಲೂ ಸನ್ಮಾನ. ಗೌಡರಿಗೆ ಅತ್ಯಂತ ಹೆಸರು ತಂದ ಪಾತ್ರಗಳು ಬಸವೇಶ್ವರ (ಕ್ರಾಂತಿ ಪುರುಷ ಬಸವಣ್ಣ), ಕಬೀರ (ರಾಮ ದಾಸ), ಕೃಷ್ಣ (ಗರುಡ ಗರ್ವ ಭಂಗ), ನಾರದ (ಶಿವಜಲಂಧರ), ಕನಕದಾಸ (ಭಕ್ತ ಕನಕದಾಸ) ಇತ್ಯಾದಿ.

ಕವಿ ಮತ್ತು ನಾಟಕಕಾರ :

ಶ್ರೀ ಗೌಡರು ನಟರಷ್ಟೇ ಅಲ್ಲ, ನಾಟಕಕಾರರೂ ಅಹುದು. ಅವರ ನಾಟಕ ಗಳಲ್ಲಿ "ಕನಕದಾಸ" "ಕ್ರಾಂತಿ ಪುರುಷ ಬಸವಣ್ಣ" ಇವು ಪ್ರಮುಖ. "ಕ್ರಾಂತಿ ಪುರುಷ ಬಸವಣ್ಣ" 1986ರಲ್ಲಿ ಹೈದ್ರಾಬಾದಿನ ತೆಲುಗು ವಿಶ್ವವಿದ್ಯಾಲಯವು ಅದರ ಮೂಲ ಕನ್ನಡದೊಂದಿಗೆ ತೆಲುಗಿಗೆ ಅನುವಾದಿಸಿ ಪ್ರಕಟಿಸಿದೆ. ಈ ನಾಟಕದ ಪ್ರತಿ ಎಡ ಪುಟದಲ್ಲಿ ಕನ್ನಡದ ಮೂಲ ಕೃತಿ ಇದ್ದರೆ, ಬಲ ಪುಟದಲ್ಲಿ ತೆಲುಗು ಅನುವಾದ ವಿದೆ. ಹೀಗೆ ಪುಟಕ್ಕೆ ಪುಟ ಮೂಲ ಮತ್ತು ಅನುವಾದಗಳೆರಡೂ ಕೂಡಿ ಪ್ರಕಟ ಗೊಂಡಿರುವುದು ಬಹುಶಃ ಇದೊಂದೇ ಕೃತಿ. ಆ ಶ್ರೇಯಸ್ಸು ಗೌಡರದು, ಮತ್ತು ಅನುವಾದಿಸಿರುವ ಜೋಳದ ರಾಶಿಯ ಚಂದ್ರಶೇಖರ ರೆಡ್ಡಿಯವರದು.

ಗೌಡರು ಕವಿಯಾಗಿ ಹೆಚ್ಚು ಹೆಸರು ಗಳಿಸಿಲ್ಲವಾದರೂ ಹಲವಾರು ಉತ್ತಮ ಕವಿತೆಗಳನ್ನು ರಚಿಸಿದ್ದಾರೆ. "ಗೌಡಿತಿ ಬರಲಿಲ್ಲ" ಎಂಬ ತ್ರಿಪದಿಗಳ ಸಂಗ್ರಹ ತುಂಬಾ ಹೃದ್ಯವಾಗಿದೆ. ಇದು ತಮ್ಮ (ಎರಡನೆಯ) ಹೆಂಡತಿ ತೀರಿಕೊಂಡಾಗ ಆದ ದುಃಖ ವನ್ನು ನೀಗಿಸಿಕೊಳ್ಳಲು ರಚಿಸಿದ ರಚನೆ. ಅನುಭವ ವೈಯಕ್ತಿಕವಾದರೂ ಅನುಭಾವ ಸಾರ್ವತ್ರಿಕವಾಗುವಂತೆ ಇಲ್ಲಿ ಭಾವ ಗಟ್ಟಿಗೊಂಡು ಓದುಗರನ್ನು ತಟ್ಟುತ್ತದೆ. ಶ್ರೀ ಗೌಡರು ಮೂಲತಃ ಭಕ್ತ ಕವಿ. ಇವರಿಗೆ ಭಕ್ತಿಯೇ ಸ್ಫೂರ್ತಿಕೇಂದ್ರ ಗೇಯತೆ ಈ ಗೀತೆಗಳ ವಿಶಿಷ್ಟ ಗುಣ, ಇದನ್ನು ಇವರ ತ್ರಿಪದಿಗಳಲ್ಲಿ, ಭಾವಗೀತೆಗಳಲ್ಲಿ ಮತ್ತು ರಾಮೇಶನ ವಚನಗಳಲ್ಲಿ ಸ್ಪಷ್ಟವಾಗಿ ಗುರ್ತಿಸಬಹುದು.

ಗಮಕ ಕಳಾನಿಧಿ :

ಕರ್ನಾಟಕದಲ್ಲಿ ಕಿರಿಯ ಪೀಳಿಗೆಯವರು ಬಹುಶಃ ನಾಟಕಕಾರ ದೊಡ್ಡನಗೌಡ ರನ್ನು ನೋಡಿರಲಾರರು. ಆದರೆ ಗಮಕಿ ಗೌಡರನ್ನು ಬಹುಶಃ ಎಲ್ಲರೂ ಬಲ್ಲರು. ಅವರೇ ಹೇಳುವಂತೆ ಅವರು ಆಂಧ್ರದಲ್ಲಿ ನಟರಾಗಿ ಮತ್ತು ಕರ್ನಾಟಕದಲ್ಲಿ ಗಮಕಿ ಯಾಗಿ ಹೆಚ್ಚು ಖ್ಯಾತಿಯನ್ನು ಪಡೆದರು. ಕೇವಲ ನಾಲ್ಕನೆಯ ವರ್ಗದವರೆಗೆ ಓದಿ ಕನ್ನಡ ಮತ್ತು ತೆಲುಗು ಭಾಷೆಗಳನ್ನು ಅಭ್ಯಸಿಸಿರುವ ಗೌಡರು ಬಾಲ್ಯದಲ್ಲಿ ಕಾವ್ಯಾ ರಾಧನೆಯ ವಾತಾವರಣದಲ್ಲಿ ಬೆಳೆದವರು. ಆ ಕಾಲದಲ್ಲಿ "ಹರಿಶ್ಚಂದ್ರ ಕಾವ್ಯ", "ಜೈಮಿನಿ ಭಾರತ", "ಗಿರಿಜಾ ಕಲ್ಯಾಣ" ಇತ್ಯಾದಿ ಕಾವ್ಯಗಳನ್ನು ಕರ್ನಾಟಕದ ಹಳ್ಳಿ ಗಳಲ್ಲಿ ಓದುವ ಅಥವಾ ವಾಚಿಸುವ ಜನರಿದ್ದರು. ಶಾಲಾ ಪಠ್ಯಕ್ರಮದಲ್ಲಿಯೂ

ಕಾವ್ಯಕ್ಕೆ ಪ್ರಾಧಾನ್ಯ. ನಾಟಕ ಮತ್ತು ಬಯಲಾಟಗಳಲ್ಲಿ ಗಳಿಸಿದ ಸಂಗೀತ ಜ್ಞಾನ ಮತ್ತು ನಿಸರ್ಗದತ್ತ ಕಂಚಿನ ಕಂಠ ಇವು ಮುಪ್ಪುರಿಗೊಂಡು ಡಾ॥ ದೊಡ್ಡನಗೌಡರನ್ನು ಕರ್ನಾಟಕದ ಶ್ರೇಷ್ಠ ಗಮಕಿಯನ್ನಾಗಿಸಿದವು. "ಗಮಕ ಕಳಾನಿಧಿ", "ಗಮಕ ಪ್ರವೀಣ" ಎಂಬ ಪ್ರಶಸ್ತಿಗಳು ಮತ್ತು ಗಮಕ ಕಲಾ ಸಮ್ಮೇಳನದ ಅಧ್ಯಕ್ಷತೆ ಇವು ಗೌಡರನ್ನು ಅರಸಿಕೊಂಡು ಬಂದವು. ಆದರೆ ತಾವು ಸ್ವಯಂ ಗುರುವಾಗಿ ಕಲಿತ ಈ ಕಲೆಯನ್ನು ಇನ್ನೊಬ್ಬರಿಗೆ ಕಲಿಸಲಾಗಲಿಲ್ಲವೆಂಬ ಕೊರಗನ್ನು ನನ್ನೊಡನೆ ಒಂದೆರಡು ಸಲ ಗೌಡರು ಹೇಳಿಕೊಂಡಿದ್ದಾರೆ. ಈ ಕೆಳಗಿನ ಎರಡು ತ್ರಿಪದಿಗಳು ಗೌಡರ ನೋವನ್ನು ಹೊರಗೆಡುಹುತ್ತವೆ.

ಎಲ್ಲರಂತಲ್ಲನಾ ಪಿಂಡ ಸಂತಾನಿಯಲ್ಲ
ಇಲ್ಲಿರಿಸಿ ಪೋಗುವಾ ಜೀವ ಪೀಳಿಗೆಯಿಲ್ಲ
ಕಲೆಯು ಸಂತಾನ ಸಿರಿ ಕೊಳ್ಳುವರಾರಿಲ್ಲ !!
ಇಂದೋ-ನಾಳೆಯೋ ಜೀವನ ಮಣ್ಣು ಪಾಲಾಗುವುದು
ಅಂದಿಗೆನ್ನೀ ಕಲೆಯು ನಿಧಿ ಸಮಾಧಿಯಾಗುವದು
ತಂದೆ ರಾಮೇಶ ನೀನೊಪ್ಪಿಸಿಕೋ ಮುಪ್ಪಿನಲಿ !!

ಹೀಗೆ ನಟರಾಗಿ, ನಾಟಕಕಾರರಾಗಿ, ಕವಿಯಾಗಿ, ಗಮಕಿಯಾಗಿ, ಪ್ರವಚನ ಕಾರನಾಗಿ ಈ ನಾಡಿನ ಸಂಸ್ಕೃತಿಗೆ ಅಮೂಲ್ಯ ಕೊಡುಗೆಯನ್ನಿತ್ತಿರುವ ಡಾ॥ ದೊಡ್ಡನ ಗೌಡರೊಡನೆ ನಾನು 1988 ಆಗಸ್ಟ್ 12 ರಂದು ನಡೆಸಿದ ಸಂದರ್ಶನದ ಮುಖ್ಯಾಂಶ ಗಳನ್ನಿಲ್ಲಿ ಕೊಟ್ಟಿದ್ದೇನೆ.

ನಾಟಕ ರಂಗಭೂಮಿ ಮತ್ತು ಬಯಲಾಟ :

ಪ್ರಶ್ನೆ : ನೀವು ಮೂಲತಃ ನಟರು ಮತ್ತು ನಾಟಕಕಾರರು. ಅಂದಿನ ನಾಟಕ ಶೈಲಿ ಮತ್ತು ಇಂದಿನ ನಾಟಕ ಶೈಲಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಇಂದಿನ ನಾಟಕರಂಗವು ಇಂದು ತೀರಾ ಶೋಚನೀಯ ಸ್ಥಿತಿಯಲ್ಲಿದೆ. ಇದಕ್ಕೆ ಕಾರಣ ಗಳೇನು ಮತ್ತು ಅದನ್ನು ಪುನರುತ್ಥಾನಗೊಳಿಸಲು ನಿಮ್ಮ ಸೂಚನೆಗಳೇನು ?

ಉತ್ತರ : ಯಾವುದೇ ಕಾಲದ ನಾಟಕದ ಶೈಲಿಯು ಆಯಾ ಕಾಲದ ಜನರ ನಿರೀಕ್ಷೆ ಮತ್ತು ಅಭಿಲಾಷೆಗಳ ಮೇಲೆ ನಿರ್ಭರವಾಗಿರುತ್ತದೆ. ಅಂದಿನ ನಾಟಕಗಳು ಸಂಗೀತ ಪ್ರಧಾನ ನಾಟಕಗಳು, ಇಂದಿನ ನಾಟಕಗಳಲ್ಲಿ ಸಂಗೀತಕ್ಕೆ ಪ್ರಾಧಾನ್ಯತೆ ಇಲ್ಲ. ಅಂದು ಯಾವುದೇ ನಟ ಅಥವಾ ನಟಿ ನಾಯಕ ಮತ್ತು ನಾಯಕಿಯ ಪಾತ್ರಕ್ಕೆ ಆಯ್ಕೆ ಆಗಬೇಕಾಗಿದ್ದರೆ ಅವನ ಅಥವಾ ಅವಳ ಗಾಯನ ಕೌಶಲ್ಯದ ಮೇಲೆ ನಿರ್ಧಾರ ವಾಗುತ್ತಿತ್ತು. ಗಾಯನದ ಜೊತೆಗೆ ನಟನಾಕಲೆಯೂ ಜೊತೆಗೂಡಿದರೆ ಮಾತ್ರ ಅಂದು ನಾಯಕ ನಟನಾಗಿ ಹೆಸರು ಗಳಿಸಲು ಸಾಧ್ಯವಿತ್ತು.

ಇಂದು ನಮ್ಮ ವೃತ್ತಿ ನಾಟಕ ರಂಗವು ಸುಧಾರಿಸೀತು ಎಂದು ಧೈರ್ಯದಿಂದ ಹೇಳಲು ಸಾಧ್ಯವಿಲ್ಲದಷ್ಟು ಕೆಟ್ಟು ಹೋಗಿದೆ. ಸಾಮಾನ್ಯವಾಗಿ ಇದಕ್ಕಾಗಿ ಸಿನಿಮಾವನ್ನು ಹೊಣೆಯಾಗಿ ತೋರಿಸಲಾಗುತ್ತದೆ. ನಾನೂ ಅದರಂತೆ ಬಹಳ ಕಾಲ ತಿಳಿದಿದ್ದೆ ಆದರೆ ಇದು ಪೂರ್ಣ ಸತ್ಯವಲ್ಲ. ಹಿಂದೆ ಮೈಸೂರು ಮಹಾರಾಜರ ಕಾಲದಲ್ಲಿದ್ದಂತೆ ಪ್ರೋತ್ಸಾಹ ಇಲ್ಲ. ಸಿನೇಮಾ ಗೃಹಗಳಲ್ಲಿ ನಾಟಕವನ್ನು ಪ್ರದರ್ಶಿಸಲು ಬರುವದಿಲ್ಲ. ಅದಕ್ಕಾಗಿ ಪ್ರತ್ಯೇಕವಾಗಿ ನಾಟಕ ರಂಗ ಕ್ಷೇತ್ರಗಳನ್ನು ಕಟ್ಟಬೇಕು. ಕಲಾವಿದರಲ್ಲಿ ಉತ್ಸಾಹವಿದೆ. ಅದರೆ ಅದಕ್ಕೆ ತಕ್ಕಂಥ ಪ್ರೋತ್ಸಾಹ, ಗೌರವ ನೀಡಿದರೆ ನಾಟಕ ರಂಗ ಪುನಃ ತಲೆ ಎತ್ತೀತು. ನಮ್ಮ ರಾಜ್ಯದ ಉತ್ತರ ಕರ್ನಾಟಕದಲ್ಲಿ ಕೊಂಚ ಹೆಚ್ಚಿನ ಪ್ರೋತ್ಸಾಹ ಇದೆ. ಆದರೆ ಇತರ ಭಾಗಗಳಲ್ಲಿ ಪ್ರೋತ್ಸಾಹದ ಜಲವಿಲ್ಲದೆ ವೃತ್ತಿ ರಂಗಭೂಮಿ ಒಣಗಿ ಹೋಗಿದೆ.

ಪ್ರಶ್ನೆ : ದಿವಂಗತ ಕೈಲಾಸಂ ಮತ್ತು ಶ್ರೀರಂಗ ಇವರನ್ನು ಸಮೀಪದಿಂದ ಕಂಡವರು, ಯಾರ ನಾಟಕಗಳು ನಿಮಗೆ ಹಿಡಿಸಿದವು ? ನನ್ನ ದೃಷ್ಟಿಯಲ್ಲಿ ಈ ಇಬ್ಬರ ಪ್ರಭಾವ ಬೇರೆ ನಾಟಕಕಾರರ ಮೇಲೆ ಆದಂತೆ ನಿಮ್ಮ ಮೇಲೆ ಆಗಲಿಲ್ಲ. ಇದರ ಬಗ್ಗೆ ಕೊಂಚ ವಿವರಣೆ ನೀಡುವಿರಾ ?

ಉತ್ತರ : ಇಬ್ಬರೂ ನನ್ನ ಸ್ನೇಹಿತರೇ. ಇಬ್ಬರೂ ದೊಡ್ಡವರೇ. ಅವರ ಬಗ್ಗೆ ನನಗೆ ಗೌರವ ಭಾವನೆ ಇದೆ. ಅವರ ನಾಟಕಗಳು ಇಂಗ್ಲೀಷಿನಿಂದ ಪ್ರಭಾವಿತ ವಾಗಿದ್ದರಿಂದ ನನ್ನ ಮೇಲೆ ಪ್ರಭಾವ ಬೀರಲಿಲ್ಲ. ಈ ನಾಟಕಗಳ ಬಗ್ಗೆ ನನ್ನ ಗುರುಗಳಾದ ದಿವಂಗತ ರಾಘವಾಚಾರ್ಯ ನುಡಿದ ಒಂದು ಮಾತನ್ನು ನಾನು ಹೇಳ ಬಯಸುತ್ತೇನೆ. ದೊಡ್ಡವರ ಬಗ್ಗೆ, ದೊಡ್ಡವರು ಹೇಳಿದ್ದನ್ನೇ ಹೇಳಿದರೆ ಸರಿ ಯಾದೀತು. ಹಿಂದೆ ಸಿರಸಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ರಾಘವಾಚಾರ್ಯರ ಜೊತೆಗೆ ನಾನು ಹೋಗಿದ್ದೆ. ನಮ್ಮದೂ ಒಂದು ನಾಟಕವನ್ನಾಡಿದೆವು. ಆ ಸಮಯ ದಲ್ಲಿ ಶ್ರೀರಂಗರು ತಮ್ಮದೊಂದು ನಾಟಕವನ್ನು ರಾಘವರಿಗೆ ಓದಲು ಕೊಟ್ಟರು. ಆಗ ರಾಘವರು "ಗೌಡ ನೋಡಪ್ಪ, ಇವರೊಂದು ನಾಟಕ ಕೊಟ್ಟಾರ, ಓದು ಇದನ್ನು ನಾನು ಕೇಳುತ್ತೇನೆ" ಎಂದು ಹೇಳಿದರು. ನಾನು ಓದಲು ಪ್ರಾರಂಭಿಸಿದೆ. ಅವರು ಸ್ವಲ್ಪ ಹೊತ್ತಿನಲ್ಲಿ ಮಲಗಿದರು. ನಾನು ನಿಲ್ಲಿಸಿ ಏಳುವವನಿದ್ದೆ. ಆಗ ರಾಘವರು ಎಚ್ಚೆತ್ತು "ಏನಪ್ಪಾ ಗೌಡ ಎದ್ದು ಬಿಟ್ಟೆ. ನೋಡಪ್ಪಾ ಅದನ್ನು ದೊಡ್ಡವರು ಬರದಾರ. ಅವು ಒಂದು ರೀತಿಯ ನಾಟಕಗಳು" ಎಂದು ಹೇಳಿದರು. ನಮ್ಮ ಗುರುಗಳ ಅಭಿಪ್ರಾಯವೂ ನನ್ನ ಅಭಿಪ್ರಾಯವೂ ಒಂದೇ. ಆದ್ದರಿಂದ ಈ ಈರ್ವರ ಪರಿಣಾಮ ನನ್ನ ಮೇಲಾಗಲಿಲ್ಲ.

ಪ್ರಶ್ನೆ : ತೆಲುಗು ರಂಗ ಭೂಮಿಯ ಬಗ್ಗೆ ಕೊಂಚ ಹೇಳಿರಿ ?

ಉತ್ತರ : ತೆಲುಗು ವೃತ್ತಿ ರಂಗಭೂಮಿಯೂ ತುಂಬಾ ಕ್ಷೀಣವಾದಂಥ ಸ್ಥಿತಿಯಲ್ಲಿದೆ. ಅವರಲ್ಲಿ ನಮ್ಮಲ್ಲಿಯಂಥ ದೊಡ್ಡ ದೊಡ್ಡ ಕಂಪನಿಗಳು ಇರಲಿಲ್ಲ; ಈಗಲೂ ಇಲ್ಲ. ಆದರೆ ನಮ್ಮ ಗುಬ್ಬಿ ವೀರಣ್ಣನವರ ಕಂಪನಿಗಿಂತಲೂ ಪೂರ್ವದಲ್ಲಿ ತೆಲುಗಿನಲ್ಲಿ ಸುರಭಿ ಕಂಪನಿ ಎಂಬ ನಾಟಕ ಕಂಪನಿಯು ಇತ್ತೆಂದು ಹೇಳುತ್ತಾರೆ. ಆದರೆ ದೃಷ್ಟಾಂತವಾಗಿ ಉದಾಹರಿಸಲು ಯೋಗ್ಯವಾದಂಥ ಯಾವ ಕಂಪನಿಯೂ ಬೆಳೆದುಬರಲಿಲ್ಲ. ಆದರೆ ಅಲ್ಲಲ್ಲಿ ಕೆಲವು ಅಮೆಚೂರು ಕಂಪನಿಗಳಿವೆ. ನೆಲ್ಲೂರಿನ ರಾಮ ಸುಬ್ಬಾರೆಡ್ಡಿಯ ಕಂಪನಿ ಇದಕ್ಕೆ ಒಂದು ಉದಾಹರಣೆ. ಈ ರಾಮ ಸುಬ್ಬಾರೆಡ್ಡಿಯವರು 'ವಿಷಾದ ಸಾರಂಗಧರ' ಎಂಬ ನಾಟಕವನ್ನು ಅಭಿನಯಿಸುತ್ತಾರೆ. ಒಂದು ಸಲ ಇತ್ತೀಚೆಗೆ ಬಳ್ಳಾರಿಯಲ್ಲಿ ಇವರು ಅಭಿನಯಿಸಿದಾಗ ನೀವು ಮತ್ತು ನಾನು ಇಬ್ಬರೂ ಇದ್ದೆವಲ್ಲ. ಹೆಚ್ಚು ಕಮ್ಮಿ ತೆಲುಗು ರಂಗಭೂಮಿಯು ಇಂಥ ರೀತಿಯಲ್ಲಿದೆ.

ಪ್ರಶ್ನೆ : ನೀವು ಮೊದಲು ಬಣ್ಣ ಹಚ್ಚಿದ್ದು ಬಯಲಾಟದಲ್ಲಿ. ನೀವು ಸಾಕಷ್ಟು ಬಯಲಾಟಗಳನ್ನು ನೋಡಿರಬೇಕು. ಆದರೆ ಈ ಕಡೆಯ ಬಯಲಾಟ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನದಂತೆ ಊರ್ಜಿತವಾಗದೆ, ಬಹುಶಃ ನಶಿಸಿ ಹೋಗಿದೆ ಎಂದರೂ ಸರಿಯಾದೀತು. ಇದಕ್ಕೆ ಕಾರಣಗಳೇನು ?

ಉತ್ತರ : ನಮ್ಮ ಬಳ್ಳಾರಿ ಜಿಲ್ಲೆಯ ನಾಟಕ ಮತ್ತು ಬಯಲಾಟಗಳದೇ ಒಂದು ವೈಶಿಷ್ಟ್ಯತೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯ ಇಂದಿನ ಯಕ್ಷಗಾನಕ್ಕೆ ಹೋಲಿಸಿದರೆ ನಮ್ಮ ಬಯಲಾಟ ಕೊಂಚ ಕ್ಷೀಣಿಸಿದೆ; ಎಂದೆನಿಸುತ್ತದೆ. ಆದರೆ ನಶಿಸಿ ಹೋಗುವಂಥ ಸ್ಥಿತಿಯನ್ನು ತಲುಪಿಲ್ಲ. ಅಲ್ಲಿಯ ಜನ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರೆದಿರುವದು ಅಲ್ಲಿಯ ಯಕ್ಷಗಾನ ಅಭಿವೃದ್ಧಿ ಕಾರಣವೆಂದು ಕಾಣುತ್ತದೆ. ನಮ್ಮಲ್ಲಿ ಬಯಲಾಟಗಳನ್ನು ಕೇವಲ ಶೋಕಿಯಾಗಿ ಸ್ವಂತ ಹಣವನ್ನು ಹೂಡಿ ಆಡಲಾಗುತ್ತದೆ. ನಮ್ಮಲ್ಲಿ ವೃತ್ತಿ ಬಯಲಾಟದ ಕಂಪನಿಗಳಿಲ್ಲ. ಇದಕ್ಕಾಗಿ ಟಿಕೆಟ್‌ಗಳನ್ನು ಇಡುವುದಿಲ್ಲ. ಬಹುಶಃ ಈ ಕಾರಣಗಳು ನಮ್ಮ ಬಯಲಾಟದ ಅವನತಿಗೆ ಕೊಂಚ ಕಾರಣ. ಈ ಬಗ್ಗೆ ಎರಡು ವರ್ಷಗಳ ಹಿಂದೆ ನಮ್ಮ ಸಣ್ಣ ಹಳ್ಳಿಯಲ್ಲಿಯೇ ಎರಡು ಬಯಲಾಟಗಳನ್ನಾಡಿದರು. ನಮ್ಮ ಹಳ್ಳಿಗಳ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಹದಗೆಟ್ಟಿರುವದೂ ಇಂಥ ಪರಿಸ್ಥಿತಿಗೆ ಕಾರಣವೆನಿಸುತ್ತದೆ. ಈ ಪರಿಸ್ಥಿತಿ ಸುಧಾರಿಸಿದರೆ ಬಯಲಾಟದ ಸ್ಥಿತಿಯೂ ಸುಧಾರಿಸೀತು. ನಮ್ಮ ಬಳ್ಳಾರಿ ಜಿಲ್ಲೆಯ ಬಯಲಾಟದ್ದೇ ಒಂದು ವೈಶಿಷ್ಟ್ಯತೆ ಇದೆ. ಇದರ ಇತಿಹಾಸದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೇನೆ. ಆದರೆ ಇನ್ನೂ ಪ್ರಕಟಿಸಿಲ್ಲ.

ಗಮಕ ಕಲೆ :

ಪ್ರಶ್ನೆ : ಗಮಕಿಯಾಗಿ ತುಂಬಾ ಹೆಸರು ಪಡೆದವರು ನೀವು. ಇಂದು ಗಮಕ ಕಲೆಯಲ್ಲಿ ಜನರಲ್ಲಿ ಅಭಿರುಚಿ ಇಲ್ಲ ಮತ್ತು ಅಂಥ ಪ್ರತಿಭಾವಂತ ಗಮಕಿಗಳೂ

ಇಲ್ಲ. ಇದಕ್ಕೆ ಕಾರಣಗಳೇನು ? ಗಮಕಕ್ಕೆ ಕರ್ನಾಟಕ ಸಂಗೀತ ಮತ್ತು ಉತ್ತರಾದಿ ಸಂಗೀತಗಳಲ್ಲಿ ಯಾವುದು ಸರಿ ? ಈಗ ಬಂದಿರುವ ಟಿ. ವಿ. ಯಿಂದ ಗಮಕ ಕಲೆಯನ್ನು ಉಳಿಸಿ ಬೆಳೆಸುವದು ಸಾಧ್ಯವೆಂದು ನಿಮಗೆ ಅನಿಸುವುದಿಲ್ಲವೆ ?

ಉತ್ತರ : ಇಂದು ಈ ಕಲೆಯಲ್ಲಿ ನಿಜವಾದ ಆಸಕ್ತಿ ಕಡಿಮೆಯಾಗಿದೆ. ಕೇವಲ ಆಕಾಡೆಮಿಗಳನ್ನು ಮಾಡಿ ಅಪರಿವರನ್ನು ಹಿಡಿದು ಪ್ರಶಸ್ತಿಗಳನ್ನು ಪಡೆಯುವ ಪ್ರವೃತ್ತಿ ಹೆಚ್ಚಾಗಿದೆ. ನನ್ನಿಂದ ಒಬ್ಬರೂ ಕಲಿಯಲಿಲ್ಲ ಎಂಬ ವ್ಯಸನವಿದೆ ನಿಜ. ಗಮಕ ಎಂದರೆ ಕವಿಯ ಹೃದಯವನ್ನು ಬಿಚ್ಚಿ ಜನರ ಮುಂದಿಡುವ ಕಾವ್ಯ ದಾಸೋಹ. ಗಮಕಿ ಇರದಿದ್ದರೆ ಕವಿಯ ಕಾವ್ಯ ಜನರನ್ನು ತಲುಪುವದಿಲ್ಲ. ನಮ್ಮಲ್ಲಿ ಶ್ರೇಷ್ಠ ಕಾವ್ಯಗಳಿವೆ. ಉದಾಹರಣೆಗೆ ಗಿರಿಜಾ ಕಲ್ಯಾಣ, ಗದಾಯುದ್ಧ, ಹರಿಶ್ಚಂದ್ರ ಕಾವ್ಯ. ಇವೆಲ್ಲವುಗಳನ್ನು ಒಂದು ಸಲ ಹೊರಗೆ ತೆಗೆದು ನನ್ನ ದನಿ ಇರುವದರೊಳಗಾಗಿ ಟೇಪ್‌ರಿಕಾರ್ಡ್ ಮಾಡಬೇಕೆಂದಿದ್ದೇನೆ. ಹಿಂದೆ ಹರಿಶ್ಚಂದ್ರ ಕಾವ್ಯವನ್ನು ಧ್ವನಿ ಮುದ್ರಿಸಿದ್ದೆ. ಆದರೆ ಅದು ಈಗ ಲಭ್ಯವಿಲ್ಲ. ಈ ಕಾವ್ಯ ಮೋಹ ನನ್ನಲ್ಲಿ ಇಂದಿಗೂ ಇದೆ. ಇಂಥ ಕಾವ್ಯ ಮೋಹ, ಕಾವ್ಯದ ಅಧ್ಯಯನ ಇಂದು ಕಡಿಮೆ ಆಗಿರುವುದೇ ಗಮಕದ ಅವನತಿಗೆ ಕಾರಣ. ನಾನು ಕಲಿಸುವುದಕ್ಕೆ ಒಬ್ಬರೂ ಸಿಗಲಿಲ್ಲವಲ್ಲ ಎಂಬ ವ್ಯಸನ ನನ್ನನ್ನು ಇನ್ನೂ ಕಾಡುತ್ತಿದೆ.

ಗಮಕಕ್ಕೆ ಕರ್ನಾಟಕ ಸಂಗೀತ ಮತ್ತು ಉತ್ತರಾದಿ ಸಂಗೀತ ಎರಡೂ ಹೊಂದುತ್ತದೆ. ಆದರೆ ಕೇವಲ ಸಂಗೀತ ಗೊತ್ತಿದ್ದರೆ ಸಾಲದು. ಕಾವ್ಯದ ಅಭ್ಯಾಸವೂ ಅತ್ಯಗತ್ಯ. ಕಾವ್ಯದ ಅಂತಃಸತ್ವವನ್ನು ಜನರ ಮುಂದಿಡುವ ಶಕ್ತಿ ಗಮಕಿಗಿದ್ದರೆ ಯಾವ ಸಂಗೀತವಾದರೂ ಸರಿಯೇ. ಕಾವ್ಯದ ಭಾವ, ಮತ್ತು ಅರ್ಥಕ್ಕೆ ತಕ್ಕಂತೆ ರಾಗ, ಸ್ಥಾಯಿಗಳನ್ನು ಕೂಡಿಸಿ ಹಾಡಬೇಕು. ಇದು ಮುಖ್ಯ, ಕೇವಲ ಸಂಗೀತ ಗೊತ್ತಿದ್ದರೆ ಸಾಲದು.

ಟಿ.ವಿ.ಯ ಮೂಲಕ ಈ ಗಮಕ ಕಲೆಯನ್ನು ಉಳಿಸಿ ಬೆಳೆಸುವದು ಸಾಧ್ಯ. ಈ ಗಮಕ ಕಲೆ ಬಹುಶಃ ಕರ್ನಾಟಕಕ್ಕೇ ಸೀಮಿತ. ಆದ್ದರಿಂದ ಟಿ.ವಿ.ಯಲ್ಲಿರುವ ಯಜಮಾನ್ಯಗಳು ಇದಕ್ಕೆ ಅಡ್ಡ ಬರಬಹುದು. ಇವುಗಳ ವಿರುದ್ಧ ಹೋಗುವದು ಯಾರಿಂದ ಸಾಧ್ಯ ?

ಪ್ರಶ್ನೆ : ನಿಮ್ಮ ಮೇಲೆ ಪ್ರಭಾವ ಬೀರಿದ ಕವಿಗಳಾರು ? ಮತ್ತು ಅವರಿಂದ ಹೇಗೆ ಪ್ರಭಾವಿತರಾದಿರಿ ?

ಉತ್ತರ : ಲಕ್ಷ್ಮೀಶ ಮತ್ತು ರಾಘವಾಂಕರು ನನ್ನ ಮೇಲೆ ಪ್ರಭಾವ ಬೀರಿದ ಕವಿಗಳು. ಆಗಿನ ಕಾಲದಲ್ಲಿ 'ಜೈಮಿನಿ ಭಾರತ' ಪ್ರವೇಶಿಸದ ಮನೆಯೇ ಇರಲಿಲ್ಲವೆಂದರೂ ಸರಿಯಾದೀತು. ಅಂತೆಯೇ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಇದಲ್ಲದೆ

ತೆಲುಗು ಕಾವ್ಯಗಳಲ್ಲಿ 'ಭಾರತ', 'ಉತ್ತರ ರಾಮಾಯಣ' ಇತ್ಯಾದಿ ಕಾವ್ಯಗಳನ್ನು ನಾನು ಸಣ್ಣವನಿದ್ದಾಗ ಅಭ್ಯಾಸ ಮಾಡಿದೆ. ಲಕ್ಷ್ಮೀಶ ಮತ್ತು ರಾಘವಾಂಕರ ಕಾವ್ಯ ಗುಣ, ಭಾವ, ಕಥಾ ವೈಖರಿ ಮತ್ತು ಧಾರ್ಮಿಕ ಅಂಶಗಳು ನನ್ನ ಮೇಲೆ ಪ್ರಭಾವ ಬೀರಿದವು. ಆಧುನಿಕ ಕವಿಗಳು ನನ್ನ ಮೇಲೆ ಪ್ರಭಾವ ಬೀರಲಿಲ್ಲ. ಒಂದು ರೀತಿ ಯಿಂದ ಆಧುನಿಕ ಕಾವ್ಯ ಮತ್ತು ಪ್ರಾಚೀನ ಕಾವ್ಯವೆಂದು ವಿಂಗಡಿಸುವುದು ಸರಿಯಲ್ಲ. ಆಧುನಿಕ ಎಂದರೆ ಬೆತ್ತಲೆ ಕವಿತೆಗಳು ಅಥವಾ ದಿಗಂಬರಕವಿಗಳ ಬಗ್ಗೆ ಕೇಳುತ್ತೀರಾ. ಇವರೇನು ಹೊಸದಾಗಿ ಏನನ್ನೂ ಹೇಳುತ್ತಿಲ್ಲ. ಹಿಂದಿನ ಕಾವ್ಯಗಳಲ್ಲಿಯೂ ಈ ತರಹದ ರಚನೆಗಳಿದ್ದವು. ಆದರೆ ಬೆತ್ತಲೆ ಅಂತ ಅಂದಿಲ್ಲ.

ಶೂನ್ಯ ಸಂಪಾದನೆ :

ಪ್ರಶ್ನೆ : ಶೂನ್ಯ ಸಂಪಾದನೆಯ ಬಗ್ಗೆ ನಾಡಿನ ಉದ್ದಗಲಕ್ಕೂ ಪ್ರವಚನ ನೀಡಿದ್ದೀರಿ. ಈ ಗ್ರಂಥದಿಂದ ನೀವು ಹೇಗೆ ಆಕರ್ಷಿತರಾದಿರಿ ?

ಉತ್ತರ : ನಾನು ನಾಟಕ ರಂಗದವ, ನಟ. ಆದ್ದರಿಂದ ಶೂನ್ಯಸಂಪಾದನೆ ಯಲ್ಲಿ ಇರುವ ನಾಟಕೀಯ ಗುಣ ನನ್ನನ್ನು ಮೊದಲಿಗೆ ಆಕರ್ಷಿಸಿತು. ಒಂದು ಸಲ ನನ್ನ ಸ್ನೇಹಿತ ದಿವಂಗತ ಮಲ್ಲಾಬಾದಿ ವೀರಭದ್ರಪ್ಪನವರ ಹತ್ತಿರ ಇದ್ದ ಈ ಗ್ರಂಥ ನನ್ನ ಕಣ್ಣಿಗೆ ಬಿತ್ತು. ನಾನು ಅದನ್ನು ಪಡೆದು ಓದಿದಾಗ ತುಂಬಾ ಅಚ್ಚರಿಯಾಯಿತು. ಗೂಳೂರು ಸಿದ್ಧವೀರಣ್ಣೊಡೆಯರು ವಚನಗಳ ಆಧಾರದ ಮೇಲೆ ಸಂಪಾದಿಸಿದ ನಾಟಕೀಯ ರೀತಿ ನನ್ನನ್ನು ಆಕರ್ಷಿಸಿತು. ತತ್ವಗಳನ್ನು ನಾಟಕೀಯವಾಗಿ ಹೇಳುವ ಹೊಸತನ ನನ್ನನ್ನು ಆಕರ್ಷಿಸಿತು. ನಾನು ಅದನ್ನು ಓದಲು ಪ್ರಾರಂಭಿಸಿದೆ. ಎಷ್ಟೋ ಸಲ ಓದಿದೆ. ಅರ್ಥವಾಗಲಿಲ್ಲ. ಪುನಃ ಪುನಃ ಓದಿ ನನ್ನಷ್ಟಕ್ಕೆ ನಾನೇ ಅರ್ಥಮಾಡಿ ಕೊಳ್ಳಲು ಪ್ರಯತ್ನಿಸಿದೆ. ಇಲ್ಲಿ ಇಂಥ ಕುಗ್ರಾಮದಲ್ಲಿ ಯಾರೊಡನೆ ಚರ್ಚಿಸಲಿ ? ಒಂದು ಸಲ ಆರೋಗಣೆ ಎಂಬ ಭಾಗವನ್ನಾಯ್ದುಕೊಂಡು ನನ್ನ ಪ್ರಾಣ ಸ್ನೇಹಿತ ದಿವಂಗತ ಕುಮಾರಸ್ವಾಮಿಯ ಸಹಕಾರದಿಂದ ರಾಗ ಸಂಯೋಜಿಸಿದೆ. ಅವನ ಪ್ರೋತ್ಸಾಹದಿಂದ ಮೊದಲ ಬಾರಿಗೆ ಬಸವಜಯಂತಿಯಂದು ಬಸವನ ಬಾಗೇವಾಡಿಯಲ್ಲಿ ಸಾರ್ವಜನಿಕರ ಮುಂದೆ ಶೂನ್ಯ ಸಂಪಾದನೆ ಬಗ್ಗೆ ಪ್ರವಚನ ನೀಡಿದೆ. ಜನರ ಮೇಲೆ ಪ್ರಭಾವ ಬೀರಲು ಕೊಂಚ ಸಮಯ ಬೇಕಾಯಿತು. ಸುಮಾರು 15–20 ನಿಮಿಷಗಳ ನಂತರ ಜನರಿಗೆ ವಿಷಯ ಮುಟ್ಟಿದಂತೆ ಅನಿಸಿದಾಗ ಮುಂದುವರೆಸಿದೆ. ನಂತರ ದಿ. ಬಸವನಾಳರು ಇದನ್ನು ಕೇಳಿ "ಚಂದ" ಎಂದು ಹೇಳಿದರು. ಅವರ ಮೆಚ್ಚುಗೆ ಪಡೆದ ನಂತರ ನನಗೆ ಧೈರ್ಯ ಬಂತು. ಮುಂದೆ ಧಾರವಾಡದ ಮೃತ್ಯುಂಜಯಪ್ಪ ಗಳಂತೂ ಸಮಾಧಿಸ್ಥರಾಗುವವರೆಗೂ ನನ್ನಿಂದ ಕೇವಲ ಶೂನ್ಯ ಸಂಪಾದನೆಯ ವಾಚನ ಮಾಡಿಸಿ ಕೇಳಿ ಆನಂದಿಸುತ್ತಿದ್ದರು. ಅವರು "ನಿಮ್ಮದು ವಾಕ್ ಭಕ್ತಿ, ನಮ್ಮದು ಶ್ರವಣ ಭಕ್ತಿ" ಎಂದು ಹೇಳುತ್ತಿದ್ದರು. ಅವರ ಆಶೀರ್ವಾದದ ಬಲದಿಂದ ಅವರ

ಮುಂದೆ ನಾನು ವಾಚನ ಮಾಡುತ್ತಿದ್ದರೆ ನನಗೆ ತಿಳಿಯದಂಥ ಭಾಗಗಳೂ ತಿಳಿದು ಬಿಡುತ್ತಿದ್ದವು. ಅವರಿಗೆ ನನ್ನ ಮೇಲೆ ವಿಶೇಷ ಪ್ರೇಮ. ಅವರ ಆಶೀರ್ವಾದದ ಫಲವಾಗಿ ನಾನು ಹೆಚ್ಚು ಆಳವಾಗಿ ಶೂನ್ಯ ಸಂಪಾದನೆಯನ್ನು ಅಭ್ಯಾಸ ಮಾಡಿದೆ ಮತ್ತು ಜನರಿಗೆ ತಿಳಿಯುವಂತೆ ಇದರ ಬಗ್ಗೆ ಪ್ರವಚನ ನೀಡಿದೆ. ಮುಂದೆ "ಬಯಲ ಗಳಿಕೆಯ ಬೆಳಗು" ಎಂಬ ಉದ್ಗ್ರಂಥವನ್ನು ರಚಿಸಿದೆ. ಇದರ ಸಂಕ್ಷಿಪ್ತರೂಪ ಈಗ ತೆಲುಗಿನಲ್ಲಿ ಅನುವಾದಗೊಂಡು ತೆಲುಗು ವಿಶ್ವವಿದ್ಯಾಲಯದವರು ಇದನ್ನು ಪ್ರಕಟಿಸುವ ಸನ್ನಾಹದಲ್ಲಿದ್ದಾರೆ.

ರೈತರ ಸ್ಥಿತಿಗತಿ :

ಪ್ರಶ್ನೆ : ವೃತ್ತಿಯಿಂದ ನೀವು ರೈತರು. ಬಹುಶಃ 60 ವರ್ಷಗಳ ಕಾಲ ಈ ವೃತ್ತಿಯನ್ನು ಅವಲಂಬಿಸಿ, ಅದರ ಸುಖ, ದುಃಖಗಳನ್ನು ಅನುಭವಿಸಿದವರು. ಅಂದಿನ ರೈತನ ಪರಿಸ್ಥಿತಿಗೂ ಇಂದಿನ ರೈತನ ಪರಿಸ್ಥಿತಿಗೂ ನಿಮಗೆ ಏನಾದರೂ ವ್ಯತ್ಯಾಸವೆನಿಸುತ್ತದೆಯೇ ?

ಉತ್ತರ : ಬಹಳಷ್ಟು ವ್ಯತ್ಯಾಸವಾಗಿದೆ. ಇದು ಬಹಳ ಕಷ್ಟಕರವಾದರೂ ಉತ್ತಮ ಕಾಯಕ. ಯಾಕೆಂದರೆ ಬಹಳಷ್ಟು ಸುಳ್ಳುಗಳನ್ನಾಡದೆ ಅವಲಂಬಿಸ ಬಹುದಾದಂಥ ಕಾಯಕ ಇದು (ನಗು). ಆದರೆ ರಾಜಕೀಯ ಒತ್ತಡಗಳಿಗೆ ಸಿಕ್ಕು ಇಂದು ರೈತ ವೃತ್ತಿ ತುಂಬಾ ಹೊಲಬುಗೆಟ್ಟಿದೆ. ಈ ವೃತ್ತಿಯನ್ನು ಬಿಡಬೇಕೋ, ಮುಂದುವರೆಸಿಕೊಂಡು ಹೋಗಬೇಕೋ ಎಂಬ ಪರಿಸ್ಥಿತಿ ಇದೆ. ನೀರಾವರಿ ರೈತ, ತೋಟಗಾರಿಕೆಯ ರೈತ ಮತ್ತು ಬಯಲುಸೀಮೆಯ ರೈತ ಈ ಮೂವರಿಗೂ ಅವರವರ ಸಮಸ್ಯೆಗಳು ಹಾಸಲುಂಟು. ಹೊದೆಯಲುಂಟು. ಪ್ರತಿಯೊಬ್ಬರೂ ನಮ್ಮನ್ನು ಸವರುತ್ತಾರೆ ; ಮತ್ತು ನಮ್ಮ ಮೇಲೆ ಕೈ ಇಡುತ್ತಾರೆ. ರಾಜಕಾರಣಿಗಳು ಹೇಳುವದೊಂದು, ಮಾಡುವದೊಂದು. ಅವರು ಹೇಳುವುದು ಸರಿ, ಆದರೆ ಮಾಡುವದು ಸರಿ ಇಲ್ಲ. ಅವರು ನುಡಿದಂತೆ ನಡೆದಿದ್ದರೆ ರೈತನ ಪರಿಸ್ಥಿತಿ ಹಿಂದಿಗಿಂತ ಇಂದು ಉತ್ತಮವಾಗಿರುತ್ತಿತ್ತು. ಇದರ ಬದಲಾಗಿ ಫ್ಯಾಕ್ಟರಿಯೊಳಗೆ ಬಂದು ಕೂಲಿ ಕೆಲಸ ಮಾಡುವುದು ವಾಸಿ ಎನ್ನುವಷ್ಟು ಬೇಸರ ಬಂದೈತಿ.

ಪ್ರಶ್ನೆ : ಭೂ ಸುಧಾರಣೆಯಲ್ಲಿ ಕೊಂಚ ಜಮೀನನ್ನು ಕಳೆದುಕೊಂಡಿರಿ. ಆಗ ನಿಮಗೆ ಹೇಗೆ ಅನ್ನಿಸಿತು ? ಹಾಗೆ ಕಳೆದುಕೊಂಡ ಭೂಮಿಗಾಗಿ ನಿಮಗೆ ಸರ್ಕಾರದಿಂದ ಪರಿಹಾರ ಸಿಕ್ಕಿದೆಯೇ ?

ಉತ್ತರ : ಪರಿಹಾರ ಬರೀ ಹಾರವಾಗೇ ಉಳಿದಿದೆ, ಪರಿ ಇಲ್ಲ (ನಗು). ನನ್ನ ಭೂಮಿಯಂತೆ ಇನ್ನೊಬ್ಬರ ಭೂಮಿಗಳನ್ನು ಸರಕಾರದವರು ತೆಗೆದುಕೊಂಡಾರ, ಆದರೆ ಪರಿಹಾರವಿಲ್ಲ, ಕೊಡುವ ಪರಿಹಾರವೂ ಅತ್ಯಲ್ಪ. ಆದರೆ ಅದೇ ಫ್ಯಾಕ್ಟರಿ

ಯನ್ನು ಕಟ್ಟಲೋಸುಗವೊ ಅಥವಾ ನೀರಾವರಿ ಯೋಜನೆಗಾಗಿ ಭೂಮಿಯನ್ನು ವಶ ಪಡಿಸಿಕೊಂಡರೆ ಒಂದು ಎಕರೆಗೆ ಹತ್ತು ಸಾವಿರಗಟ್ಟಲೆ ಪರಿಹಾರ ನೀಡುತ್ತಾರೆ. ಆದರೆ ಕೆಲವೊಂದು ಸಲ ಫ್ಯಾಕ್ಟರಿಯೂ ಆಗುವುದಿಲ್ಲ ಅದರ ಬದಲಾಗಿ ಹಾಗೆಯೇ ಪರಿಹಾರ ಪಡೆಯುತ್ತಾರೆ. ಉಳುಮೆಯನ್ನೂ ಮಾಡುತ್ತಾರೆ. (ಗೌಡರು ಈ ಮಾತನ್ನು ಬಹುಶಃ ಉಕ್ಕಿನ ಸ್ಥಾವರಕ್ಕಾಗಿ ವಶಪಡಿಸಿಕೊಂಡಿರುವ ಸಾವಿರಾರು ಎಕರೆ ಜಮೀನನ್ನು ದೃಷ್ಟಿಯಲ್ಲಿಟ್ಟು ಹೇಳಿರಬಹುದು—ಸಂ.)

ಪ್ರಶ್ನೆ : ಕೇವಲ ನಾಲ್ಕನೇ ಕ್ಲಾಸಿನವರೆಗೆ ಓದಿದ ನಿಮ್ಮನ್ನು ಹುಡುಕಿಕೊಂಡು ಹಲವಾರು ಪ್ರಶಸ್ತಿಗಳೂ, ಕಲ್ಬುರ್ಗಿ ವಿಶ್ವವಿದ್ಯಾಲಯಂದ ಡಾಕ್ಟರೇಟ್ ನಿಮ್ಮ ಮನೆ ಬಾಗಿಲಿಗೆ ಬಂದವು. ಇವುಗಳನ್ನು ನೆನಿಸಿಕೊಂಡಾಗ ನಿಮಗೆ ಹೇಗೆ ಅನಿಸುತ್ತದೆ.

ಉತ್ತರ : ನನಗೆ ಬಹಳ ವಿಷಾದವಾಗುತ್ತದೆ. ನನಗೆ ಪ್ರೀತಿಯಿಂದ ಕಲಿಸಿದ ಸಾಹಿತ್ಯದ ಗುರುಗಳು, ಸಂಗೀತದ ಗುರುಗಳು, ನಾಟಕದ ಗುರುಗಳು ನಾಡಿಗೆ ತಮ್ಮ ಸೇವೆಯನ್ನು ಸಲ್ಲಿಸಿ ಬಿರುದು ಬಾವಲಿಗಳಿಲ್ಲದೆ ಹೋದರಲ್ಲ, ಅಯ್ಯೋ ; ಹೀಗಿರುವಾಗ ಈ ಪ್ರಶಸ್ತಿಗಳನ್ನು ನಾನು ಪಡೆಯಬೇಕೆ ಎಂದು ವಿಚಾರಿಸಿದುದುಂಟು. ಆದರೆ ಬಂದದ್ದನ್ನು ವಿನಮ್ರನಾಗಿ ನನ್ನ ಗುರುಗಳನ್ನು ನೆನೆಸಿ ಸ್ವೀಕರಿಸಿದ್ದೇನೆ, ಬಾರದ್ದನ್ನು ನಾನು ಬಯಸಲಿಲ್ಲ. ಇವುಗಳಿಂದ ನಾನು ದೊಡ್ಡವನಾಗುತ್ತೇನೆ ಎಂಬ ನಂಬಿಕೆ ನನಗಿಲ್ಲ. ಇದರ ಬದಲಾಗಿ ನಾನು ಇನ್ನೂ ಒಂದಿಷ್ಟು ಓದಿದರೆ ಒಳಿತು ಎಂದು ತಿಳಿದು ಕೊಂಡಿದ್ದೇನೆ. ಇದು ರೈತ ವರ್ಗಕ್ಕೆ ನೀಡಿದ ಸನ್ಮಾನ ಎಂದು ಆ ವರ್ಗದ ಪ್ರತಿ ನಿಧಿಯಾಗಿ ವಿನಮ್ರಭಾವದಿಂದ ಈ ಪ್ರಶಸ್ತಿಗಳನ್ನು ಹಾಗೂ ಡಾಕ್ಟರೇಟ್ ಪದವಿ ಯನ್ನು ಸ್ವೀಕರಿಸಿದ್ದೇನೆ.

ಪವಾಡಗಳು :

ಪ್ರಶ್ನೆ : ನಾನು ವೈಯುಕ್ತಿವಾಗಿ ಪವಾಡಗಳನ್ನು ನಂಬದವ. ಆದರೆ ನೀವು ಪವಾಡಗಳಲ್ಲಿ ನಂಬಿಕೆಯುಳ್ಳವರು ಎಂದು ನನಗೆ ನಿಮ್ಮ ಆತ್ಮಕಥನವನ್ನು ಓದಿದಾಗ ಭಾಸವಾಯಿತು. ಇಂದಿಗೂ ಪವಾಡಗಳನ್ನು, ಪವಾಡ ಪುರುಷ ರನ್ನೂ ನಂಬುತ್ತೀರಾ ? ಇದು ವಚನಕಾರರ ಧರ್ಮಕ್ಕೆ ವಿರುದ್ಧವಲ್ಲವೆ ?

ಉತ್ತರ : ವಚನಕಾರರು ಪವಾಡಗಳನ್ನು ತಿರಸ್ಕಾರ ಮಾಡಿಲ್ಲ ಅಂತ ನನಗೆ ಅನ್ನಿಸುತ್ತದೆ. ವೈದಿಕ ಧರ್ಮದಂತೆ ಕೇವಲ ಪವಾಡಗಳನ್ನೇ ನಂಬಲಿಲ್ಲ ಎಂದರೆ ಒಪ್ಪೀತು. ಗುರುವನ್ನು ನಂಬಿದಾಗ ಆತನ ಅನುಗ್ರಹದಿಂದ ಆಗದಿರುವುದೂ ಆಗುತ್ತದೆ. ಗುರುವನ್ನು ನಂಬಿದರೆ ಪವಾಡವನ್ನು ನಂಬಿದಂತೆ ಆಗಲಿಲ್ಲ, ಅದು ಸಹಜ. ನೀವು ಭೂ ವಿಜ್ಞಾನಿಗಳು, ನಿಮ್ಮ ಪರಿಶೀಲನೆಗಳಲ್ಲಿ ಭೂಗರ್ಭದಲ್ಲಿ ಅನೇಕ ಸೋಜಿಗ ಗಳನ್ನು ಕಂಡಿರಬಹುದು. ಅವು ನಿಮಗೆ ಸಹಜವಾಗಿ ಕಂಡಿರಬಹುದು. ಆದರೆ

ಉಳಿದವರಿಗೆ ಪವಾಡವೆನಿಸಬಹುದು. ಪವಾಡವೆಂದರೆ ಇಲ್ಲದ್ದನ್ನು ಇದ್ದಂತೆ ತೋರಿಸುವುದು, ಇದ್ದದ್ದನ್ನು ಇಲ್ಲದಂತೆ ತೋರಿಸುವದಲ್ಲ. ಇದ್ದದ್ದನ್ನು ತಿಳಿಕೊಂಬುದೇ ಪವಾಡ. ದುರ್ಬಲ ವ್ಯಕ್ತಿಯೊಬ್ಬ ಕೇವಲ 10 ಸೇರು ತೂಕದ ವಸ್ತುವನ್ನು ಎತ್ತಲಾರ. ಆದರೆ ಬಲಿಷ್ಠನು 100 ಸೇರಿನ ಭಾರವನ್ನು ಸುಲಭವಾಗಿ ಎತ್ತಬಲ್ಲ. ಇದು ಒಬ್ಬನಿಗೆ ಸಹಜವಾಗಿ ಕಂಡರೆ ಇನ್ನೊಬ್ಬನಿಗೆ ಪವಾಡವೆನಿಸಬಹುದು. ಇದು ದೈಹಿಕ ಸಾಧನೆಯಾದರೆ, ಅಂತೆಯೇ ಮಾನಸಿಕ ಸಾಧನೆಯೊಂದಿರುತ್ತದೆ. ಅದನ್ನೇ ಪವಾಡಗಳೆಂದು ಕರೆಯಲಾಗುತ್ತದೆ. ನನ್ನ "ನಂದೇ ನಾನೋದಿದೆ" ಯಲ್ಲಿ ನಾನು ನನ್ನ ಸಾಧನೆಯುಲ್ಲಿ ಆದ ಆತ್ಮಾನುಭವಗಳನ್ನು ನಿವೇದಿಸಿಕೊಂಡಿರುವೆ. ನಾನು ಏನೂ ಸಾಧಿಸಿ ಮಾಡದೆ ಸಶರೀರವಾಗಿ ಸ್ವರ್ಗಕ್ಕೆ ಹೋಗಬೇಕು ಎಂದುಕೊಂಡವನಲ್ಲ. ನಾನು, ಅವುಗಳೇ ನನ್ನ ಜೀವನವೆಂದುಕೊಂಡವನಲ್ಲ. ನಾನು ಕಷ್ಟಪಟ್ಟು ಜೀವನ ನಡೆಸಬೇಕು; ನಾಲ್ಕು ಮಂದಿಗೆ ನನ್ನ ಕಲೆಯನ್ನು ದಾಸೋಹದಂತೆ ಹಂಚುವದೇ ನನಗೆ ಸಮಾಧಾನ. ಇದು ನನ್ನ ಗುರು ಹೇಳಿಕೊಟ್ಟದು. ಇದನ್ನು ನೀವು ಪವಾಡವೆನ್ನುವಿರಾ ?

ಸಂದೇಶ :

ಪ್ರಶ್ನೆ : ಸುಮಾರು 50 ವರ್ಷಗಳ ಧೀರ್ಘಕಾಲ ನೀವು ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಸೇವೆ ಸಲ್ಲಿಸಿದ್ದೀರಿ. ಈ ಹಿನ್ನೆಲೆಯಲ್ಲಿ ಇಂದಿನ ಕನ್ನಡಿಗರಿಗೆ ನಿಮ್ಮ ಸಂದೇಶವೇನು ?

ಉತ್ತರ : ನಮ್ಮ ನಾಡು ಸಂಸ್ಕೃತಿಯಿಂದ ಬಾಳಬೇಕು. ನಾವು ಪಶುತ್ವದಿಂದ ಸ್ವಲಾಭಕ್ಕಾಗಿ ಬದುಕಬಾರದು. ನೀನೂ ಬದುಕು, ನಿನ್ನೊಡನೆ ಇರುವವರನ್ನೂ ಬದುಕಿಸು. ದೇಶಕ್ಕೆ ನಿನ್ನ ತನು ಮನ ಧನವನ್ನು ನೀಡು. ಅದರಿಂದ ನೀನು ಉದ್ಧಾರವಾಗುವಿ ನಿನ್ನ ನಾಡೂ ಭವ್ಯವಾಗುತ್ತದೆ. ಪ್ರಕೃತಿಯಲ್ಲಿ ಎಲ್ಲವೂ ಇದೆ. ಅದನ್ನು ಅರ್ಥ ಮಾಡಿಕೋ, ಇದರಿಂದ ಸರ್ವರ ಉದ್ಧಾರವಿದೆ. ಈ ರೀತಿಯ ಕರ್ತವ್ಯ ಮತ್ತು ಹಕ್ಕು ಪ್ರತಿಯೊಬ್ಬರಿಗೂ ಇದೆ; ಕೇವಲ ಕೆಲವರಿಗೆ ಮೀಸಲಿಲ್ಲ. ಈ ಜೀವನ ಕಲೆ ಎಲ್ಲರಿಗೂ ಸಾಧಿಸಲಿ ಎಂದು ನಮ್ಮ ಯುವ ಜನಾಂಗಕ್ಕೆ ಕರೆ ನೀಡುತ್ತೇನೆ.

ಇದಕ್ಕೆ ಅರ್ಥಪೂರ್ಣ ಮುಕ್ತಾಯವೆಂಬಂತೆ ಬಸವಣ್ಣನವರ ಈ ವಚನವನ್ನು ಹಾಡಿದರು :

ಎನ್ನ ಕಾಯುವ ದಂಡಿಗೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸ ರಾಗವ ಹಾಡಯ್ಯ
ಉರದೊಲೊತ್ತಿ ಒತ್ತಿ ಬಾರಿಸು ಕೂಡಲಸಂಗಮದೇವಾ !

"ತರಂಗ ಕೃಪೆ" ★

ದೊಡ್ಡ ಚೇತನ ದೊಡ್ಡನಗೌಡರು

→ ಡಾ॥ ಸಿದ್ಧಯ್ಯ ಪುರಾಣಿಕ

ನಾಟಕಕಾರ–ನಟ, ಕವಿ-ಗಮಕಿ, ಪ್ರವಚನಪಟು–ಅನುಭಾವಿ. ಸಮಾಜ ಸೇವಕ-ಸುಧಾಕರ, ಸ್ನೇಹನಿಧಿ-ರಸಿಕಶಿಖಾಮಣಿ ಡಾ॥ ಜೋಳದ ರಾಶಿ ದೊಡ್ಡನ ಗೌಡರು ಈ ನಾಡಿನ ಹಿರಿಯ ಚೇತನಗಳಲ್ಲಿ ಒಬ್ಬರು. ಅವರೂ ನಾನೂ ತ್ರಿವಿಧ ದಾಸೋಹ ಮೂರ್ತಿ ಶ್ರೀ ಮ. ನಿ. ಪ್ರ. ಸ್ವ. ಲಿಂಗೈಕ್ಯ ಮೃತ್ಯುಂಜಯ ಮಹಾಶಿವಯೋಗಿಗಳ ಭಕ್ತರಾಗಿ ಬಹಳ ಹಿಂದೆಯೇ ಹತ್ತಿರದವರಾದೆವು. ಧಾರವಾಡದ ಮುರುಘಾ ಮಠ ದಲ್ಲಿ ಯಾವ ಮಹತ್ವದ ಕಾರ್ಯಕ್ರಮವಿದ್ದರೂ ದೊಡ್ಡನಗೌಡರು ಅದರಲ್ಲಿರಲೇ ಬೇಕು. ಅವರ ಶೂನ್ಯ ಸಂಪಾದನೆಯ ಪ್ರವಚನ ಅಪ್ಪಗಳ ಅಂತಃಕರಣವನ್ನು ಸೂರೆ ಗೊಂಡಿತ್ತು. ಈಗ ಶೂನ್ಯ ಸಂಪಾದನೆಯನ್ನು ಕುರಿತು ಗೌಡರ ಮೇರುಕೃತಿ ಹೊರ ಬಿದ್ದಿದೆ. ಅವರ ಮೇಲೆ ಚಿರಂತನತೆಯ ಮುದ್ರೆಯನ್ನೊತ್ತಿದೆ.

ಪರಮಪೂಜ್ಯ ಮೃತ್ಯುಂಜಯಪ್ಪಗಳ ಸನ್ನಿಧಿಯಲ್ಲಲ್ಲದೆ ಬೇರೆ ಕಡೆಗಳಲ್ಲಿಯೂ ಗೌಡರೊಡನೆ ಒಡನಾಡುವ ಸುಯೋಗಗಳು ನನಗೆ ಸಿಕ್ಕಿವೆ. ಮೈಸೂರಿನಲ್ಲಿ ಡಾ॥ ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾನು

ಲೇಖಕರ ಗೋಷ್ಠಿಯ ಅಧ್ಯಕ್ಷನಾಗಿ ಹೋಗಿದ್ದೆ. ದೊಡ್ಡನ ಗೌಡರೂ ಬಂದಿದ್ದರು. ಬಿಡುವು ಮಾಡಿಕೊಂಡು ವಿಶ್ವಕವಿ ಕುವೆಂಪು ಅವರನ್ನು ಸಂದರ್ಶಿಸಿ ನಾವು ಚಾಮುಂಡೇಶ್ವರಿಯ ದರ್ಶನಕ್ಕೆ ಹೋದೆವು. ದೇವಿಯ ದರ್ಶನವಾಗುತ್ತಲೆ ಗೌಡರ ಭಕ್ತಿಭಾವ ಗರಿಗೆದರಿತು. 'ಪಾಲಿಸೆನ್ನನು ಪದುಳವೆರಸಿ ಪರಶಿವನರಸಿ' ಎಂಬ ನಿಜಗುಣ ಶಿವಯೋಗೀಶ್ವರರ ಹಾಡುಗಬ್ಬವನ್ನು ತಮ್ಮ ಕಂಚಿನ ಕಂಠದಿಂದ ಹಾಡಿದರು. ದೇವಾಲಯ ತುಂಬಿ, ಹೊರಗಿನ ಬಯಲು ತುಂಬಿ, ಅವರ ಗಾನ ತಾನಗಳು ಆ ಪ್ರಶಾಂತ ವಾತಾವರಣದಲ್ಲಿ ದೂರ ದೂರ ಹರಡಿದುವು. ದೇವಿಯ ಅರ್ಚಕರು ಮುಂದೆ ಬಂದು ಮಣಿದು, "ನಾವಿಲ್ಲಿ ಅನೇಕ ವರ್ಷಗಳಿಂದ ಅರ್ಚಕರಾಗಿದ್ದುಕೊಂಡು ಅಮ್ಮನವರ ಸೇವೆ ಮಾಡುತ್ತಿದ್ದೇವೆ; ಆದರೆ ಇಂಥ ಭಕ್ತಿ ನಿರ್ಭರ ಅಮೃತಗಾನವನ್ನು ಹಿಂದೆಂದೂ ಕೇಳಿರಲಿಲ್ಲ. ತಾವು ಧನ್ಯರು; ತಮ್ಮ ಗಾನವನ್ನು ಕೇಳಿದ ನಾವು ಧನ್ಯರು," ಎಂದು ಉದ್ಗರಿಸಿದರು. ಅದು ಅಕ್ಷರಶಃ ಸತ್ಯವೆನಿಸಿತು ನನಗೆ.

ಇದಾಯಿತು ಕರ್ನಾಟಕ ಏಕೀಕರಣಕ್ಕಿಂತ ತುಸು ಮೊದಲಿನ ಮಾತು. ಏಕೀಕರಣ ವಾದ ಮೇಲೆ ನನಗೆ ಬೆಂಗಳೂರಿಗೆ ವರ್ಗವಾಗಿ ನಾನು ಕುಮಾರ ಪಾರ್ಕ್ ಬಡಾವಣೆ ಯಲ್ಲಿ ಡಾ॥ ಮಾಣಿಕಮ್ ಅವರ ಮನೆಯ ಮಹಡಿಯಲ್ಲಿ ಬಾಡಿಗೆದಾರನಾಗಿ ಇದ್ದೆ. ದೊಡ್ಡನ ಗೌಡರು ಬೆಂಗಳೂರಿಗೆ ಬಂದುದು ತಿಳಿದು ಅವರ ಒಪ್ಪಿಗೆ ಪಡೆದು ಆ ಬಾಡಿಗೆ ಮನೆಯಲ್ಲಿ ಅವರ ಶೂನ್ಯ ಸಂಪಾದನೆಯ ಪ್ರವಚನವನ್ನು ಏರ್ಪಡಿಸಿದೆ. ಹತ್ತಾರು ಮಿತ್ರರು ಸೇರಿದ್ದೆವು. ಗೌಡರ ಗಮಕ ಕಲಾರಂಜಿತ, ಅಧ್ಯಯನ-ಅನು ಭವಪೂರ್ಣ ಪ್ರವಚನ ನನ್ನ ಮಿತ್ರರಿಗೆಲ್ಲ ರಸದೌತಣವನ್ನು ಒದಗಿಸಿತು. ಗೌಡರ ಹೆಸರು ಆ ಬಡಾವಣೆಯಲ್ಲಿ ಮನೆಮಾತಾಯಿತು.

ಇನ್ನೊಂದು ನೆನಪು: ನಾನು ಬಳ್ಳಾರಿ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಉದ್ಘಾಟಕನಾಗಿ ಬಳ್ಳಾರಿಗೆ ಹೋದೆ. ದೊಡ್ಡನ ಗೌಡರೇ ಸಮ್ಮೇಳನಾಧ್ಯಕ್ಷರಾಗಿದ್ದುದ ರಿಂದ ಬಳ್ಳಾರಿಯ ಕನ್ನಡ ಪ್ರೇಮಿಗಳ ಉತ್ಸಾಹ ಉಕ್ಕಿ ಹರಿಯುತ್ತಿದ್ದಿತು. ಮೆರವಣಿಗೆ ಮುಗಿದು ಸಭಾಮಂಟಪವನ್ನು ಪ್ರವೇಶಿಸುತ್ತಿದ್ದಂತೆ ಸೋದರಿಯರು ಕೆಲವರು ಗೌಡ ರನ್ನು ಬಾಗಿಲಲ್ಲಿಯೇ ತಡೆದರು. ಒಂದು ಹಾಡು ಹೇಳಿದರೇ ಒಳಗೆ ಬಿಡುವೆವೆಂದು ಹಟಹಿಡಿದರು. ಗೌಡರು ಹಾಡಿದರು, ಬರಿಯ ಹಾಡಿದರೆಂದು ಹೇಳಿಬಿಟ್ಟರೆ ಅವರ ಹಾಡುಗಾರಿಕೆಗೆ ಅಪಚಾರ ಮಾಡಿದಂತೆ. ಅದ್ಭುತವಾಗಿ ಹಾಡಿದರು. ಗೌಡರ ಶಾರೀರಕ್ಕೆ ವಯಸ್ಸಾಗಿಲ್ಲ–ಆಗುವುದೂ ಇಲ್ಲ; ಅವರ ಕಂಠಶ್ರೀ ಬಹುಕಾಲ ಕನ್ನಡಿಗರ ತವನಿಧಿಯಾಗಿ ಉಳಿಯಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಸಿರಿಕಂಠದ ಸಾಮ್ರಾಟ

ಡಾ॥ ಅನುಪಮಾ ನಿರಂಜನ

ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನವನ್ನು (1956) ಮುಗಿಸಿ, ನಿರಂಜನರು ಮತ್ತು ನಾನು ಮೈಸೂರಿಗೆ ವಾಪಸು ಹೊರಟಿದ್ದೆವು. ರೈಲಿನ ನಮ್ಮ ಕಂಪಾರ್ಟ್‌ಮೆಂಟಿನಲ್ಲಿ ಇನ್ನಿಬ್ಬರು ಮಹನೀಯರಿದ್ದರು. ಒಬ್ಬರು ವಿದ್ವಾಂಸರಾದ ನಾಗೇಶ ಶಾಸ್ತ್ರಿಗಳು, ಇನ್ನೊಬ್ಬರು ಜೋಳದ ರಾಸಿ ದೊಡ್ಡನಗೌಡರು. ನಿರಂಜನರು ನನಗೆ ಅವರಿಬ್ಬರ ಪರಿಚಯ ಮಾಡಿಕೊಟ್ಟರು. ಜೋಳದ ರಾಸಿಯವರ ವಚನಾಮೃತ ವನ್ನು ರೇಡಿಯೋದ ಮೂಲಕ ಎಷ್ಟೋ ಬಾರಿ ಕೇಳಿದ್ದುದರಿಂದ, ಅವರನ್ನು ಕಣ್ಣಾರೆ ಕಂಡಾಗ ತುಂಬಾ ಹಿಗ್ಗಾಯಿತು. ನಾವೆಲ್ಲ ಕೂಡಿ ಸಾಹಿತ್ಯ, ಸಂಗೀತಗಳ ಬಗ್ಗೆ ಮನ ಸಾರೆ ಹರಟಿದ್ದೆವು. ಅಂದು ಕಂಡ ಜೋಳದ ರಾಸಿಯವರ ತೇಜಸ್ವಿ ಕಣ್ಣುಗಳು, ಅವರ ಸಿರಿಕಂಠ, ಅವರ ನಯವಿನಯದ ನುಡಿಗಳು, ಅವರ ಹಾವಭಾವ, ಇವುಗಳ ಚಿತ್ರ ಮಸುಕಾಗಿದ್ದರೂ ಚಿತ್ತದಲ್ಲಿ ಆ ನೆನಪು ಮಾತ್ರ ಇನ್ನೂ ಹಸಿರಾಗಿದೆ.

ಅನಂತರ ನಾವು ಜೋಳದ ರಾಸಿಯವರನ್ನು ಮತ್ತೆ ಕಾಣಲಾಗದಿದ್ದರೂ ಅವರ ಸಂಗೀತದ ಸವಿಯನ್ನು ಆಗಾಗ್ಗೆ ಬಾನುಲಿಯ ಮೂಲಕ ಕೇಳುತ್ತಲೇ ಇದ್ದೇವೆ. ಅವರ

ಗಮಕವಾಗಲೀ, ಕಾವ್ಯಲಾಪವಾಗಲೀ, ವಚನಗಳಾಗಲೀ, ಕೇಳುಗರ ಮೇಲೆ ಯಶಾವಾಗಲೂ ಮೋಡಿ ಬಿರುತ್ತವೆ. ದನಿಯನ್ನು ತನ್ನೆಲ್ಲ ವೈಭವಗಳೊಂದಿಗೆ ದುಡಿಸಿ ಕೊಳ್ಳುವುದರಲ್ಲಿ ಅವರು ಸಿದ್ಧಹಸ್ತರು. ನಾದದ ಇಂಪಿನ ಜೊತೆಗೆ ಸಾಹಿತ್ಯದ ಸವಿಯೂ ಮೇಳೈಸಿರುವುದರಿಂದಲೇ ಅವರ ಹಾಡುಗಳನ್ನು ಕೇಳಿದಾಗ ದಿವ್ಯಾನುಭವ ಉಂಟಾಗುತ್ತದೆ. ನಾಡಿನ ಉದ್ದಗಲಕ್ಕೂ ಇರುವ ಅವರ ಸಹಸ್ರಾರು ಅಭಿಮಾನಿಗಳು ಹೇಳುವ ಮಾತು ಇದು.

ಇಂಥ ಒಂದು ಚೇತನ, 1980ರಲ್ಲಿ ಕಲ್ಬುರ್ಗಿಯಲ್ಲಿ ನಡೆದ ಅಖಿಲ ಕರ್ನಾಟಕ ಐದನೆಯ ಜಾನಪದ ಮೇಳಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದುದು ಅತ್ಯಂತ ಸಹಜ ಘಟನೆ. ಅವರು ಅಂದು ಸಭೆಯಲ್ಲಿ ಮಾಡಿದ ಭಾಷಣ ಓದಿದರೆ, ಮತ್ತೆ ಜೋಳದ ರಾಶಿಯವರು ಕಣ್ಣೆದುರು ನಿಂತಂತಹ ಅನುಭವವಾಗುತ್ತದೆ.

ಎಲ್ಲವನ್ನೂ ಬಲ್ಲವರಾದರೂ ಸರಳತೆ, ಪ್ರಾಂಜಲತೆ, ನಮ್ರತೆಗಳ ಸಾಕಾರ ಮೂರ್ತಿ ಅವರು. ಆದ್ದರಿಂದಲೇ ಅವರು ಬೇರೆಲ್ಲ ಕಲಾವಿದರಿಗಿಂತ ಭಿನ್ನರಾಗಿ ನಿಲ್ಲುತ್ತಾರೆ. ಸಮ್ಮೇಳನಾಧ್ಯಕ್ಷರು 'ಪಾಂಡಿತ್ಯ ಪೂರ್ಣ' ಭಾಷಣ ಮಾಡಲೆಂದು, ವ್ಯವಸ್ಥಾಪಕರು ಸಾಕಷ್ಟು ಆಕಾರ ಸಾಮಗ್ರಿ ಒದಗಿಸಿದ್ದರಂತೆ. ಅದನ್ನೆಲ್ಲ ಓದಿದ ಬಳಿಕ ಜೋಳದ ರಾಶಿಯವರು, "ಓದಿದಂತೆಲ್ಲಾ ಏನೂ ತಿಳಿಯದಾಯಿತು. ಏನಪ್ಪ ಶಿವನೇ ಅಲ್ಲಿ ಹೋಗಿ ಏನು ಹೇಳಬೇಕು ? ಎಂದು ಪೇಚಾಡಿಕೊಂಡು ಕಡೆಗೆ 'ತನಗೆ ತಿಳಿದಂತೆ' ಭಾಷಣ ಬರೆದರಂತೆ. ಪಾಂಡಿತ್ಯಪೂರ್ಣ ಪುಸ್ತಕಗಳಿಗಿಂತ ಹೆಚ್ಚಾಗಿ ಅವರು ಅವಲಂಬಿಸಿದ್ದು ಬದುಕಿನ ಅಕ್ಷಯ ಪಾತ್ರೆಯನ್ನು. ಅಂತೆಯೇ ಅವರ ಬರಹ ಜೀವಂತವಾಗಿದೆ, ಮಾನವೀಯ ಸೆಲೆಯಿಂದ ತುಂಬಿ ತುಳುಕುತ್ತಿದೆ.

ಹಳ್ಳಿ ಗಾಡಿನ ಜನರ ಬಗ್ಗೆ ಅವರಿಗಿರುವ ಪ್ರೀತಿ ಅನನ್ಯವಾದುದು. ಅಂತೆಯೇ ಅವರ ಕಲೆ ಹಾಗೂ ಜಾನಪದ ಸಂಸ್ಕೃತಿಯ ಬಗ್ಗೆಯೂ ಅವರಿಗೆ ಅಪಾರ ಗೌರವ. ಹೀಗೆ ಬದುಕಿನ ಅವಲೋಕನದಿಂದ ಬರೆದ ಆ ಲೇಖನ, "ಬಾಳಿನ ಮುಸಿಯಾಗೆ ಜೀವ ಕರಗಿಸಿ, ಜಾಳಿಸಿ ಎರಕ ಹುಯ್ಕ" ಹಾಗಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಇಡೀ ಲೇಖನ ಒಂದು ಕವಿತೆಯ ಹಾಗೆ ಶ್ರೇಷ್ಠವಾಗಿದೆ. ಅವರ ಭಾಷೆಯ ಅಚ್ಚುಕಟ್ಟುತನ, ಜೀವನದ ಗ್ರಹಿಕೆ, ಕಂಡದ್ದನ್ನೆಲ್ಲಾ ಕಲಾತ್ಮಕವಾಗಿ ಕಟ್ಟುವ ಜಾಣ್ಮೆ, ಇವನ್ನು ಓದಿಯೇ ಅರಿಯಬೇಕು. ಜೋಳದ ರಾಶಿಯವರು ಸುಮಾರು 50-60 ವರ್ಷಗಳ ಹಿಂದೆ ಕಂಡ ಗ್ರಾಮೀಣ ಬದುಕು ನಮ್ಮ ಮುಂದೆ ಸಜೀವವಾಗಿ ನಿಲ್ಲುವುದು ಈ ಕಾರಣಕ್ಕಾಗಿಯೇ. "ನಾವು ನಮ್ಮ ಪಾಲಿಗೆ ಬಂದ ಕಾಯಕದಲ್ಲಿ ದುಡಿದು ಪಡೆದದ್ದನ್ನು, ಅದು ಜೋಳದ ರೊಟ್ಟಿಯಾಗಲೀ, ರಾಗಿ ಮುದ್ದೆಯಾಗಲೀ, ಬೆಲ್ಲದ ಸಿಹಿಯಾಗಲೀ, ಹಾಗಲ ಕಾಯಿಯ ಕಹಿಯಾಗಲೀ, ಉಂಡು ಅದರಲ್ಲೇ ತೃಪ್ತಿ ಪಡೆಯುತ್ತಿದ್ದೆವು." ಎಂದು ಅವರು ಹೇಳುವಾಗ ಆ ಕಾಲದ ಜನರ ಮನಃಸ್ಥಿತಿಯ ಚಿತ್ರ

ಕಣ್ಣಿಗೆ ಕಟ್ಟುತ್ತದೆ. ಮಹಾನವಮಿ ದಿನದಂದು ಹುಡುಗರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಬಣ್ಣದ ಕೋಲುಗಳನ್ನು ಹಿಡಿದು ಮನೆ ಮನೆಯ ಮುಂದೆ ಹಾಡುವ ದೃಶ್ಯವಾಗಲೀ, ಚೆಂಡು ಹೂ ಮುಡಿದ ಬಾಲೆಯರಾಗಲೀ, ಹಿಟ್ಟು ಚೆಲ್ಲಿದಂತಿದ್ದ ಬೆಳದಿಂಗಳಾಗಲೀ, ಸುಗ್ಗಿ ಸಮಯದಲ್ಲಿ ತಟ್ಟೆ ಪುಟ್ಟಿಯಲ್ಲಿ ರಾಶಿಯನ್ನು ತುಂಬಿ ನೀಡುವ ಧಾರಾಳತನವಾಗಲೀ, ಬೈಲಾಟದ ಸೊಬಗಾಗಲೀ, ಹಳ್ಳಿಯವರ ವಾಕ್ಯಾರ್ಥದ ಪರಿಹಾಸ್ಯವಾಗಲೀ, ಓದುತ್ತ ನಮ್ಮ ಕಣ್ಣ ಮುಂದೆ ಬೆರಗಿನ ಲೋಕವೊಂದು ಕಣ್ದೆರೆಯುತ್ತದೆ. ಇಂಥ ಹಿನ್ನೆಲೆಯಲ್ಲಿಯೇ ಜನಪದ ಹಾಡುಗಳು, ಕೋಲಾಟ, ಸುವ್ವಿಪದ, ಬುಡುಬುಡಿಕೆ, ತಂದಾನ ತಾನ ಮುಂತಾದ ನೂರೆಂಟು ಜಾನಪದ ಕಲೆಗಳು ಹ್ಯಾಗೆ ಅರಳುತ್ತವೆ ಎಂಬುದನ್ನು ಉದಾಹರಣೆಗಳ ಸಮೇತ ಜೋಳದರಾಸಿಯವರು ಸ್ಪಷ್ಟ ಪಡಿಸಿದ್ದಾರೆ. "ಜನಪದವೆಂದರೆ ಬರೇ ಸಾಹಿತ್ಯ ಸಂಗ್ರಹಿಸುವುದಲ್ಲ. ಅದರ ಹಿನ್ನೆಲೆಯಾದ ಸದ್ಗುಣ, ಸಹಜತೆಯ ನಮ್ಮ ತನವನ್ನು ಸಂಗ್ರಹಿಸಬೇಕು," ಎಂದು ಅವರು ಹೇಳುವಾಗ, ಪಂಡಿತರು ಕೂಡ ತಮ್ಮ ವಿಧಿ ವಿಧಾನಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಜೋಳದರಾಸಿಯವರಿಗೆ ಕಾಳಜಿಯಿರುವುದು, ಇಂದಿನ ಮನುಷ್ಯನನ್ನು ಆವರಿಸಿರುವ ಸ್ವಾರ್ಥ, ದುರ್ಗುಣ, ದುರಾಸೆಗಳನ್ನು ದೂರಮಾಡಿ ಅವರನ್ನು ಹೃದಯವಂತರನ್ನಾಗಿ ಮಾಡುವ ಕೈಂಕರ್ಯದಲ್ಲಿ, ಅಂಥ ಮಾನವರನ್ನು ಅವರು ಹಿಂದೆ ಕಂಡಿದ್ದಾರೆ, ಅಂಥ ಬದುಕನ್ನು ನೋಡಿದ್ದಾರೆ. ಅದರಲ್ಲಿರುವ ಸದ್ಗುಣಗಳ ಗ್ರಹಿಕೆ ಮಾಡಿಕೊಂಡು ನಮ್ಮ ಬಾಳನ್ನು ಹಸನು ಮಾಡಿಕೊಳ್ಳಬೇಕು ಎನ್ನುವುದು ಅವರ ಹಂಬಲ. ಅಂತೆಯೇ ಅವರ ಭಾಷಣದಲ್ಲಿ ನಿರ್ಭೀತತೆ, ವಿಚಾರವಂತಿಕೆ, ಆತ್ಮ ವಿಶ್ವಾಸ, ಅನುಕಂಪ ಇವು ಎದ್ದು ಕಾಣುತ್ತವೆ.

ಹಿರಿದಾಗಿ ಬೆಳೆದ ದಿವ್ಯ ಚೇತನವೊಂದು ತನ್ನ ಹಾಡಿನ ಮೂಲಕ, ನಾಟಕಗಳ ಮೂಲಕ, ಮಾತಿನ ಮೂಲಕ, ಕಡೆಗೆ ಬರವಣಿಗೆಯ ಮೂಲಕವೂ ನಾಡಿನ ಜನಕೋಟಿಗೆ ನೀಡಿರುವ ಕಾಣಿಕೆ ಬಹು ದೊಡ್ಡದು. ಇಂಥ ಜೀವ ನೂರ್ಕಾಲ ಬಾಳಲಿ ಎಂದು ಹಾರೈಸುವುದು ಅವರ ಅಭಿಮಾನಿಗಳೆಲ್ಲರ ಹೃದಯದ ಹಾಡಾಗಿದೆ.

ಗಮಕ ಕಲಾ ಸಂಪತ್ತು

ತೊಗರಿ ಸರ್ವಮಂಗಳಮ್ಮ

ಚಂದ್ರ ಶೈತ್ಯದಲು ಬೆಳೆದ ಕಾಯಕ್ಕೆ
ಬೆಳದಿಂಗಳು ಬಯಸುವ ಹಂಗೇಕಯ್ಯಾ ?
ಶರಣರ ಸಂಗದಲ್ಲಿರ್ದು ಶಿವನ ಬೇಡುವ ಹಂಗೇಕಯ್ಯಾ ?
ಕೂಡಲ ಸಂಗನ ಶರಣರು ಬಂದಂ
ತಮ್ಮವನೆಂದರೆ ಸಾಲದೇ ಅಯ್ಯಾ ?

ಗೌಡರು ತಮ್ಮ ಜೀವನದ ಎಪ್ಪತ್ತೆಂಟರ ಮೈಲುಗಲ್ಲನ್ನು ದಾಟಿ ನಮ್ಮೆಲ್ಲರೊಂದಿಗೆ ನಗಿಸಿ ನಗುತ್ತಾ ಸುಖವಾಗಿ ಬಾಳಿ ಬೆಳೆದು ಬಂದವರು ; ಶ್ರೀಮಾನ್ ಜೋಳದರಾಶಿ ಕೆಂಗಲ್ಲು ದೊಡ್ಡನಗೌಡರು ಅವರ ಸಂತಸದ ಬಾಳಿನ ಹಾದಿಯ ನೆನಕೆಯನ್ನು ಅವರಿಗೆ ತಂದುಕೊಟ್ಟು ಅವರನ್ನೂ ಆನಂದದಲ್ಲಿರಿಸಿ, ನಾವೂ ಆನಂದಿಸೋಣ, ಅಲ್ಲದೆ ಅವರು ನಡೆದು ಬಂದ ಹಾದಿಯ ಒಂದೊಂದು ಘಟನೆಯನ್ನು ನೆನೆಯುತ್ತಾ ಚಿಂತನೆ, ಶಿವ ಚಿಂತನೆಯನ್ನು ಮಾಡುತ್ತಾ ಮುಂದಿನ ಜೀವನ ಯಾತ್ರೆಯು ಸುಖಮಯವಾಗಿಯೂ ಹಸಿರಾಗಿಯೂ ಸಾಗಲೆಂದು ಹರಸಿ ಅವರ 78 ವರುಷದ ಒಸಗೆಯನ್ನು ಆಚರಿಸೋಣ, ಅಭಿನಂದಿಸೋಣ.

ಗೌಡರು ಪ್ರಾರ್ಥನೆಯನ್ನು ಹೇಳುವುದು ಇಡೀ ಕನ್ನಡನಾಡು ಬಲ್ಲದು, ಇಡೀ ಕನ್ನಡ ಕುಲ ಬಲ್ಲದು. ಎಲ್ಲಿ ಒಂದು ಸಭೆ ಸಮ್ಮೇಳನ ಆಗುವುದಿದ್ದರೆ ಅಲ್ಲಿ ಪ್ರಾರಂಭ ವಾಗುವುದು ಗೌಡರ ಪ್ರಾರ್ಥನೆಯಿಂದಲೇ ಇವರ ಪ್ರಾರ್ಥನೆ ಎಂದರೆ, ಶ್ರೀ ನಿಜಗುಣ ಶಿವಯೋಗಿಗಳ "ಶಿವ ಮಹಾದೇವ ಶಂಕರ" ಎನ್ನುವ ಸ್ತುತಿಸಂಪತ್ತು ಹೊರ ಹೊರ ಡುತ್ತಲೇ ಹೋಽಽ ಏನು ಆ ಗಂಭೀರತೆ ! ಏನು ಆ ಭಾವ ಪರವಶತೆ ! ಆ ಗಂಭೀರ ಕಂಠ ಶ್ರೀಗೆ, ಆ ಪಾರ್ವತೀವಲ್ಲಭ ತನ್ನ ಇರುವಿಕೆಯನ್ನು ಮರೆತು, ತನ್ನ ಗಣವನ್ನೆಲ್ಲ ಸರಿಸಿ ಎದ್ದು ಕೈಲಾಸದಿಂದ ಪ್ರಾರ್ಥನೆ ಎಲ್ಲಿ ನಡೆಯುವುದೋ ಅಲ್ಲಿಗೆ ಬಂದು ಕುಳಿತು ಕೇಳಬೇಕೆಂಬ ಇಚ್ಛೆ ಆ ಭಕ್ತವತ್ಸಲನಿಗೆ. ಆದರೆ ಗೌಡರ ಧ್ವನಿ ಕಂಚಿನ ನಗಾರಿ. ಈ ನಗಾರಿಯ ಝೇಂಕಾರ ಎಲ್ಲಿಗೆ ಕೇಳಿಸುವುದೋ ಅಲ್ಲಿಯೆ ನಿಂತು ಕೇಳಿ ಸ್ತುತಿ ಕೊನೆ ಗೊಂಡ ಮೇಲೆ ಮನಸ್ಸಿಲ್ಲದ ಮನಸ್ಸಿನಿಂದ ಕೈಲಾಸ ಸೇರುತ್ತಾನೇನೋ ಶಂಕರ. ನರ ರನ್ನಗಲಿ ನಾಕಕ್ಕೆ ಹೋಗಲಾರದೆ ಹೋಗುತ್ತಾನೇನೋ ಆ ಮಹಾದೇವ. ಆ ಮಹಾ ದೇವನಿಗೇ ಇಂತಾದ ಮೇಲೆ ಸಭಿಕರೋ ಭಕ್ತಿಪರವಶರಾಗಿ ಹನಿಗಣ್ಣಿನಿಂದ ಮುಕ್ಕಣ್ಣನ ಸ್ತೋತ್ರವನ್ನು ಏಕಚಿತ್ತದಿಂದ ಕೇಳುವಾಗ ನೋಡಬೇಕು ಸಭೆಯನ್ನು. ಅಲ್ಲಿ ಎಳ್ಳು ಬಿದ್ದರೂ "ಟಕ್" ಎಂದು ಶಬ್ದ ಕೇಳುವ ನೀರವತೆ. ಪ್ರಾರ್ಥನೆ ಮುಗಿದ ಮೇಲೆ ಯಾವ ಲೋಕದಿಂದ ಯಾವ ಲೋಕಕ್ಕೆ ಬಂದೆವು ಎಂಬ ಭ್ರಮೆ ಶ್ರೋತೃಗಳಿಗೆ. ಹೀಗಿರುತ್ತದೆ ಹೀಗಾಗುತ್ತದೆ ಗೌಡರ ಪ್ರಾರ್ಥನಾ ಯೋಗದ ಶ್ರೇಷ್ಠತೆ.

ಗಮಕ ಕಲಾ ಸಂಪತ್ತನ್ನು ಕನ್ನಡ ನಾಡಿಗೆ ಹಂಚಿದ ಶ್ರೇಷ್ಠರಲ್ಲಿ ಶ್ರೇಷ್ಠರು ಗೌಡರು. ನನ್ನ ಅನುಭವವನ್ನೇ ನಾನು ಹೇಳುತ್ತೇನೆ. ಗೌಡರ ಗಮಕವನ್ನು ನಾನು ಕೇಳಿದುದೆಂದರೆ ಶ್ರೀ ಕುವೆಂಪು ಅವರು ಬಳ್ಳಾರಿಗೆ ಬಂದಾಗ. ಅವರದೇ ಆದ "ರಾಮಾಯಣ ದರ್ಶನ"ದಲ್ಲಿ ಶಬರಿಗೆ ಶ್ರೀರಾಮನ ದರ್ಶನವಾದ ಭಾಗವನ್ನು ಹಾಡಲು ಆಯ್ದುಕೊಂಡಿದ್ದರು. ಗೌಡರ ಗಮಕ ಕಲಾನಿಧಿಯ ಶ್ರೀಮಂತಿಕೆ ಸಭಾಭವನದ ತುಂಬ ಹರಡಿತು. ಸಭೆ ಮೂಕಾಯಿತು. ಆಗ ನಮ್ಮ ಎದುರಿಗೆ ನಡುಬಾಗಿ ಕಾಣದ ಕಣ್ಣಿಗೆ ಕೈ ಆಸರವಿಟ್ಟು ರಾಮನನ್ನು ತನ್ನ ದೃಷ್ಟಿಗೆ ಸೃಷ್ಟಿಸಿಕೊಂಡ ರೂಹು ಕಾಣದೆ ಪ್ರತ್ಯಕ್ಷ ರಾಮನನ್ನೇ ನೋಡಿಯೂ ನೋಡದ ಹಾಗೆ : "ನನ್ನ ರಾಮ ಬರಲಿ ! ನಿನ್ನನ್ನು ಏನು ಮಾಡಿಸುತ್ತೇನೆ ನೋಡು! ನನ್ನ ರಾಮನನ್ನು ಗೇಲಿ ಮಾಡುತ್ತೀಯಾ?" ಎಂದು ಅಧಿಕಾರ ವಾಣಿಯಲ್ಲಿ ರಾಮನನ್ನು ತೋರು ಬೆರಳಿನಿಂದ ಬೆದರಿಸುತ್ತಿ ರುವಳೋ ಈ ಶಬರಿ ಎನ್ನುವಷ್ಟು ತನ್ಮಯತೆ ಕೇಳುಗರಿಗೆ. ಈ ಶಬರಿ ಮತ್ತು ರಾಮನನ್ನು ಮರೆಯಲಾರದ ನಾನು ಅಂದು ಮುಚ್ಚಿಟ್ಟು ಕೊಂಡದುದನ್ನು ಇಂದು ಅಕ್ಷರದಲ್ಲಿ ಬಿಚ್ಚಿಟ್ಟಿದ್ದೇನೆ ಇಲ್ಲಿ. ಆ ದಿನ ಕೇಳಿದ ಶ್ರೋತೃಗಳು ಶಬರಿ ರಾಮರನ್ನು ಮರೆಯಲಾರರು. ಶ್ರೀ ಪುಟ್ಟಪ್ಪ ಅವರು ಗೌಡರ ಗಮಕಕ್ಕೆ ತಲೆ ತೂಗಿದರು. "ಎಷ್ಟು ಚೆನ್ನಾಗಿ ಬರೆದಿದ್ದೇನೆ ನಾನು" ಎಂದು ಹರ್ಷಚಿತ್ತರಾಗಿರಬೇಕು ಪುಟ್ಟಪ್ಪ.

ಅವರು ಹರುಷ ಚಿತ್ತರಾಗಿ "ನಾನು ಬರೆದವನು ಪುಟ್ಟಪ್ಪ ! ತುಂಬುಮನದಿಂದ ಹಾಡಿದ ವರು ದೊಡ್ಡನಗೌಡರು" !! ಎಂದು ಹೆಸರಿನ ವಿಶೇಷತೆಯನ್ನು ಸಭೆಯಲ್ಲಿ ಹೇಳಿದರು ಪುಟ್ಟಪ್ಪನವರು. ಮಹಾಕವಿಗೆ ಸಲ್ಲುವ ಮಾತನ್ನಾಡಿದರು ರಾಷ್ಟ್ರಕವಿ ಶ್ರೀ ಪುಟ್ಟಪ್ಪ ನವರು. ಇದು ಗೌಡರ ಗಮಕ ಕಲೆಯ ವೈಶಿಷ್ಟ್ಯ.

ಇವರ ರಂಗಜೀವನ ವಿಶಾಲವಾಗಿದೆ. ಕನ್ನಡ, ತೆಲುಗು ನಾಟಕಗಳಲ್ಲಿಯೂ ಅಭಿನಯ ಪಟುಗಳು ಗೌಡರು. ಕರ್ನಾಟಕ, ಆಂಧ್ರ ನಾಟಕಾಚಾರ್ಯರಾದ ರಾಘವರ ಶಿಷ್ಯವೃಂದದಲ್ಲಿ ಗೌಡರು ಶ್ರೇಷ್ಠರು. ಗೌಡರು ಕನ್ನಡಕ್ಕೊಬ್ಬರೆ ಆದ ಕೈಲಾಸಂ ಅವರ ಪರಿಚಯವನ್ನು ಅನುಭವಿಸಿದವರು. ಅಲ್ಲದೆ "ಗುಬ್ಬಿ" (ಗುಬ್ಬಿ ವೀರಣ್ಣ ಅವರು) "ಗರುಡ" (ಸದಾಶಿವರಾವು ಅವರು) ಇವರನ್ನು ತನ್ನ ಜೋಳದರಾಶಿಯಲ್ಲಿ ಕೂಡಿಸಿ ನಾಟಕ ಕಳಾಪರಿಷತ್ತನ್ನು ಜರುಗಿಸಿದರು ಗೌಡರು. ಇವರ ಬಣ್ಣದ ಬದುಕಿಗೆ ಇದಕ್ಕೂ ಹೆಚ್ಚಿನ ಸಾಕ್ಷಿ ಬೇಕೇ ? ಗದ್ಯ-ಪದ್ಯ, ನಾಟಕ ಇವುಗಳ ಮೇಲೆಲ್ಲಾ ಇವರ ಕೈ ಓಟ ಸಾಧಿಸಿದೆ. ಸಾಗಿದೆ. ತೆಲುಗು ಸಾಹಿತ್ಯದಲ್ಲೂ ನುರಿತವರು. ಇವರ ವಚನಾ ಮೃತಮು (ಶಿವಶರಣುಲ ಅನುಭವ ಸಾರ ಸಂಗ್ರಹಮು) ಎನ್ನುವ ಅನುವಾದ ಪುಸ್ತಕವು ಪ್ರಕಟವಾಗಿದೆ. ಇವರ "ನಮ್ಮ ಹಂಪೆ"ಯನ್ನು ಇವರಿಂದಲೇ ಕೇಳಬೇಕು. "ಆ ನಮ್ಮ ಹಂಪೆ" ಪ್ರತಿಯೊಬ್ಬ ಕೇಳುಗರಿಂದ ಕಂಬನಿಯ ಕಾಣಿಕೆಯನ್ನು ಸುರಿಸಿ ಕೊಳ್ಳದೆ ಬಿಡದು" ಇವರ ಗಮಕ ಸಾಹಿತ್ಯವನ್ನು ಕೇಳಿದ ಧಾರವಾಡದ ಮುರುಘಾ ಮಠದ ಮೃತ್ಯುಂಜಯ ಮಹಾಸ್ವಾಮಿಗಳು ಮನಸಾರ ಆಶೀರ್ವದಿಸಿದ್ದಾರೆ. ಅಲ್ಲದೆ ಪ್ರತಿವರುಷವು ಧಾರವಾಡ ಮಠದಲ್ಲಿ ಜರುಗುತ್ತಿರುವ ಅಥಣಿ ಶಿವಯೋಗಿಗಳ ಜಾತ್ರೆಯ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಶೀರ್ವದಿಸಿದ್ದಾರೆ. ಗೌಡರನ್ನು "ನೀನು ಎಲ್ಲಿಯೇ ಹೋಗು ಶೂನ್ಯ ಸಂಪಾದನೆಯನ್ನೇ ಹೇಳಬೇಕು" ಎಂದು ಶರಣರ ವಚನಗಳನ್ನು ಸಂಗೀತಕ್ಕೆ ಸರಿ ಹೊಂದಿಸಿಕೊಂಡು ಹಾಡಬೇಕೆಂದು ಗುರುಮೃತ್ಯುಂಜ ಯರ ಕಟ್ಟಪ್ಪಣೆಯ ಆಶೀರ್ವಾದವಿತ್ತರು. ಅಂತಹ ವಚನಗಳನ್ನು ರಾಗ ಪರಿರಾಗ ವಾಗಿ ಹಾಡಿದವರಲ್ಲಿ ಗೌಡರೇ ಮೊದಲಿಗರು.

ಚಿಳ್ಳಗುರಿಕೆ ಎರ್ರಿತಾತ ಅವರ ಮಠದಲ್ಲಿ ಶಿವಾನುಭವ ಪ್ರವಚನಗಳನ್ನು ವಾರ ವಾರವು ಹೇಳಲು ತೀರ್ಮಾನಿಸಿ ಪ್ರತಿವಾರವು ಮಠಕ್ಕೆ ಹೋಗಿ ಅಲ್ಲಿ ಪ್ರವಚನ ಕೇಳಲು ನೆರೆದ ಜನರಿಗೆ ಒಂದು ಘಂಟೆ ತಪ್ಪದೆ ಪ್ರವಚನ ಮಾಡಿಬರುತ್ತಿದ್ದರಂತೆ ಗೌಡರು. ಬರಬರುತ್ತ ಕೇಳುಗರ ಗುಂಪು ಕಡಿಮೆಯಾದರು. ನಾಲ್ಕಾರು ಜನಕ್ಕಾಗಿ ಹೋಗುವು ದೇಕೆ ? ಎಂದು ಗೌಡರು ಮಠಕ್ಕೆ ಬರುವುದನ್ನು ನಿಲ್ಲಿಸಿದರಂತೆ. ಆದರೆ ಸ್ವಪ್ನ ವಾಯಿತು ಗೌಡರಿಗೆ. "ಏಕೆ ಗೌಡ ಹೇಳುವುದನ್ನು ನಿಲ್ಲಿಸಿದೆ ? ಯಾರೂ ಕೇಳದಿದ್ದರು ನಾನು ಕೇಳುವೆ ಬಾ" ಎಂದ ಹಾಗೆ ಆಯಿತಂತೆ ತಾತನವರಿಂದ.

"ನಾನೊಲ್ಲದಿದ್ದರೂ ನೀ ಬಿಡಲೊಲ್ಲೆ
ನೀನೆಂಥ ಕರುಣಾಳು ಗುರು ಎರ್ರಿನಾಥ !"

ಎಂದು ಮನತುಂಬಿ ಕಣ್‌ತುಂಬಿ ಚುಡಾಯಿಸಿದ ಹಾಡುಕಟ್ಟಿ ಹಾಡಿದರಂತೆ ಗೌಡರು. ಎರ್ರಿತಾತನವರ ಕೃಪಾಶೀರ್ವಾದವು ಇದ್ದೇ ಇದೆ ಗೌಡರಿಗೆ. ಅಂತೆ ಅವರು ಹನಿಗಣ್ಣಿನಿಂದ "ನನ್ನತಾತ ಎರ್ರಿತಾತ ! ನನ್ನ ಅಪ್ಪ ಮೃತ್ಯುಂಜಯಪ್ಪ" ಎಂದು ಕಂಪಿಸುವ ಧ್ವನಿಯಿಂದ ಗದ್ಗದಿಸುತ್ತಾ ಹೇಳುತ್ತಾರೆ ಗೌಡರು.

ಇಂತಹ ಬದುಕಿನ ಹೊರೆ ಹೊತ್ತ ಪತಿಯ ನೆರಳಿನಂತೆ ನಡೆದುಕೊಂಡ ಗೌಡತಿಯು ಗೌಡರನ್ನು ಒಂಟಿಗರನ್ನಾಗಿ ಮಾಡಿ ತಾನು ಮುತ್ತೈದೆ ಸಾವಿನ ಸಿರಿಯುಂಡು ಬಾಳಿಗೂ ಬಳಗಕ್ಕೂ ಬೆಲ್ಲವಾಗಿ "ಓ" ಕೊಡದ ನಾಡಿನಲ್ಲಿ ನಲಿದಾಡುತ್ತಿದ್ದಾರೆ ಶ್ರೀಮತಿ ಕೆ. ಹನುಮಕ್ಕ ಗೌಡತಿ.

"ಹುಟ್ಟಿ ಮೆಟ್ಟಿದ ಮನೆಗೆ ಹೂವಿಟ್ಟ ಗೌಡತಿ. ನನಗೇಕೆ ಸಾವಿನ ಬದುಕಿತ್ತೆ" ಎಂದು ಗೌಡರು ಕೇಳುತ್ತಲೇ ಇದ್ದಾರೆ. ಆದರೆ ಇವರ ಈ ಪ್ರಶ್ನೆಗೆ ಉತ್ತರವೆಲ್ಲಿ ? ಹೇಳುವವರಾರು ? ?

ಬಹಿರಂಗದ ಅಂತರಂಗ

ಗೌಡರ ತಿಪ್ಪೇಸ್ವಾಮಿ

ಶ್ರೀ ದೊಡ್ಡನಗೌಡರದು ಜೋಳದರಾಶಿ. ಈ ರಾಶಿ ಕೊಟ್ಟಷ್ಟೂ ಉಳಿಯುವ ರಾಶಿ, ಮತ್ತೆ ಬೆಳೆಯುವ ರಾಶಿ. ನಾವು ರೈತರು ಕಣದಲ್ಲಿನ ಕಾಳಿನ ರಾಶಿಯನ್ನು 'ನಿಧಿ' ಎನ್ನುತ್ತೇವೆ. ಶ್ರೀ ಗೌಡರು 'ಗಮಕ ಕಲಾನಿಧಿ'ಯಂತೆ. ಅವರು ಗಮಕ ಕಲೆಯ 'ನಿಧಿ' ಮಾತ್ರ ಅಲ್ಲ, ಆಡುವ-ಹಾಡುವ, ಬರೆಯುವ-ಒರೆಯುವ ಕಲೆಗಳ ನಿಧಿಯೂ ಹೌದು. ಅವರು ಕಲಾನಿಧಿ; ಕನ್ನಡ ನಿಧಿ.

ಶ್ರೀ ಗೌಡರು ಅಚ್ಚ ಬಸವೋಪಾಸಕರು, ಬಸವ ತತ್ವಪ್ರಾಣರು. ಅವರು ಬಸವನಂದಂತೆ ಹೊಗಳಿಕೆ ಹೊನ್ನ ಶೂಲ ಅನ್ನಬಹುದು. ಶಿವನು ಕರುಣೆಯಾದರೆ ತಮ್ಮ ಹೊಗಳಿಕೆಗೆ ಅಡ್ಡಬರಲಿ ಎಂದು ಬೇಡಬಹುದು. ಆದರೂ ಹೊಗಳಿಕೆಯಿಂದ ಅವರು ತಪ್ಪಿಸಿಕೊಳ್ಳಲಾರರು. ಅವರು ನಾಡು-ನುಡಿಗಳಿಗೆ ಸಲ್ಲಿಸಿರುವ ಅಮೂಲ್ಯ ಸೇವೆಗೆ ಹೊಗಳಿಕೆಯೊಂದನ್ನಲ್ಲದೆ ಮತ್ತೇನನ್ನು ಕೊಡಲೂ ನಾವು ಸಮರ್ಥರಲ್ಲ. ನಾಲ್ಕು ದಶಕಗಳಿಂದಲೂ ಹೊಗಳಿಕೆ ಶ್ರೀ ಗೌಡರಿಗೆ ಬೇಸರು-ಕೀಸರು ಹುಟ್ಟಿಸಿರಬಹುದು. ಅವರಿಗೆ ಹೊಗಳಿಕೆ ಬೇಡವಾದರೆ ಬಿಡಲಿ. ನಾವಂತೂ ಹೊಗಳುವವರೇ !

ಹಾಗೆ ಹೊಗಳದಿದ್ದರೆ ನಾವು ಕೃತಘ್ನರಾದೇವು. ಹೊಗಳುವುದುಂ ನಮ್ಮ ಧರ್ಮ; ಹೊಗಳಿಸಿಕೊಳ್ಳುವುದುಂ ಅವರ ಕರ್ಮ ! ಅನುಭವಿಸಲಿ ! !

ಶರಣರು ಹೊಗಳಿಕೆ ಬೇಡವೆಂದಿದ್ದಾರೆ. ಕನ್ನಾಡಿನ ಹರಿದಾಸರು ನಿಂದೆಯನ್ನು ಬೇಡಿಕೊಂಡಿದ್ದಾರೆ. ನಿಂದಿಸಲು ನಮ್ಮ ನಾಲಿಗೆ ಬಲು ಮುಂದು. ಪರನಿಂದೆ ನಮ್ಮ ಸಹಜ ಧರ್ಮವೆನಿಸುವಷ್ಟು ರೂಢವಾಗಿಬಿಟ್ಟಿದೆ. ಆದ್ದರಿಂದ ಶ್ರೀ ಗೌಡರನ್ನು ಹೊಗಳುವುದಕ್ಕಿಂತ ನಿಂದಿಸುವುದು ನಮಗೆ ಸುಲಭವಾದೀತುಂ. ಆದರೇನುಂ ಮಾಡುವುದು ? ಶ್ರೀ ಗೌಡರನ್ನು ಕುರಿತು ಮಾಡುವ ನಿಂದೆಯೂ ಅವರ ಸ್ತುತಿಯೇ ಆಗಿಬಿಡುತ್ತದೆ. ಹೇಗೆಂದರೆ ದಾಸರು ಸಖ್ಯಭಾವದಿಂದ ಮಾಡಿದ ನಿಂದಾಸ್ತುತಿಗಳ ಹಾಗೆ.

ನಿಂದೆಗೆ ಕಾರಣವಾಗುವ ಕುಂದುಂಗಳೂ ಇರಬೇಕಲ್ಲ ! ದೊಡ್ಡವರ ಕುಂದುಗಳೂ ಅವರ ಘನವ್ಯಕ್ತಿತ್ವದಲ್ಲಿ ಶೋಭೆಯನ್ನು ಪಡೆದುಬಿಡುತ್ತವೆ.

ಚಂದ್ರನಲ್ಲಿ ಕಂದಿದೆ. ಆ ಕಂದಿನಿಂದ ಚಂದ್ರನ ಕಾಂತಿ–ಶಾಂತಿಗಳಿಗೆ ಕುಂದು ಬಂದಿಲ್ಲ. ಆ ಕಂದು ಚಂದ್ರನಿಗೆ ಶೋಭೆ ಎನಿಸಿಬಿಟ್ಟಿದೆ. ಮಗುವಿನ ಸುಂದರ ಮೊಗಕ್ಕೆ ಕೆಟ್ಟಕಣ್ಣುಗಳ ದಿಟ್ಟಿ ತಗುಲೀತೆಂದು ಕೆನ್ನೆಗೆ ಕಪ್ಪು ಬಟ್ಟನ್ನಿಡುತ್ತಾರೆ. ಆ ಬಟ್ಟನಿಂದ ಮಗುವಿನ ಮುಖಕ್ಕೆ ಮತ್ತಷ್ಟು ಕಳೆ ಏರುತ್ತದಲ್ಲದೇ ಅದರ ಸೌಂದರ್ಯ ಕುಗ್ಗುವುದಿಲ್ಲ. ಹಾಗೆಯೇ ದೊಡ್ಡವರ ಕುಂದುಗಳೂ, ನಮ್ಮ ನಿಂದೆಗಳೂ ಎಲ್ಲವೂ ಇಲ್ಲಿ 'ಶ್ರೀ' ಆಗಿಬಿಡುತ್ತವೆ.

ಈಗ ಕುಂದುಂ–ನಿಂದೆಗಳ ಮೂಲಕ ಶ್ರೀ ಗೌಡರನ್ನು ಕಾಣುವ ಪ್ರಯತ್ನ ಮಾಡೋಣ. ಮೊದಲು ಶ್ರೀ ಗೌಡರು ಗರ್ವಿ–ಅಹಂಕಾರಿ ಎಂದು ಹಬ್ಬಿದ್ದ ನಿಂದೆಯನ್ನು ಕುರಿತು ಚಿಂತಿಸೋಣ.

ಶ್ರೀ ಗೌಡರು ಭೌತಿಕವಾಗಿಯೂ, ಬೌದ್ಧಿಕವಾಗಿಯೂ ಎತ್ತರದ ಶ್ರೀಮಂತರುಂ. ಅವರೊಡನೆ ಬೆರೆಯಲಾರದ ಕೆಲವರ ಕೀಳರಿಮೆ ಅವರಿಗೆ ಅಹಂಕಾರಿ ಎಂದು ಹೆಸರಿಟ್ಟಿತುಂ. ಅವರಿಂದ ದೂರ ಉಳಿಯಿತುಂ.

ಶ್ರೀ ಗೌಡರ ಹತ್ತಿರದ ಬಂಧುವರ್ಗದಲ್ಲಿಯೂ ಮತ್ತಿತರ ಬೀಗರ ಬಳಗದಲ್ಲಿಯೂ ಇದೇ ಭಾವನೆ ಬೆಳೆದಿತ್ತು. ಅವರಲ್ಲಿಗೆ ಆಗಾಗ್ಗೆ ಬರುತ್ತಿದ್ದ ಇವರು ರಾಗ–ದ್ವೇಷ, ಈರ್ಷ್ಯೆ–ಅಸೂಯೆಗಳಿಂದ ರೂಪಗೊಂಡ ಕೌಟುಂಬಿಕ ಕಲಹಗಳನ್ನು ಅವರ ಮುಂದೆ ಬಿಚ್ಚುತ್ತಿದ್ದರು. ಆಸ್ತಿ–ಪಾಸ್ತಿಗಳ ಹಕ್ಕುಗಳ ಬಗ್ಗೆ ಚರ್ಚಿಸ ಬಯಸುತ್ತಿದ್ದರು. ಕೊಡು–ಕೊಳ್ಳುವಿಕೆಯಲ್ಲಿಯ ಸಣ್ಣತನಗಳನ್ನು ಬಣ್ಣಿಸುತ್ತಿದ್ದರು. ಈ ಎಲ್ಲ ಕ್ಷುದ್ರಗಳನ್ನು ಕೇಳಲು, ಅವುಗಳ ಬಗ್ಗೆ ಮಾತನಾಡಲು ಗೌಡರ ಸುಸಂಸ್ಕೃತ ಮನ ಹೇಸುತ್ತಿತ್ತು. ಆದಷ್ಟೂ ಇಂಥವುಗಳಿಂದ ದೂರಾಗುತ್ತಿದ್ದರು. ಅವರವರಿಗೂ ದೂರಾದರು. ದೂರಾದವರು ಗೌಡರನ್ನು ಅಹಂಕಾರಿ ಎಂದಂದರು.

ಮತ್ತೆ ಕೆಲವು ವರ್ಗಗಳ ಜನ ಅವರ ಬಳಿ ಬರುತ್ತಿದ್ದರು. ಕೆಲವರು ತಮ್ಮ ಪಕ್ಷ-ಪಂಗಡಗಳಿಗೆ ಗೌಡರ ಬಲವನ್ನೂ ಬೇಡಲು ಬರುತ್ತಿದ್ದರು. ಇನ್ನೂ ಕೆಲವರು ಜಾತಿ-ಮತಗಳ ವಿಷಬೀಜವನ್ನು ಅವರ ಹೃದಯದಲ್ಲಿ ಬಿತ್ತಲು ಬರುತ್ತಿದ್ದರು. ಮತ್ತೆ ಕೆಲವರು ಅವರನ್ನು ಕಪಟ ರಾಜಕೀಯದ ಗೋಜಲಿಗೆ ಸಿಲುಕಿಸಿ ತಾವು ಲಾಭ ಪಡೆಯುವ ಹುನ್ನಾರದೊಡನೆ ಬರುತ್ತಿದ್ದರು. ಇವರಾರ ಬಣ್ಣ ಬಣ್ಣದ ಬಲೆ ಗಳಿಗೂ ಗೌಡರು ಬಲಿಯಾಗಲಿಲ್ಲ. ಅದೇ ನಾಡಿನ ಭಾಗ್ಯ. ನಿರಾಶರಾದ ಇಂಥವ ರೆಲ್ಲಾ ಗೌಡರಿಗೆ ದುರಹಂಕಾರಿ ಎಂದು ಹೆಸರಿಟ್ಟರು.

ಶ್ರೀ ಗೌಡರಿಗೆ ಜಗದ ಜನರಿಗಾಗಿ ವೇಳೆಯೇ ಇರಲಿಲ್ಲ. ನಿತ್ಯಸಂಗಾತಿ ತಂಬೂರಿಯೊಡನೆ ಸಂಗೀತ ಸಂಗ, ರಸಲೋಕ ವಿಹಾರಕ್ಕಾಗಿ ಸಾಹಿತ್ಯಸಂಗ, ನಾರದ--ಕೃಷ್ಣ-ತಿರುನೀಲಕಂಠರು-ಬಸವ-ಕನಕ-ಕಬೀರ ಮುಂತಾದ ಮಹಾಪುರುಷರ ಆವಾಹನೆ, ಹೊಸ ಸಾಹಿತ್ಯ ಕೃತಿಗಳ ಹೊಳವಿನ ಆಳದಲ್ಲಿ ಮುಳುಗು, ಜೀವದ ಜೀವಾಳವೇನೆಂಬ ಬಗ್ಗೆ ಗಹನ ಚಿಂತನೆ, ಹೀಗೆ ಹಲವುಗಳಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡಿರುತ್ತಿದ್ದರು ಗೌಡರು. ಮಂದಿಯ ಗೊಡವೆಗೆ ಕಿವಿಗೊಡದೆ ಮಂದಿ ಯಿಂದ ದೂರಾಗಿ ದೂರು ಹೊತ್ತವರು ಗೌಡರು.

ಇನ್ನೊಂದು ವಿಚಾರ, ಶರಣ-ಸಂತರಿಗೆ, ಶಾಸ್ತ್ರಿ-ಪಂಡಿತರುಗಳಿಗೆ, ಸಂಗೀತ-ಸಾಹಿತ್ಯಾಸಕ್ತರಿಗೆ, ಕವಿ-ಕಲಾವಿದರಿಗೆ ಹೊತ್ತುಗೊತ್ತಿಲ್ಲದೆ ಸ್ವಾಗತವಿತ್ತು ಗೌಡರಲ್ಲಿ. ಬೆಳಗು ಬೈಗುಗಳ ಪರಿವೆ ಇರದೆ ಅವರ ಸಂಗದಲ್ಲಿರುತ್ತಿದ್ದವರು ಗೌಡರು. ಅರ್ಥ ಇಷ್ಟೆ! ಗೌಡರಲ್ಲಿ ವೇಳೆ ಇತ್ತು, ಸಾರ್ಥಕಕ್ಕೆ; ವೇಳೆ ಇರಲಿಲ್ಲ ವ್ಯರ್ಥಕ್ಕೆ, ಅನರ್ಥಕ್ಕೆ.

ಅಂದರೆ ತಮ್ಮ ಸುತ್ತಣ ಸಾಮಾನ್ಯ ಬದುಕಿಗೆ ಸ್ಪಂದಿಸುತ್ತಿರಲಿಲ್ಲವೆಂದಲ್ಲ. ಅವರು ಬದುಕನ್ನು ಹತ್ತಿರ ಸಾರಿ ಅರಿತವರು. ಅವನತಿಯತ್ತ ಜಾರುತ್ತಿದ್ದ ಬದುಕನ್ನು ಮೇಲೆತ್ತ ಬಯಸಿದವರು. ಉತ್ತಮ ಸಮಾಜದ ಕನಸು ಕಾಣುತ್ತಿದ್ದವರು. ಉತ್ತಮ ವ್ಯಕ್ತಿಗಳಿಂದ ಮಾತ್ರ ಉತ್ತಮ ಸಮಾಜ ರಚನೆ ಸಾಧ್ಯ ಎಂದು ನಂಬಿ ದವರು. ವ್ಯಕ್ತಿ ಉತ್ತಮನಾಗಲು ಉತ್ತಮ ಸಂಸ್ಕಾರವಿರಬೇಕೆಂದುಕೊಂಡವರು. ಉತ್ತಮ ಸಂಸ್ಕಾರಕ್ಕೆ ಸಂಗೀತ-ಸಾಹಿತ್ಯ-ಗಮಕ-ನಾಟಕ ಮುಂತಾದ ಮಾಧ್ಯಮ ಗಳು ಸಮರ್ಥವಾದುವು ಎಂದು ನೆಚ್ಚಿದವರು. ಅಂತೆಯೇ ಅವುಗಳ ಸಿದ್ಧಿಗಾಗಿ ಕಂಕಣಕಟ್ಟಿ ಗೆದ್ದವರು. ಅವರ ಸಾಧನೆಯ ಫಲವನ್ನು ಸಮಾಜಕ್ಕೆ ಅರ್ಪಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಸಾಕಷ್ಟು ನೆರವಾದವರು. ಇವರನ್ನು ಸಮಾಜ ದೂರರು ಎನ್ನಲಾದೀತೆ?

ಕವಿ ಅಥವಾ ಕಲಾವಿದ ಕನಸುಣಿ-ಭಾವಜೀವಿ ಎಂದು ಪ್ರತೀತಿ. ಅವರ ಜೀವನ ಕಟ್ಟುಪಾಡುಗಳಿಗೆ ಒಳಪಡದ ಅವ್ಯವಸ್ಥಿತ ಜೀವನ ಎಂಬುದು ಸಾಮಾನ್ಯ ನಂಬುಗೆ. ಈ ಪ್ರತೀತಿ-ನಂಬುಗೆಗಳಿಗೆ ಅಪವಾದ ಗೌಡರ ಜೀವನ.

ಅವರ ಜೀವನ ಹಿಂದು ಮುಂದಾಗದ ಗಡಿಯಾರದಂತೆ. ಎಲ್ಲವೂ ನಿಗದಿತ-ಖಚಿತ. ಅವರ ಬದುಕಿನ ಎಲ್ಲ ಅಂಗಗಳಲ್ಲಿಯೂ ಅಚ್ಚುಕಟ್ಟುತನ, ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವ ಅಂಶ. ಅವರದು ಸಿಗರೇಟು ಸೇದುವುದರಲ್ಲಿಯೂ (ಈಗಲ್ಲ) ಅಚ್ಚುಕಟ್ಟುತನ. ಅವರ ಆರಾಮ ಖುರ್ಚಿ ಎದುರಿನ ಕಪಾಟು ಕಂ ಮೇಜಿನ ಬಲಬದಿಗೆ ಕೈಗೆಟುಕುವಂತೆ ಸಿಗರೇಟಿಂ ಪ್ಯಾಕು, ಕಡ್ಡೀಪೆಟ್ಟಿಣ. ಉಪಯೋಗಿಸುವ ಪ್ಯಾಕಿನ ಕೆಳಗಡೆ ಮತ್ತೊಂದು ತುಂಬಿದ ಪ್ಯಾಕು. ಅವರ ಬಲಭಾಗದಲ್ಲಿ ಕೆರೆದಕಡ್ಡಿ, ಸಿಗರೇಟಿನ ಕೊರೆ. ಬೂದಿಗಳನ್ನು ಹಾಕಲು ಒಂದು ಡಬ್ಬ. ಈ ಎಲ್ಲ ವಸ್ತುಗಳು ಎಂದೂ ಒಂದಿಂಚಿನಷ್ಟೂ ಸ್ಥಳಪಲ್ಲಟಗೊಳ್ಳುತ್ತಿದ್ದಿಲ್ಲ. ಸಿಗರೇಟಿಗಾಗಿ ತಡಕಾಟ-ಹುಡುಕಾಟಗಳು ಅವರ ವಿಚಾರ ಸರಣಿಯನ್ನು ಹರಿಗೆಡಿಸಿದ್ದಿಲ್ಲ.

ಆಳವಾದ ಅಭ್ಯಾಸ-ಅನುಭವಗಳಿಂದ ರೂಪುಗೊಂಡ ಅವರ ಪರಿಪಕ್ವ ವಿಚಾರಗಳು ಸಿಗರೇಟಿನ ಹೊಗೆಯ ಜೊತೆಗೇ ಪುಂಖಾನುಪುಂಖವಾಗಿ ಹೊರಬೀಳುತ್ತಿರುತ್ತವೆ. ಅವರ ಆ ವಿಚಾರಗಳಿಗೆ ಕೇಳುಗ ಬೆರಗಾಗಿ ಮಾರುಹೋಗುತ್ತಾನೆ. ಆಗ ಅವರ ಕೈನಲ್ಲಿನ ಸಿಗರೇಟು ಸುಟ್ಟು ಸಣ್ಣದಾಗಿದ್ದರೆ ಅವರ ಕೈಗೆ ಮತ್ತೊಂದು ಸಿಗರೇಟನ್ನಿತ್ತು ಕಡ್ಡೀಕೊರೆದು ಹಚ್ಚಬೇಕೆನಿಸುತ್ತದೆ ಕೇಳುಗನಿಗೆ. ಹೀಗೆ ದೊಡ್ಡವರಲ್ಲಿ ಸೇರಿದ ಕೆಟ್ಟಚಟಗಳೂ ಗೌರವವನ್ನು ಪಡೆದು ಬಿಡುತ್ತವೆ. ಒಮ್ಮೆ ಒಬ್ಬ ಜವಾಹರ ಲಾಲ ನೆಹರೂ ಸಿಗರೇಟು ಸೇದುತ್ತಾರೆ ಎಂದು ನಿಂದಿಸಿದನಂತೆ. ಆ ನಿಂದೆಯನ್ನು ಕೇಳಿದ ಬುದ್ಧಿವಂತನೊಬ್ಬ ಉತ್ತರಿಸಿದನಂತೆ "ಅಯ್ಯಾ, ನೆಹರೂ ಸಿಗರೇಟು, ಸೇದುತ್ತಾರೆ ನಿಜ. ಆದರೆ ಸಿಗರೇಟು ಸೇದುವವರೆಲ್ಲಾ ನೆಹರು ಆಗಲಾರರು". ಈ ಮಾತು ಗೌಡರಿಗೂ ಅನ್ವಯಿಸುವ ಮಾತು.

ಶ್ರೀ ಗೌಡರ ವೇಷಭೂಷಣವೂ ವಿಶಿಷ್ಟ. ತಿದ್ದಿ-ತೀಡಿ ಉಟ್ಟ ದೊಡ್ಡಂಚಿನ ಪಂಚೆ. ಮಾಸಲು ಮುಟ್ಟದ ಸುಕ್ಕುಕಾಣದ ಅಂಗಿ, ಮೇಲಂಗಿಗಳು. ಹೆಗಲ ಮೇಲೆ ಇಳಿ ಬಿದ್ದ ನಾಲ್ಕು ಬೆರಳಗಲಕ್ಕೆ ಮಡಚಿದ ಜರೀಶಲ್ಲೆ (ಬಳ್ಳಾರಿ ವಿಶೇಷ). ಎಲ್ಲದಕ್ಕೂ ಕಲಶವಿಟ್ಟಂತೆ ತಲೆಗೂದಲು. ಆ ಕೂದಲು ! ಅಲೆ ಅಲೆಯಾಗಿ ಭುಜದ ತನಕ ಇಳಿದ ಆ ಕೂದಲು ಒಪ್ಪವಾಗಿ ಬಾಚಿದ ರೇಷಿಮೆಯ ಕೂದಲು. ಅವರ ಕೂದಲನ್ನು ಕಪ್ಪಾಗಿದ್ದಾಗ ನೋಡಿದ್ದೇನೆ. ಬಣ್ಣ ಬಳಿದು ಕೆಂಪಾದ ಕೂದಲನ್ನೂ ನೋಡಿದ್ದೇನೆ. ಪ್ರಭಾವಳಿಯಂತೆ ಶೋಭಿಸಿದ ಬೆಳ್ಳಿಗೂದಲನ್ನೂ ನೋಡಿದ್ದೇನೆ. ಮೂರು ಕಾಲದಲ್ಲಿಯೂ ಕೂದಲು ಒಪ್ಪಗೆಟ್ಟಿಲ್ಲ. ಈ ಕೂದಲಿಗೆ ಗೌಡರು ವಿಶೇಷ ಕಾಳಜಿ ವಹಿಸಿದ್ದರೆನಿಸುತ್ತದೆ. ಈ ಎಲ್ಲಾ ಬಹಿರಾಲಂಕಾರಗಳಿಂದಾಗಿ ಗೌಡರು ಎಲ್ಲಿದ್ದರೂ ಎದ್ದು ಕಾಣಿಸುತ್ತಿದ್ದರು, ಎಲ್ಲರನ್ನು ಆಕರ್ಷಿಸುತ್ತಿದ್ದರು. ಗೌಡರ ಈ ಬಹಿರಾಡಂಬರ "ತೋಟ ಶೃಂಗಾರ ಒಳಗೆ ಗೋಣೀಸೊಪ್ಪು" ಎಂಬ ಗಾದೆಯ ಮಾತಂತಲ್ಲ. ಗೌಡರದು "ಹೊರಗೆ ಶೃಂಗಾರ ಒಳಗೆ ಭಂಗಾರ", ಗೌಡರ ದೇಹ ದೇವಾಲಯ.

ಆ ದೇವಾಲಯಕ್ಕೆ ಬಣ್ಣ–ಸುಣ್ಣ, ಸಾರಣೆ–ಕಾರಣೆ, ತಳಿರು–ತೋರಣಗಳ ಅಲಂಕಾರ. ಅವರ ಕಂಚಿನ ಕಂಠವ ಸಂಗೀತ–ಗಮಕಗಳ ಮೊಳಗು, ಆ ದೇಗುಲವಲ್ಲಿನ ಘಂಟೆ–ಜಾಗಟೆಗಳಂತೆ! ಅವುಗಳಲ್ಲಿಯ ಸಾಹಿತ್ಯ, ಮಂತ್ರಗಳಂತೆ!! ಇವೆಲ್ಲಾ ಹೃದಯ, ಗರ್ಭದ ಶಿವನ ಆರಾಧನೆಯಂತೆ!!! ಗೌಡರನ್ನು ನೋಡಿದವರಿಗೆ ಅನಿಸುತ್ತಿತ್ತು, "ಸತ್ಯಂ–ಶಿವಂ–ಸುಂದರಂ", ಎಂಬುದು ನಿಜ ಎಂದು. ಮತ್ತೆ ಅನಿಸುತ್ತಿತ್ತು ಗೌಡರು ನಡೆದಾಡುವ ಶಿವ ದೇವಾಲಯ ಎಂದು.

ಇನ್ನು ಅವರ ಅಭಿಮಾನದ ಬಗ್ಗೆ. ಅಭಿಮಾನ ಯಾರಿಗಿಲ್ಲ? ಅವರವರ ಸ್ಥಾನಮಾನಕ್ಕೆ ತಕ್ಕಂತೆ ಎಲ್ಲರೂ ಅಭಿಮಾನಿಗಳು. ಶ್ರೀ ಗೌಡರದು ದುರಭಿಮಾನ ವಲ್ಲ, ಸ್ವಾಭಿಮಾನವಲ್ಲ ಕೇವಲ ತತ್ವಾಭಿಮಾನ. ಅದಕ್ಕೆ ಒಂದೆರಡು ಉದಾಹರಣೆ ಗಳನ್ನಿತ್ತರೆ ಹೆಚ್ಚು ಸ್ಪಷ್ಟವಾದೀತು.

ಸಂಗೀತ ನಾಟಕ ಅಕ್ಯಾಡೆಮಿಯಿಂದ ಅವರಿಗೆ ಪ್ರಶಸ್ತಿ ಸಿಕ್ಕಿತು. ಆಗ ಹಾರ–ಶಾಲು–ನಟರಾಜ ವಿಗ್ರಹಗಳೊಂದಿಗೆ 1000/–ರೂ. ಗಳ ನಗದು ಬಹುಮಾನವೂ ಸಿಕ್ಕಿತು. ಆ ಹಣ ಅವರ ಸಂಸಾರ ನಿರ್ವಹಣೆಗೆ ಅಗತ್ಯವಿರಲಿಲ್ಲ. ಅವರ ಸಂಸಾರ ಶಂತಾನೇ ಶ್ರೀಮಂತವಿತ್ತು. ಗೌಡರು ಆ ಹಣವಿಂದ ಅಕ್ಯಾಡೆಮಿಯ ಸದಸ್ಯರಿಗೆ, ನೌಕರರಿಗೆ ಮತ್ತು ಬೆಂಗಳೂರಿನ ತಮ್ಮ ಸ್ನೇಹಿತರು ಹಾಗೂ ಅಭಿಮಾನಿಗಳಿಗೆ ಸತ್ಕಾರ ಕೂಟವನ್ನು ಏರ್ಪಡಿಸಿದರು. ಆಗ ಕೆಲವರು ಆಕ್ಷೇಪಿಸಿದರು "ಗೌಡರೇ, ನೀವು ಇಂತಹ ಸಂಪ್ರದಾಯವನ್ನು ಪ್ರಾರಂಭಿಸಿದರೆ, ಪಾಪ! ಬಡ ಕಲಾವಿದರಿಗೆ ತೊಂದರೆ ಯಾಗುವುದಲ್ಲವೇ" ಎಂದು. ಆಗ ಗೌಡರ ಉತ್ತರ ಇಂತಿತ್ತಂತೆ "ಇದು ಕೇವಲ ನನ್ನದು. ಇನ್ನೊಬ್ಬರು ಅನುಸರಿಸಲೆಂದು ಮಾಡಿದ್ದಲ್ಲ. ನನ್ನದು ಗೌಡರ ರಕ್ತ. ನಮಗೆ ನೀಡುವುದು ಗುರುತೇ ಹೊರತು ಬೇಡುವುದಾಗಲೀ ಪಡೆಯುವುದಾಗಲಿ ಗುರುತಿಲ್ಲ. ಈ ಅಕ್ಯಾಡೆಮಿ ಹಣ ನನ್ನ ಬದುಕಿಗೆ ಅಗತ್ಯವಿಲ್ಲ. ಆದ್ದರಿಂದ ನಾವೆಲ್ಲ ಕೂಡಿ ತಿಂದುಂಡು ಆನಂದಿಸುವುದರಲ್ಲಿಯೇ ಈ ಹಣದ ಸಾರ್ಥಕತೆ" ಎಂದರಂತೆ. ಈ ಅಭಿಮಾನಕ್ಕೆ ಯಾವ ಹೆಸರಿಡೋಣ?

ಇನ್ನೊಂದು ಪ್ರಸಂಗ. ಬಹು ಮೌಲಿಕ ಪ್ರಸಂಗ. ದಾವಣಗೆರೆಯ ಮುರುಘಾ ಮಠದಲ್ಲಿ ದೊಡ್ಡದೊಂದು ಸಮಾರಂಭ. ಬಹುಶಃ ಜಗದ್ಗುರು ಜಯದೇವ ಮುರುಘರಾಜೇಂದ್ರರ ಪುಣ್ಯತಿಥಿ ಇರಬೇಕು. ಜನ ಕಿಕ್ಕಿರಿದು ತುಂಬಿತ್ತು. ಶ್ರೀ ಗೌಡರ ಪ್ರವಚನ ನಡೆದಿತ್ತು. ಅಂದಿನ ಅವರ ಪ್ರವಚನದ ವಿಷಯ "ಅಕ್ಕಮಹಾ ದೇವಿ". ಗೌಡರು ತಮ್ಮ ಗಮಕ ನೈಪುಣ್ಯ ಮತ್ತು ವಾಗ್ವೈಖರಿಯಿಂದ ಜನ ಮನಕ್ಕೆ ಅಕ್ಕನನ್ನು ಕಾಣಿಸ ಹತ್ತಿದ್ದರು. ಆಗ ವೇದಿಕೆಯ ಮೇಲಿದ್ದ ಪೀಠಾಧಿಕಾರಿಗಳು ಇತರ, ಜೊತೆಯಲ್ಲಿದ್ದ ವಿರಕ್ತಸ್ವಾಮಿಗಳ ಜೊತೆಗೆ ಗೋಣಗಾಟದಲ್ಲಿ ತೊಡಗಿದ್ದರು. ಆ ಗೊಣಗು ಎತ್ತರದ ದನಿಗೇರಿ ಪ್ರವಚನಕ್ಕೆ ಅಡಚಣೆ ಎನಿಸಿತು. ಆಗ ಗೌಡರು

ಸ್ವಾಮಿಗಳತ್ತ ಮುಖ ಮಾಡಿ "ದಯಮಾಡಿ ಸುಮ್ಮನಿರಿ. ಪ್ರವಚನಕ್ಕೆ ತೊಂದರೆ ಮಾಡಬೇಡಿ" ಎಂದರು. ಶ್ರೀ ಸ್ವಾಮಿಗಳು ಸರಸಕ್ಕೋ ಸಲಿಗೆಗೋ, ವಿಡಂಬನೆಗೋ ಇಂತೆಂದರು "ಗೌಡರೇ ನೀವು ಹೆಣ್ಣಿನ ಕಥೆಯನ್ನು ಹೇಳುತ್ತಿದ್ದೀರಿ. ನಾವಿಲ್ಲಿ ಹೊನ್ನಿನ ಚರ್ಚೆ ನಡೆಸಿದ್ದೇವೆ. ನಿಮ್ಮದು ನಿಮಗೆ, ನಮ್ಮದು ನಮಗೆ" ಎಂದು ನಕ್ಕರು. ಗೌಡರು ಕೆರಳಿ ನುಡಿದರು "ಸ್ವಾಮಿಗಳೇ, ನಿಮಗೆ ಅಕ್ಕಮಹಾದೇವಿ ಸಾಮಾನ್ಯ, ಹೆಣ್ಣೆನಿಸಿದಳೇ ?' ಶರಣಸತಿ ಲಿಂಗ ಪತಿ' ಎಂದು ಬೋಧಿಸುವ ನೀವು ಹೆಣ್ಣೋ ಗಂಡೋ ? ನೀವು ನಮಗೆ ಬಿಡಿರೆಂದು ಹೇಳುವ ಹೆಣ್ಣು-ಹೊನ್ನುಗಳ ಮೋಹವನ್ನು ನೀವೇ ಇಟ್ಟುಕೊಂಡಿರುವಿರಲ್ಲವೇ ?' ಈ ನಿಮ್ಮ ವೇದಿಕೆಯ ಮೇಲೆ ನಾನಿನ್ನು ಪ್ರವಚನವನ್ನು ಮುಂದುವರಿಸುವುದಿಲ್ಲ" ಎಂದು ಬಿಟ್ಟರು. ಸಭೆಯಲ್ಲಿ ಗುಲ್ಲೆದ್ದಿತು. ಪ್ರವಚನ ಮುಂದುವರಿಯಲೇ ಬೇಕೆಂಬುವರ ಸಂಖ್ಯೆ ಹೆಚ್ಚಾಯ್ತು. ಕೊನೆಗೆ ಸ್ವಾಮಿಗಳೇ ಗೌಡರಕ್ಷಮೆ ಕೇಳಿ ಪ್ರವಚನವನ್ನು ಮುಂದುವರಿಸಲು ಕೇಳಿಕೊಂಡರು. ಈಗ ವಿಚಾರಮಾಡೋಣ ಗೌಡರದು ಸ್ವಾಭಿಮಾನವೋ ? ತತ್ವಾಭಿಮಾನವೋ ?

ಮತ್ತೊಂದು ಪ್ರಸಂಗ. ಧಾರವಾಡದ ಮೃತ್ಯುಂಜಯ ಸ್ವಾಮಿಗಳಿಗೆ ಶ್ರೀ ಗೌಡರ ಮೇಲೆ ಇನ್ನಿಲ್ಲದ ಅಭಿಮಾನ. ಕಾರಣ ಗೌಡರ "ಶೂನ್ಯ ಸಂಪಾದನೆ"ಯ ವಾಚನ ಪ್ರವಚನಗಳ ಪ್ರಾವೀಣ್ಯ. ಪ್ರತಿ ವರ್ಷ ಮಠದ ಜಾತ್ರೆಯ ದಿನಗಳಲ್ಲಿ ಗೌಡರ "ಶೂನ್ಯಸಂಪಾದನೆ"ಯ ಪ್ರವಚನದ ಏರ್ಪಾಟಿತ್ತು. ಶ್ರೀ ಮಠದ ಎಲ್ಲಾ ಚಟು ವಟಿಕೆಗಳಿಗೂ ಸೂತ್ರಧಾರರಾದ ಶಾಸ್ತ್ರಿಗಳೊಬ್ಬರಿದ್ದರು. ಅವರೊಮ್ಮೆ ಪ್ರಾಸಂಗಿಕ ವಾಗಿ "ಶೂನ್ಯಸಂಪಾದನೆಯಲ್ಲೇನಿದೆ ? ಎಲ್ಲಾ ಕಲ್ಪಿತ ಪ್ರಸಂಗಗಳು. ಕಲ್ಪಿತ ವಚನ ಗಳು" ಎಂದು ಬಿಟ್ಟರು. ಈ ಮಾತು ಗೌಡರ ಕಿವಿಗೆ ಬಿತ್ತು. ಶಕ್ತಿ ವಿಶಿಷ್ಟಾದ್ವೈತದ ಸಾರಸರ್ವಸ್ವವನ್ನೂ 'ಶೂನ್ಯ ಸಂಪಾದನೆ'ಯಲ್ಲಿ ಕಂಡಿದ್ದ ಗೌಡರಿಗೆ ಈ ಮಾತು ಅಪಥ್ಯವೆನಿಸಿತು. "ಶೂನ್ಯ ಸಂಪಾದನೆ'ಯನ್ನು ಲಘುವಾಗಿ ಕಾಣುವವರ ಮಠದಲ್ಲಿ ಅದರ ಪ್ರವಚನವನ್ನೇಕೆ ಮಾಡಿಸಬೇಕು ? ನಾನೇಕೆ ಮಾಡಬೇಕು" ಎಂದಂದು ಅಂದಿನಿಂದ ಮಠದಲ್ಲಿ ಪ್ರವಚನವನ್ನೇ ನಿಲ್ಲಿಸಿಬಿಟ್ಟರು. ಇದನ್ನು ವೀರಶೈವದ ಪಂಚಾಚಾರಗಳಲ್ಲೊಂದಾದ 'ಗಣಾಚಾರ' ಎನ್ನಬೇಕೋ ? ಗೌಡರ ಸ್ವಾಭಿಮಾನ ವೆನ್ನಬೇಕೋ ?

ಶ್ರೀ ಗೌಡರಿಗೆ ದೈನ್ಯ-ದಾಸ್ಯಗಳ ಅರಿವೇ ಇರಲಿಲ್ಲ. ಅವರ ಉನ್ನತಿಯ ಜೀವನಕ್ಕೆ ಅವುಗಳ ಅಗತ್ಯವೇ ಇರಲಿಲ್ಲ. ಗೌಡರಲ್ಲಿ ಭಕ್ತಿ-ವಿನಯ-ವಿಧೇಯತೆಗಳ ಕೊರತೆ ಇದೆ ಎನ್ನೋಣವೇ ? ಅವುಗಳ ಸತ್ವ-ಮಹತ್ವಗಳನ್ನು ಅವರಂತೆ ಬಲ್ಲವರು ಬಹಳವಿಲ್ಲ ಅವು ಗೌಡರಿಂದ ದೊರೆಯಬೇಕೆಂದು ಬಯಸಿ ಬಂದವರಿಗೆಲ್ಲಾ ಸಿಕ್ಕು ತ್ತಿರಲಿಲ್ಲ. ಅವನ್ನು ಪಡೆಯಲು ಅರ್ಹರಾದವರಿಗೆ ಮಾತ್ರ ಸಲ್ಲುತ್ತಿದ್ದವು.

ಅವರ ಭಕ್ತಿ ವಿಧೇಯತೆಗಳನ್ನು ಪಡೆದವರು ಚೆಳ್ಳಗುರ್ಕಿಯರ್‍ರಿತಾತಾ, ಧಾರವಾಡದ ಮೃತ್ಯುಂಜಯಪ್ಪ, ಮಹಂತಪ್ಪಗಳು, ವೈ. ನಾಗೇಶ ಶಾಸ್ತ್ರಿಗಳು

ಮುಂತಾದವರು. ಅವರಿಂದ ನಯ–ವಿನಯಗಳನ್ನು ಕಂಡವರು ಬಳ್ಳಾರಿ ರಾಘವರು, ಗುಬ್ಬಿವೀರಣ್ಣನವರು, ಗರೂಡ ಸದಾಶಿವರಾಯರು, ಅ.ನ.ಕೃ., ಬೀಚಿ., ಕೈಲಾಸಂ ಮುಂತಾದ ಅನೇಕ ಮಂದಿ ವಿದ್ವಜ್ಜನಗಳು.

ನಾನೇನು ಬರೆದರೂ ಅದು ಗೌಡರು ಇರುವಷ್ಟಲ್ಲ. ನನ್ನ ಸಣ್ಣ ಕಣ್ಣುಗಳು ಕಂಡಷ್ಟು ಮಾತ್ರ. ಆದ್ದರಿಂದ ಕೊನೆಗಾಣಲಾರದ ಬರಹವನ್ನು ಕೊನೆಗಾಣಿಸುತ್ತೇನೆ.

ಕೆಳಗಿನ ಗೌಡರವೇ ಆದ ನುಡಿ ಹಾಗೂ ತ್ರಿಪದಿಗಳಿಂದ ಇಂದಿನ ಗೌಡರನ್ನು ನಿಮಗೆ ತೋರಿಸ ಬಯಸುತ್ತೇನೆ.

ತ್ರಿಪದಿ : ಭೂಭಾರ ಸಂಸಾರ ಭಾವಗಳಳಿದವು
ಉಳಿದಿದೆ ನಾನೆಂಬ ಬಲುಭಾರ–ಮುಪ್ಪಿನ
ಬದುಕಾಶೆ ಸಾಯದೆ ಬದುಕಿರುವೆ

ನುಡಿ : ದಿಕ್ಕುಗಾಣದ ಗೌಡ ಪೇಚಾಡಿಕೊಂಡಿದ್ದಾನೆ ಕಾಲನ ಸಹಾಯ ಸಿಕ್ಕೋವರಿವಿಗೂ ಹೀಗೇ ಪಾಪ, ಇನ್ನೇನು ಮಾಡುತ್ತಾನೆ ?

(ಸ)ರಸ ಪ್ರಸಂಗ :

ಬಳ್ಳಾರಿ ರಾಘವ ಕಲಾಮಂದಿರದಲ್ಲಿ ನಾಟಕೋತ್ಸವ ನಡೆದಿತು. ಉತ್ಸವಕ್ಕೆ ಸಂಬಂಧಿಸಿದಂತೆ ಕೆಲವು ಫೋಟೋಗಳನ್ನು ಹಿಡಿಯಲು ಚಿತ್ರಗ್ರಾಹಕ ಬಂದಿದ್ದ. ಯಾವುದೋ ಕಾರ್ಯಕ್ರಮ ನಡೆದಿತ್ತು. ಅದರಲ್ಲಿ ಗೌಡರದೇ ಮುಖ್ಯ ಅಂಗ. ಫೋಟೋಗ್ರಾಫರ್ ರೂಢಿಯಂತೆ "ಸ್ವಲ್ಪ ಮುಂದೆ ಬನ್ನಿ", "ನೀವು ಸ್ವಲ್ಪ ಹಿಂದೆ ಸರಿಯಿರಿ", "ಸರಿಯಾಗಿ ನಿಂತುಕೊಳ್ಳಿರಿ" ಎಂದು ಹೇಳಹತ್ತಿದ. ಶ್ರೀ ದೊಡ್ಡನ ಗೌಡರು "ಏನಯ್ಯಾ ನೀನು ನಮ್ಮನ್ನು ಕವಾಯಿತ ಮಾಡಿಸುತ್ತಿದ್ದೀಯಾ ?" ಎಂದರು. ನಾವೆಲ್ಲ ನಕ್ಕೆವು.

ಮತ್ತೆ ಚಿತ್ರಗ್ರಾಹಕ "ಅಲುಗಾಡ ಬೇಡಿರಿ" ಎಂದ. ಗೌಡರು ಅಯ್ಯಾ ನಾವು ಬಳ್ಳಾರಿ ಗುಡ್ಡದ ಕಲ್ಲು ಗುಂಡುಗಳೇ ? ಹೇಗೆ ಅಲುಗಾಡದಿರೋಣ" ಎಂದರು ? ನಾವು ಮತ್ತೆ ನಕ್ಕೆವು.

ಪಾಪ ! ಆ ಚಿತ್ರಗ್ರಾಹಕ ಕೊನೆಯದಾಗಿ "ಎಲ್ಲರೂ ಸ್ವಲ್ಪ ನಗಿ" ಎಂದ. ಗೌಡರು "ಅಲ್ಲಯ್ಯಾ ನೀನು ನಗಿರೆಂದಾಗ ಆ ನಗು ಹೇಗೆ ಬರುತ್ತೆ ? ನೀನು ಫೋಟೋ ತೆಗೆಯುವುದಿದ್ದರೆ ನಾವು ಹೇಗಿರುತ್ತೇವೆಯೋ ಹೇಗಿದ್ದೇವೆಯೋ ಹಾಗೆ ತೆಗೆ. ನಮ್ಮನ್ನು ಕಾಡಬೇಡ. ನೀನು ಕಾಡಿದರೆ ನಮಗೆ ನಗೆಯಲ್ಲ, ಸಿಟ್ಟು, ಬಂದೀತು" ಎಂದರು. ನಾವು ಮನಸಾ ನಕ್ಕೆವು.

ಫೋಟೋಗ್ರಾಫರ್ ನಿಜವಾದ ಭಾವಚಿತ್ರದ ಅರ್ಥವನ್ನು ತಿಳಿದುಕೊಂಡ ನೆನಿಸಿತು.

★

"ಎಂದುರೋ ಮಹಾನುಭಾವುಲು"

ಬಿ. ಶ್ರೀನಿವಾಸಮೂರ್ತಿ

ಸಂತ ತ್ಯಾಗರಾಜರು ಹಾಡಿರುವ "ಎಂದುರೋ ಮಹಾನುಭಾವುಲು ಅಂದರಿಕಿ ವಂದನಮುಲು" ಎಂಬ ಕೀರ್ತನೆಯನ್ನು ಕೇಳದ ರಸಿಕರು ಅತ್ಯಂತ ವಿರಳರೆಂದೇ ಹೇಳಬೇಕು. ಶ್ರೀ ರಾಗದ ಈ ಕೀರ್ತನೆ ಅತ್ಯಂತ ಮನೋಹರವಾಗಿದ್ದು ತ್ಯಾಗರಾಜರ ಪಂಚರತ್ನ ಕೀರ್ತನೆಗಳಲ್ಲಿ ಒಂದಾಗಿ ನೂರಾರು ವರ್ಷಗಳಿಂದ ಶ್ರೋತೃಗಳನ್ನು ಭಕ್ತಿಪರವಶರನ್ನಾಗಿ ಮಾಡುವಂಥ ಅಮೋಘ ಶಕ್ತಿಯನ್ನು ಪಡೆದಿದೆ. ಆದರೆ ಹಾಡುವ ಕಲಾವಿದ ಅಥವಾ ಕಲಾವಿದೆ ಸಂಗೀತ ಶಾಸ್ತ್ರ ಪರಿಣತರಾಗಿದ್ದು ಭಾವ ಪೂರ್ಣವಾಗಿ ಹಾಡಿದಲ್ಲಿ ಮಾತ್ರ ಶ್ರೋತೃಗಳು ತನ್ಮಯರಾಗುತ್ತಾರೆ. ಇದು ಎಲ್ಲ ರಸಿಕರ ಅನುಭವ. ತ್ಯಾಗರಾಜರೇ ತಮ್ಮ ಮತ್ತೊಂದು ಕೀರ್ತನೆಯಲ್ಲಿ ಹೇಳಿರುವಂತೆ ಈ ಆನಂದಾನುಭವ ಅನುಭವ ವೇದ್ಯವೇ ಹೊರತು ("ಅನುಭವ ವೇದ್ಯಮೇ ಮನಸಾ") ಮಾತುಗಳಿಂದ ವಿವರಿಸುವುದು ಅಶಕ್ಯವಾದುದು.

ಕನ್ನಡ ನಾಡಿನ "ಎಂದುರೋ ಮಹಾನುಭಾವುಲು" ಪೈಕಿ ಬಳ್ಳಾರಿಯ ಜೋಳದ ರಾಶಿ ಗ್ರಾಮದ ಶ್ರೀ ದೊಡ್ಡನ ಗೌಡರು ಒಬ್ಬರು. ಇವರು ಜೋಳದರಾಶಿ ದೊಡ್ಡನಗೌಡರೆಂದೇ ಪ್ರಸಿದ್ಧರು. ಕರ್ನಾಟಕದ ಸಾರಸ್ವತ ಪ್ರಪಂಚದಲ್ಲಿ ಮತ್ತು ನಾಟಕ, ಸಂಗೀತ ಮತ್ತು ಗಮಕ ಕಲಾಕ್ಷೇತ್ರದಲ್ಲಿ ಇವರ ಹೆಸರನ್ನು ಕೇಳಿದ ಕೂಡಲೇ

ರಸಿಕ ಭಾವುಕರು ಪುಳಕಾಂಕಿತರಾಗುತ್ತಾರೆ. ಈ ಮಹಾನುಭಾವರ ಗಮಕ ಕಲೆ ಇವರಿಗೆ ಒಲಿದು ಬಂದಿರುವ ಸರಸ್ವತಿ. ಇವರು ಹಾಡುವ ಹರಿಶ್ಚಂದ್ರ ಕಾವ್ಯ ಸಂಗ್ರಹ, ರಾಮಾಯಣ, ಮಹಾಭಾರತ, ಬಸವಣ್ಣರಾದಿಯಾಗಿ ಅನೇಕ ವೀರಶೈವ ಸಂತರು ರಚಿಸಿರುವ ವಚನ ಸಾಹಿತ್ಯ ಮತ್ತು ಅನೇಕ ದಾಸ ಶ್ರೇಷ್ಠರ ಕೀರ್ತನೆಗಳನ್ನು ಕೇಳಿ ತನ್ಮಯರಾಗದ ಶ್ರೋತೃಗಳಿಲ್ಲ. ಕರುಣಾಮಯ ಸನ್ನಿವೇಶಗಳನ್ನು ಕೇಳಿ ಅಶ್ರುಪೂರ್ಣನೇತ್ರಗಳಿಂದ ಭಾವಪರವಶರಾಗದ ಭಕ್ತರಿಲ್ಲ. ನಾಟಕಗಳಲ್ಲಿ ಇವರ ಅಭಿನಯಕ್ಕೆ ಮಾರುಹೋಗದ ಪ್ರೇಕ್ಷಕರಿಲ್ಲ. ಭದ್ರಾಚಲ ರಾಮದಾಸ ಚರಿತ್ರೆಯಲ್ಲಿ ಇವರು ಅಭಿನಯಿಸುತ್ತಿದ್ದ ಕಬೀರದಾಸನ ಪಾತ್ರ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು. ಆಂಧ್ರದಲ್ಲಿ ಪ್ರೇಕ್ಷಕರನೇಕರು, ಉತ್ತರ ಪ್ರದೇಶದ ರಾಜ್ಯಪಾಲ ರಾಗಿದ್ದ ಬಿ. ಗೋಪಾಲರೆಡ್ಡಿಯವರೇ ಮೊದಲಾದ ರಸಿಕರು ಇವರನ್ನು ಅಭಿಮಾನ ದಿಂದ "ಕಬೀರುದಾಸುಗಾರು" ಎಂದೇ ಕರೆಯುತ್ತಿದ್ದರು.

ಈ ಮಹಾನುಭಾವರ ಈ ಸಾಧನೆ ಸುಲಭ ಸಾಧ್ಯವಲ್ಲ. ಅವರು ತಮ್ಮ ಜೀವಿತ ದಲ್ಲಿ ಕಲೆಯನ್ನು ತಪಶ್ಚರ್ಯೆಯಂತೆ ಆಚರಿಸಿ ಸಾಧಿಸಿಕೊಂಡಿದ್ದಾರೆ. ಜೊತೆಗೆ ಇವರ ನಿಷ್ಠಾವಂತ ತಪಸ್ಸಿಗೆ ಕಲಾದೇವಿಯೂ ಒಲಿದು ಇವಳ ಆಜ್ಞಾಧಾರಕಳಂತೆ ಇರುವ ಳೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಯಾವನೇ ಕಲಾವಿದ ತನ್ನ ಪಾತ್ರ ವನ್ನು ಅರ್ಥಮಾಡಿಕೊಂಡು ತಾನು ಅನುಭವಿಸಿದರೇನೇ ಶ್ರೋತೃಗಳೂ ತನ್ಮಯ ರಾಗಲು ಸಾಧ್ಯ. ತಾನು ಕಲಿತ ವಿದ್ಯೆ ತನ್ನನ್ನೇ ತೃಪ್ತಿಪಡಿಸಲು ಸಾಧ್ಯವಿಲ್ಲದಿದ್ದಲ್ಲಿ ಅದು ಶ್ರೋತೃಗಳನ್ನು ಹೇಗೆ ತಾನೆ ತೃಪ್ತಿಪಡಿಸೀತು. ಶ್ರೀ ದೊಡ್ಡನಗೌಡರು ವೇದಿಕೆಯ ಮೇಲೆ ಕುಳಿತು ಯಾವುದೇ ಕಾವ್ಯವನ್ನಾಗಲಿ ಹಾಡಲಾರಂಭಿಸಿದ ಕೆಲವೇ ಕ್ಷಣಗಳಲ್ಲಿ ಭಾವಪರವಶರಾಗುತ್ತಾರೆ. ಅನಂತರ ಕೇಳಿದ ಶ್ರೋತೃಗಳೂ ಪರವಶ ರಾಗುತ್ತಾರೆ. ಈ ಸೋಜಿಗವನ್ನು ಕೇಳಿಯೇ ಮತ್ತು ನೋಡಿಯೇ ಅನುಭವಿಸ ಬೇಕಲ್ಲದೆ ವರ್ಣನೆಗೆ ನಿಲುಕುವಂಥ ವಿಷಯವಲ್ಲ. ಆಚಾರ್ಯ ಶಂಕರರು ಹೇಳಿರುವಂತೆ "ಅನುಭವಜನ್ಯ ಜ್ಞಾನಂ ಪ್ರತ್ಯಕ್ಷಂ" ಅಥವಾ ದಿವಂಗತ ಡಿ. ವಿ. ಜಿ. ಅವರು "ನಡೆದು ನೋಡು ಕೊಡಗಿನ ಬೆಡಗುಂ" ಎಂದಂತೆ ಗೌಡರ ಕಲೆಯ ಸೌಂದರ್ಯವನ್ನು ಅನು ಭವಿಸಿಯೇ ಅರಿತುಕೊಳ್ಳತಕ್ಕಂಥ ಒಂದು ಸಮಾರಾಧನೆ.

ಈ ಮಹಾನುಭಾವರ ಅಭಿನಯ ಕಲೆಯನ್ನು ಕುರಿತು ನಾಟ್ಯಕಲಾಪ್ರಪೂರ್ಣ ಬಳ್ಳಾರಿಯ ಟಿ. ರಾಘವ ಅವರು "ನನ್ನ ತರುವಾಯ ನೀವು" ಅಂದ ಮೇಲೆ ಇನ್ನೇನನ್ನು ಹೇಳಲು ಸಾಧ್ಯ. ಇವರ ಅಭಿನಯ ಕಲೆ ಅಷ್ಟು ಪರಿಪಕ್ವವಾಗಿತ್ತು.

ಮಹಾಪುರುಷ ಸಂಶ್ರಯ

ಜೋಳದರಾಶಿ ಶ್ರೀ ದೊಡ್ಡನ ಗೌಡರ ಈ ಸಾಧನೆಯ ಗುಟ್ಟೇನು ? ಅದನ್ನು ತಿಳಿದುಕೊಳ್ಳಲು ಅವರು ಬರೆದಿರುವ ಆತ್ಮಕಥೆ "ನಂದೇ ನಾನೋದಿದೆ" ಗ್ರಂಥವನ್ನು

ಅವಲೋಕಿಸಬೇಕು. ಆಗ ಅರ್ಥವಾಗುತ್ತದೆ ಅದರ ರಹಸ್ಯ. ಬಾಲ್ಯ ವಿದ್ಯಾಭ್ಯಾಸ ಅದೂ ಹಳ್ಳಿಯಲ್ಲಿ ಬಿಟ್ಟರೆ ಅವರು ಯಾವ ಶಾಲಾ ಕಾಲೇಜುಗಳಲ್ಲಿಯೂ ಓದಿ ಪದವಿ ಪದಕಗಳನ್ನಾಗಲಿ, ಡಾಕ್ಟರೇಟುಗಳನ್ನಾಗಲಿ ಪಡೆದವರಲ್ಲ. ಆದರೆ ಅವರ ಇಂದಿನ ಸಾಧನೆಗೆ ಡಾಕ್ಟರೇಟುಗಳ ಮಾಲಿಕೆಯನ್ನೇ ಹಾಕಬೇಕಾಗುವುದು. ಇವರ ಆತ್ಮಕಥೆಯನ್ನೋದಿದ ನನಗೆ ಇವರ ಸಾಧನೆಯ ಮೂಲ ರಹಸ್ಯವೊಂದು ಗೊತ್ತಾಯಿತು. ಅದೆಂದರೆ, ಶಂಕರಾಚಾರ್ಯರು ವಿವೇಕ ಚೂಡಾಮಣಿಯಲ್ಲಿ ಹೇಳಿರುವಂತೆ,

ದುರ್ಲಭಂ ತ್ರಯಮೇವೈತತ್
ದೈವಾನುಗ್ರಹ ಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ
ಮಹಾಪುರುಷ ಸಂಶ್ರಯಃ ॥

ದೈವಾನುಗ್ರಹಕ್ಕೆ ಕಾರಣವಾದ ಮೂರು ವಿಷಯಗಳು ಬಹಳ ಕಷ್ಟ ಸಾಧ್ಯವಾದುದು. ಅದು, ಮನುಷ್ಯನಾಗಿ ಹುಟ್ಟುವುದು, ಮೋಕ್ಷವನ್ನು ಪಡೆಯಬೇಕೆಂಬ ಆಸೆ ಮತ್ತು ಮಹಾಪುರುಷರ ಸಹವಾಸ.

ಈ ಮಹಾನುಭಾವರ ಆತ್ಮಕಥೆಯನ್ನು ಅವಲೋಕಿಸಿದಾಗ ಕಂಡು ಬರುವ ಮುಖ್ಯ ಅಂಶವೆಂದರೆ, ಅವರಿಗೆ ಚಿಕ್ಕಂದಿನಿಂದಲೂ ವರಪ್ರದಾನದಂತೆ ದೊರೆತ ಮಹಾಪುರುಷರ ಸಹವಾಸ. ಇದು ಅತ್ಯಂತವಾದ ಪುಣ್ಯ ಪರಿಪಾಕದ ಫಲವೆಂದೇ ನನ್ನ ಅಭಿಪ್ರಾಯ. ದೈವಾನುಗ್ರಹದ ಮೂರು ಕಾರಣಗಳಲ್ಲಿ ಅತ್ಯಂತ ಮುಖ್ಯವಾದ ಮಹಾಪುರುಷರ ಸಹವಾಸ ಅನನ್ಯ ಸಾಧಾರಣವಾದ ಒಂದು ಸೌಭಾಗ್ಯ. ಈ ಸೌಭಾಗ್ಯ ಶ್ರೀ ದೊಡ್ಡನ ಗೌಡರಿಗೆ ದೊರೆತದ್ದು ದೈವಾನುಗ್ರಹವಲ್ಲದೆ ಮತ್ತೇನು. ಅವರ ಬಾಲ್ಯದಿಂದಲೇ ಅವರಿಗೆ ನಿಷ್ಠಾವಂತ ಅಧ್ಯಾಪಕರು, ಸಜ್ಜನರು, ಸತ್ಪುರುಷರು ವಿದ್ವಾನ್ ವೈ. ನಾಗೇಶ್‌ಶಾಸ್ತ್ರಿಗಳಂಥ ಪಂಡಿತರ ನಿಕಟ ಬಾಂಧವ್ಯ, ಟಿ. ರಾಘವರಂಥ ಕಲಾವಿದರು, ವೇಣುಗೋಪಾಲಾಚಾರ್ಯರಂಥ ಆತ್ಮೀಯ ಮಿತ್ರವರ್ಗ, ವಿರಕ್ತರೂ ವಿದ್ವನ್ಮಣಿಗಳೂ ಆದಂಥ ಅನೇಕ ಸ್ವಾಮಿಗಳು ಮತ್ತು ಸಂತರು, ಮಮತಾಯುಕ್ತ ಬಂಧುವರ್ಗ ಮತ್ತು ಕಷ್ಟ ಸುಖಗಳಿಗೆ ಒದಗಿ ಬಂದಂಥ ಹಳ್ಳಿಯ ಮತ್ತು ಜಿಲ್ಲೆಯ ಮಹಾಜನರು, ಶ್ರೀಮಂತರು, ಹೀಗೆ ನಾನಾ ವಿಧದ ವರ್ಗಗಳ ಅನೇಕ ಜನರ ನಿರಂತರ ಸಹವಾಸದ ಫಲವೇ ಶ್ರೀ ದೊಡ್ಡನ ಗೌಡರಂಥ ಒಬ್ಬ ಮಹಾನುಭಾವನ ಉದಯ. ಅದು ಕನ್ನಡ ನಾಡಿನ ಸೌಭಾಗ್ಯವಾಯಿತು. ಸಂತ–ಸಜ್ಜನ–ಸತ್ಪುರುಷರ ಸಹವಾಸದ ಫಲ ಏನೆಂದು ಹೇಳಲು ಇದಕ್ಕಿಂತ ಬೇರೆ ಏನು ಉದಾಹರಣೆ ಬೇಕು.

ಸಾವಿರ ಪೆಟ್ಟು ಬಿದ್ದು ಒಂದು ಸುಂದರ ವಿಗ್ರಹವಾಗುವಂತೆ ಶ್ರೀ ದೊಡ್ಡನ ಗೌಡರು ರೂಪುಗೊಂಡರೂ ಅವರ ಸ್ವಂತದ್ದು ಏನೂ ಇಲ್ಲವೇ ಎಂದು ಕೇಳಿದರೆ ಅದು ಬಹಳ ಮಟ್ಟಿಗೆ ಇದ್ದದ್ದರಿಂದಲೇ ಅವರಿಗೆ ದೊರೆತ ಸಹವಾಸ ಸಾರ್ಥಕವಾದದ್ದು.

ದೊರೆತಂಥ ವಾತಾವರಣವನ್ನು ನಿಷ್ಠೆಯಿಂದ, ಎಚ್ಚರಿಕೆಯಿಂದ ಮತ್ತು ಪ್ರಾಮಾಣಿಕವಾಗಿ ಉಪಯೋಗಿಸಿಕೊಂಡದ್ದರಿಂದಲೇ ಅವರಿಗೆ ಫಲವೂ ದೊರೆತದ್ದು. ಶ್ರೀಯುತರ ವಿನಯ, ಗುರು-ಹಿರಿಯರಲ್ಲಿನ ಭಕ್ತಿ, ಗೌರವ, ನಿರಂತರವಾಗಿ ಅಂಥವರ ಸಹವಾಸವೇ ಬೇಕೆಂಬ ಒಂದು ಉತ್ಕಟವಾದ ಇಚ್ಛೆ, ಅಂಥವರೆಲ್ಲ ಹೇಳುತ್ತಿದ್ದುದನ್ನು ಕೇಳುವ ಶ್ರದ್ಧೆ, ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ, ಸ್ನೇಹಪೂರ್ಣವಾದ ಬಾಂಧವ್ಯ ಇತ್ಯಾದಿ ಸದ್ಗುಣಗಳನ್ನು ಮೈಗೂಡಿಸಿಕೊಂಡಿದ್ದರು ಇವರು.

ತಮ್ಮ ಬಗೆಗೆ ಒಂದು ಒಳ್ಳೆಯ ಮಾತನ್ನಾಡಿದ ಯಾರನ್ನೂ ಇವರು ಮರೆತಿಲ್ಲ. ತಮ್ಮ ಜೀವನದುದ್ದಕ್ಕೂ ನಡೆಸಿದ ಹೋರಾಟದಲ್ಲಿ ಭಾರಿ ಪ್ರಮಾಣದ ಸಹಾಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟವರನ್ನೂ, ಅಲ್ಪ ಪ್ರಮಾಣದ ಸಹಾಯ ಮಾಡಿದವರನ್ನೂ ಸಹ ಮರೆಯದೆ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಹೃದಯ ಈ ಮಹನೀಯರದು. ಇವರ ಕೀರ್ತಿ ಇಡೀಕನ್ನಡನಾಡಿಗೇ ನಿಲ್ಲದೆ ಆಂಧ್ರಕ್ಕೂ ವ್ಯಾಪಿಸಿ ಅಲ್ಲಿಯೂ ಅತ್ಯಂತ ಜನಪ್ರಿಯರಾಗಿ ಬಿರುದು ಬಾವಲಿಗಳನ್ನು—ಸನ್ಮಾನ ಸಮಾರಂಭಗಳನ್ನು ಪಡೆದರೂ ಅಹಂಕಾರವೆಂಬುದೇ ಇವರ ಬಳಿಗೆ ಸುಳಿಯಲಿಲ್ಲ. ಕೀರ್ತಿ ಹೆಚ್ಚಿದಷ್ಟೂ ಅದಕ್ಕಿಂತ ಹೆಚ್ಚಾಗಿ ವಿನಯವೂ, ಸೌಶೀಲ್ಯವೂ ಬೆಳೆದು ಇವರು ಸ್ಥಿತಪ್ರಜ್ಞರಾದರು. ಒಂದೆರಡು ಪ್ರಸಂಗಗಳಲ್ಲಿ ಕಿರಿಯರಿಂದ ಬುದ್ಧಿ ಹೇಳಿಸಿಕೊಂಡಾಗ ಕೂಡಲೇ ತಮ್ಮ ತಪ್ಪನ್ನು ಕಂಡುಕೊಂಡು ತಿದ್ದಿಕೊಂಡ ಹಿರಿಯ ಗುಣ ಇವರದು. ಇಂಥ ಹಿರಿಯ ಗುಣದ ಹಿರಿಯರು ಎಷ್ಟು ಮಂದಿಯನ್ನು ನಾವು ಕಾಣಲು ಸಾಧ್ಯ.

ಕೀರ್ತಿಕಾಮಿನಿಯ ಬೆನ್ನಟ್ಟಿ ಹೋದವರಲ್ಲ ಇವರು. ಅದೇ ಕೀರ್ತಿಕಾಮಿನಿಯು ಕಾಡಿ–ಬೇಡಿ–ಗೋಗರೆದು ಇವರನ್ನು ವರಿಸಿದರೂ ಸಹ ಅವಳ ಮೋಹಜಾಲದಲ್ಲಿ ಸಿಕ್ಕಿ ಬೀಳದ ಸ್ಥಿತಪ್ರಜ್ಞರು ಇವರು.

ಪ್ರಾರ್ಥನೆಯ ಮಹತ್ತ್ವ :

ಸಭೆ ಸಮಾರಂಭಗಳಲ್ಲಿ ಇವರೇ ಪ್ರಾರ್ಥನೆಯನ್ನು ನೆರವೇರಿಸಿಕೊಡಬೇಕೆಂದು ಅನೇಕರು ಬಲಾತ್ಕರಿಸಿ ತಮ್ಮ ಇಚ್ಛೆಯನ್ನು ನೆರವೇರಿಸಿಕೊಂಡದ್ದುಂಟು. ಇವರ ಪ್ರಾರ್ಥನೆ ಸಮಾರಂಭಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿರುತ್ತಿತ್ತೆಂದರೆ ಅದನ್ನು ಕೇಳಿದ ನಾಸ್ತಿಕರು ಆಸ್ತಿಕರಾದ ಉದಾಹರಣೆಗಳೂ ಉಂಟು. ಕೇವಲ ಪ್ರಾರ್ಥನೆಯೇ ಶ್ರೋತೃಗಳನ್ನು ಭಾವಪರವಶರನ್ನಾಗಿ ಮಾಡುತ್ತಿದ್ದುದಲ್ಲದೆ ನಾಸ್ತಿಕರನ್ನು ಆಸ್ತಿಕರನ್ನಾಗಿ ಪರಿವರ್ತಿಸಿತೆಂದರೆ ಇನ್ನು ಇವರ ಗಮಕ ಕಲಾ ವೈಭವ, ಅಭಿನಯ ಕೌಶಲ, ಕಾವ್ಯರಚನಾ ಕೌಶಲ, ಸಂಗೀತ ಸುಧಾವರ್ಷ ಶ್ರೋತೃಗಳ ಮೇಲೆ ಇನ್ನೆಂಥ ಪರಿಣಾಮವನ್ನುಂಟು ಮಾಡುತ್ತಿತ್ತೆಂಬುದನ್ನು ವಾಚಕರ ಊಹೆಗೇ ಬಿಡುವುದು ಸೂಕ್ತ. ಪರಿಣತಿಯಲ್ಲಿ ನ್ಯೂನತೆಗಳಿದ್ದರೂ ಸಹ ನಿಷ್ಠಾವಂತ ಕಲೋಪಾಸಕನ ಹೃದಯದಿಂದ

ಬರುವ ಯಾವುದೇ ವಾಕ್ಯ, ವಚನ ಅಥವಾ ರಾಗ ಶ್ರೋತೃಗಳನ್ನು ತನ್ಮಯರನ್ನಾಗಿ ಮಾಡುವುದರಲ್ಲಿ ಆಶ್ಚರ್ಯವೇನು ?

ಕೈಲಾಸಂ ಒಂದು ಸಾರಿ ಗೌಡರನ್ನು ಕುರಿತು ಹೇಳಿದರಂತೆ, "ನಿನ್ನ ಯೋಗ್ಯತೆ ನಿನಗೇ ಗೊತ್ತಿಲ್ಲ" ಅಂತ. ಕೈಲಾಸಂ ಇವರ ಕಲಾಭಿಜ್ಞತೆಯನ್ನು ಮೆಚ್ಚಿಕೊಂಡಿದ್ದರು. ತಮ್ಮ ಅಭಿನಯದ ಬಗೆಗೆ ಮತ್ತು ಸಮಯ ಸ್ಫೂರ್ತಿಯ ಬಗೆಗೆ ಅವರು ಹೇಳಿಕೊಂಡಿರುವ ಮಾತುಗಳನ್ನು ಕೇಳಿ : "ಅದೊಂದು ಅಲೌಕಿಕ–ಅಮೃತಾನಂದಮಯ ಸನ್ನಿವೇಶ" ಎಂದು. ಈ ಮಾತುಗಳು ಅವರ ಅನುಪಮ ಭಾವುಕತೆಯನ್ನು ಪ್ರದರ್ಶಿಸುತ್ತದೆ.

ಸಂಸ್ಕೃತದಲ್ಲಿ ಹೇಳುತ್ತಾರೆ : "ಕವಿತಾ ವನಿತಾ ಚೈವ ಸ್ವಯಂಮೇವಾಗತಾ ವರಾ" ಎಂದು. ಅಂದರೆ ಕವಿತೆಯಾಗಲಿ ಅಥವಾ ವನಿತೆಯಾಗಲಿ ತಾನಾಗಿ ಒಲಿದು ಬಂದರೆ ರಸಭೂಯಿಷ್ಟವಾಗುತ್ತದೆ. ಇಲ್ಲದಿದ್ದರೆ ಬೀದಿಯಲ್ಲಿ ಹೋಗುವ ವನಿತೆಯನ್ನು ಕಂಡು ಆಸೆಪಟ್ಟು ಅವಳ ಸೆರಗನ್ನು ಹಿಡಿದು ಎಳೆದರೆ ಎಂಥ ಪ್ರಮಾದವುಂಟಾಗುವುದೋ ಕವಿತೆಯನ್ನು ತಿಣುಕಿ ತಿಣುಕಿ ರಚಿಸಹೋದರೆ ಅಷ್ಟೇ ಪ್ರಮಾದವಾಗುತ್ತದೆ. ಜೋಳದರಾಶಿಯವರ ಗಮಕ ಕಲೆ, ಸಂಗೀತ, ಅಭಿನಯ ಕೌಶಲ, ಕವಿತಾ ಚಾತುರ್ಯ, ವಚನ ರಚನಾ ವೈದಗ್ಧ್ಯ ಎಲ್ಲವೂ "ಸ್ವಯಂ ಮೇ ವಾಗತಾ" ವರವಾಗಿರುವುದರಿಂದಲೇ ಅದು ರಸಿಕ ಶ್ರೋತೃಗಳನ್ನು ತನ್ಮಯರನ್ನಾಗಿಸುವಲ್ಲಿ ಯಶಸ್ವಿಯಾದುದು.

ಒಂದು ದೇಶದ ಔನ್ನತ್ಯವನ್ನು ಅಲ್ಲಿನ ಸಾಹಿತ್ಯ, ಸಂಗೀತಾದಿಕಲೆಗಳು, ವಿಜ್ಞಾನ ಮತ್ತು ಅಲ್ಲಿನ ಪ್ರಜೆಗಳು ಎಷ್ಟು ಸುಸಂಸ್ಕೃತರಾಗಿರುವರು ಎಂಬುದನ್ನು ಗಮನಿಸಿ ಅಳೆಯಬೇಕೆಂದು ಬಲ್ಲವರು ಹೇಳುತ್ತಾರೆ. ಸದ್ಯಕ್ಕೆ ನಾವು ಈ ಮಾತನ್ನು ಬಳ್ಳಾರಿ ಜಿಲ್ಲೆಗೆ ಹೊಂದಿಸಿ ಮಾತನಾಡೋಣ.

ಬಳ್ಳಾರಿ ಜಿಲ್ಲೆ 1953ನೇ ಏಪ್ರಿಲ್ 2ನೇ ತಾರೀಖು ಆಗಿನ ಮೈಸೂರು ರಾಜ್ಯಕ್ಕೆ ಸೇರಿತು. ಕರ್ನಾಟಕ ಮತ್ತು ಆಂಧ್ರಗಳ ಸಂಧಿಯ ಸ್ಥಳದಲ್ಲಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳೆರಡಕ್ಕೂ ಪ್ರಾಧಾನ್ಯವಿದೆ. ಅಲ್ಲದೆ ಕರ್ನಾಟಕದ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪೆಯೂ (ವಿಜಯನಗರ) ಈ ಜಿಲ್ಲೆಯಲ್ಲಿಯೇ ಇರುವುದು ಕೂಡ. ಈ ಕಾರಣದಿಂದ ಈ ಜಿಲ್ಲೆ ಸಾಹಿತ್ಯ, ಸಂಗೀತಾದಿ ಕಲೆಗಳಲ್ಲಿ ಖ್ಯಾತ ವಿದ್ವಾಂಸರ ಸಮೂಹದಿಂದ ಕೂಡಿ ಜೊತೆಗೆ ರಸಿಕ ಪ್ರಜೆಗಳಿಂದಲೂ ಕೂಡಿ ಹಿಂದಿನ ಕಾಲದಿಂದಲೂ ಶೋಭಿಸುತ್ತಿದೆ. ಇಂಥ ಜಿಲ್ಲೆಯಲ್ಲಿಯೇ ಜನ್ಮತಾಳಿ, ಸುಂದರ ವಾತಾವರಣದಲ್ಲಿ ಬೆಳೆದ ಮಹಾನುಭಾವರಾದ ಶ್ರೀ ಜೋಳದರಾಶಿ ದೊಡ್ಡನ ಗೌಡರು ಕನ್ನಡ ತಾಯಿಯ ಅಮೂಲ್ಯವಾದ ಆಭರಣವಾಗಿ ಶೋಭಿಸುತ್ತಿದ್ದಾರೆ.

ನಾಡಿನ ಅದೃಷ್ಟ :

ಅವರ ಆತ್ಮಕಥೆಯನ್ನೋದಿದಾಗ ಗೌಡರಿಗೆ ಸ್ವಾಭಾವಿಕವಾಗಿ ಬಂದ ನಾಟಕದ ಹುಚ್ಚು, ಗಮಕದ ಗೀಳು, ಸಾಹಿತ್ಯ-ಕಲೆಗಳ ಆಕರ್ಷಣೆಗಳಿಂದ ಸಾಂಸಾರಿಕ ಜವಾಬ್ದಾರಿಗಳಿಂದ ಸ್ವಲ್ಪ ದೂರವಾಗಿದ್ದರೂ ಸಂಸಾರ ಮಾತ್ರ ಇವರನ್ನು ಬಿಡದೆ ಕಾಡಿಸುತ್ತಲೇ ಇತ್ತೆಂದು ಭಾಸವಾಗುತ್ತದೆ. ನಾಟಕಾದಿ ಕಾರ್ಯಕ್ರಮಗಳಿಂದ ಹಳ್ಳಿಯನ್ನು ಬಿಟ್ಟು ಹೊರ ಊರು-ಕೇರಿಗಳಲ್ಲಿ ಓಡಾಡುತ್ತಿದ್ದರೂ ಸಂಸಾರದ ಹೊಣೆಗಾರಿಕೆಯನ್ನು ಮರೆಯದೆ ಯಥಾ ಶಕ್ತಿ ನಿರ್ವಹಿಸುತ್ತಿದ್ದರು. ಎಂಥವರಿಗೇ ಆಗಲಿ ಕಟ್ಟಿಕೊಂಡ ಸಂಸಾರದಿಂದ ದೂರವಿರುವುದು ಕಷ್ಟವೇ ಆಗುತ್ತದೆ. ಅದರ ನೋವು ನಲಿವುಗಳಲ್ಲಿ ಸಿಲುಕಿ ಪರಿತಪಿಸಿದ್ದೂ ಉಂಟು. ಆದರೆ ದೈವಯೋಗದಿಂದ ಅದಾವುದೂ ಗೌಡರ ಸಾಹಿತ್ಯ-ಕಲೆಗಳ ಮಾರ್ಗದಲ್ಲಿ ಹೆಚ್ಚು ಅಡ್ಡಿ-ಆತಂಕಗಳನ್ನುಂಟು ಮಾಡಲಿಲ್ಲವೆಂದು ಹೇಳಬಹುದು. ಅದು ನಾಡಿನ ಅದೃಷ್ಟ.

ಇವರ ದೇವತಾಭಕ್ತಿ-ಪೂಜೆಗಳು ಬಹಳ ಪ್ರಮಾಣದಲ್ಲಿಯೇ ಸಾಗಿದೆಯೆಂದು ಹೇಳಬಹುದು. "ಆನಂದಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ" ಎಂಬ ಆರ್ಯೋಕ್ತಿ ಇವರ ಕಲಾ ಜೀವನದಲ್ಲಿ ಅರ್ಥಪೂರ್ಣವಾಗಿ ಕಾಣುತ್ತದೆ. ಜನರಿಗೆ ಆನಂದವನ್ನುಂಟುಮಾಡುವುದೇ ಈಶ್ವರನ ಪೂಜೆ. ಅಂಥ ಪೂಜೆಯನ್ನು ಪ್ರಾಜ್ಞರು ಮಾಡಬೇಕೆಂದು ಆ ವಾಕ್ಯ ಹೇಳುತ್ತದೆ. ಪ್ರಾಜ್ಞರಾದ ಗೌಡರು ಅನೇಕ ದಶಕಗಳ ಕಾಲ ನಾಡಿನಾದ್ಯಂತ ಸಂಚರಿಸಿ ಅಂಥ ಆನಂದವನ್ನು ಜನ ಸಮೂಹಕ್ಕೆ ಒದಗಿಸಿಕೊಟ್ಟಿದ್ದಾರೆ. ಅವರನ್ನು ಭಕ್ತಿ ಪರವಶರನ್ನಾಗಿ ಮಾಡಿದ್ದಾರೆ. ಆನಂದ ತುಂದಿಲರನ್ನಾಗಿ ತನ್ಮಯಗೊಳಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ಈಶ್ವರನ ಪೂಜೆ ಇನ್ನೇನಾಗಬೇಕು.

ಶ್ರೀ ದೊಡ್ಡನಗೌಡರಿಗೀಗ 80 ವರ್ಷಗಳಾಗಲಿದೆ. ಕರ್ನಾಟಕ ಮತ್ತು ಆಂಧ್ರ ಸಾರಸ್ವತ ಪ್ರಪಂಚದಲ್ಲಿ ಯಥಾಶಕ್ತಿ ಸೇವೆಯನ್ನು ಸಲ್ಲಿಸಿ, ಕಲೋಪಾಸಕರಾಗಿ ಜನತೆಯನ್ನು ಆನಂದಗೊಳಿಸಿ ಅನುಪಮವಾದ ಸಾರ್ಥಕ ಜೀವನವನ್ನು ನಡೆಯಿಸಿದ್ದಾರೆ. ಅವರದೇ ಜೀವನವನ್ನು ಅವರು ಸ್ಮರಿಸಿಕೊಂಡಾಗ ಅದು ಅವರಿಗೆ ತೃಪ್ತಿ-ಸಮಾಧಾನ-ಶಾಂತಿಗಳನ್ನು ತಂದುಕೊಡುವುದು ಖಂಡಿತ. ಇದಕ್ಕಿಂತ ಇನ್ನೇನಾಗಬೇಕು. ಭಗವಂತನು ಅವರಿಗೆ ಆಯುಷ್ಯವನ್ನು-ಜೀವನದಲ್ಲಿ ಶಾಂತಿ ಸಮಾಧಾನಗಳನ್ನು ಕರುಣಿಸಿ, ನಾಡು ಮತ್ತು ನುಡಿಯ ಸೇವೆಗಾಗಿ ನಮ್ಮೊಂದಿಗೆ ಬಹಳ ಕಾಲ ಇಟ್ಟಿರಲೆಂದು ಪ್ರಾರ್ಥಿಸಿ, ಈ ನನ್ನ ಲೇಖನವನ್ನು ಮುಗಿಸುತ್ತೇನೆ.

ದೊಡ್ಡನಗೌಡೇತಿ ವಿಖ್ಯಾತೋ
ಕಲಾಭಿಜ್ಞೋ ಮಹಾನ್ ಸುಧೀಃ ।
ರಾಜತೇ ಕೀರ್ತಿಮಾನ್ ಲೋಕೇ
ಕರ್ನಾಟಕುಲಬಾಂಧವಃ ॥

—★—

ಸ್ನೇಹನಿಧಿ

ಶ್ರೀ ಪಿ. ಸುಬ್ಬಾಶಾಸ್ತ್ರಿ

ಪ್ರಥಮ ಪರಿಚಯ

1933 ನೆಯ ಇಸ್ವಿಯಲ್ಲಿ ನಾನು ಬಳ್ಳಾರಿಯಲ್ಲಿ ಶಿಕ್ಷಕರ ತರಬೇತಿ ಕೇಂದ್ರದಲ್ಲಿದ್ದೆ. ಅಂದಿನ ಮುನಿಸಿಪಲ್ ಉನ್ನತ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದವರು ಅಲ್ಲಿಯ ಶಿಕ್ಷಕರಾದ ಕೀ. ಶೇ. 'ಮಧುರಕವಿ' ಕಪ್ಪಗಲ್ಲು ಸಂಜೀವ ಮೂರ್ತಿರಾಯರು ರಚಿಸಿದ "ರುಕ್ಮಿಣೀ ಕಲ್ಯಾಣ" ಎಂಬ ತೆಲುಗು ನಾಟಕ ಪ್ರದರ್ಶಿಸಲಾಯಿತು. ಈ ನಾಟಕದಲ್ಲಿ ಮಿತ್ರರು ಶ್ರೀ ಜೋಳದರಾಶಿ ದೊಡ್ಡನಗೌಡರು ಶ್ರೀ ಕೃಷ್ಣನ ಪಾತ್ರ ಧರಿಸಿ ಯಶಸ್ವಿಯಾಗಿಸಿದರು. ಆ ನಾಟಕದಲ್ಲಿ ನಾನೂ ಕೂಡ ಒಬ್ಬ ಸಾಮಂತರಾಜನ ಪಾತ್ರವನ್ನು ಅಭಿನಯಿಸಿದೆ. ಇದರಲ್ಲಿಯೇ ನನಗೂ, ಗೌಡರಿಗೂ ಆದ ಪ್ರಥಮ ಪರಿಚಯ.

"ಕಲಾಪ್ರಪೂರ್ಣ" ಬಳ್ಳಾರಿ ರಾಘವ ಅವರು ಪ್ರದರ್ಶಿಸಿದ "ಚಂದ್ರಗುಪ್ತ" ನಾಟಕದಲ್ಲಿ ಶ್ರೀಮಾನ್ ಗೌಡರು ಚಂದ್ರಗುಪ್ತನಾಗಿ; ನಾನು "ಕಾತ್ಯಾಯನ" (ನಂದ ರಾಜರ ಮಂತ್ರಿ) ಪಾತ್ರವಹಿಸಿ, ರಾಘವರ ಮೆಚ್ಚಿಗೆಯನ್ನು ಪಡೆದೆವು.

ಜೋಳದ ರಾಶಿಯಲ್ಲಿ ಶ್ರೀಮಾನ್ ಗೌಡರು ನಡೆಸಿದ ಬಳ್ಳಾರಿ ಜಿಲ್ಲಾ ನಾಟಕ ಕಲಾಪರಿಷತ್ತಿನಲ್ಲಿ ಹಲವಾರು ಸಂದರ್ಭಗಳಲ್ಲಿ ನಟಿಸಿದ ನಂತರ ಗೌಡರಿಗೂ ನನಗೂ ಹೆಚ್ಚಿನ ಆತ್ಮೀಯತೆ ಬೆಳೆಯಿತು. ಈ ಸಮಾರಂಭಕ್ಕೆ "ನಟಕೇಸರಿ" ಶ್ರೀ ಗರುಡ ಸದಾಶಿವರಾಯರು, ಗದಗ; ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. 'ವಿನೋದ ರತ್ನಾಕರ' ಶ್ರೀ ಗುಬ್ಬಿವೀರಣ್ಣನವರು ಈ ಪರಿಷತ್ತಿನಲ್ಲಿ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದರು. ಈ ಸಮಾರಂಭವು ಬಹಳ ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಯಿತು. ಈ ಸಂದರ್ಭವಾಗಿ "ಕಲೆ" ಎಂಬ ಪುಸ್ತಕವನ್ನು ಹೊರಡಿಸಲಾಯಿತು. ಈ ಪುಸ್ತಕದಲ್ಲಿ ಬಳ್ಳಾರಿ ಜಿಲ್ಲೆಯ ನಟರ ಸಂಗ್ರಹ ಜೀವನ ಚರಿತ್ರೆಯನ್ನು ಪ್ರಚುರಿಸಲ್ಪಟ್ಟಿದೆ. ಅನಂತರ ಶ್ರೀ ಗೌಡರು ಬಳ್ಳಾರಿ ರಾಘವರ ಸ್ಮಾರಕ ಸಂಘಕ್ಕೆ ಅಧ್ಯಕ್ಷರಾಗಿಯೂ, ಅದರಲ್ಲಿ ನಾನೂ ಸಹಾ ಕಾರ್ಯನಿರ್ವಾಹಕ ಸದಸ್ಯನಾಗಿ ಬಳ್ಳಾರಿಯಲ್ಲಿ ಶ್ರೀ ರಾಘವ ಸ್ಮಾರಕ ಮಂದಿರ ನಿರ್ಮಿಸಲು ಶ್ರಮಿಸಿದ್ದಾಯಿತು. ರಾಯದುರ್ಗದಲ್ಲಿ ಶ್ರೀ ರಾಘವರ ಸ್ಮಾರಕ ನಿಧಿಗಾಗಿ ಗೌಡರಿಂದ ರಚಿಸಲ್ಪಟ್ಟ "ಕನಕದಾಸ" ಎಂಬ ಕನ್ನಡ ನಾಟಕವನ್ನು ಪ್ರದರ್ಶಿಸಿ, ನಾಟಕದ ಮೂಲಕ ಬಂದ ಹಣವನ್ನು ನಿಧಿಗೆ ಕೊಡಲಾಯಿತು. ಇದು ನಮ್ಮ ಪ್ರಥಮ ಪ್ರಯತ್ನ.

ಬಳ್ಳಾರಿ ಜಿಲ್ಲೆಯ ನಟರನ್ನು ಒಂದು ಕಡೆ ಸಮೀಕರಿಸಿ, ಬಳ್ಳಾರಿಜಿಲ್ಲೆ ನಾಟಕ ಸಂಘವನ್ನು ಸ್ಥಾಪಿಸಿ ಕಲೆಯ ಅಭಿವೃದ್ಧಿಗಾಗಿ ದುಡಿಯಬೇಕೆಂಬ ಮಹದಾಶೆ ನನಗೂ ಮತ್ತು ಗೌಡರಿಗೂ ತುಂಬಾ ಇದ್ದಿತು. ಆ ಸಮಯದಲ್ಲಿ ಭಾಷಾರಾಷ್ಟ್ರ ವಿಭಜನೆಯಾಗಿ, ಬಳ್ಳಾರಿ ಜಿಲ್ಲೆಯಿಂದ ನಮ್ಮ ರಾಯದುರ್ಗ, ಆದವಾನಿ, ಮತ್ತು ಆಲೂರು ತಾಲೂಕುಗಳನ್ನು ಬೇರ್ಪಡಿಸಿ ಆಂಧ್ರ ರಾಷ್ಟ್ರಕ್ಕೆ ಸೇರಿಸಲಾಯಿತು. ಅಂದಿನಿಂದ ಬಳ್ಳಾರಿಯ ಕಲೆಗಾರರಿಗೂ, ನಮಗೂ ಕಲೆಯ ಸೇತುವೆ ಕಡಿದಂತಾಯ್ತು. ಆದರೂ ಗೌಡರ ಮೈತ್ರಿಯಿಂದ ನಾನೂ, ನಮ್ಮ ಮಿತ್ರರು : ಕೀ. ಶೇ|| ಕಲುಗೋಡು ರಾಮರಾಯರು, ಗೌಡರು ಬರೆದ "ಕ್ರಾಂತಿ ಪುರುಷ ಬಸವಣ್ಣ" ಎಂಬ ನಾಟಕದಲ್ಲಿ ಭಾಗ ವಹಿಸಿ, ಹೊಸಪೇಟೆ, ಕೊಟ್ಟೂರು, ಮತ್ತು ಆದವಾನಿಯಲ್ಲಿ ಪ್ರದರ್ಶಿಸಿ, ಈ ನಾಟಕಗಳ ಮೂಲಕ ಬಂದ ಹಣವನ್ನು ಶ್ರೀ ರಾಘವ ಸ್ಮಾರಕ ನಿಧಿಗೆ ಕೊಡಲಾಯಿತು. ಶ್ರೀ ರಾಘವ ಸ್ಮಾರಕನಿಧಿಗೆ ಬಳ್ಳಾರಿಯಲ್ಲಿ "ಬೃಹನ್ನಲ" ಮತ್ತು "ಚಿತ್ರನಳೀಯ" ಎಂಬ ಎರಡು ತೆಲುಗು ನಾಟಕಗಳನ್ನು ಚೀಫ್ ಜಸ್ಟೀಸ್ ಶ್ರೀಮಾನ್ ರಾಜಮನ್ನಾರ್ ಮತ್ತು ಆಗಿನ ಸಚಿವರಾದ ಶ್ರೀ ಬೆಜವಾಡ ಗೋಪಾಲರೆಡ್ಡಿ ಇವರ ನೇತೃತ್ವದಲ್ಲಿ, ಗೌಡರು ದುರ್ಯೋಧನನಾಗಿ, ನಾನು ಭೀಮನಾಗಿ, ಮತ್ತು ಕಲುಗೋಡು ರಾಮರಾಯರು 'ಕೀಚಕನಾಗಿ' ಚಿತ್ರನಳೀಯದಲ್ಲಿ ಗೌಡರು "ನಳ ಚಕ್ರವರ್ತಿ"ಯಾಗಿ, ನಾನು "ಸುದೇವನಾಗಿ" ನಟಿಸಿದೆವು. ಚಿತ್ರನಳೀಯ ನಾಟಕವಲ್ಲಿ ಸುಪ್ರಸಿದ್ಧ ಆಂಧ್ರ ನಟರಾದ "ಬಂದಾ ಕನಕ ಲಿಂಗೇಶ್ವರರಾವು" ಇವರು "ಬಾಹುಕನ" ಪಾತ್ರವನ್ನು ಧರಿಸಿದ್ದರು.

ನಂತರ ನಾನು ರಾಯದುರ್ಗದಲ್ಲಿ ಶ್ರೀ ಶಂಕರ ಗುರುಭಕ್ತ ಮಂಡಳಿಯನ್ನು ಸ್ಥಾಪಿಸಿ, ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳ (ಶೃಂಗೇರಿ ಶಾರದಾ ಪೀಠ)ವರ ಅನುಗ್ರಹದಿಂದ "ಶಂಕರ ಮಠ"ವನ್ನು ಸ್ಥಾಪಿಸಿದ್ದಾಯಿತು. ನಮ್ಮ ರಾಯದುರ್ಗದ ಶಂಕರ ಗುರುಭಕ್ತ ಮಂಡಳಿಯು ಪರವಾಗಿ ಶ್ರೀ ಗೌಡರನ್ನು ಸನ್ಮಾನಿಸಬೇಕೆಂಬ ಶ್ರೀ ಶಂಕರರ ಪ್ರೇರಣೆಯಿಂದ ಅವರನ್ನು ಆಹ್ವಾನಿಸಿದೆವು. ಈ ಸನ್ಮಾನ ಸಮಾರಂಭಕ್ಕೆ ರಾಯದುರ್ಗದ ಡಿಪ್ಯೂಟಿ ತಹಸಿಲ್ದಾರರಾದ ಪಿ. ಹೆಚ್. ಬಸವನ ಗೌಡರು ಬಹಳ ಸಹಾಯ ಮಾಡಿದರು. ಗೌಡರ ಸನ್ಮಾನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಆದರೆ ಅವರು ತಮಗೆ ಸಮರ್ಪಿಸಿದ ಸನ್ಮಾನ ಕಾಣಿಕೆಯನ್ನು, ಮತ್ತು ಅದಕ್ಕೆ ಮತ್ತಷ್ಟು ಸೇರಿಸಿ ಶ್ರೀ ಶಂಕರರ ಸೇವೆಗಾಗಿ ಸಮರ್ಪಿಸಿದರು. ಇಷ್ಟೇ ಅಲ್ಲದೆ, ಕಲ್ಯಾಣದುರ್ಗ ತಾಲೂಕು ವೇಪಲ ಪರ್ತಿಯಲ್ಲಿ ಶ್ರೀ ರಂಗನಾಥ ಸ್ವಾಮಿ ಜಾತ್ರೆಗೆ ಕೂಡ ಶ್ರೀ ಗೌಡರನ್ನು ಆಹ್ವಾನಿಸಿ, ನಮ್ಮ ಮಿತ್ರರಾದ ಕಲುಗೋಡು ರಾಮರಾಯರು, ಮತ್ತು ನಾನು ಸನ್ಮಾನಿಸಿದೆವು.

ಈ ರೀತಿಯಾಗಿ ಗೌಡರಿಗೂ ಮತ್ತು ನನಗೂ ಸುಮಾರು 50 ವರ್ಷಗಳಿಂದ ಮೈತ್ರಿಯೂ, ಕಲಾ ಬಾಂಧವ್ಯವೂ ಇದೆ. ಶ್ರೀಮಾನ್ ದೊಡ್ಡನ ಗೌಡರು ನಾಗರಿಕ ವ್ಯಕ್ತಿ, ಸ್ಫುರದ್ರೂಪಿ; ಅವರ ಶ್ರಾವ್ಯವಾದ ಗಾನಸುಧೆಯನ್ನು ಪ್ರೇಕ್ಷಕ ಲೋಕಕ್ಕೆ ನೀಡಿ ಮುಗ್ಧಗೊಳಿಸುತ್ತಿದ್ದರು. ಬಹಳ ಸರಳಜೀವಿಗಳು. ಮಿತ್ರರೊಂದಿಗೆ ಕಾಲ ಕಳೆಯಲು ಅವರಿಗೆ ಬಹಳ ಕುತೂಹಲ, ಮಹಾತ್ಯಾಗಿಗಳು. ಈ ಇಳಿ ವಯಸ್ಸಿನಲ್ಲಿ ಕೂಡ ಅವರು ತಮ್ಮ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡು, ಗ್ರಂಥ ರಚನೆಗಳನ್ನು ಸಾಗಿಸುತ್ತಿರುವುದು ಶ್ಲಾಘನೀಯವಾದ ವಿಷಯ. ಇವರು ಬರೆದ ಕಾವ್ಯಗಳನ್ನೆಲ್ಲಾ ತಮ್ಮ ಹಿರಿಯರಿಂದ ನಿರ್ಮಿಸಲ್ಪಟ್ಟ ಜೋಳದ ರಾಶಿಯಲ್ಲಿ ನೆಲೆಸಿದ ಶ್ರೀ ರಾಮೇಶ್ವರನಿಗೆ ಅಂಕಿತವನ್ನು ಕೊಟ್ಟಿದ್ದಾರೆ. ಈವರೆಗೂ ಶ್ರೀ ಗೌಡರಿಗೂ, ನನಗೂ, ಪರಸ್ಪರ ಪ್ರೀತಿ, ಮೈತ್ರಿಗಳ ಸಂಬಂಧದಿಂದ ಒಂದು ವರ್ಷದಲ್ಲಿ ಮೂರು ನಾಲ್ಕುಸಲ ಜೋಳದರಾಶಿಯಲ್ಲಿ ಅವರನ್ನು ಭೇಟಿಯಾಗುತ್ತೇನೆ. ಇವರು ಕಲಾ ಕೋವಿದರು. ಸುಪ್ರಸಿದ್ಧ ನಟರು, ನಾಟಕಕಾರರು, ಕವಿಗಳು ಮತ್ತು ಗಮಕ ಕಲಾ ನಿಧಿಗಳು, ಎಂದು ಪ್ರಸಿದ್ಧವಾಗಿ ಕರ್ನಾಟಕ ರಾಷ್ಟ್ರದಲ್ಲಿ ಗುಲ್ಬರ್ಗಾ ಯೂನಿವರ್ಸಿಟಿಯಿಂದ ಡಾಕ್ಟರೇಟ್ ಬಿರುದನ್ನು ಪಡೆದಿದ್ದಾರೆ. ಇವರು ಧನ್ಯರು; ಮತ್ತು ಮಾನ್ಯರು. ಇಂಥವರ ಮೈತ್ರಿಯಿಂದ ನಾವು ಕೂಡ ಧನ್ಯರಾಗಿದ್ದೇವೆ. ಇದು ನನ್ನ ಪುರಾಕೃತ ಪುಣ್ಯವೆಂದು ಭಾವಿಸುತ್ತೇನೆ.

ಅಸಾಮಾನ್ಯ ಬದುಕು

ಶ್ರೀಮತಿ ದಾಕ್ಷಾಯಿಣಿ ಜಯದೇವಪ್ಪ

ನನಗೆ ಹಿರಿಯ ಸಾಹಿತಿ, ಕಲಾವಿದ, ಶರಣ ಶ್ರೀ ದೊಡ್ಡನಗೌಡರ ಪರಿಚಯವಾದದ್ದು 8 ವರ್ಷಗಳ ಹಿಂದೆ ಶಿವಮೊಗ್ಗ ಬೆಕ್ಕಿನಕಲ್ಮಠದ ಶ್ರೀಗಳ ಸನ್ನಿಧಿಯಲ್ಲಿ. ಪರಿಚಯ ಬೆಳೆದಂತೆ ಆತ್ಮೀಯತೆ ಹೆಚ್ಚಾಗಿ ನನ್ನ ವಚನಗಳ ಲೋಪ-ದೋಷಗಳನ್ನು ತಿದ್ದಿ ಸರಿದಾರಿ ತೋರಿಸುತ್ತಾ ತಾವೇ ರಚಿಸಿದ ಕೃತಿಗಳಲ್ಲಿ ಕೆಲವನ್ನು ನನಗೆ ನೀಡಿದರು. ಅವುಗಳಲ್ಲಿ "ನಂದೇ ನಾನೋದಿದೆ", "ಬಯಲುಗಳಿಕೆಯ ಬೆಳಗು", "ಸಮದರ್ಶಿ ಬಸವಣ್ಣ", "ಭಕ್ತಿ ಸಂಜೀವಿನಿ," "ನೀವೇನಂತೀರಿ", "ಗೌಡತಿ ಬರಲಿಲ್ಲ", ಇನ್ನು ಮುಂತಾದವು. "ನಂದೇ ನಾನೋದಿದೆ" ಪುಸ್ತಕದಲ್ಲಿ ಅವರ ಸಮಗ್ರ ಬದುಕಿನ ತಿರುಳನ್ನು ಅಲ್ಲಿ ಕಾಣಬಹುದು. ಬದುಕೆಲ್ಲಾ ಕಲಾಮಯವಾಗೇ ತುಂಬಿರುವುದನ್ನು, ಧಾರವಾಡದ ಮೃತ್ಯುಂಜಯಪ್ಪಗಳ, ಎರ್ರಿತಾತನವರ ಕರುಣೆಯ ಕೂಸಾಗಿ ಶರಣ ತತ್ವದಲ್ಲೇ ಭಕ್ತಿಯಿಂದ ಬದುಕಿ, ಬಾಳಿ, ಹಣ್ಣಾಗಿ ನಿಂತಿರುವುದನ್ನು ಕಾಣಬಹುದು.

ಕಲಾವಿದರಾಗಿ ಬಾಳುತ್ತಿದ್ದ ಶ್ರೀ ದೊಡ್ಡನಗೌಡರು ಶರಣತತ್ವದ ಅತ್ಯುನ್ನತ ಮೇರುಕೃತಿ "ಶೂನ್ಯಸಂಪಾದನೆ"ಗೆ ವ್ಯಾಖ್ಯಾನ ಬರೆದಿರುವುದನ್ನು ಅವಲೋಕಿಸಿದರೆ

ಜೀವನವಿಡೀ ಅಸಾಮಾನ್ಯ ಬದುಕಿನಲ್ಲೇ ಬದುಕಿದ್ದಾರೆ ಎನಿಸುತ್ತದೆ. ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ ಶರಣನಾರಿಗೂ ಅಂಜುವವನಲ್ಲ ಎಂಬ ಬಸವಣ್ಣನವರ ನುಡಿಯನ್ನು ಇವರ ನಡೆಯಲ್ಲಿ ಕಾಣಬಹುದು. ಯಾವ ಮಠಾಧಿಪತಿಗಳಲ್ಲೇ ಆಗಲಿ, ಹಿರಿ, ಕಿರಿಯ ರಾಜಕಾರಣಿಗಳಲ್ಲೇ ಆಗಲಿ, ಅಥವಾ ಇನ್ನು ಯಾರಲ್ಲೇ ಆಗಲಿ ದೋಷ ಕಂಡುಬಂದರೆ ನಿಷ್ಠುರವಾಗಿ ನುಡಿದು, ಉಗ್ರ ವಾಗಿ ಖಂಡಿಸುವ ಇವರ "ಧೀ" ಶಕ್ತಿಗೆ ಆಶ್ಚರ್ಯವೆನಿಸುತ್ತದೆ.

ಈಗ್ಗೆ 3 ತಿಂಗಳ ಹಿಂದೆ ನಮ್ಮನ್ನು ಜೋಳದರಾಶಿಗೆ ಆಹ್ವಾನಿಸಿದ್ದರು. ಅಲ್ಲಿಗೆ ಹೋದಾಗ ನಾನು ಮಗಳೆಂಬ ಭಾವನೆಯಿಂದ ಆಧರಿಸಿ, ಉಪಚರಿಸಿ, ಸತ್ಕರಿಸಿ, ಹಬ್ಬದೂಟದೊಂದಿಗೆ ಸಹಭೋಜನ ನಡೆಸಿ ಶಾಲು, ಕುಬುಸಗಳನ್ನಿತ್ತು ಬೀಳ್ಕೊಟ್ಟ ದೃಶ್ಯ ಹೃದಯಂಗಮ. ಚೆಳ್ಳಗುರಿಕೆ ಸುದ್ದಿ ಎತ್ತಿದಾಕ್ಷಣ ಅಣ್ಣ ಚೆನ್ನವೀರನಗೌಡರನ್ನು ಜೊತೆಮಾಡಿ, ಎತ್ತಿನಬಂಡಿಯಲ್ಲಿ ಎರ್ರಿತಾತಗಳ ದರ್ಶನಾಶೀರ್ವಾದ ಪಡೆಯುವಂತೆ ಮಾಡಿದ್ದು ಅವರು ತೋರುತ್ತಿರುವ ವಾತ್ಸಲ್ಯದ ಪ್ರತೀಕವೆಂಬುದನ್ನು ಮರೆಯಲಾರೆ.

"ಯಾರಿಗೀಯಲೀ ಕಲಾನಿಧಿಯ" ಎಂಬ ಅವರ ಮನದಾಳದ ನೋವಿನ ತರಂಗ ಗಳನ್ನು ನಾವೆಲ್ಲಾ ಕೇಳಬೇಕಾಗಿ ಬಂದಿರುವುದು ನಮ್ಮ ದೌರ್ಭಾಗ್ಯ. ಅವರು ತಮ್ಮ ಕಲಾಸಿರಿಯನ್ನು, ಗಮಕ, ಸಂಗೀತ, ಸಾಹಿತ್ಯ ಮುಂತಾದುವನ್ನು ಮನಃಪೂರ್ವಕ ವಾಗಿ ಅನ್ಯರಿಗೆ ಧಾರೆ ಎರೆದು ಕಲಾದೇವಿಗೆ ಆರದ, ಕಲೆಯ ನಂದಾದೀಪವನ್ನು ಹಚ್ಚಲು ಕಾತರರಾಗಿರುವಾಗ ಅವರಿಗೆ ಯಾರೂ ದೊರೆಯದಿರುವುದು ನಮ್ಮೆಲ್ಲರ ದೌರ್ಬಲ್ಯದ ಪ್ರತಿಬಿಂಬವೆನಿಸುತ್ತದೆ. ಜೀವನದಲ್ಲಿ ಕಹಿ, ಸಿಹಿಗಳನುಂಡು, ಪ್ರಶಸ್ತಿಗಳ ಸರಮಾಲೆಯನ್ನು ಹೊತ್ತು "ಶೂನ್ಯಸಂಪಾದನೆ ಎಂದರೆ ದೊಡ್ಡನ ಗೌಡರು, ದೊಡ್ಡನಗೌಡರೆಂದರೆ ಶೂನ್ಯಸಂಪಾದನೆ" ಎಂಬಂತೆ ಕರ್ನಾಟಕದ ಉದ್ದಗಲಕ್ಕೂ ಪ್ರವಚನದ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಇವರಿಗೆ ಅಣ್ಣ, ಜಗದಣ್ಣ, ಬಸವಣ್ಣನವರ ಶುಭಾಶೀರ್ವಾದ ಜೀವನಪರ್ಯಂತ ಎಂದೆಂದೂ ಇರಲೆಂದು ಅಣ್ಣ ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇನೆ.

—★—

ಧನ್ಯ ಜೋಳದರಾಶಿ ; ಮಾನ್ಯ ಜೋಳದರಾಶಿ

ಎಂ. ಶರಭಯ್ಯ

'ಸರ್ವಜ್ಞ'ನೆಂದು ಅನ್ವರ್ಥನಾಮದಿಂದ ಪ್ರಖ್ಯಾತನಾದ ಸರ್ವಜ್ಞ ಕವಿಯ ಅನುಭವದ ಅಮೃತೋಕ್ತಿ : "ಇದ್ದ ಗುಣವನು ಬಿಟ್ಟು ಇಲ್ಲದಾರೋಪಿಸುವ ಗದ್ದಲವ ಮಾಡಿ ಬೊಗುಳುವಾ ಕುನ್ನಿತಾ। ಸದ್ದಿಲ್ಲದುರಗ ಸರ್ವಜ್ಞ" ಎಂಬ ಎಚ್ಚರಿಕೆಯ ನುಡಿಯನ್ನು ತುಂಬಾ ಗಮನದಲ್ಲಿಟ್ಟುಕೊಂಡು ಶಬ್ದ ಚಿತ್ರ ಬಿಡಿಸುವೆ.

ಜೋಳದರಾಶಿ, ಮಿಂಚೇರಿ—ಈ ಊರುಗಳು ಬಳ್ಳಾರಿ ತಾ॥ಗೆ ಸೇರಿದ್ದು, ಒಂದಕ್ಕೊಂದು ಸುಮಾರು 15 ಮೈಲು ಅಂತರದಲ್ಲಿವೆ. ಶ್ರೀಯುತ ಕೆಂಗಲ್ಲು ದೊಡ್ಡನ ಗೌಡರ ಜನ್ಮಸ್ಥಳ ಜೋಳದರಾಶಿ. ನನ್ನ ಹುಟ್ಟೂರು ಬಳ್ಳಾರಿ ಜಿಲ್ಲೆ ಸಿರುಗುಪ್ಪೆ ತಾ॥ ಗೋಸುಬಾಳು ಮಠದಲ್ಲಿ. ಆದರೂ ಬಾಲ್ಯದಿಂದಲೂ ನನ್ನ ರಕ್ಷಣಾ ಶಿಕ್ಷಣಗಳೆಲ್ಲವೂ ನಡೆದದ್ದು ಮಿಂಚೇರಿಯಲ್ಲೇ. ಆದ್ದರಿಂದ ನನ್ನನ್ನು ಅನೇಕರು ಮಿಂಚೇರಿಯವನೆಂದೇ ಭಾವಿಸಿದ್ದಾರೆ. ಇದಕ್ಕೆ ನನ್ನ ಸಮ್ಮತಿಯೂ ಉಂಟು.

ಜೋಳದರಾಶಿಗೂ ಮಿಂಚೇರಿಗೂ ಇರುವ ಸಂಬಂಧ ನಿನ್ನೆಮೊನ್ನೆಯದಲ್ಲ. ಶತಮಾನದಿಂದ ಬಂದದ್ದು ಮತ್ತು ಬಾಂಧವ್ಯದ ಪವಿತ್ರ ಪ್ರೀತಿ ಪಾಶದಿಂದ ಪರಸ್ಪರ

ಬಂಧಿಸಿಕೊಂಡದ್ದು. ಎಂದ ಬಳಿಕ ಶ್ರೀ ದೊಡ್ಡನಗೌಡರ ಪರಿಚಯ ನನಗಿರದಿದ್ದೀತೆ ? ಬಾಲ್ಯದಿಂದಲೂ ಉಂಟು.

ಆದರೆ ನಾನು ದೊಡ್ಡನಗೌಡರ ಒಡನಾಡಿಯಲ್ಲ, ಒಡನೋದಿಯೂ ಅಲ್ಲ. ಆದ್ದರಿಂದ ನನಗೆ ಅವರ ಬಹಿರಂಗದ ನಿಲುವು ತಿಳಿದಷ್ಟು ಅಂತರಂಗದ ಆಳ ತಿಳಿದಿಲ್ಲ. ನನ್ನ ಅರಿವಿನ ದೃಷ್ಟಿಗೆ ಗೋಚರವಾದ ಶ್ರೀಗೌಡರ ಬಹಿರಂಗದ ನಿಲುವನ್ನು ಕುರಿತು ಚಿಕ್ಕ ಕನ್ನಡಿಯಲ್ಲಿ ಕರಿಯನ್ನು ತೋರಿಸುವಂತೆ ಬರೆಯಲು ಇಚ್ಛಿಸಿರುವೆ.

ಜೋಳದರಾಶಿಯಲ್ಲಿ ಶ್ರೀಕೆಂಗಲ್ಲು ಹೊನ್ನನಗೌಡರು ಪ್ರತಿಷ್ಠಿತರು. ದೊಡ್ಡ ರೈತರು ಮತ್ತು ಸಿರಿವಂತರು. ಇವರಿಗಿದ್ದ ಏಕೈಕ ಪುತ್ರಿಯನ್ನು ತಮ್ಮ ಬಂಧುಗಳ ಲ್ಲೊಬ್ಬರಾದ ಶ್ರೀ ಪಂಪನಗೌಡರಿಗೆ ಕೊಟ್ಟು ವಿವಾಹ ಮಾಡಿದ್ದರು. ಶ್ರೀ ಪಂಪನ ಗೌಡರ ಪ್ರಥಮ ಪುತ್ರರೇ ಶ್ರೀ ದೊಡ್ಡನಗೌಡರು. ಎರಡನೆಯವರು ಪುತ್ರಿ ಶ್ರೀಮತಿ ನೀಲಮ್ಮನವರು. ಇಲ್ಲಿಗೆ ಶ್ರೀ ಪಂಪನಗೌಡರ ದಾಂಪತ್ಯ ಜೀವನ ಮುಕ್ತಾಯವಾಯ್ತು. ಪತ್ನಿಯು ಅಕಾಲದಲ್ಲಿ ಕಾಲವಶವಾದುದರಿಂದ. ಹಾಗೆಯೇ ಪುತ್ರ ಪುತ್ರಿಯರಿಗೂ ಮಾತೃವಿಯೋಗವಾಯ್ತು. ಈ ಚಿಕ್ಕಮಕ್ಕಳ ಲಾಲನೆ ಪಾಲನೆಯ ಭಾರ ಶ್ರೀ ದೊಡ್ಡನಗೌಡರ ಮಾತಾಮಹರಾದ ಶ್ರೀ ಹೊನ್ನನಗೌಡರ ಮತ್ತು ಅಜ್ಜಿ ಶ್ರೀಮತಿ ನಾಗಮ್ಮನವರ ಮೇಲೆ ಬಿತ್ತು. ಮೊಮ್ಮಕ್ಕಳನ್ನು ಮಾತಾಮಹರು 'ಹಾಗೆ ಸಾಕಿದರು' 'ಹೀಗೆ ಸಾಕಿದರು' ಎಂದು ಬಣ್ಣಿಸಲು ನನಗೆ ಶಕ್ತಿ ಸಾಲದು. ಮುಟ್ಟುವವರಿಗೆ ಮುದ್ದಾಗಿ, ಮುದ್ದಾಡುವವರಿಗೆ ನಿಜ ಸುಖವಾಗಿ, ನೋಡುವ ಕಣ್ಗಳಿಗೆ ಆನಂದ ದಾಯಕವಾಗಿ ಬೆಳೆದ ಶ್ರೀ ಗೌಡರು ಶೈಶವಾವಸ್ಥೆಯನ್ನು ದಾಟಿದರು.

ಸುಮಾರು ಎಪ್ಪತ್ತು ವರುಷಗಳ ಹಿಂದೆ ಈಗಿನಂತೆ ಹಳ್ಳಿಹಳ್ಳಿಗೂ ಸರಕಾರದ ಪಾಠಶಾಲೆಗಳು, ತರಬೇತಿ ಪಡೆದ ಶಿಕ್ಷಕರು, ಶಾಲೆಗಾಗಿಯೇ ಪ್ರತ್ಯೇಕವಾದ ಕಟ್ಟಡಗಳಿರಲಿಲ್ಲ. ಅಯ್ಯನವರ ಪಾಠಶಾಲೆಗಳಿದ್ದವು. ಅಯ್ಯನವರು ತರಬೇತಿ ಪಡೆದವರಲ್ಲ. ಮಠದಲ್ಲಿ ಅಥವಾ ದೇವಸ್ಥಾನದಲ್ಲಿ ಪಾಠಶಾಲೆಯಿರುತಿತ್ತು. ಶಿಕ್ಷಕ ಅಯ್ಯನವರು ಅಲ್ಪ ತೃಪ್ತರು, ಇಂದಿನ ಶಿಕ್ಷಕರಂತೆ ದುಡ್ಡಿನ ಗುಲಾಮರಾಗಿರಲಿಲ್ಲ. ಋಣದ ಕೂಳು ತಿನ್ನುವವರಾಗಿರಲಿಲ್ಲ. ಸತ್ಯಾಗ್ರಹದ ಹೆಸರಿನಲ್ಲಿ ದುರಾಗ್ರಹವನ್ನು ನಡೆಸುವವರಾಗಿರಲಿಲ್ಲ. ತಮ್ಮ ಕಷ್ಟಗಳನ್ನು ಗಣನೆಗೆ ತಾರದೆ ಗುರುಸ್ಥಾನದ ಗೌರವ ವನ್ನು ಕಾಯ್ದುಕೊಂಡು ಬರುವವರಾಗಿದ್ದರು. ಈ ಶ್ರೇಣಿಗೆ ಸೇರಿದ ಅಯ್ಯನವರ ಶಾಲೆಯೊಂದು ಜೋಳದ ರಾಶಿಯಲ್ಲಿತ್ತು. ಶ್ರೀ ಗೌಡರ ಪ್ರಾಥಮಿಕ ಶಿಕ್ಷಣ ಈ ಶಾಲೆಯಲ್ಲೇ ಪ್ರಾರಂಭವಾಯ್ತು.

ಪೂರ್ವಾರ್ಜಿತ ಸಂಸ್ಕಾರಕ್ಕೆ ಪ್ರೋತ್ಸಾಹ, ಉತ್ತಮ ವಾತಾವರಣಗಳು ಸಹಕಾರಿ ಯಾದ ಪಕ್ಷದಲ್ಲಿ, ವ್ಯಕ್ತಿ ಜೀವನ ವಿಕಾಸಹೊಂದುವುದರಲ್ಲಿ ಸಂದೇಹವೇ ಇಲ್ಲ. ಶ್ರೀ ಗೌಡರಿಗೆ ಇವೆಲ್ಲವುಗಳಿದ್ದುದರಿಂದ ಅವರು ಪ್ರಗತಿ ಪಥದಲ್ಲಿ ಪುರೋಗಾಮಿಗಳಾಗಿ

ನಡೆದು ಜೀವನದಲ್ಲಿ ಬೆಳಕನ್ನು ಕಂಡು, ನಾಡಿನಲ್ಲಿ ಬೆಳಗುವರೆಂಬ ಮುನ್ಸೂಚನೆ, ತಾತಂದಿರಾದ ಶ್ರೀ ಹೊನ್ನನಗೌಡ ಮೊದಲಾದ ಹಿರಿಯರ ಹೃದಯದಲ್ಲಿ ತೋರಿರ ಬೇಕು. ಕ್ರಮೇಣ ವಿದ್ಯಾಭ್ಯಾಸ ಮುಂದುವರಿಯಿತು. ಆಗಿನ ಪದ್ಧತಿಯಂತೆ ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ರಾಜಶೇಖರ ವಿಳಾಸ ಮೊದಲಾದ ಉದ್ಗ್ರಂಥಗಳನ್ನುರಾಗರಸಭರಿತವಾಗಿ ವಾಚನಮಾಡಿಸುವ ಪದ್ಧತಿ ಅಂದಿನ ಪಾಠ ಶಾಲೆಗಳಲ್ಲಿ ಪ್ರಧಾನವಾಗಿತ್ತು. ಇನ್ನೊಂದು ವಿಶೇಷವೆಂದರೆ: ಪ್ರತಿಭಾಶಾಲಿಗಳಾದ ಶ್ರೀ ಗೌಡರಿಗೆ ದೈವದತ್ತವಾದ ಅವ್ಯಕ್ತ ಮಧುರ ಶ್ರೀಕಂಠವೂ ಸಹಕಾರಿಯಾಯಿತು. ವಿದ್ಯಾರ್ಥಿಯಾಗಿರುವಾಗಲೇ ಜೈಮಿನಿ ಮೊದಲಾದ ಪದ್ಯಗ್ರಂಥಗಳನ್ನು ಶ್ರೋತೃಗಳು ತಲೆತೂಗುವಂತೆ ರಾಗರಸಾಂಬುಧಿಯಲ್ಲಿ ತೇಲಾಡುವಂತೆ ತಮ್ಮದೇ ಆದ ವೈಶಿಷ್ಟ್ಯ ದಿಂದ ಭಾವಪೂರ್ಣವಾಗಿ ವಾಚನಮಾಡುವ ಶಕ್ತಿಯನ್ನು ಪಡೆದಿದ್ದರು. ಶ್ರೋತೃ ಗಳಿಂದ ಸೈ ಸೈ ಎನ್ನಿಸಿಕೊಂಡರು.

ತಾತ ಶ್ರೀ ಹೊನ್ನನಗೌಡರಿಗೆ ಮೊಮ್ಮಗ ದೊಡ್ಡನಗೌಡರ ಆಟ ಪಾಠಗಳಲ್ಲಿ ರುವ ಪ್ರವೀಣತೆಯನ್ನು ಕಂಡು ಹಿರಿ ಹಿರಿ ಹಿಗ್ಗಬೇಕೆಂಬ ಬಯಕೆ ಬಹಳ. ಶ್ರೀ ಹೊನ್ನನಗೌಡರು ಊರ ತರುಣರಿಗೆ ಬಯಲಾಟವಾಡಲು ಪ್ರೇರಿಸಿದರು. ಹುರಿ ಗೊಂಡ ತರುಣರು 'ಕುಶಲವರ ಕಾಳಗ' ಎಂಬ ಬಯಲಾಟವನ್ನು ಆಡಲು ನಿರ್ಧರಿಸಿ ದರು. ಅರವತ್ತು ಎಪ್ಪತ್ತು ವರುಷಗಳ ಹಿಂದೆ ಹಳ್ಳಿಗರಿಗೆ ಬಯಲಾಟವೆಂದರೆ ಸಂತಸದ ಸುಗ್ಗಿ, ಎಲ್ಲಿಲ್ಲದ ಸಂಭ್ರಮ. ನೋಡಬೇಕು ಅಂದಿನ ಬಯಲಾಟವನ್ನು ! ಆ ವೇಷಭೂಷಣ ! ಆ ಮಾತುಗಾರಿಕೆ ! ಆ ಹಾಡುಗಾರಿಕೆ ! ಆ ಅಭಿನಯ !—ಇವೆಲ್ಲ ವನ್ನು ಇಂದು ಕಾಣಲಾದೀತೆ ? ಈಗಲೂ ಬಯಲಾಟಗಳನ್ನು ಎಲ್ಲೋ ಒಂದೊಂದು ಕಡೆ ಆಡುತ್ತಾರೆ. ಅಂದಿನ ಬಯಲಾಟ ನೋಡಿ ನನಗೆ ಇಂದಿನ ಬಯಲಾಟ ನೋಡಲು ಮನಸ್ಸೇಬಾರದು. ಆ ಸೊಬಗು ಆ ಸಂಭ್ರಮ ಈಗ ಇಲ್ಲ. ಸಂಭ್ರಮದ ಬದಲಾಗಿ ಬರಿಯ ಭ್ರಮೆ ಮಾತ್ರ ಉಳಿದಿದೆ. ಏನೋ ಹೇಳ ಹೊರಟು ಏನೋ ಬರೆದೆ. ಪ್ರಸ್ತುತ ಬಿಟ್ಟೆ ; ಅ ಪ್ರಸ್ತುತಕ್ಕೆ ಕೈಯಿಟ್ಟೆ ಕ್ಷಮಿಸಿ.

ಶ್ರೀ ದೊಡ್ಡನಗೌಡರಿಗೆ 10-12 ವರುಷ ವಯಸ್ಸಿರಬಹುದೇನೋ. ಕುಶ ಲವರ ಕಾಳಗದಲ್ಲಿ ಕುಶನೋ, ಲವನೋ ಈಗದು ನನಗೆ ಗೊತ್ತಿಲ್ಲ. ಅಂತು ಇವೆರಡರಲ್ಲಿ ಒಂದು ಪಾತ್ರವನ್ನು ಧರಿಸಿದುದುಂಟು. ಗೌಡರ ಅಭಿನಯ ಮಾತುಗಾರಿಕೆ, ಹಾಡಿನ ಇಂಪು ಸೊಂಪು, ಪ್ರೇಕ್ಷಕರನ್ನು ಅನಿರ್ವಚನೀಯ ಆನಂದದಲ್ಲಿ ಮೈಮರೆಯಿಸಿತು. ಶ್ರೀ ಗೌಡರ ಭವಿಷ್ಯತ್ತಿನ ಕಲಾಜೀವನಕ್ಕೆ ಬಯಲಾಟದಲ್ಲಿ ಧರಿಸಿದ ಪಾತ್ರಾಭಿನಯವೇ ನಾಂದಿಯಾಯ್ತೇನೊ.

ಶ್ರೀ ಗೌಡರು ಶ್ರೀಮಂತ ವರ್ಗಕ್ಕೆ ಸೇರಿದವರಾದುದರಿಂದ ಉಣ್ಣಲು, ಉಡಲು ತೊಡಲು ಕೊರತೆಯೆಂಬುದಿರಲಿಲ್ಲ. ತಮ್ಮ ಮುಖ್ಯ ಕಸುಬಾದ ವ್ಯವಸಾಯದ ಕಡೆಗೆ

ಇನ್ನಿತರ ವ್ಯವಹಾರಗಳ ಕಡೆಗೆ ಗಮನಕೊಡಲಿಲ್ಲ. 'ಅದು ಮಾಡು , 'ಇದು ಮಾಡು' ಎಂದು ಮನೆಯ ಹಿರಿಯರೂ ಹೇಳಲಿಲ್ಲ. ಪಾಠಶಾಲೆಯನ್ನು ಬಿಟ್ಟರು. ಸ್ವತಃ ವಿದ್ಯಾಭ್ಯಾಸಕ್ಕೆ ತೊಡಗಿದರು. ವಿದ್ಯಾರ್ಜನೆಗಾಗಿ ಪಟ್ಟಣಗಳ ಪಾಠಶಾಲೆಗೆ ಹೋಗ ಲಿಲ್ಲ. ಮನೆಯೇ ಪಾಠಶಾಲೆ, ಮನೆಯೇ ಕಾಲೇಜು. ಅರಿವೇ ಗುರು, ಅರಿವೇ ಪ್ರಾಚಾರ್ಯ. ವಿಶ್ವಪ್ರಪಂಚವೇ ವಿಶ್ವವಿದ್ಯಾಲಯವಾಯ್ತು. ಅನವರತ ನಿಷ್ಠೆಯಿಂದ ವಾಚನವನ್ನು ಶ್ರದ್ಧೆಯಿಂದ ಗ್ರಂಥಾವಲೋಕನವನ್ನು ಮನಗೊಟ್ಟು ಮನಮುಟ್ಟಿ ಮಾಡುತ್ತ ಸಂಗೀತ ಸಾಧನೆಯನ್ನು ಮಾಡುತ್ತ ಕಲಾಸಿದ್ಧಿಯತ್ತ ಸಾಗತೊಡಗಿದರು. ಇದು ಒಂದು ಬಗೆಯ ತಪಸ್ಸೇ.

ಶ್ರೀ ಗೌಡರಿಗೆ ತಾವು ಸಾಧಿಸಿದುದನ್ನು ಪ್ರಯೋಗದ ಮೂಲಕ ಪರೀಕ್ಷಿಸ ಬೇಕೆಂಬ ಇಚ್ಛೆಯಾಯ್ತೇನೊ. ಗೆಳೆಯರ ಗುಂಪನ್ನು ಕಟ್ಟಿ ನಾಟಕಗಳನ್ನಾಡಬೇಕೆಂದು ನಿಶ್ಚೈಸಿದರು. ಕಾರ್ಯಾರಂಭ ಮಾಡಿದರು. ಗೆಳೆಯರ ಗುಂಪು ಸಿದ್ಧವಾಯ್ತು. ಉಚಿತವರಿತು ಪಾತ್ರಗಳನ್ನು ಹಂಚಿದರು. ಅಭ್ಯಾಸ ಸುರುವಾಯ್ತು. ತಾವೇ ಸೂತ್ರಧಾರರು, ಪ್ರಧಾನ ಶಿಕ್ಷಕರು, ಹಾಗೂ ನಾಯಕ ಪಾತ್ರಧಾರಿಗಳು. ಶಿಸ್ತು, ಶ್ರೀ ಗೌಡರ ಜತೆಯಲ್ಲಿ ಜನ್ಮತಳೆದಂತೆ ಕಾಣುತ್ತದೆ. ಅವರು ಯಾವ ಕಾರ್ಯ-ಅದು ಸಣ್ಣದಿರಲಿ, ದೊಡ್ಡದಿರಲಿ-ಕೈಕೊಂಡರೂ ಅದು ಕ್ರಮಬದ್ಧವಾಗಿ ಕಾಲಕ್ಕೆ ಸರಿಯಾಗಿ ನಡೆಯಬೇಕು. ಅಸ್ತವ್ಯಸ್ತವಾಗಬಾರದು. ಕಟ್ಟುನಿಟ್ಟಿನ ನಿಯಮನಿಷ್ಠೆಯ ಶ್ರೀಗೌಡರು ಕೊಡುವ ನಾಟಕ ತರಬೇತಿ, ಪಾತ್ರಧಾರಿಗಳಿಗೆ ಮೊದಮೊದಲು ಕಷ್ಟಕರವಾಗಿಯೇ ಕಂಡಿರಬೇಕು. ಪಾತ್ರವಹಿಸುವುದೇ ಬೇಡವೆನಿಸಿರಬೇಕು. ಆದರೆ ದೃಢಮುಷ್ಟಿ ಯನ್ನು ಗೌಡರು ಸಡಿಲಿಸಲಿಲ್ಲ. "ಅಕ್ಕರವ ಕಲಿವ ಮೊದಲೊಳ್, ಉಕ್ಕಿನ ಕಡಲೆಯನು ಮೆದ್ದ ತೆರನಂತಕ್ಕುಂ॥ ಅಕ್ಕರವ ಕಲಿತ ಮರುದಿನ ಸಕ್ಕರೆ ಚಿನಿವಾಲ ನುಂಡ ತೆರನಂ ತಕ್ಕುಂ"॥ ಎಂಬ ಅನುಭವ, ಶಿಕ್ಷಣಾನಂತರ ತರಬೇತಿಗೊಳಪಟ್ಟ ಪಾತ್ರಧಾರಿಗಳೆಲ್ಲ ರಿಗೂ ಬಂದಿರಲೇಬೇಕು.

ಶ್ರೀಗೌಡರು ತಮ್ಮ ಅಭಿನಯಕ್ಕೆ ಆಯ್ದುಕೊಂಡ ನಾಟಕಗಳು ನನಗೆ ನೆನಪಿ ರುವ ಮಟ್ಟಿಗೆ ಹೇಳುವುದಾದರೆ– 'ಚೌತಿಚಂದ್ರ', 'ಪಾರಿಜಾತಾಪಹರಣ' ಮತ್ತು 'ಶಿವಜಲಂಧರ'. ತೃಪ್ತಿಯಾಗುವವರೆಗೆ ಈ ನಾಟಕಗಳ ತಾಲೀಂ (ತರಬೇತಿ) ಮಾಡಿ ದರು. ಮೊದಲು ಜೋಳದರಾಶಿಯಲ್ಲೇ ಪ್ರಯೋಗ ಮಾಡಿದರು. ಎಲ್ಲಾ ನಾಟಕ ಗಳನ್ನು ಆಡಿ (ಅಭಿನಯಿಸಿ) ಹಾಡಿ ಪರೀಕ್ಷೆ ಮಾಡಿದರು. ಕಂಡು ಬಂದ ಲೋಪ ದೋಷಗಳನ್ನು ತಿದ್ದಿದರು. ಪಟ್ಟಣಗಳಲ್ಲಿ ಪ್ರದರ್ಶನ ಮಾಡುವ ಸಾಹಸಕ್ಕೆ ಕೈ ಹಚ್ಚಿದರು. ಗೌಡರದು ದೃಢಸಂಕಲ್ಪ. ಅಂದುಕೊಂಡದ್ದು ಆಗಲೇಬೇಕು.

ಜೋಳದರಾಶಿಯ ನಾಟಕ ಕಂಪನಿಯ ಹೆಸರು, ಊರ ಅಧಿದೈವವಾದ ಶ್ರೀ ರಾಮೇಶನ ಹೆಸರಿನದೇ ಆಗಿರಲು ಸಾಧ್ಯ. ಈಗ ನನಗೆ ಅದು ಜ್ಞಾಪಕದಲ್ಲಿಲ್ಲ.

ಇರಲಿ, ನಾಟಕ ಮಂಡಳಿಯಂತೂ ಬಳ್ಳಾರಿ, ರಾಯಚೂರು ಮೊದಲಾದ ಪಟ್ಟಣಗಳಲ್ಲಿ ನಾಟಕ ಪ್ರಯೋಗ ಮಾಡತೊಡಗಿತು. ಶ್ರೀ ಗೌಡರ ಅಭಿನಯ, ಗಂಭೀರ ಶ್ರೀಕಂಠ ದಿಂದ ಹೊರಹೊಮ್ಮಿದ ಗಾನದ ಇಂಪಿಗೆ, ಸೊಂಪಿಗೆ, ಪೆಂಪಿಗೆ ಪ್ರೇಕ್ಷಕವೃಂದ ಮಾರು ಹೋಯ್ತು. "ನಾಟಕ ಮಂಡಳಿ, ಹಳ್ಳಿಯದಂತೆ, ನಮ್ಮ ಪಟ್ಟಣಕ್ಕೆ ನಾಟಕವಾಡಲು ಬಂದಿರುವರಂತೆ, ಹಹ, ಹೆಹೆ" ಎಂಬ ಕೀಳಂಭಾವನೆ, ನಾಟಕ ನೋಡಿದವರ ಮನ ದಲ್ಲಿ ಮಾಯವಾಯ್ತು. ನಾಟಕ ಮಂಡಳಿಯ ಜಯಭೇರಿಯ ನಿನಾದ ಬಹುದೂರದ ವರೆಗೂ ಕೇಳಿಸಿತು. ಮುಖ್ಯವಾಗಿ ಶ್ರೀಗೌಡರ ಅಭಿನಯಕ್ಕೆ, ಕಲಾಕುಶಲತೆಗೆ, ಮನಮೋಹಕ ದಿವ್ಯಕಂಠದಿಂದ ರಸಭಾವ ಸಮ್ಮಿಳಿತವಾಗಿ ಹೊರ ಚಿಮ್ಮುವ ತನ್ನ ತನವ ಬಿಡದ, ಪರಾನುಕರಣೆಯಿಲ್ಲದ, ಗಾನ ಮಾಧುರ್ಯಕ್ಕೆ ಮಾರುಹೋಗದ, ಭೇಷ್ ಭೇಷ್ ಎಂದು ಉದ್ಗಾರ ತೆಗೆಯದ, ಆನಂದಾಶ್ರುಗಳನ್ನು ಸುರಿಸದ ಪ್ರೇಕ್ಷಕರು, ಶ್ರೋತೃಗಳೇ ಕಾಣದಾದರು.

ಶ್ರೀಗೌಡರ ಕೀರ್ತಿಲತೆ ಕುಡಿವರಿಯಿತು. ಪಂಡಿತ ಮತ್ತು ಕವಿಗಳಾದ ವೇ॥ ನಾಗೇಶಶಾಸ್ತ್ರಿಗಳಂತಹ ವಿದ್ವಜ್ಜನರ, ಸುಸಂಸ್ಕೃತರ, ನ್ಯಾಯವಾದಿ ವೃತ್ತಿಯಲ್ಲಿ ಪ್ರವೀಣರೂ ಕಲಾ ಪ್ರಪೂರ್ಣರೂ ದಿಗಂತ ವಿಶ್ರಾಂತ ಕೀರ್ತಿಸಂಪನ್ನರೂ ಆದ ರಾವ್ ಬಹದ್ದೂರ್ ಶ್ರೀ ಟಿ. ರಾಘವಾಚಾರ್ಯರಂತಹ ಮಹೋನ್ನತ ವ್ಯಕ್ತಿಗಳ ದೃಷ್ಟಿ ಯನ್ನು ಸೆಳೆಯಿತು.

ವಜ್ರಕ್ಕೆ ಸ್ವಂತ ಸಹಜ ತೇಜಸ್ಸಿದೆ, ಬೆಲೆಯಿದೆ. ಆದರೆ ಅದನ್ನು ಸಾಣೆ ಹಿಡಿ ದರೆ ಅದರ ಕಾಂತಿ ಇಮ್ಮಡಿ, ಮುಮ್ಮಡಿ, ನೂರ್ಮಡಿಯಾಗುತ್ತದೆ. ಅಧಿಕ ಬೆಲೆ ಬಾಳುತ್ತದೆ. ಶ್ರೀ ಗೌಡರೇನೋ ವಜ್ರವೇ. ಆದರೆ ಅವರು ನಾಡಿನ ಉದ್ದಗಲದಲ್ಲಿ ಗೌರವಾನ್ವಿತರಾಗಬೇಕಾದರೆ, ಇನ್ನೂ ಸಾಧನೆಯೆಂಬ ಸಾಣೆಗೆ ಮೈಗೊಡಬೇಕು ಮನ ಗೊಡಬೇಕಿತ್ತು. "ಪ್ರತಿಭೆಯುಂ, ಅಭ್ಯಾಸಮುಂ, ಕಾವ್ಯ ಪರಿಚಯಮುಂ, ವಿದ್ವತ್ಸೇ ವೆಯುಂ ಕವಿತೆಗೆ ಕಾರಣಂ" ಎಂಬ ಸೂಕ್ತಿಗನುಗುಣವಾಗಿ ಪಳಗಬೇಕಾಗಿತ್ತು. ಈ ಶುಭ ಸಮಯ ಸಂಪ್ರಾಪ್ತವಾಯ್ತು. ನಾನಾ ದರ್ಶನಾನುಭವಿಗಳಾದ ವೇ॥ ನಾಗೇಶಶಾಸ್ತ್ರಿ ಗಳೂ ಶ್ರೀ ಗೌಡರು ಪರಸ್ಪರ ವಿಶ್ವಾಸ ಗಳಿಸಿಕೊಂಡರು, ಬೆಳಸಿಕೊಂಡರು. ಪಂಡಿತ ಶಾಸ್ತ್ರಿಗಳವರಿಂದ ಸಾಹಿತ್ಯದ ಸೊಬಗನ್ನು ವೀರಶೈವ ಧರ್ಮ ಮತ್ತು ವಾಙ್ಮಯದ ಮಹತಿಯನ್ನು ಅರಿತುಕೊಂಡರು. ತಮ್ಮ ಜ್ಞಾನ ಭಂಡಾರವನ್ನು ಬೆಳಸಿಕೊಂಡರು. ಗೌರವನೀಯ ಶ್ರೀ ಟಿ. ರಾಘವರ ಪ್ರೇಮಕ್ಕೆ ಪಾತ್ರರಾಗಿ ನಾಟಕದ, ಅಭಿನಯದ ಹೃದಯವನ್ನು ತಲಸ್ಪರ್ಶಿಯಾಗಿ ಕಂಡುಕೊಂಡರು. ಶ್ರೀ ಟಿ. ರಾಘವರ ಸಂಗಡಿಗ ರಾಗಿ ಅನೇಕ ತೆಲುಗು ಕನ್ನಡ ನಾಟಕಗಳನ್ನು ಆಂಧ್ರ ಕರ್ನಾಟಕದ ಅನೇಕ ಭಾಗಗಳಲ್ಲಿ ಅಭಿನಯಿಸಿ ವ್ಯಾಪಕವಾದ ಕೀರ್ತಿಯನ್ನು ಪಡೆದರು. ಶ್ರೀ ರಾಘವರ ಪ್ರೇರಣೆಯಂತೆ

ಹಾಕಿ ಕೊಟ್ಟ ನಕ್ಷೆಯಿಂದ "ಕನಕದಾಸ" ನಾಟಕವನ್ನು ರಚಿಸಿ ತಾವೇ ಅಭಿನಯಿಸಿ, ಜನತೆಯಿಂದ ಮನ್ನಣೆಗೆ ಪಾತ್ರರಾದರು.

ಶ್ರೀ ಗೌಡರಿಗೆ ಗೌರವಾದರಗಳನ್ನು ಗಳಿಸಿಕೊಟ್ಟ, ನಾಟಕಾದಿಗಳಂತೆ ಗಮಕ ಕಲೆಯೂ ಶ್ರೀ ಗೌಡರ ಯಶೋಃಕೀರ್ತಿಗಳನ್ನು ಹೆಚ್ಚಿಸಿತು. ಗೌಡರ ಗಮಕ ಕಲೆಯ ಗತ್ತೇ ಬೇರೆ. ಸ್ವಪ್ರತಿಭಾಜನ್ಯವಾದದ್ದು. ಪರಾನುಕರಣೆಯದಂತೂ ಅಲ್ಲವೇ ಅಲ್ಲ. ಸಹಸ್ರ ಸಹಸ್ರ ಶ್ರೋತೃಗಳನ್ನು ಅತ್ತಿತ್ತ ಕದಲದಂತೆ ಸ್ಥಂಭಿತರನ್ನಾಗಿ ಮಾಡುವ ಮಾಂತ್ರಿಕಶಕ್ತಿ ಗೌಡರ ಗಮಕದಲ್ಲಿ ಅಡಗಿದೆ.

"ಗಮಕ-ಇದೇನಿದು ? ಗಮಕ ಎಂದರೆ ಒಂದು ವಸ್ತುವೆ ? ಕಲೆಯೆ ?" ಎಂದು ನನ್ನನ್ನು ಯಾರೂ ಕೇಳಬೇಡಿ. ಶ್ರೀ ಗೌಡರನ್ನು ಕೇಳಿರಿ ; ಇಲ್ಲವೇ ಅಜ್ಞಾತ ಕವಿ ಒಬ್ಬನೋ ಇಬ್ಬರೋ ಹೇಳುತ್ತಾರೆ. ಮುಂದೆ ಓದಿ ತಿಳಿಯಿರಿ. "ಎಡರದೆ ತೊಡರದೆ ತಲೆಯಂ । ಕೊಡಹದೆ ಕಡುವಹಿಲ ಜಾಡ್ಯನೆನಿಸದೆ ರಸಮಂ ॥ ಕೆಡಿಸದೆ ಸರ್ವರಚಿತ್ತ । ಕ್ಕೊಡಬಡಲೋದುವನೆ ಗಮಕಿ ಕನ್ನಡ ಜಾಣಾ ॥" "ಮಾನಿತಪದಮಂ ಪದ", ಸಂ । ಧಾನ ಮನರ್ಥ ಪ್ರತೀತಿಯಂ ಕವಿ ಹೃದಯ॥ಸ್ಥಾನಮನರಿದೋದದೆಕ। ಣ್ಬೇನೆಯ ಕರಡಿ ಯವೋಲ್ಮಚುವಂ ವಾಚಕನೇ ॥", "ಉಕ್ಕದೆ ಬಿಕ್ಕದೆ ನುಡಿಯಂ। ನೆಕ್ಕದೆ ತಡವರಿಸದೆ ಡಹದುಡಂಗದೆ ಪದ ವಿ-॥ ಟ್ಟಕ್ಕರ ಭಣಿತೆಯೊಳೋದುವ । ದಕ್ಕರಿಗರ ಮಾರ್ಗವಲ್ತೆ ಚೂಡಾರತ್ನಾ॥" "ರಾಗರಸಮಿಕ್ಕು ಹೊರಸೂಸುವಂತೆ, ಸಭೆ ತಲೆ ತೂಗುವಂತೆ........" ಓದುವುದು ಗಮಕವಂತೆ.

ಈ ಲಕ್ಷಣಗಳಿಗೆ ಭಾಷ್ಯ ಬರೆದಂತಿರುತ್ತದೆ ಶ್ರೀ ಗೌಡರ ಗಮಕ. ಈ ಕಲೆಯನ್ನು ಶ್ರೀ ಗೌಡರಲ್ಲಿ ಗುರುತಿಸಿದ ರಸಿಕ ಪಂಡಿತ ಸಾಹಿತಿ ಕಲಾವಿದರು "ಗಮಕ ಕಲಾನಿಧಿ", "ಗಮಕ ಕಲಾ ಪ್ರಪೂರ್ಣ" ಎಂಬ ಬಿರುದುಗಳನ್ನಿತ್ತು ಗೌರವಿಸಿದ್ದಾರೆ.

ಶ್ರೀ ಗೌಡರ ಕರ್ಮಕ್ಷೇತ್ರ ನಾಟಕಾಭಿನಯಕ್ಕೆ ಗಮಕಕ್ಕೆ ಸೀಮಿತವಾಗಿಲ್ಲ. ಕವನ ಗ್ರಂಥರಚನ, ಲೇಖನಗಳಿಂದ ವಿಸ್ತಾರಗೊಂಡಿದೆ. ಶ್ರೀ ಗೌಡರು ಕರ್ಣಾಟಾಂಧ್ರ ಪ್ರಾಂತದ ಸಾಹಿತಿ, ಕಲಾವಿದ, ವಿದ್ವಾಂಸ ಮತ್ತು ಅಭಿಮಾನಿಗಳ ಬಳಗವನ್ನು ಬೆಳಸಿ ಕೊಂಡಿದ್ದಾರೆ. ಅನುಭವವನ್ನು ಗಳಿಸಿಕೊಂಡಿದ್ದಾರೆ. ತತ್ಫಲವಾಗಿ ಶ್ರೀ ಗೌಡರಿಂದ ರಸವರ್ಷ, ರಾಮೇಶಾಂಕಿತ ವಚನಗಳು, ದೇಶೀಯ ವಚನಗಳು, ಹಾಳುಹಂಪೆ (ಖಂಡ ಕಾವ್ಯ), ಅನುವಾದಿತ ಗ್ರಂಥಗಳು, ಜೀವನಚರಿತ್ರೆಗಳು, ಆತ್ಮಕಥೆ ಮತ್ತು ಹಲವಾರು ವಿಷಯಗಳ ವಿಚಾರವಾಗಿ ಬರೆದ ಲೇಖನಗಳು—ಹೀಗೆ ಹಲವಾರು ಮುಖ ದಿಂದ ಹುಲುಸಾಗಿ ಸಾಹಿತ್ಯ ಕ್ಷೇತ್ರವು ವಿಸ್ತರಿಸಲ್ಪಟ್ಟಿದೆ.

ನಾನು ನೋಡಿದ್ದೇನೆ ಮತ್ತು ಕೇಳಿಯೂ ಇದ್ದೇನೆ "ಅತ್ತು ಔತನಕ್ಕೆ ಹೇಳಿಸಿ ಕೊಳ್ಳುವವರು ಇತ್ತಿತ್ತ ಹೆಚ್ಚಿದ್ದಾರೆಂದು". ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ., ಮಂತ್ರಿ ಮಹೋದಯರು ಮತ್ತು ಇನ್ನಿತರ ಪ್ರತಿಷ್ಠಿತರನ್ನು ಹಿಂಬಾಲಿಸಿ

'ನಾನು ಕಲಾವಿದ', 'ನಾನು ಕವಿ', 'ನಾನು ಪಂಡಿತ', 'ನಾನು ಸಾಹಿತಿ'—ಹೀಗೆ ಇಲ್ಲದ ಗುಣಗಳನ್ನು ಇದ್ದ ಹಾಗೆ ಹೇಳಿಕೊಂಡು ಕಾಡಿಬೇಡಿ ಪ್ರಶಸ್ತಿಗಳನ್ನು ಪಾಸಾ ಶನವನ್ನು ಗಿಟ್ಟಿಸಿಕೊಳ್ಳುವ ಜನರಿಗೆ ಕೊರತೆಯಿಲ್ಲ. ಆದರೆ ಶ್ರೀ ಗೌಡರು ಮಾತ್ರ ಈ ಶ್ರೇಣಿಯಲ್ಲಿ ಎಣಿಕೆಯಾಗುವವರೇ ಅಲ್ಲ. ಬಿರುದು ಬಾವಲಿಗಳನ್ನು ಹುಡುಕಿ ಕೊಂಡು ಹೋಗಲಿಲ್ಲ. ಅವು ಅಯಾಚಿತವಾಗಿ, ತಾವಾಗಿಯೇ ಬಂದು ಶ್ರೀ ಗೌಡರನ್ನು ಆಶ್ರಯಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡವು. ಕಲ್ಬುರಿಗೆಯ (ಗುಲ್ಬರ್ಗ) ವಿಶ್ವವಿದ್ಯಾಲಯವು ಶ್ರೀ ಗೌಡರ ಯೋಗ್ಯತೆಯನ್ನು ಗುರುತಿಸಿ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಸನ್ಮಾನಿಸಿತು. ಸಾಹಿತ್ಯಕ್ಕೆ ಕಲೆಗೆ ಸಂಬಂಧಿಸಿದ ರಾಜ್ಯದ ಅಕಾಡಮಿಗಳು ಪ್ರಶಸ್ತಿಗಳನ್ನು ಕೊಟ್ಟು ತಮ್ಮ ಪ್ರಶಸ್ತಿಯನ್ನು ಹೆಚ್ಚಿಸಿ ಕೊಂಡವು. ಸಂಘ ಸಂಸ್ಥೆಗಳಿಂದಾದಸನ್ಮಾನಗಳಿಗೆ ಇತಿಮಿತಿಯೇ ಇಲ್ಲವೆನ್ನಬಹುದು.

ಶ್ರೀಗೌಡರಿಗೆ ಅಭಿಮಾನ ಕನ್ನಡನಾಡು ಮತ್ತು ನುಡಿಗಳಲ್ಲಿ. ಒಲವು ರೈತರಲ್ಲಿ. ನಿಷ್ಠೆ ಸ್ವಧರ್ಮದಲ್ಲಿ.

1) 1952–53 ಇಸ್ವಿಯಲ್ಲಿ ಭಾಷಾವಾರು ಪ್ರಾಂತರಚನೆಯಾದಾಗ ಬಳ್ಳಾರಿ ಯನ್ನು ಗುಳುಂಕರಿಸಬೇಕೆಂದು ಆಂಧ್ರರು ಪ್ರಚಂಡ ಚಳವಳಿಯನ್ನು ಮಾಡಿದಾಗ ಅವರ ಆಕ್ರಮಣ ಸ್ವಭಾವವನ್ನು ಸಹಿಸದೆ ಶ್ರೀ ಗೌಡರು ಸಿಡಿದೆದ್ದರು, ಪ್ರತಿಭಟಿಸಿದರು. ಕನ್ನಡಿಗರು ಸಂಘಟಿಸಿದ ಸಭೆ ಸಮ್ಮೇಳನಗಳಲ್ಲಿ ಪಾಲ್ಗೊಂಡರು. ಘನಗಂಭೀರವಾಣಿ ಯಿಂದ ಸ್ವಜನರಾದ ಕನ್ನಡಿಗರಲ್ಲಿ ನಾಡು ನುಡಿಯ ಅಭಿಮಾನದ ಕೆಚ್ಚನ್ನು ತುಂಬಿ ದರು.

2) ಭಾರತ ಸ್ವತಂತ್ರವಾದ ನಂತರದ ಸರಕಾರದ ಆಡಳಿತದ ವೈಖರಿಯನ್ನು ಕಂಡು, ರೈತರ ಹೀನದೀನ ಸ್ಥಿತಿಯನ್ನರಿತು ಕೆರಳಿದರು. ಸರಕಾರವನ್ನು ಎಚ್ಚರಿಸ ಲೋಸುಗ ಸಿಡಿಲ ನುಡಿಗಳನ್ನೊಳಗೊಂಡ ದೇಶೀಯ ವಚನಗಳನ್ನು ರಚಿಸಿದರು; ಎರಡು ಪುಸ್ತಿಕೆಗಳ ರೂಪದಲ್ಲಿ ಪ್ರಕಟಿಸಿ ಪ್ರಚಾರ ಮಾಡಿದರು.

3) ಸ್ವಧರ್ಮದಲ್ಲಿ ತುಂಬಾ ಶ್ರದ್ಧೆ ನಿಷ್ಠೆಗಳಿದ್ದರೂ ಪರಧರ್ಮನಿಂದಕರಲ್ಲ. ಧರ್ಮ ಮತ್ತು ಶಿವಾನುಭವವನ್ನು ಕುರಿತು ಪ್ರವಚನ ಇಂದಿಗೂ ಮಾಡುತ್ತಿರುವರು. ಸ್ವತಃ ವಚನ ರಚನೆ ಗೈದರು, ಶರಣ ಮಾರ್ಗವೇ ಮಾರ್ಗ, ಶರಣರ ನಡೆನುಡಿಗಳೇ ನಮ್ಮನ್ನು ಸಮಸ್ತ ದುಃಖ ಸಂಕಟಗಳಿಂದ ಪಾರು ಮಾಡುವ ದಿವ್ಯಸಾಧನಗಳೆಂದು ಸಾರುತ್ತಿರುವರು, ತಾವೂ ಶರಣರ ಜೀವನವನ್ನೇ ಆದರ್ಶವಾಗಿಟ್ಟುಕೊಂಡಿರುವರು.

ಶ್ರೀ ಗೌಡರು ಇಟ್ಟ ದಿಟ್ಟಹೆಜ್ಜೆಗೆ ಕೈಕೊಂಡ ಧೀರಕ್ರಮಕ್ಕೆ ಪ್ರಬಲ ಸಾಕ್ಷಿ ಯಾದುದಿನ್ನೊಂದುಂಟು. ಅದನ್ನು ಬರೆಯದೆ ಬಿಟ್ಟರೆ ಈ ಲೇಖನ ಅಪೂರ್ಣ ವಾದಂತೆಯೇ ಸರಿ.

1948 ನೇ ಇಸ್ವಿ ಇರಬೇಕು. ಆಗ ಗೌಡರಿಗೆ ನಾಟಕದ ಹುಚ್ಚು ಹೆಚ್ಚಾಗಿಯೇ ಇತ್ತು ಎಂಬುದಕ್ಕೆ ಸಾಕ್ಷಿ ನುಡಿಯುತ್ತಿದೆ ಅವರು ಮಾಡಿದ ಮಹತ್ಕಾರ್ಯ. ನಮ್ಮ ನಾಡಿನಲ್ಲಿ ನಾಟಕ ಕಳಾಪರಿಷತ್ತೆಂಬುದಿರಲಿಲ್ಲ. ನಾಟಕಾಭಿಮಾನಿಗಳಾದ ಗೌಡರಿಗೆ ನಾಟಕ ಕಳಾಪರಿಷತ್ತನ್ನು ಸ್ಥಾಪಿಸಬೇಕು ಹಾಗೆಯೇ ಸಮ್ಮೇಳನವನ್ನು ನಡೆಯಿಸಬೇಕು, ತನ್ಮೂಲಕ ನಾಟಕ ಕಲೆಯನ್ನು ಅಭಿವೃದ್ಧಿ ಪಡಿಸಬೇಕೆಂಬ ಭಾವನೆ ಅವರ ಹೃದಯದಲ್ಲಿ ಮೂಡಿರಬೇಕು. ಆದರೆ ಕಾರ್ಯ ಸಾಮಾನ್ಯವಾದುದಲ್ಲ. ಮಹತ್ತರವಾದುದು. ಒಬ್ಬರಿಬ್ಬರಿಂದ ದಿಢೀರನೆ ಆಗುವಂತಹುದಲ್ಲ. ಇದು ಗೌಡರಿಗೆ ಅರಿಯದ ವಿಚಾರವಲ್ಲ. "ಮನಸ್ಸಿನಲ್ಲಿ ಮಂಡಿಗೆ ತಿಂದರೆ ಗೋಧಿ ಲೆಕ್ಕ ಕೊಡುವರಾರು ?" ಎಂಬ ಗಾದೆ ಮಾತಿನ ಇಂಗಿತವನ್ನೂ ಬಲ್ಲರು, ಆದರೆ ಅಂದುಕೊಂಡ ಕಾರ್ಯವನ್ನು ಮಾಡದೆ ಕೈ ಬಿಡಬಾರದೆಂದು ಮನದಲ್ಲಿ ಗಟ್ಟಿ ಮಾಡಿಕೊಂಡರು.

"ಎಡರಡಸುವುದೆಂದಂಜುತೆ। ತೊಡಗರ್ ನೀಚರ್ ಕಾರ್ಯವ
ನೆಡರಡಸಲೊಡಂ ॥ ಬಿಡುವರ್ ಮಧ್ಯ ಮರೆನಿತೆಡ । ರಡಸ
ಲೊಡಂ ಬಿಡರಾಂತಾಕೃತ್ಯಮಧೀರರ್ ॥

ಎಂಬುದನ್ನು ಸ್ಮರಿಸಿಕೊಂಡು ದೃಢಸಂಕಲ್ಪದಿಂದ ದಿಟ್ಟಹೆಜ್ಜೆಯನ್ನು ಮುಂದಿಟ್ಟರು. ಅಭಿಮಾನಿ ಮತ್ತು ಉತ್ಸಾಹಿಗಳಾದ ತಮ್ಮ ಸಂಗಡಿಗರೊಡನೆ ಆಲೋಚಿಸಿ ಕಾರ್ಯಕ್ರಮದ ನಕ್ಷೆಯನ್ನು ತಯಾರಿಸಿ ಧೀರಕ್ರಮವನ್ನು ಕೈಕೊಂಡರು. ಸ್ವಗ್ರಾಮವಾದ ಜೋಳದರಾಶಿಯಲ್ಲಿ ಕರ್ನಾಟಕ ನಾಟಕ ಕಳಾಪರಿಷತ್ತನ್ನು ಸ್ಥಾಪಿಸಿದರು. ಪ್ರಪ್ರಥಮವಾಗಿ ಸಮ್ಮೇಳನವನ್ನು ಬೃಹತ್ಪ್ರಮಾಣದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಜೋಳದರಾಶಿಯಲ್ಲೇ ನಡೆಸಿದರು.

ಹೆಸರಾಂತ ಅಭಿನಯ ಕುಶಲರೂ ಗುಬ್ಬಿ ನಾಟಕ ಮಂಡಳಿಯ ಮಾಲೀಕರೂ ಆದ ನಾಟಕರತ್ನ ಶ್ರೀ ಗುಬ್ಬಿವೀರಣ್ಣನವರು ಸಭೆಯನ್ನು ಉದ್ಘಾಟಿಸಿದರು. ನಾಟಕಾಲಂಕಾರ ಶ್ರೀ ಗರುಡ ಸದಾಶಿವರಾಯರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾಂಸರಿಂದ, ನಾನಾ ಭಾಗಗಳಿಂದ ಆಗಮಿಸಿದ ಕಲಾವಿದರಿಂದ, ಅಭಿಮಾನಿಗಳಿಂದ, ಸಭೆ ಕಿಕ್ಕಿರಿದಿತ್ತು. ನಾನಾ ಕಾರ್ಯ ಕಲಾಪಗಳು ನಡೆದುವು. 'ಕಲೆ' ಎಂಬ ನಾಟಕದ ವಿಚಾರವಾಗಿ ಪಂಡಿತರಿಂದ ಬರೆಯಲ್ಪಟ್ಟ ಲೇಖನಗಳನ್ನೊಳಗೊಂಡ ಮತ್ತು ಬಳ್ಳಾರಿ ಜಿಲ್ಲೆಯ ನಾಟಕಕಾರರ ಮತ್ತು ನಟರ ಪರಿಚಯ ಮಾಡಿಕೊಡುವ ಬರಹಗಳಿಂದ ಯುಕ್ತವಾದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಮಹಾಸಭೆಯು ಯಾವ ಅಡೆತಡೆಗಳಿಲ್ಲದೆ ಮಂಗಲಮಯವಾಗಿ ಮುಕ್ತಾಯವಾಯಿತು. ಪರಿಷತ್ತಿನ ಮತ್ತು ಕಾರಣ ಕರ್ತರಾದ ಶ್ರೀ ಗೌಡರ ಕೀರ್ತಿ ವಾರ್ತೆ ಆಂಧ್ರ ಕರ್ನಾಟಕದ ಎಲ್ಲೆಡೆಗಳಲ್ಲಿ ಹಬ್ಬಿಹರಡಿತು.

ಶ್ರೀ ಗೌಡರು ಕಲಾ ಜೀವನದಲ್ಲೇ ವ್ಯೈಮರೆತವರಲ್ಲ. ಗೃಹಸ್ಥ ಜೀವನವನ್ನು ಕಡೆಗಣಿಸಿದವರೂ ಅಲ್ಲ. 'ಧನ್ಯೋ ಗೃಹಸ್ಥಾಶ್ರಮಿ' ಆಶ್ರಮಗಳಲ್ಲಿ ಗೃಹಸ್ಥಾಶ್ರಮಕ್ಕೆ ಅಗ್ರಸ್ಥಾನ. ಉಳಿದ ಮೂರು ಆಶ್ರಮಗಳಿಗೆ ಇದು ಆಶ್ರಯ ಸ್ಥಾನವಾದುದರಿಂದ, ಜಾಣನಾದವನು ಲೌಕಿಕ ಪರಮಾರ್ಥಗಳಲ್ಲಿ ಸಮನಾಗಿ ವರ್ತಿಸುವನೆಂಬುದನ್ನು ಅರಿತ ಚತುರರು ಗೌಡರು. ಪ್ರಾಪಂಚಿಕ ಜೀವನದಲ್ಲಿ ಅಲ್ಪಸ್ವಲ್ಪವಾದರೂ ಕಷ್ಟಕಾರ್ಪಣ್ಯ ಗಳನ್ನು ಅನುಭವಿಸದಿರಲು ಎಂತೆಂತಹ ಋಷಿ ಮುನಿಗಳಿಗೂ ಸಾಧ್ಯವಲ್ಲ. ಗೌಡರು ಕೂಡ ಇದಕ್ಕೆ ಹೊರತಾದವರಲ್ಲ. ಶ್ರೀ ಗೌಡರಿಗೆ ಎಳೇಪ್ರಾಯ (ಹರೆಯ)ದಲ್ಲಿಯೇ ಮದುವೆಯಾಗಿತ್ತು. ಎಳೆಪ್ರಾಯದಲ್ಲೇ ಪತ್ನೀವಿಯೋಗವಾಯ್ತು. ಎರಡನೇ ವಿವಾಹವಾಯ್ತು, ಸಂತಾನವಾಗಲಿಲ್ಲ. ಆದರೂ ಮಕ್ಕಳಿಲ್ಲವೆಂಬ ಚಿಂತೆ, ಗೌಡ ದಂಪತಿಗಳನ್ನು ಅಷ್ಟಾಗಿ ಕಾಡಲಿಲ್ಲವೆಂದೇ ನಾನು ಭಾವಿಸಿದ್ದೇನೆ. ಒಂದಂತೂ ನಿಜ. ಶ್ರೀ ಗೌಡರ ದಾಂಪತ್ಯ ಜೀವನ ಒಲವು-ನಲಿವುಗಳಿಂದ ಕೂಡಿದ್ದು, ಆದರ್ಶಪ್ರಾಯ ವಾದದ್ದು. ಇದಕ್ಕೆ ನಿದರ್ಶನ: ಶ್ರೀ ಗೌಡರ ಎರಡನೆಯ ಹೆಂಡತಿ ಸಾಧ್ವಿ ಶ್ರೀಮತಿ ಹನುಮಕ್ಕ ಲಿಂಗೈಕ್ಯಳಾದಾಗ ಶ್ರೀ ಗೌಡರ ದುಃಖ ಸಂತಪ್ತ ಹೃದಯದಿಂದ ಹೊರ ಹೊಮ್ಮಿದ "ಗೌಡತಿ" ಎಂಬ ದೀರ್ಘಚರಮಗೀತೆ, ಅವರ ದಾಂಪತ್ಯದ ಮಹತಿ ಯನ್ನು ಸಾರುತ್ತದೆ.

ಶ್ರೀ ಗೌಡರ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿದವರು, ಜೀವನ ದಲ್ಲಿ ಅಷ್ಟಿಷ್ಟು ಪರಿವರ್ತನೆಯಾಗುವಂತೆ ಮಾಡಿದವರು ಧಾರವಾಡದ ಮುರುಘಾ ಮಠದ ಶ್ರೀ ನಿ. ಪ್ರ. ಸ್ವ. ತ್ರಿವಿಧದಾಸೋಹಮೂರ್ತಿ ಮೃತ್ಯುಂಜಯಪ್ಪ ಅಪ್ಪಗಳು.

ಶ್ರೀ ಗೌಡರ ದೃಷ್ಟಿ ಶರಣ ಧರ್ಮದಲ್ಲಿ ನೆಲಸಿತು. ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯಪ್ಪನವರ ಆಜ್ಞಾನುವರ್ತಿಗಳಾಗಿ ಮುವ್ವತ್ತು ವರುಷಗಳಿಂದ ಶಿವಾನು ಭವದಲ್ಲಿ ಮಗ್ನರಾಗಿ ಶೂನ್ಯ ಸಂಪಾದನೆಯನ್ನು ಇಂದಿನವರೆಗೂ ಪ್ರವಚನ ಮಾಡು ತ್ತಿದ್ದಾರೆ. ಶೂನ್ಯಸಂಪಾದನೆಯ ಅಂತರಂಗವನ್ನು ಬಹುಮಟ್ಟಿಗೆ ಅರಿತವರಲ್ಲಿ ಶ್ರೀ ಗೌಡರೂ ಒಬ್ಬರಾಗಿದ್ದಾರೆ. ಶೂನ್ಯಸಂಪಾದನೆಗೆ "ಬಯಲುಗಳಿಕೆ" ಎಂದು ಹೆಸರಿಟ್ಟು ವ್ಯಾಖ್ಯಾನ ಬರೆದು ಬೃಹದ್ಗ್ರಂಥವನ್ನು ಹೊರತಂದಿದ್ದಾರೆ, ಹಾಗೂ ಆಂಧ್ರಭಾಷೆಯಲ್ಲಿ ಇದೇ ಗ್ರಂಥವನ್ನು ಅನುವಾದಿಸಿದ್ದಾರೆ. ತೆಲುಗು 'ಶೂನ್ಯ ಸಂಪಾದನೆ'ಯ ಪ್ರಕಾಶನದ ಭಾರವನ್ನು ಆಂಧ್ರವಿಶ್ವವಿದ್ಯಾಲಯವು ವಹಿಸಿಕೊಂಡಿದೆ ಯೆಂಬುದನ್ನು ಕೇಳಿದ ಯಾವ ಕನ್ನಡಿಗ ಪುಳಕಿತನಾಗದಿರುತ್ತಾನೆ. !

ಒಂದು ಮಾತನ್ನು ಹೇಳಿ ಈ ಲೇಖನವನ್ನು ಮುಗಿಸುವೆ. ನಮ್ಮ ನಾಡಿನಲ್ಲಿ ಸಾಹಿತ್ಯ, ಸಂಗೀತ, ಕವಿತ್ವದಲ್ಲಿ ಬಲ್ಲಿದರಾದವರಿಗೆ ಅಭಿನಯ ಕುಶಲರಿಗೆ, ನಾನಾ ಕಲಾವಿದರಿಗೆ ಕೊರತೆಯಿಲ್ಲ. ಒಂದೆರಡು ಮೂರು ವಿಷಯಗಳನ್ನಾಯ್ದುಕೊಂಡು,

ಅಧ್ಯಯನಮಾಡಿ ಪರಿಣತಿ ಪಡೆದು, ಶ್ರೀ ಗೌಡರಿಗಿಂತ ಮಿಗಿಲಾದ, ಪ್ರಕಾಂಡ ಪಂಡಿತರು ಕವಿ ಸಾರ್ವಭೌಮರು ಕಲಾಪ್ರಪೂರ್ಣರಾದವರು ಉಂಟೆಂಬುದನ್ನು ನಾನು ಆದಷ್ಟು ಮಟ್ಟಿಗೆ ತಿಳಿದಿದ್ದೇನೆ. ಆದರೆ ಶ್ರೀ ಗೌಡರಂತೆ ಸಾಹಿತಿಯಾಗಿ, ಕರ್ಣ ರಸಾಯನವೆನಿಸುವ ಗಮಕಿಯಾಗಿ ಕವಿಯಾಗಿ, ನಟನಾಗಿ, ನಾಟಕಕಾರನಾಗಿ, ವಾಗ್ಮಿ ಯಾಗಿ, ಪುರಾಣಪಟುವಾಗಿ–ಹೀಗೆ ಹಲವಾರು ಕಲಾ ಸಂಪತ್ತಿಗೆ ನಿಧಿಯಾಗಿರುವವರು ಶ್ರೀ ಗೌಡರಿಗೆ ಹೆಗಲೆಣೆಯಾಗಿ ನಿಲ್ಲುವವರು ಮಾತ್ರ ವಿರಳ.

ಶ್ರೀ ಗೌಡರ ಕಲಾ ಮತ್ತು ವಿದ್ವತ್ ಪ್ರಭಾವದಿಂದ ಜೋಳದರಾಶಿ ಎಂಬ ಸಣ್ಣ ಹಳ್ಳಿ ಕರ್ನಾಟಕದ ಭೂಪಟದಲ್ಲಿ ಎದ್ದು ತೋರುವಂತೆ ಗುರುತಿಸಲು ಅರ್ಹತೆ ಪಡೆಯಿತಂ. ಧನ್ಯಜೋಳದ ರಾಶಿ ಮಾನ್ಯ ಜೋಳದರಾಶಿ.

ಇತಿ ಶಿವಂ

ದಿನಬೆಳಗಾದರೆ ಒಬ್ಬರೊಬ್ಬರ ಬಾಳುವೆಯ ಕುಂದು–ಕೊರತೆ ಗಳು ಕೈಗನ್ನಡಿಯಂತೆ ಕಾಣುವ ಇದ್ದುರ ಸಂಬಂಧ ಯೋಗ್ಯವಲ್ಲ.

★ ★ ★

ಸಂಸಾರ ಸುಖದಲ್ಲಿ ಕೊರತೆಯೊದವರು ನಾಟಕದ ನಾಯಕ ನಾಗಿ ಆ ಪಾತ್ರಕ್ಕೆ ಜೋಡಾದ ನಾಯಕಿಯೊಂದಿಗೆ ನೀತಿಯಿಂದ ಬಾಳುವುದು ಅಪರೂಪ.

★ ★ ★

ಅಭಿನಯವೆಂದರೆ ಅದೊಂದು ಆಧ್ಯಾತ್ಮಿಕ ಕಲೆ.

ವಿಶಾಲ ಸಾಗರದ ವ್ಯಕ್ತಿತ್ವ

ಜಯಾ ಎಸ್. ರಾವ್

ಮಾನವನ ಸಂಬಂಧಗಳು ಸಂಕೀರ್ಣವಾದದ್ದು. ಯಾವಾಗ ಹೇಗೆ ಒಬ್ಬರಿಗೊಬ್ಬರು ಹತ್ತಿರವಾಗ್ತೀವಿ, ಯಾಕೆ ಆಗುತ್ತೀವಿ ಅನ್ನುವುದಂ ಮಾತ್ರ ಉತ್ತರಿಸಲಾಗದ ಜಟಿಲಪ್ರಶ್ನೆ. ಜನ್ಮಗಳ ಋಣಾನುಬಂಧ. ಹಾಗೆ ಬೆಸೆಯುತ್ತದೇನೋ ಅನಿಸುತ್ತದೆ ಹಲವೊಮ್ಮೆ. ಕಾರಣ ಏನೇ ಇರಲಿ, ನನ್ನ ಮತ್ತು ಶ್ರೀ ದೊಡ್ಡನ ಗೌಡರ ಸಂಬಂಧ ಹಾಗೆ ಬೆಸೆದದ್ದಾಗಿದೆ. ಅವರ ಮಾತಿನಲ್ಲೇ ಹೇಳುವುದಾದರೆ— "ಬೆಟ್ಟದ ನೆಲ್ಲಿಕಾಯಿಗೂ, ಸಮುದ್ರದ ಉಪ್ಪಿಗೂ ಎಲ್ಲಿಯ ನಂಟು? ಆದರೆ ಅವೆರಡೂ ಸೇರಿದಾಗ ಎಂಥಾರುಚಿ. ಹಾಗೆ ಅಲ್ಲವೇ ಮಗಳೇ ನನ್ನ ನಿನ್ನ ಈ ಸಂಬಂಧ ?" ಈ ಮಾತನ್ನು ಅವರ ಪತ್ರಗಳಲ್ಲಿ ಅನೇಕ ಸಾರಿ ಬರೆದಿದ್ದಾರೆ. ಮುತ್ತಿನಂತಹ ಅವರ ಅಕ್ಷರ, ಸೂಜಿಗಲ್ಲಿನಂತೆ ಅವರೆಡೆಗೆ ಸೆಳೆದುಕೊಳ್ಳುವ ಬರವಣಿಗೆ ಓದುವಾಗ ಮೈಮರೆಸುತ್ತದೆ, ಮನತಣಿಸುತ್ತದೆ.

ಶ್ರೀ ದೊಡ್ಡನಗೌಡರನ್ನು ನಾನು ಮೊದಲು ಕಂಡದ್ದು ನನ್ನ ಗೆಳತಿ ಶ್ರೀಮತಿ ವಸುಂಧರಮ್ಮನವರ ಮನೆಯಲ್ಲಿ. ಅವರನ್ನು ಕಾಣುವುದಕ್ಕಿಂತಲೂ ಮೊದಲು ಅವರ

ಆತ್ಮಕಥೆ "ನಂದೇ ನಾನೋದಿದೆ" ಪುಸ್ತಕವನ್ನು ಓದಿದ್ದೆ. ಅದನ್ನು ಓದಿದಾಗಿನಿಂದಲೂ ಅವರನ್ನು ಕಾಣಬೇಕೆಂಬ ಹಂಬಲ ನನಗಿತ್ತು. 1980ರ ಏಪ್ರಿಲ್‌ನಲ್ಲಿ ಒಂದು ಮಧ್ಯಾಹ್ನ ನಾಲ್ಕು ಘಂಟೆ ಸುಮಾರಿನಲ್ಲಿ ನಾನು ವಸುಂಧರಮ್ಮನವರ ಮನೆಯಲ್ಲಿದ್ದೆ. "ದೊಡ್ಡನಗೌಡರನ್ನು ನೋಡಬೇಕು ಅಂತಿದ್ರಲ್ಲಾ ಅವರು ಬಂದಿದ್ದಾರೆ" ಅಂತ ವಸುಂದರಮ್ಮ ಹೇಳುವ ಹೊತ್ತಿಗೆ ಸರಿಯಾಗಿ, ಒಂದು ದೊಡ್ಡಕೋಲನ್ನು ಊರಿಕೊಂಡು, ಶುಭ್ರ, ಶ್ವೇತವಸನರಾಗಿ, ಬಟ್ಟೆಯಷ್ಟೇ ಬೆಳ್ಳಗಿದ್ದ ಕೂದಲನ್ನು ಹಿಂದಕ್ಕೆ ಬಾಚಿ, ದಿಟ್ಟನಡಿಗೆಯಿಂದ ಒಳಗೆ ಬಂದಾಗ, ನನಗೆ ಅವರನ್ನು ಹೊಸದಾಗಿ ಪರಿಚಯ ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ ಎನಿಸಿಬಿಟ್ಟಿತು. ಆ ಕ್ಷಣದಲ್ಲಿ ನನಗೆ ಯಾಕೆ ಹಾಗನ್ನಿಸಿತು? ಅದು ಈಗಲೂ ಗೊತ್ತಿಲ್ಲ. ನನಗವರು ಬಹಳ ಆತ್ಮೀಯರಾಗಿ, ತುಂಬಾ ಹತ್ತಿರವದವರಾಗಿ ಕಾಣಿಸಿಕೊಂಡರು. ಬಹುಶಃ ಇದಕ್ಕೇ ಋಣಾನುಬಂಧ ಅಂತಾರೇನೋ? ಬಂದು ಹತ್ತಿರ-ಕುಳಿತು ಯೋಗ ಕ್ಷೇಮ ವಿಚಾರಿಸಿದರು. "ನಿನ್ನ ಬಗ್ಗೆ ಸುಂದರಮ್ಮ ಬಹಳ ಹೇಳ್ಯಾಳಮ್ಮ" ಅಂದಾಗ, ಅವರ ಮಾತಿನಲ್ಲಿ ನಾನು ಕಂಡ ಆ ಪ್ರೇಮ, ಸ್ನೇಹ ನನ್ನನ್ನೂ ಪೂರ್ಣವಾಗಿ ಅವರೆಡೆಗೆ ಸೆಳೆದುಕೊಂಡುಬಿಟ್ಟಿತು. ಆ ಕ್ಷಣವನ್ನು ನನ್ನ ಜೀವಮಾನದಲ್ಲಿ ಎಂದೂ ಮರೆಯಲಾರೆ.

ನಂತರದ ದಿನಗಳೆಲ್ಲಾ ನಮ್ಮ ಬಾಂಧವ್ಯದ ಬೆಸುಗೆ ಬಿಗಿಯಾಗುತ್ತಾ ಹೋದ ದಿನಗಳು. ಕೇವಲ ಒಂಭತ್ತು ವರ್ಷಗಳ ಈ ಬಾಂಧವ್ಯ ಒಂಭತ್ತು ಜನ್ಮಗಳದ್ದೇನೋ ಅನಿಸುತ್ತದೆ. ಅವರು ನನ್ನ ಬಾಳಿನಲ್ಲಿ ಇಷ್ಟೊಂದು ತುಂಬಿಕೊಳ್ಳಲು ಕಾರಣ ನನ್ನ ಹೆತ್ತ ಅಪ್ಪನಿಗೂ, ಅವರಿಗೂ ಇರುವ ಸಾಮ್ಯ. ನನ್ನ ಅಪ್ಪನೂ ಕೂಡ ಅವರಂತೆ ಸಾಹಿತಿಗಳೂ, ಶಿವಮೊಗ್ಗಾದಲ್ಲಿ ಹೆಸರಾಂತ ಅಡ್ವೇಕೇಟರಾಗಿದ್ದ ಕುಕ್ಕೆ ಸೀತಾರಾಮಶಾಸ್ತ್ರಿಗಳು. ಈ ಅಪ್ಪನಿಗೂ, ಆ ಅಪ್ಪನಿಗೂ ಏನೂ ವ್ಯತ್ಯಾಸವೇ ಇಲ್ಲ ಅನ್ನಬಹುದಾದಷ್ಟು ಸಾಮ್ಯವಿದೆ, ಗುಣದಲ್ಲಿ, ಸ್ವಭಾವದಲ್ಲಿ, ಮನೋಭಾವದಲ್ಲಿ, ನಡವಳಿಕೆಯಲ್ಲಿ-ಮಾತಿನಲ್ಲಿ ಎಲ್ಲದರಲ್ಲೂ ಇಬ್ಬರೂ ಕೂಡ ಮೇರು ಪರ್ವತಗಳು !.

ಶ್ರೀ ದೊಡ್ಡನಗೌಡರನ್ನು ಭೇಟಿಯಾಗುವ ಕೆಲವು ವರ್ಷಗಳ ಮುನ್ನ ನನಗೆ ಪಿತೃವಿಯೋಗವಾಗಿತ್ತು. ನಾನು ಮೊದಲಿಂದಲೂ ತಂದೆಯನ್ನು ತುಂಬಾ ಹಚ್ಚಿಕೊಂಡವಳು. ತಾಯಿಯ ಮುಖವನ್ನು ನೋಡಿದ ನೆನಪೂ ಕೂಡ ಉಳಿಯದಷ್ಟು ಎಳೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ನನಗೆ, ನನ್ನ ತಂದೆಯೇ ತಾಯಿ, ಗುರು, ಮಾರ್ಗದರ್ಶಕ ಎಲ್ಲಾ ಆಗಿದ್ದರು. ಅಂತಹ ತಂದೆಯನ್ನು ಕಳೆದುಕೊಂಡಾಗ ನನಗೆ ಅನಾಥಭಾವ ಕಾಡುವುದು ಸಹಜ. ನನ್ನ ಜೀವ ಸದಾ ತಂದೆಯ ಮಾರ್ಗದರ್ಶನ, ಅವರ ಪ್ರೀತಿ, ವಾತ್ಸಲ್ಯವನ್ನು ನೆನೆದು ದುಃಖಿಸುತ್ತಿತ್ತು. ಪಿತೃವಾತ್ಸಲ್ಯಕ್ಕಾಗಿ ಪರಿತಪಿಸುತ್ತಿದ್ದ ಸಮಯದಲ್ಲೇ ನನಗೆ ಶ್ರೀ ದೊಡ್ಡನಗೌಡರ ಪರಿಚಯ

ವಾವದ್ದು. ಮೊದಲ ನೋಟದಲ್ಲೇ ನಾನು ಅವರಲ್ಲಿ ನನ್ನ ಅಪ್ಪನನ್ನು ಕಂಡೆ. ಆತ್ಮೀಯವಾಗಿ, ಹತ್ತಿರ ಕುಳಿತು "ಮಗಳೇ" ಎಂದು ನನ್ನನ್ನು ಸಂಬೋಧಿಸಿದಾಗ, ಕಳೆದುಕೊಂಡ ಅಪ್ಪ ನನಗೆ ಪುನಃ ದೊರೆತರು. ಅಂದಿನಿಂದ ನಾನು ಅವರನ್ನು "ಅಪ್ಪಾಜಿ" ಎಂದೇ ಕರೆಯುತ್ತೇನೆ. ಅನೇಕ ಸಾರಿ ನನ್ನನ್ನು ಬಯ್ತಾ ಇರುತ್ತಾರೆ— "ನೀನು ಅಪ್ಪನ ಮಗಳು ನೋಡು, ನಿನ್ನಪ್ಪ ಮುದ್ದುಮಾಡಿ ನಿನ್ನ ಹಾಳುಮಾಡ್ಯಾನೆ" ಅಂತ.

ಒಂಭತ್ತು ವರ್ಷಗಳ ಈ ಅಪ್ಪ–ಮಗಳ ಬಾಂಧವ್ಯದಲ್ಲಿ ನನ್ನ ಅಪ್ಪಾಜಿಯ ಹಲವು ಮುಖಗಳ ಕಿರುಪರಿಚಯ ನನಗಾಗಿದೆ. ಕಿರುಪರಿಚಯವೆಂದೇ ಹೇಳಬೇಕು. ಯಾಕೆಂದರೆ ಅವರ ವ್ಯಕ್ತಿತ್ವ ವಿಶಾಲ ಸಾಗರವಿದ್ದಂತೆ. ಹೆಕ್ಕಿದಷ್ಟೂ ಮುತ್ತು, ರತ್ನ, ಹವಳ ದೊರೆಯುವ ವಿಶಾಲ ಸಮುದ್ರವದು. ಅದರ ಆಳ, ಅಗಲ ಅರಿಯುವುದು ಒಬ್ಬರಿಂದ ಸಾಧ್ಯವಿಲ್ಲ. ಉತ್ತಮ ಕವಿಯಾಗಿ, ಗಮಕ ಕಲಾವಿದನಾಗಿ, ನಟನಾಗಿ, ನಾಟಕಕಾರನಾಗಿ, ತತ್ವಜ್ಞಾನಿಯಾಗಿ ವ್ಯಾಖ್ಯಾನ ಪಟುವಾಗಿ, ನನ್ನ ಅಪ್ಪಾಜಿ ನಾಡಿಗೆ, ನುಡಿಗೆ ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆ ಅಪಾರ. ಬಹುಮುಖ ಪ್ರತಿಭೆಯ ವ್ಯಕ್ತಿಯಾದ ಅವರು ಹುಟ್ಟು ಕಲಾವಿದ, ರಸ ಋಷಿ, ಯೋಗಿ, ದೈವಭಕ್ತ. ಪ್ರತಿಯೊಬ್ಬ ಮಾನವನೂ ಅವನು ಎಷ್ಟೇ ದೊಡ್ಡ ವ್ಯಕ್ತಿಯಾಗಲಿ, ಗುಣಾವಗುಣಗಳ ಒಂದು ಸಂಯೋಗ. ಅದರಂತೆ ನನ್ನ ಅಪ್ಪಾಜಿ ಕೂಡ ಮಹಾ ದರ್ಪಿಷ್ಠ, ಅತ್ಯಂತ ನಿಷ್ಠುರಿ. ಯಾರಿಗೂ ಅಳುಕದ, ಅಂಜದ ಧೀರ, ಧೀಮಂತ ವ್ಯಕ್ತಿ. ಈ ಇಳಿವಯಸ್ಸಿನಲ್ಲಿ ಕೂಡ ಮಾರಿಗೊಂದು ಹಜ್ಜೆ ಹಾಕುತ್ತಾ, ಎಲ್ಲರಿಗಿಂತಲೂ ಮುಂದೆ ದೃಢವಾಗಿ, ವೇಗವಾಗಿ ನಡೆಯುವ ಅವರ ನಡಿಗೆಯೇ ಅವರ ಧೀಮಂತ ವ್ಯಕ್ತಿತ್ವವನ್ನು ಸಾರಿಹೇಳುತ್ತದೆ.

"ನಂದೇ ನಾನೋದಿದೆ" ಪುಸ್ತಕದಲ್ಲಿ ಅವರು ತಮ್ಮ ನಾಟಕದ ಗೀಳು, ಅದಕ್ಕಾಗಿ ಪಟ್ಟ ಪಾಡು, ಅನುಭವಿಸಿದ ಆನಂದ, ಸಂಕಟ ಪ್ರತಿಯೊಂದನ್ನೂ ಸವಿಸ್ತಾರವಾಗಿ ಬರೆದಿದ್ದಾರೆ. ನಾಟಕದಲ್ಲಿ ಅವರ ಪಾತ್ರಗಳನ್ನು ನೋಡಿ ನಲಿಯುವ ಸುಯೋಗ ನನಗಿಲ್ಲ. ನನಗವರು ಪರಿಚಯವಾಗುವ ಹೊತ್ತಿಗೇ ನಾಟಕದಲ್ಲಿ ಕೊನೆಯ ಅಂಕದ ಪರದೆ ಬಿದ್ದಾಗಿ ಹೋಗಿತ್ತು. ಆದರೂ ಅವರ ಪಾತ್ರಗಳನ್ನು ಅವರ ಪುಸ್ತಕದಲ್ಲಿ ಓದಿ, ಅವರ ಬಾಯಿಂದಲೂ ಕೇಳಿ ಆನಂದಿಸಿದ್ದೀನಿ. ಈ ನಾಟಕದ ವಿಷಯ ಬರೆಯುವಾಗ ಜೋಳದರಾಶಿಯಲ್ಲಿ ನಡೆದ ಒಂದು ಸಂಗತಿ ಬರೆಯದೇ ಇರಲಾರೆ.

ಜೋಳದರಾಶಿಗೆ ಅದು ನನ್ನ ಮೊದಲ ಭೇಟಿಯಾಗಿತ್ತು. ನಾನು ಮತ್ತು ಗೆಳತಿ ವಸುಂಧರಮ್ಮ ಒಟ್ಟಿಗೇ ಧಾಳಿ ಇಟ್ಟಿದ್ದೆವು ತೌರೂರಿಗೆ. ಅಪ್ಪನ ಸಂಭ್ರಮಕ್ಕೆ, ನಮ್ಮ ಉತ್ಸಾಹಕ್ಕೆ ಮೇರೆ ಇರಲಿಲ್ಲ. ಪುಟ್ಟ ಅರಮನೆಯಂತಿರುವ ನನ್ನ ಅಪ್ಪನ

ಮನೆ ಅವರ ಮನಸ್ಸಿನಷ್ಟೇ ವಿಶಾಲವಾಗಿದೆ. ಮನೆಯ ಯಜಮಾನ ನನ್ನಪ್ಪನೇ ಆದರೂ, ವಾಸ್ತವಿಕವಾಗಿ ಮನೆ ನಡೆಸಿಕೊಂಡು ಹೋಗುತ್ತಿರುವುದು ಅವರ ಸೋದರಳಿಯ ಶ್ರೀ ಚೆನ್ನವೀರಣ್ಣನವರು. ಅವರೂ ಕೂಡ ಮಾವನಂತೆ ಅತ್ಯಂತ ಸುಸಂಸ್ಕೃತರು, ಬರಹಗಾರರು. ವಾತ್ಸಲ್ಯಮಯಿ. ಅಣ್ಣ ಚೆನ್ನವೀರಣ್ಣನವರ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮನವರ ಸತ್ಕಾರ ಅತ್ಯಂತ ಆಪ್ಯಾಯಮಾನ.

ಶಿವಮೊಗ್ಗಾದಿಂದ ಬೆಳಿಗ್ಗೆ ಹೊರಟವರು ಜೋಳದರಾಶಿ ತಲುಪಿದಾಗ ಸಂಜೆ ಐದು ಘಂಟೆಯಾಗಿತ್ತು. ಅವತ್ತು ಯೋಗಕ್ಷೇಮದ ಕುಶಲ ಸಂಭಾಷಣೆ ಮಾತ್ರ. ಪ್ರಯಾಣದ ಆಯಾಸವೆಂದು ಬೇಗನೆ ಮಲಗಿಬಿಟ್ಟೆವು. ಆ ದಿನ ರಾತ್ರಿ ನಿದ್ರೆ ಹತ್ತುವ ಸಮಯದಲ್ಲಿ ಪಕ್ಕದ ರೂಮಿನಲ್ಲಿ ಮಲಗಿದ್ದ ನನ್ನ ಅಪ್ಪಾಜಿ ಎದ್ದು ಬಂದರು. ಗೆಳತಿಯರು ನಾವಿಬ್ಬರೂ ಆಗಲೇ ನಿದ್ದೆಯ ಮಂಪರಿನಲ್ಲಿದ್ದೆವು. ಅಪ್ಪಾಜಿಯವರು ಹೊಸ ಶಾಲೊಂದನ್ನು ತಂದು ನನಗೆ ಹೊದಿಸಿದರು. ತಕ್ಷಣ ನನಗೆ ಎಚ್ಚರವಾಯಿತು. "ನಿಂಗೆ ಛಳಿಯಾಗತ್ತೆ ಅಂತ ಹೊದೆಸಿದೆ ಮಗಳೇ" ಎಂದು ಅವರಂದಾಗ, ಅವರ ವಾತ್ಸಲ್ಯ ನನ್ನ ಕಣ್ಣಿನಲ್ಲಿ ನೀರು ಚಿಮ್ಮಿಸಿತು. ಹೆತ್ತ ಅಪ್ಪನಿಲ್ಲ ವೆಂದು ನಾನೇಕೆ ಅಳಬೇಕು ? ಪ್ರೇಮಮಯಿ ಅಪ್ಪನ ಮಮತೆಯ ನಿದರ್ಶನ ಇದೊಂದು. ಇಂತಹ ಎಷ್ಟೋ ಅನುಭವಗಳಾಗಿವೆ, ಒಂದಲ್ಲ ಎರಡಲ್ಲ.

ಮರುದಿನ ಚೆನ್ನವೀರಣ್ಣನವರೊಂದಿಗೆ ಹೊಲ, ಗದ್ದೆ ನೋಡಿಬಂದು, ಊಟ ಮಾಡಿ ಅಪ್ಪನೆದುರು ಕೂತೆವು. ಅಲ್ಲಿಂದ ಶುರುವಾಯಿತು ಅವರು ಬರೆದ ನಾಟಕದ ಪ್ರವಚನ. ಅವರು ಓದಲು ಶುರುಮಾಡಿದ್ದು ಮಧ್ಯಾಹ್ನ ಮೂರು ಘಂಟೆಗೆ. ರಾತ್ರಿ ಹತ್ತೂವರೆಗೆ ಚೆನ್ನವೀರಣ್ಣನವರು ಬಂದು ಕರೆದಾಗಲೇ ನಮಗೆ ಎಚ್ಚರ. ಅದೆಷ್ಟು ಭಾವಪೂರ್ಣವಾಗಿ, ಮೈಮರೆತು ಓದುತ್ತಿದ್ದರೆಂದರೆ ಅವರಿಗೆ ಇಹದ ಪರಿವೆಯೇ ಇರಲಿಲ್ಲ, ಅವರ ಕಂಚಿನ ಧ್ವನಿ, ಅದರ ಮಾಧುರ್ಯ ಈಗಲೂ ಕಿವಿಗೆ ಅಪ್ಪಳಿಸು ವಂತಿದೆ. ಭಾವದ ಆ ವೇಗವನ್ನು ಶರೀರ ತಡೆಯುವ ಸ್ಥಿತಿಯಲ್ಲಿರಲಿಲ್ಲ. ರಾತ್ರಿಯ ಹೊತ್ತಿಗೆ ಅವರ ಗಂಟಲು ಪೂರ್ತಿಯಾಗಿ ಕಟ್ಟಿಬಿಟ್ಟಿತು. ಮರುದಿನ, ಮಾವನ ಯೋಗಕ್ಷೇಮದ ಭಾರ ಹೊತ್ತಿರುವ ಚೆನ್ನವೀರಣ್ಣ ನನಗೆ "ಇವತ್ತು ಮಧ್ಯಾಹ್ನದ ವರೆಗೂ ನಿಮ್ಮಪ್ಪನ ಹತ್ತಿರ ಹೋಗಬೇಡ, ನಿನ್ನ ಕಂಡರೆ ಮತ್ತೆ ಹಾಡಾಕೆ ಶುರು ಮಾಡ್ತಾನವ" ಎಂದರು. ನನಗೂ ಹಾಗೇ ಅನ್ನಿಸಿ ಮಧ್ಯಾಹ್ನದ ಮೇಲೆ ಹೋದಾಗ "ಯಾಕವ್ವ ಮಗಳೇ ಆಗಲೇ ಬ್ಯಾಸರವಾಗಿ ಬಿಡ್ತೇನು ನಿನ್ನ ಅಪ್ಪನ ಸಹವಾಸ" ಅಂತ ಸಿಟ್ಟಾದರು. ನಾಟಕದ ಬಗ್ಗೆ ಮಾತನಾಡುವಾಗ, ಅದರ ಪಾತ್ರಗಳನ್ನು ವಿವರಿಸುವಾಗ ಅದೆಂತಹ ಅದಮ್ಯ ಉತ್ಸಾಹ ಅವರಿಗೆ ಈ ವಯಸ್ಸಿನಲ್ಲಿಯೂ ! ಅವರ ಯೌವ್ವನದಲ್ಲಿ ನಾಟಕದಲ್ಲಿ ಪಾತ್ರವಹಿಸುತ್ತಿದ್ದಾಗ ಅದೆಷ್ಟು ಚೆನ್ನಾಗಿದ್ದಿರ

ಬಹುದು ಎಂದು ನಾನು ಈಗಲೂ ಕಲ್ಪನೆಮಾಡಿ ಕೊಳ್ಳುತ್ತೇನೆ ಪ್ರತಿಭಾವಂತ ನಟ ನೆಂದು ಶ್ರೇಷ್ಠ ನಟರಾದ ಬಳ್ಳಾರಿ ರಾಘವರಿಂದಲೇ ಹೊಗಳಿಸಿಕೊಂಡಿದ್ದಾರೆ.

ನನ್ನ ಅಪ್ಪಾಜಿಯವರು ರಸಋಷಿಗಳು. ಅವರು ಜಗತ್ತನ್ನೂ, ಪ್ರಕೃತಿಯನ್ನೂ ನೋಡುವ ದೃಷ್ಟಿಕೋನದಲ್ಲಿ ರಸಿಕತೆ, ತತ್ವಜ್ಞಾನಗಳೆರಡರ ಸಮ್ಮಿಳನವಿದೆ. ಅವರ ಕವನಗಳಲ್ಲಿ ಜೀವನದ ತಿರುಳೇ ಕಂಡುಬರುತ್ತದೆ. ಜೀವನವನ್ನು ತೆಗೆದುಕೊಳ್ಳ ಬೇಕಾದ ರೀತಿ, ಬಾಳಿನಲ್ಲಿ ಬೆಳೆಸಿಕೊಳ್ಳಬೇಕಾದ ನಿರ್ಲಿಪ್ತತೆ, ಕಾರ್ಯತತ್ಪರತೆ, ಎಲ್ಲವನ್ನೂ ಅವರ ಕವನಗಳು ಬಿಂಬಿಸುವುದನ್ನು ಕಾಣಬಹುದು.

ನನ್ನ ತೌರೂರಾದ ಜೋಳದರಾಶಿಗೆ ಹೋದಾಗಲೆಲ್ಲಾ ಬಿಸಿಲು ಮಚ್ಚಿನ ಮೇಲೆ ನಿಂತು ಸೂರ್ಯೋದಯ ಮತ್ತು ಸೂರ್ಯಾಸ್ತಗಳನ್ನು ಕಾಣುವ ಹವ್ಯಾಸ ನನಗೆ. ಅಲ್ಲಿಯ ಆ ದೃಶ್ಯದ ಸೊಬಗೇ ಬೇರೆ. ಅದು ಅವರ್ಣನೀಯ. ಆ ಸೊಗಸನ್ನು ಕಂಡೇ ಆನಂದಿಸಬೇಕು. ನಾನು ಮಹಡಿ ಮೇಲೆ ಹೋದೆನೆಂದರೆ, ನನ್ನ ಅಪ್ಪಾಜಿ ಹಿಂದೆಯೇ ಬರುವವರು. ಅಂತಹ ಒಂದು ಬೆಳಗು ಉದಯರವಿ ನಿಧಾನವಾಗಿ, ಆಕಾಶದಲ್ಲೆಲ್ಲಾ ಓಕುಳಿ ಎರಚಿ ತನ್ನ ಬರುವನ್ನು ಧರೆಗೆ ಸಾರುತ್ತಿದ್ದ ಸಮಯ. ಆ ದೃಶ್ಯ ನೋಡುವುದರಲ್ಲಿ ತನ್ಮಯಳಾದ ನನ್ನನ್ನು ಹಿಂಭಾಗದಿಂದ ಅಪ್ಪನ ಕಂಚಿನ ಕಂಠದ ಸುಶ್ರಾವ್ಯ ನಾದ ತೂರಿಬಂದು ಎಚ್ಚರಿಸಿತು. ಉದಯ ರವಿಯ ಕಿರಣಗಳಂತಿತ್ತು ಆ ನಾದಲಹರಿ. ಅವರೇ ರಚಿಸಿದ "ಅರುಣ ಕಿರಣದ ಕೆಂಪು" ಕವನವನ್ನು ಕಣ್ಣು ಮುಚ್ಚಿಕೊಂಡು, ಮೈಮರೆತು ಭಾವಪೂರ್ಣವಾಗಿ ಹಾಡುತ್ತಿದ್ದರು. ಆ ಕವನದಲ್ಲಿ ಬಾಳಿನ ತತ್ವವೇ ಅಡಗಿದೆ. ಅದರ ಒಂದೆರಡು ಸಾಲುಗಳನ್ನು ಇಲ್ಲಿ ಹೇಳಿದರೆ ಕಾವ್ಯದ ಮೆಚ್ಚಿಕೆಗೆ ಪೂರಕವಾದೀತಂ.

"ಅದೋ ಬಂದ ರವಿ ಉದಯಾದ್ರಿ ಶಿಖರದಲಿ ॥ಪ॥
ಉದಯ ರಾಗದ ರಸ ರಂಜಿಸಿತು ಮೂಡಣದಿ ॥ಅ.ಪ॥
ಅಸಹಾಯ ಭಾಸ್ಕರನು ದಿನದಿನದ ಯಾತ್ರೆಯಲಿ
ಅಸಮಾನ ತೇಜದಲಿ, ಜೀವಹಿತ ಕಾರ್ಯದಲಿ."

ಸೂರ್ಯದೇವನು ಜೀವಿಗಳ, ಜಗತ್ತಿನ ಹಿತಕ್ಕೆ ಉದಯಿಸುತ್ತಾನೆ. ಅಷ್ಟೇ ಅಲ್ಲ—

"ದಿನದಿನದಿ ಜಗದಗಲ ಸಂಚರಿಸಿ, ಜೀವಿಗಳ
ಜನನ ಮರಣವನರುಹಿ, ನಿರ್ಣಯಿಪ ಸಮದರ್ಶಿ,
ದಿನದುದಯ, ಮಧ್ಯಾಹ್ನ, ಸಂಧ್ಯೆ, ಪರಿಣಾಮಗಳ,
ತಾನೆಯಾಗುತ ತೋರಿ ಬೋಧಿಸುವ ಜಗದ ಗುರು."

ತಾನೇ ಎಲ್ಲವೂ ಆಗಿ ಮಾನವನಿಗೆ ಆದರ್ಶವಾಗಿರುವ ಜಗದ ಗುರು ಅವನು. ಮಾನವರಂತೆ ಹೀಗೆ ಮಾಡಿ ಎಂದು ಬರಿ ಮಾತಿನಲ್ಲಿ ಹೇಳುವವನಲ್ಲ. ಎಲ್ಲವೂ

ತಾನೇ ಆಗಿ ತೋರಿಸುವ ಸಮದರ್ಶಿ ಅವನು. ನಮ್ಮ ಬಾಳಿಗೆ ಎಂತಹ ತತ್ವ, ಆದರ್ಶ ಅಡಗಿದೆ ಈ ಸಾಲುಗಳಲ್ಲಿ !

"ಜನ್ಮಗಳ ಮುಸುಕಿನಲಿ ಮಲಗಿರುವ ಜಡಜೀವಿ,
ಇನ್ನೇಸು ದಿನವಿಂತು ಅಜ್ಞಾನದ ನಿದ್ದೆ,
ಕೊನೆಗೊಳಿಸಿ ಜಿಗಿದೇಳು ನಿಜವರಿತು ನೀ ಬಾಳು".

ಅಜ್ಞಾನದ ನಿದ್ದೆಯು ಮಾಯೆ ಕವಿದಿರುವ ಜೀವಿಗೆ ಸೂರ್ಯನ ಹೊಂಬೆಳಕು ಆ ಮಾಯೆಯನ್ನು ಹರಿಸುವ, ಜನ್ಮಗಳ ಜಡತೆಯನ್ನು ಹೊಡೆದೋಡಿಸುವ ಗುರು. ಆದ್ದರಿಂದಲೇ ಅವನು ಜ್ಞಾನಸೂರ್ಯ. ಅವನಿಂದಲೇ ಆತ್ಮ ಸಾಕ್ಷಾತ್ಕಾರ! ಈ ಕವನದಲ್ಲಿ ಕಾವ್ಯದ ಸೌಂದರ್ಯದ ಜೊತೆ ಜೊತೆಗೇ ತತ್ವಜ್ಞಾನದ ಬೆಳಕೂ ಪ್ರವಹಿಸುತ್ತದೆ. ಸೂರ್ಯನ ಅರುಣ ಕಿರಣಗಳಂತೆ. ಸೂರ್ಯೋದಯ ಮತ್ತು ಸೂರ್ಯಾಸ್ತಗಳೆರಡೂ ಪ್ರಕೃತಿಯ ಒಂದು ಸಾಧಾರಣ ಕ್ರಿಯೆಯಲ್ಲ. ಜಗತ್ತಿನ ಮಾಯಾಂಧಕಾರವನ್ನು ಹೊಡೆದೋಡಿಸುವ ಜ್ಞಾನದ ಬೆಳಕು ಅದು! ಎಂತಹ ಸುಂದರವಾದ ಕವನ! ಆದ್ದರಿಂದಲೇ ನನ್ನ ಅಪ್ಪಾಜಿಯವರನ್ನು ರಸಋಷಿ ಎಂದದ್ದು.

ಅವರ ಕಾವ್ಯದಲ್ಲಿ ಶೃಂಗಾರ, ತತ್ವಗಳ ಜೊತೆಗೆ ಭಕ್ತಿ ಪರವಶತೆಯನ್ನೂ ಅಷ್ಟೇ ಗಾಢವಾಗಿ ಕಾಣಬಹುದು. ದೈವಭಕ್ತರಾದ ಅಪ್ಪಾಜಿಯವರ ಕಾವ್ಯಗಳು ಯಾವಾಗಲೂ ಅವರ ಆರಾಧ್ಯದೈವ "ರಾಮೇಶ"ನಿಗೆ ಅರ್ಪಿತ. ಅವನ ಕೃಪೆಯಿಲ್ಲದೆ ನಾನೇನೂ ಮಾಡಲಾರದ ಕೊರಡು ಎಂಬುದೇ ಅವರ ದೃಢವಾದ ನಂಬಿಕೆ. ಅವರ ಲೇಖನಿಯಲ್ಲಿ ಆ ನಂಬಿಕೆ ನಿರಂತರವಾಗಿ ಪ್ರವಹಿಸುತ್ತದೆ. ಕವನದ ಈ ಸಾಲುಗಳನ್ನು ನೋಡಿ—

"ಆದದ್ದು ನಿನ್ನ ಕೃಪೆ, ಆಗದ್ದು ನಿನ್ನ ಕೃಪೆ,
ಮಾಡಿದ್ದು ನಿನ್ನ ಕೃಪೆ, ಮಾಡದ್ದು ನಿನ್ನ ಕೃಪೆ,
ಆಡಿದ್ದು ನಿನ್ನ ಕೃಪೆ, ನೋಡಿದ್ದು ನಿನ್ನ ಕೃಪೆ,
ಬದುಕಿದ್ದು ನಿನ್ನ ಕೃಪೆ, ಸಾಯುವುದು ನಿನ್ನ ಕೃಪೆ,
ಏನಾದುದಂತೆಲ್ಲಾ ನಿನ್ನ ಕೃಪೆಯಲ್ಲದಿಲ್ಲ,
ತಂದೆ ರಾಮೇಶ ನಿನ್ನ ಘನಕೃಪೆಯ
ತೊಟ್ಟಿಲೊಳಾಡುವ ಕಂದ ನಾನಯ್ಯ"—ಎಂದು ಬರೆಯುತ್ತಾರೆ.

ಈ ಸಾಲುಗಳು "ಭಗವದ್ಗೀತೆಯ", "ತೇನವಿನಾ ತೃಣಮಪಿ ನಚಲತಿ" ನೆನಪಿಗೆ ತರುತ್ತದೆ. ಭಗವಂತನ ಇಚ್ಛೆ ಇಲ್ಲದೆ ಒಂದು ಹುಲ್ಲುಕಡ್ಡಿ ಕೂಡಾ ಅಲುಗಾಡಲಾರದು. ನಿನ್ನ ಕೃಪೆಯ ತೊಟ್ಟಿಲೊಳಿರುವ ಕಂದ ನಾನು ಎಂದು ಕಳಕಳಿಯಿಂದ

ಹೇಳಿಕೊಳ್ಳುತ್ತಾರೆ. ದೈವಭಕ್ತರಲ್ಲದವರಿಗೆ ಇಷ್ಟು ಸರಳವಾಗಿ, ಸುಂದರವಾಗಿ, ಭಕ್ತಿಪೂರ್ಣವಾಗಿ ಬರೆಯಲು ಸಾಧ್ಯವೆ ?

"ಗಾನಯೋಗಿ" ಕವನದಲ್ಲಿ ಅಪ್ಪಾಜಿಯವರು "ರಾಮೇಶನ ನೆನೆದು ಹಾಡುವವನು ನಾನು" ಎಂದು ಹೇಳುತ್ತಾರೆ. ಮಾನವರ ಹಂಗು ನನಗೆ ಬೇಡ. ನಾನು ಹಾಡಬೇಕು, ಹಾಡುತ್ತೀನಿ ರಾಮೇಶನ ನೆನೆದು ಎಂಬುದು ಅವರ ಧೋರಣೆ.

"ಹಾಡುವವನೂ, ಕೇಳುವವನೂ ನಾನೇ ॥ಪ.॥
ಹಾಡಿ ಕೇಳುತ ನಲಿದಾಡುಂವವನೂ ನಾನೇ ॥ಅ.ಪ.॥
ಯಾರು ಕೇಳದೊಡೇನು, ಯಾರರಿಯದಿರಲೆನ್ನ,
ಸಿರಿಕಲೆಗೆ ಕುಂದಹುದೆ,
ನೀರಸರ ನೆರವೇಕೆ ? ನನಗೆ ನಾನೇ ನೆರವಾಗ
ಅರಿವಿಂಗೆ ಗುರಿಯಾಗಿ, ಗುರಿಗೆ ನಾ ಗುರುತಾಗಿ !"

ಯಾರ ಹಂಗೂ ಬೇಡ, ಉಪದ್ರುವವೂ ಬೇಡ, ಯಾರು ಹೊಗಳಿದರೇನು, ತೆಗಳಿದರೇನು? ನನ್ನ ಸಿರಿಕಲೆಗೆ ಕುಂದಿಲ್ಲ ಎಂದು ಹೇಳುವ ಆತ್ಮಸ್ಥೈರ್ಯ, ನಿರ್ಲಿಪ್ತತೆ ಎಷ್ಟು ಮುಂದಿಗಿರುತ್ತದೆ ? ಸಂಭಾವನೆಗೆ, ಹೊಗಳಿಕೆಗೆ, ಕೀರ್ತಿಗೆ ಸಾಹಿತ್ಯ ರಚನೆ ಮಾಡುವ ಕಾಲದಲ್ಲಿ ನನ್ನ ಅಪ್ಪಾಜಿಯಂತಹ "ಗಾನಯೋಗಿ" ಇರುವುದರಿಂದಲೇ ಕೆಲವರ ಜೀವನಕ್ಕಾದರೂ ಒಂದು ಅರ್ಥ ಕಲ್ಪಿಸಿಕೊಳ್ಳಲು ಸಾಧ್ಯವಾಗಿರುವುದು.

ಅಪ್ಪಾಜಿಯವರು ಶರಣ ಕವಿಗಳು, ಶರಣ ಸಾಹಿತ್ಯ ಅವರ ಬದುಕಿನಲ್ಲಿ ಅಪಾರ ಪ್ರಭಾವ ಬೀರಿದೆ. ಮಹಾದೇವಿ ಅಕ್ಕ, ಬಸವಣ್ಣನವರ ವಚನಗಳನ್ನು ತಮ್ಮ ಬಾಳಿಗೆ ಅಳವಡಿಸಿಕೊಂಡಿರುವವರು. ಇಳಿ ವಯಸ್ಸಿನಲ್ಲಿ ಬಿದ್ದು ಕಾಲು ಮುರಿದುಕೊಂಡು ಯಾತನೆ ಅನುಭವಿಸುತ್ತಿದ್ದಾಗ ಅವರ ನೋವನ್ನು ಮರೆಸಿದ್ದು ಬರವಣಿಗೆ. ಯಾವ ಸಂಬಂಧದಿಂದಲೂ, ಯಾರಿಂದಲೂ ದೊರೆಯದ ಶಾಂತಿ, ಸಮಾಧಾನಗಳು ಅವರಿಗೆ ಬರವಣಿಗೆಯೊಂದರಿಂದಲೇ ದೊರೆಯುವುದು. ಮುಂಚಿನಲ್ಲಿ, ಆ ದೊಡ್ಡ ಮನೆಯಲ್ಲಿ, ಮಹಡಿಯ ಮೇಲೆ ಒಬ್ಬರೇ ಕುಳಿತು, ಸದಾ ಸಾಹಿತ್ಯ ರಚನೆಯಲ್ಲಿ, ತತ್ವ ಚಿಂತನೆಯಲ್ಲಿ, ದೇವರ ಧ್ಯಾನದಲ್ಲಿ ತೊಡಗಿರುವ ನನ್ನ ಅಪ್ಪಾಜಿಯವರು ಸಂಸಾರದಲ್ಲಿರುವ ಸನ್ಯಾಸಿ ! ಈ ಜಗತ್ತಿಗೆ ಅಂಟಿಯೂ ಅಂಟದಿರುವ ತಾವರೆಎಲೆಯ ಮೇಲಿನ ನೀರಿನ ಹನಿ ಅವರು. "ನಿಸ್ಸಂಗತ್ವೆ ನಿರ್ಮೋಹತ್ವಂ" ಎಂದು ಶಂಕರಾಚಾರ್ಯರು ಹೇಳಿರುವ ಮಾತು ಅವರ ಪಾಲಿಗೆ ಸತ್ಯ. ನಮ್ಮಂತಹ ಮಕ್ಕಳು ಅನೇಕರಿದ್ದಾರೆ ಅವರಿಗೆ. ಎಲ್ಲಾ ಇದ್ದೂ ಯಾರಿಗೂ ಅತಿಯಾಗಿ ಅಂಟದ, ಸಮಾಜದ ಗೌರವಗಳು ಬೇಕಾದಷ್ಟಿದ್ದೂ, ಯಾವುದನ್ನೂ ಹಚ್ಚಿಕೊಳ್ಳದ, ಸಂಗದಲ್ಲಿದ್ದೂ ನಿಸ್ಸಂಗಿಯಾಗಿರುವ ಗಾನಯೋಗಿ, ರಸಋಷಿಯಾದ ನನ್ನ ಅಪ್ಪಾಜಿಗೆ ಶೂನ್ಯ ಸಂಪಾದನೆಯ ವ್ಯಾಖ್ಯಾನ

"ಬಯಲು ಗಳಿಕೆಯ ಬೆಳಗು" ಬರೆಯಲು ಸಾಧ್ಯವಾಗಿರುವುದು. ಆ ನೋವಿನ ದಿನಗಳಲ್ಲಿ ಅಂತಹ ಬೃಹತ್ ಗ್ರಂಥವನ್ನು ಬರೆದು ಪೂರೈಸಿರುವ ಅವರು ನಿಜವಾದ ಯೋಗಿ. ವಯಸ್ಸಾದ ಕೂಡಲೇ "ನಮ್ಮ ಕೈಲಿ ಏನೂ ಹರಿಯುವುದಿಲ್ಲ"ವೆಂದು ಕೈಕಟ್ಟಿ ಕುಳಿತುಕೊಳ್ಳುವ ಮಂದಿಯೇ ಹೆಚ್ಚು. ಈ ವಯಸ್ಸಿನಲ್ಲಿ ಕೂಡ ಸ್ಪಷ್ಟವಾಗಿರುವ ಅವರ ವಿಚಾರಧಾರೆ, ಕರ್ತೃತ್ವಶಕ್ತಿ ಅಗಾಧವಾದದ್ದು. ಮುಪ್ಪಿನಿಂದ, ಅನೇಕ ದೈಹಿಕ ತೊಂದರೆಗಳಿಂದ ಅವರ ಜೀವ ಜರ್ಝರಿತವಾಗುತ್ತಿದ್ದರೂ, ಅವರ ಮನಸ್ಸಿನ ಚುರುಕು, ಆಧ್ಯಾತ್ಮಶಕ್ತಿ, ಅವರ ಸಂಪರ್ಕವಿರುವ ಯಾರನ್ನಾದರೂ ಬೆರಗುಗೊಳಿಸುತ್ತದೆ.

ಗಮಕ ಕಲಾವಿದರಾಗಿ ನನ್ನ ಅಪ್ಪಾಜಿ ಬಹಳಷ್ಟು ಪ್ರಸಿದ್ಧಿ ಹೊಂದಿದ್ದಾರೆ. ಕರ್ನಾಟಕದಲ್ಲಲ್ಲದೆ, ಭಾರತದ ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿ ತಮ್ಮ ಗಾನಲಹರಿಯಿಂದ ಜನರನ್ನು ಮರುಳುಗೊಳಿಸಿದ್ದಾರೆ. ಈ ವಯಸ್ಸಿನಲ್ಲಿ ಕೂಡ ಅವರ ಕಂಠ ಕಂಚಿನ ಕಂಠ. ಮೊದಲ ಸಲ ನಮ್ಮನೆಗೆ ಬಂದಾಗ ಎಲ್ಲರ ಬಲವಂತಕ್ಕೆ "ಕರ್ಣಾವಸಾನ" ಗಮಕ ಹಾಡಿದ್ದು ಇವತ್ತಿಗೂ ಕಿವಿಯಲ್ಲಿ ಗುಂಯ್‌ಗುಡುತ್ತಿದೆ. ಶರಣರ ವಚನಗಳನ್ನಂತೂ ಅತ್ಯಂತ ಭಕ್ತಿಪೂರ್ಣವಾಗಿ, ಭಾವಪೂರ್ಣವಾಗಿ ಹಾಡುತ್ತಾರೆ. ಶಿವಮೊಗ್ಗದ ಬೆಕ್ಕಿನ ಕಲ್ಮಠದಲ್ಲಿ ಒಂದೆರಡು ಸಾರಿ ಅವರ ಬಾಯಿಂದ ಮಹಾದೇವಿ ಅಕ್ಕನ ಮತ್ತು ಬಸವಣ್ಣನವರ ವಚನಗಳನ್ನು ಕೇಳುವ ಸೌಭಾಗ್ಯ ನನಗೆ ದೊರೆತಿತ್ತು. ಕೆಲವು ಸನ್ನಿವೇಶಗಳನ್ನು ಹಾಡುವಾಗ ಮೈಮರೆತು, ಗದ್ಗದಿತರಾಗಿ, ಕಣ್ಣೀರು ಸುರಿಸುತ್ತಾ ಭಾವಸಮಾಧಿಗೆ ಹೋಗಿಬಿಡುತ್ತಾರೆ. ಆ ಪರವಶತೆ ಇರುವುದರಿಂದಲೇ ಅಷ್ಟು ಸತ್ವಪೂರ್ಣವಾಗಿ, ಜೀವಂತವಾಗಿರುತ್ತವೆ ಅವರ ಸಂಕೀರ್ತನೆಗಳು.

ನನ್ನ ಅಪ್ಪಾಜಿಯವರು ಯಾರಿಗೂ ಸೊಪ್ಪು ಹಾಕುವವರಲ್ಲ, ಯಾರಿಗೂ ಅಂಜುವವರಲ್ಲ. ತಮಗೆ ಸರಿಯಲ್ಲವೆಂದು ಕಂಡುಬಂದರೆ, ಎದುರಿಗೇ ಅಂದು ಬಿಡುತ್ತಾರೆ. ಸಭೆ, ಸಮಾರಂಭಗಳಾಗಲಿ ಅಥವಾ ವೈಯಕ್ತಿಕ ಭೇಟಿಯಾಗಲೀ, ತಮಗೆ ಸರಿಯಿಲ್ಲವೆಂದು ಕಂಡುಬಂದರೆ, ನಿರ್ಭಯವಾಗಿ, ನಿರ್ದಯರಾಗಿ ಟೀಕಿಸಿ ಬಿಡುತ್ತಾರೆ. ಒಮ್ಮೆ ಅವರು ಶಿವಮೊಗ್ಗಾಕ್ಕೆ ಬಂದಾಗ ಒಂದು ಸಂಸ್ಥೆಯವರು ಅವರನ್ನು ಆಹ್ವಾನಿಸಿದ್ದರು. ಸಮಯಕ್ಕೆ ಸರಿಯಾಗಿ ಅಪ್ಪಾಜಿಯವರು ಆಹ್ವಾನಿತ ಸ್ಥಳಕ್ಕೆ ಹೋದರು. ಆದರೆ ಅಲ್ಲಿಯ ವ್ಯವಸ್ಥೆ ಏನೂ ಸಮರ್ಪಕವಿಲ್ಲದೆ, ಸದಸ್ಯರುಗಳು ಕೂಡಾ ಸಮಯಕ್ಕೆ ಸರಿಯಾಗಿ ಬರದೇ ಇದ್ದದ್ದು ನೋಡಿ ಅಪ್ಪಾಜಿಯವರ ಕೋಪ ನೆತ್ತಿಗೇರಿತು. ಭಾಷಣ ಮಾಡಲು ನಿಂತಾಗ ನಿಷ್ಠುರವಾಗಿ ತಮ್ಮ ಅಸಮಾಧಾನ ವ್ಯಕ್ತಪಡಿಸಿಯೇಬಿಟ್ಟರು.

ಜೋಳದರಾಶಿಯಲ್ಲಿ ಕೂಡ ಅವರಿಗೆ ಚಿರಪರಿಚಿತರಾದವರೂ ಅವರ ಮುಂದೆ ಕುಳಿತು ಮಾತನಾಡಲು ಹೆದರುತ್ತಾರೆ. ಚೆನ್ನವೀರಣ್ಣನವರ ಹೊರತು ಮನೆಯಲ್ಲಿ

ಮತ್ಯಾರೂ ಅವರೊಂದಿಗೆ ಸಲಿಗೆಯಿಂದ ವ್ಯವಹರಿಸುವುದಿಲ್ಲ. ಏನೋ ಭಯ ಮಿಶ್ರಿತ ಗೌರವ, ಹುಲಿಯಂತಹ ಮನುಷ್ಯ ಅವರು. ಮೊನ್ನೆ ಒಮ್ಮೆ ಜೋಳದರಾಶಿಗೆ ಹೋದಾಗ ಮಧ್ಯಾಹ್ನ ಅವರು ಹಾಡಿದ "ಮಯೂರಧ್ವಜ" ರೆಕಾರ್ಡ್ ಆಗಿದ್ದ ಕ್ಯಾಸೆಟ್ ಹಾಕಿಕೊಂಡು ಕೇಳುತ್ತಾ ಕೂತಿದ್ದರು. ಒಂದು ಕಡೆ ಕುಳಿತಿರುವುದೇ ಕಷ್ಟ ವೆನಿಸುವ ಸೆಖೆಯಲ್ಲಿ ಕಣ್ಣೀರು ಸುರಿಸುತ್ತಾ ತದೇಕಚಿತ್ತರಾಗಿ ಕುಳಿತಿದ್ದ ಅವರ ಹತ್ತಿರ ನಾನೂ ಕುಳಿತಿದ್ದೆ. ಅವರ ಆ ತನ್ಮಯತೆ ನನಗೆ ಬರಲಿಲ್ಲ. ಅದಕ್ಕೆ ಕಾರಣ ಸಹಿಸಲಸಾಧ್ಯವಾದ ಬಳ್ಳಾರಿಯ ಸೆಖೆ. ನನ್ನಲ್ಲಿ ಏಕಾಗ್ರತೆ ಇರಲಿಲ್ಲವೆಂಬುದು ಅವರ ಸೂಕ್ಷ್ಮಮತಿಗೆ ತಿಳಿದುಹೋಯಿತು. ಭಾವಸಮಾಧಿಯಿಂದ ಈಚೆ ಬಂದವರೇ "ಏನು ಚಂಚಲೆ ನೀನು. ನೀನೇನು ಅಪ್ಪನ ಮಗಳು? ಮಗಳೂ ಇಲ್ಲ, ಅಪ್ಪನೂ ಇಲ್ಲ, ಏನೂ ಇಲ್ಲ" ಎಂದು ಅತ್ಯಂತ ನಿಷ್ಠುರವಾಗಿ ಆಡಿದರು. ಬಳ್ಳಾರಿಯ ಸೆಖೆಯ ಜೊತೆಗೆ, ಅಪ್ಪನ ಈ ನಿಷ್ಠುರದ ಸೆಖೆಯೂ ಸೇರಿ ಜೀವ ತಲ್ಲಣಿಸಿ ಹೋಯಿತು. ಆದರೆ ತಕ್ಷಣವೇ ನನ್ನ ತಲೆ ಸವರುತ್ತಾ "ಮಗಳೇ, ತುಂಬಾ ನೋಯಿಸಿ ಬಿಟ್ಟೆ ನಿನ್ನ, ಏನು ಮಾಡಲಿ ನಾನು ತುಂಬಾ ಕೋಪಿಷ್ಠ" ಎಂದು ಸಮಾಧಾನ ಪಡಿಸಿದರು. ವಜ್ರದಷ್ಟು ಕಠಿಣವಾಗಿರುತ್ತಾರೆ ಕೆಲವೊಮ್ಮೆ, ಆದರೆ ತಕ್ಷಣವೇ ಹೂವಿನಂತೆ ಮೃದುವಾಗಿ ಬಿಡುತ್ತಾರೆ ವಾತ್ಸಲ್ಯಮಯಿ ಅಪ್ಪಾಜಿ.

ಅಪ್ಪಾಜಿ ಮಹಾದರ್ಪಿಷ್ಠ. ಅವರ ನಡೆ, ನುಡಿ, ಮಾತು, ಕಂಠ, ಎಲ್ಲ ದರಲ್ಲೂ ಆ ದರ್ಪದ ಸೇಚನವಿದ್ದೇ ಇರುತ್ತದೆ. ಮಹಾ ಮೇಧಾವಿ, ಸರಸ್ವತೀ ಪುತ್ರರಾದ ಅವರಲ್ಲಿ ಇವುಗಳು ಅವಗುಣವೆಂದೇನೂ ಅನಿಸುವುದಿಲ್ಲ. ಸಾಮಾನ್ಯ ಮನುಷ್ಯರು ಆ ರೀತಿ ನಡೆದುಕೊಂಡರೆ ಅವರನ್ನು ಯಾರೂ ಮಾತಾಡಿಸುವುದಿಲ್ಲ. ಆದರೆ ಅಪ್ಪಾಜಿಯ ರೀತಿಯೇ ಬೇರೆ. ಅವರ ಪ್ರತಿಭೆ, ಜ್ಞಾನಸಂಪತ್ತು, ಜೀವನ ವನ್ನು ನೋಡುವ ರೀತಿ ಒಂದೊಂದೂ ಅವರದೇ ಆದ ವೈಶಿಷ್ಟ್ಯ ಪಡೆದುಕೊಂಡಿದೆ.

ಜೋಳದರಾಶಿಯಲ್ಲಿ ಬೆಳಕು ಹರಿಯುವುದೇ ಅಪ್ಪಾಜಿಯ ಕಂಚಿನ ಕಂಠದಿಂದ ಹೊರಡುವ ಭಗವತ್ ಸಂಕೀರ್ತನೆಗಳಿಂದ. ಬೆಳಗಿನಝಾವವೇ ಎದ್ದು, ಅಗಲವಾಗಿ ವಿಭೂತಿಧರಿಸಿ, ಜಪಸರವನ್ನು ಹಿಡಿದು, ಕಣ್ಣುಮುಚ್ಚಿ ಕುಳಿತುಬಿಡುತ್ತಾರೆ. ಅವರ ಬಾಯಿಂದ ನಿರಂತರವಾಗಿ ಹೊರಡುತ್ತಿರುತ್ತದೆ ಅಖಂಡ ನಾದಲಹರಿ. ಒಮ್ಮೆ ಶರಣನಾಗಿ, ಒಮ್ಮೆ ಅದ್ವೈತಿಯಾಗಿ, ಒಮ್ಮೆ ಭಗವಂತನ ಕೃಪೆಯ ತೊಟ್ಟಿಲೊಳಾ ಡುವ ಕಂದನಾಗಿ, ಒಮ್ಮೆ ಶಿವನ ಗೆಳೆಯನಾಗಿ, ಒಮ್ಮೆ ಆರ್ತನಾಗಿ, ಹೀಗೇ ನಾನಾ ರಾಗಗಳಲ್ಲಿ ಅದ್ಭುತವಾಗಿ ಹರಿಯುತ್ತದೆ ನಾದಲಹರಿ. ಜೊತೆ ಜೊತೆಗೇ ಭಾವೋ ದ್ವೇಗದ, ತನ್ಮಯತೆಯ ಭಾಷ್ಪಗಳು ಮುತ್ತಿನ ಮಣಿಯಂತೆ ಜಾರುತ್ತಿರುತ್ತವೆ. ನೀರವವಾದ, ಶಾಂತ ವಾತಾವರಣದಲ್ಲಿ, ಅಂಧಕಾರ ಕಳೆದು ಬೆಳಕು ಹರಿಯಲು ತೊಡಗುತ್ತಿರುವ ಶುಭ ಘಳಿಗೆಯಲ್ಲಿ, ಮನೆಯ ಒಂದು ಕೊನೆಯಲ್ಲಿ ನಿಶ್ಚಲವಾಗಿ

ಕುಳಿತ ಯೋಗಿಯ ಭಕ್ತಿಯ ಕರೆ ಆ ಭಗವಂತನಿಗೆ ಕೇಳದಿದ್ದರೆ ಆ ದೇವರು ನಿಜವಾಗಿ ಕಿವುಡನೆ ! ಧ್ಯಾನ, ಭಕ್ತಿಗಳ ಸಂಯೋಗದ ತೇಜ ಮುಖದಲ್ಲಿ ಲಾಸ್ಯವಾಡುತ್ತಿರುವ ನನ್ನ ಅಪ್ಪಾಜಿಯ ಆ ಶಾಂತ ಮುಖಮುದ್ರೆ ಸದಾ ನನ್ನ ಕಣ್ಣಿಗೆ ಕಟ್ಟಿರುತ್ತದೆ. ಅವರನ್ನು ನೆನೆದಾಗಲೆಲ್ಲಾ ನನ್ನ ಕಣ್ಣಿನ ಮುಂದೆ ಬರುವುದು ಪದ್ಮಾಸನದಲ್ಲಿ ಕುಳಿತ ಆ ಯೋಗಿಯ ಚಿತ್ರವೆ. ಧ್ಯಾನಾಸಕ್ತರಾದ ಅವರನ್ನು ನೋಡುತ್ತಾ, ಆ ನಾದದಲ್ಲಿ ಹೊರಡುವ ಓಂಕಾರದ ಝೇಂಕಾರವನ್ನು ಕೇಳುತ್ತಾ ಕೂತರೆ, ಆ ಸಾತ್ವಿಕ ತೇಜಸ್ಸಿನ ಪ್ರಭಾವ ನಮ್ಮ ಮೇಲೆ ಸಾಕಷ್ಟು ಆಗುತ್ತದೆ. ಯಾವ ಕ್ರಿಯೆಯೂ ಇಲ್ಲದೆ ಇಡೀ ಜಗತ್ತೇ ಒಂದು ಕ್ಷಣ ನಿಶ್ಚಲವಾಗಿ ನಿಂತಂತಹ ಅನುಭವವಾಗುತ್ತದೆ. ಆಸಮಯದಲ್ಲಿ ಆ ಪ್ರಭಾವದಿಂದ ಹೊರ ಬರುವುದೇ ಕಷ್ಟವೆನಿಸುತ್ತದೆ.

ಶರಣ ತತ್ವಗಳನ್ನು ಮೈಗೂಡಿಸಿಕೊಂಡಿರುವ ಅಪ್ಪಾಜಿಗೆ ಉಳಿದವುಗಳ ಬಗ್ಗೆ ಅಸಡ್ಡೆ ಎಳಷ್ಟೂ ಇಲ್ಲ. ಶಂಕರಾಚಾರ್ಯರ "ಸೌಂದರ್ಯಲಹರಿ" ಅವರ ಬಾಯಲ್ಲಿ ಕೇಳಬೇಕು. ಉಪನಿಷತ್ತು, ಭಗವದ್‌ಗೀತೆ ಎಲ್ಲದರ ಬಗ್ಗೆಯೂ ವಿದ್ವತ್ ಪೂರ್ಣವಾಗಿ ಮಾತನಾಡಬಲ್ಲರು. ಅದ್ವೈತ ವೇದಾಂತದ ತಿರುಳನ್ನು ತಮ್ಮದಾಗಿ ಮಾಡಿಕೊಂಡಿರುವ ಸಮದರ್ಶಿಗಳವರು. ಯಾವುದು ಹೆಚ್ಚು, ಯಾವುದು ಕಡಿಮೆ ಎಂಬ ಪ್ರಶ್ನೆಯೇ ಇಲ್ಲ. ಎಲ್ಲಾ ಜ್ಞಾನ ಭಂಡಾರದ ಕೀಲಿಕೈ ಪಡೆಯಬೇಕೆಂಬ ಹಂಬಲ ಉಳ್ಳವರು. ಆ ಹಂಬಲದ ಪೂರೈಕೆಯೇ ಅವರ ಅನುದಿನದ ತಪಸ್ಸು.

ಅವರ ವಿಚಾರನದಿಗೆ ಅದೆಷ್ಟು ಕಾಲುವೆಗಳೋ ? ಮೊನ್ನೆ ಬೇಸಿಗೆಯಲ್ಲಿ ಜೋಳದರಾಶಿಗೆ ಹೋದಾಗ ಒಂದು ಹೊಸ ವಿಚಾರ ಎದುರಿಗಿಟ್ಟರು, "ಭೂಲೋಕದಲ್ಲಿ ದೇವತೆಗಳು ಯಾಕೆ" ಎಂದು. ಇಂದ್ರಾದಿಗಳ ಸೃಷ್ಟಿ ಯಾಕೆ ಬೇಕು ? ದೇವಲೋಕ ಭೋಗಲೋಕ. ಅಲ್ಲಿ ಮುಕ್ತಿ ಸಾಧ್ಯವಿಲ್ಲ. ಆದರೆ ಭೂಮಿ ಕರ್ಮ ಲೋಕ, ಯೋಗಲೋಕ. ಇಲ್ಲಿ ಮಾತ್ರ ಮುಕ್ತಿ ಸಾಧ್ಯವುಂಟು. ಸ್ಥೂಲ, ಸೂಕ್ಷ್ಮ. ಕಾರಣ ಶರೀರಗಳಿಂದ ಕೂಡಿದ ಜೀವಿಯು ತನ್ನ ಜೀವತ್ವದಿಂದ ಪಾರಾಗಿ, ಈ ಭವರಂಗದಿಂದ ಮುಕ್ತಿಯನ್ನು ಪಡೆಯುವ ನೆಲೆ ಈ ಭೂಲೋಕದಲ್ಲಿ ಇರುವುದೇ ಹೊರತು, ದೇವಲೋಕದಲ್ಲಲ್ಲ. ದೇವತೆಗಳು ಬೇಡ, ಮನುಷ್ಯ ಪ್ರಪಂಚದಲ್ಲಿ ಕೇವಲ ಮನುಷ್ಯರಿಗೆ ಮಾತ್ರ ಪ್ರಾಮುಖ್ಯತೆ ಎಂದು ವಾದಿಸುತ್ತಾರೆ. ಅವರ ವಿಚಾರದಲ್ಲಿ ಅದೆಷ್ಟು ವೈವಿಧ್ಯವಿರುವುದು ಎಂಬುದು ಅವರ ಹತ್ತಿರ ಮಾತಾಡಿದಾಗ ಮಾತ್ರ ತಿಳಿಯುವುದು.

ಅಪ್ಪಾಜಿಯವರಿಗೆ ಸಣ್ಣಮಕ್ಕಳನ್ನು ಕಂಡರೆ ಅಪಾರ ಪ್ರೀತಿ. ವಯಸ್ಸಾದವರು, ದೀನದಲಿತರನ್ನು ಕಂಡರೆ ಬಹಳ ಕರುಣೆ. ನನ್ನ ಮಗ "ಅಜ್ಜ" ಎಂದು ಕರೆದಾಗ ಅದೇನು ಆನಂದವೊ. ತಲೆಯ ಮೇಲೆ ಹತ್ತಿಸಿ ಕುಣಿಸಿಬಿಡುತ್ತಾರೆ. "ರವಿ ಆಕಾಶಕೆ ಭೂಷಣಂ" ಅಂತ ನನ್ನ ಮಗ ರವಿಯನ್ನು ಮುದ್ದಿಸುತ್ತಾರೆ.

"ನನ್ನ ಮೊಮ್ಮಗ ಬಹಳ ಜಾಣ ಮಗಳೇ, ಅವನನ್ನು ಚೆನ್ನಾಗಿ ನೋಡಿಕೊಬೇಕು ನೀನು" ಎಂದು ಯಾವಾಗಲೂ ಹೇಳುತ್ತಿರುತ್ತಾರೆ. ಮೊದಲ ಸಲ ಅವನನ್ನು ಶಾಲೆಗೆ ಸೇರಿಸಿದಾಗ ಅವನ ಕೈಲಿ ಸರಸ್ವತಿ ಪೂಜೆ ಮಾಡಿಸು ಎಂದು ಹಣ ಕಳಿಸಿದ್ದರು. ಅವರ ಈ ವಾತ್ಸಲ್ಯ ನಮ್ಮನ್ನು ಪರವಶರನ್ನಾಗಿ ಮಾಡಿಬಿಡುತ್ತದೆ. ನಮ್ಮ ಮನೆಯಲ್ಲಿದ್ದ ಅಜ್ಜಿಯನ್ನು ಕಂಡರಂತೂ ಅವರಿಗೆ ಅಪಾರ ಕರುಣೆ. ಆಕೆ ಯಾರೂ ಇಲ್ಲದ ಅನಾಥೆ ಎಂದು ತಿಳಿದ ಮೇಲಂತೂ ಸಂಕಟ ಪಟ್ಟುಬಿಟ್ಟರು. ಯಾವಾಗಲೂ ಅಜ್ಜಿ ಮಾಡುವ ಸಾರನ್ನು ನೆನೆದು ಪತ್ರ ಬರೆಯುವುದುಂಟು. "ಆ ಸಾರು ಅಮೃತ ಕಣಮ್ಮ, ಅಜ್ಜಿಯ ಹೃದಯದಲ್ಲಿರುವ ಮಮತೆಯ ಅಮೃತವನ್ನೇ ಸಾರಿನ ರೂಪದಲ್ಲಿ ಬಡಿಸುತ್ತಾರೆ. ಅಜ್ಜಿ ಕರ್ಮಯೋಗಿ, ಆಕೆ ನಿಜವಾದ ಶರಣೆ" ಎಂದು ಸದಾ ಒಳ್ಳೆಯ ನುಡಿಗಳನ್ನೇ ಅವರ ಬಗ್ಗೆ ಹೇಳುತ್ತಿರುತ್ತಾರೆ. ರಾಜಹಂಸದಂತೆ ಅಪ್ಪಾಜಿಯ ಗುಣ. ಹಾಲು ನೀರು ಬೆರೆಸಿಕೊಟ್ಟರೆ ನೀರನ್ನು ಬಿಟ್ಟು ಹಾಲನ್ನು ಮಾತ್ರ ಕುಡಿಯುತ್ತದಂತೆ ಹಂಸ. ಈ ಮಾತು ಸುಳ್ಳಿರಬಹುದು. ಆದರೆ ಅದರ ತತ್ತ್ವವನ್ನು ಅಪ್ಪಾಜಿಯ ಜೀವನದಲ್ಲಿ ಕಾಣಬಹುದು. ಎಲ್ಲರಲ್ಲೂ ಒಳ್ಳೆಯ ಗುಣಗಳನ್ನೇ ಕಾಣುವ ಸ್ವಭಾವ ಅವರದ್ದು. ಉಳಿದವರ ಅವಗುಣಗಳ ಬಗ್ಗೆ ಅವರು ಹೆಚ್ಚು ಗಮನ ಕೊಡುವುದಿಲ್ಲ.

ನಾವು ಜೋಳದರಾಶಿಗೆ ಹೋಗಿ ಹಿಂತಿರುಗುವಾಗೆಲ್ಲಾ ಚೆನ್ನವೀರಣ್ಣನವರು ಒಂದು ಮಾತು ಹೇಳುತ್ತಾರೆ "ಆಗಾಗ ಬರ್‍ತಾ ಇರಮ್ಮ ತಂಗಿ. ನೀನು ಬಂದು ಹೋದರೆ ನಿಮ್ಮಪ್ಪನ ಡೌನ್ ಆದ ಬ್ಯಾಟರಿ ಚಾರ್ಜ್ ಆಗತ್ತೆ. ಬ್ಯಾಟರಿ ಚಾರ್ಜ್ ಮಾಡಕ್ಕಾದರೂ ನೀನು ಆಗಾಗ ಬರ್‍ತಿರಬೇಕು" ಅಂತ. ಒಂದು ಬೆಳಿಗ್ಗೆ ಜೋಳದ ರಾಶಿಯಲ್ಲಿ ಸೂರ್ಯೋದಯವನ್ನು ನೋಡಿ ಮಹಡಿಯಿಂದ ಕೆಳಗಿಳಿಯುವಾಗ ಅಪ್ಪಾಜಿ ಕೇಳಿದರು—"ನಾನು ಶಿವನಪಾದ ಸೇರಿದ ಮೇಲೂ ನೀನು ನಿನ್ನ ತೌರಿಗೆ ಬರ್‍ತೀಯಾ ತಾನೆ" ಅಂತ. ಏನು ಹೇಳಬೇಕೋ ಒಂದು ಕ್ಷಣ ತೋರಲಿಲ್ಲ. ಅಪ್ಪನಿಲ್ಲದ ತೌರಿನಲ್ಲಿ ನನಗೇನು ಆಕರ್ಷಣೆ ಇರತ್ತೆ ಅನ್ನಿಸಿತು. ಆದರೆ ಅಪ್ಪಾಜಿ ತಮ್ಮ ಉದಾತ್ತ ಬಾಳನ್ನು ಸವೆಸಿದ ಜಾಗ ನನ್ನ ಪಾಲಿಗೆ ಪವಿತ್ರ ಸ್ಥಳ. ಆತ್ಮಸಿದ್ಧಿಗಾಗಿ ನಾನಾ ರೀತಿಯಲ್ಲಿ, ಕವಿಯಾಗಿ, ಕಲಾವಿದನಾಗಿ, ಶರಣನಾಗಿ ತಪಸ್ಸುಮಾಡಿದ ಪುಣ್ಯಸ್ಥಳ. ಆ ಸ್ಥಳವನ್ನು ವರ್ಷಕ್ಕೊಮ್ಮೆಯಾದರೂ ನೋಡಿ ಬರುವುದು ನನ್ನ ಧರ್ಮ ಅನ್ನಿಸಿತು. ಆದರೂ "ಅಪ್ಪಾಜಿ ಯಾವಾಗಲೂ ಸಾವಿನ ಮಾತನ್ನೇಕೆ ಆಡುತ್ತೀರಿ ? ಬೇರೆ ವಿಷಯವಿಲ್ಲವಾ ನಿಮಗೆ ?" ಎಂದು ಕೋಪಿಸಿಕೊಂಡೆ. ಅವರು ಕೇಳಬೇಕಲ್ಲ, "ಕೋಪಿಸಬೇಡ ಮಗಳೇ, ಬದುಕಿನಂತೆ ಸಾವನ್ನೂ ಸ್ವೀಕರಿಸಬೇಕಾದ್ದು ಅನಿವಾರ್ಯ ಅಲ್ಲವೆ ? ದೇಹವೆಲ್ಲಾ ಜಾಲಂಧ್ರವಾಗಿದೆ. ಬಟ್ಟೆ ಜೀರ್ಣವಾಗಿದೆ. ಸರಿಪಡಿಸಲಾಗದಷ್ಟು ಜೀರ್ಣವಾಗಿದ್ದೆ, ಹಳೆಯ ಅಂಗಿ ಕಳಚಿ ಹೊಸದನ್ನು ಉಡಲೇ ಬೇಕಲ್ಲವೆ ? ಹಳೇ ಹರಕಲು ಅಂಗಿಯ ವ್ಯಾಮೋಹ ಯಾಕೆ ? ಎಷ್ಟೇ ಬಯಸಿದರೂ

ಆ ಸಾವು ನನ್ನ ಮೇಲಿನ್ನೂ ಕೃಪಾಕಟಾಕ್ಷ ಬೀರಿಲ್ಲ" ಎಂದರು ನಿರ್ಲಿಪ್ತತೆಯಿಂದ. ತಾವರೆ ಎಲೆಯ ಮೇಲಿನ ನೀರಿನಹನಿ ಅವರು. ಆ ಮೇರುಪರ್ವತದ ಮುಂದೆ ನಾವೆಲ್ಲಾ ತುಂಬೆ ಗಿಡಗಳು ಅಷ್ಟೆ. ಹಠವಾದಿ ಅಪ್ಪಾಜಿ ಮೊದಲು ಕೇಳಿದ ಪ್ರಶ್ನೆಯನ್ನೇ ಮತ್ತೆ ಕೇಳಿದರು. ಉತ್ತರ ಪಡೆಯುವವರೆಗೂ ಬಿಡುವವರಲ್ಲ ಅವರು. ಕಡೆಗೆ ನಾನೇ ಸೋತುಹೇಳಿದೆ, "ಖಂಡಿತಾ ಬರ್ತೀನಿ ಅಪ್ಪಾಜಿ, ಬರದೇ ಇರಲ್ಲ" ಅಂತ. "ಅದೀಗ ನೋಡಮ್ಮ ನಿಜವಾದ ಮಗಳ ಮಾತು" ಅಂತ ನಕ್ಕರು. ಆ ನಗುವಿನಲ್ಲಿ ಯಾವ ಭಾವವಿತ್ತೋ ನನಗೆ ಅರಿಯಲಾಗಲಿಲ್ಲ.

ಅಪ್ಪಾಜಿಯ ವಾತ್ಸಲ್ಯ, ಅಣ್ಣನ ವಿಶ್ವಾಸ, ಆತಿಥ್ಯ, ಒಂದೊಂದೂ ಜೋಳದರಾಶಿಗೆ ನನ್ನ ಸೆಳೆಯುತ್ತಿರುತ್ತದೆ. ಅತ್ತಿಗೆ ಸೌ॥ ಪಾರ್ವತಮ್ಮ ಮಾಡಿದ ಹೋಳಿಗೆ ಊಟ ಉಂಡು, ಅಪ್ಪಾಜಿಯ ಕಾಲಿಗೆರಗಿ, ಅಣ್ಣ ಕೊಟ್ಟ ಉಡುಗೊರೆ ತೆಗೆದುಕೊಂಡು ಹೊರಡುವಾಗ ಹೇಳಿಕೊಳ್ಳಲಾಗದ ತಳಮಳ. ಅಪ್ಪಾಜಿಯ ನಡುಗುವ ಕೈಗಳು ನನ್ನ ತಲೆ ಸವರಿ ಆಶೀರ್ವಾದ ಮಾಡುವಾಗ, ಕಣ್ಣಿನಲ್ಲಿ ಗಂಗಾ ಯಮುನೆಯರು ಧುಮುಕಿ ಬಿಡುತ್ತಾರೆ. ಹೊರಡಲಾರದೆ ಬಿಟ್ಟು ಹೊರಟು ಬರುತ್ತೇನೆ. ಬಸ್ಸಿನಲ್ಲಿ ಕುಳಿತಾಗ, ಊರು ತಲುಪಿದ ಮೇಲೆ, ಸದಾಕಾಲ ನಾನು ನನ್ನನ್ನೇ ಕೇಳಿಕೊಳ್ಳುವ ಪ್ರಶ್ನೆ "ಬ್ಯಾಟರಿ ಚಾರ್ಜ್ ಆಗುವುದು ಅಪ್ಪನಿಗೋ ಅಥವಾ ಮಗಳಿಗೋ?" ಆ ಪ್ರಶ್ನೆಗೆ ಚೆನ್ನವೀರಣ್ಣ ಉತ್ತರಿಸಬಹುದು. "ಇಬ್ಬರಿಗೂ ಕಣಮ್ಮ ತಂಗಿ. ಅದಕ್ಕೆ ಆದಷ್ಟು ಬೇಗ ಬಾ ನಿನ್ನ ತೌರಿಗೆ" ಅಂತ. ನನಗೂ ಅದೇ ಆಸೆ. ಆದರೆ ಸಂಸಾರವಂದಿಗಳಾದ ನನಗೆ ಪದೇ ಪದೇ ಮನೆ ಬಿಟ್ಟು ಹೋಗಲು ಬಂದೀತೆ? ಏನೇ ಆಗಲಿ ಅಪ್ಪನನ್ನು ಕಾಣುವ ಅವಕಾಶ ಸಿಕ್ಕಾಗ ಮಾತ್ರ ಎಂದಿಗೂ ತಪ್ಪಿಸಿ ಕೊಳ್ಳಲಾರೆ.

★★★

ಚಂಪೂ ಕಾವ್ಯದಲ್ಲಿ ಸರಳತೆ ಕಷ್ಟ ಸಾಧ್ಯ. ಇದು ಒಂದು, ಛಂದಸ್ಸಿನ ಪ್ರಬಂಧವಲ್ಲ. ನಾನಾ ಛಂದಸ್ಸುಗಳು ಇಲ್ಲಿ ಕಥಾನುಗುಣ ವಾಗಿ ಒಂದರ ಹಿಂದೊಂದು ವಿವಿಧ ಛಂದಸ್ಸುಗಳ ಭಿನ್ನತೆಯಿದೆ. ಇಲ್ಲಿ ಉಪಯೋಗವಾದ ಛಂಧಸ್ಸುಗಳ ಗತಿ ಗಮಕಗಳನ್ನು ಗಮನಿಕಿ ಅರಿತಿರಬೇಕು.

ಹಿರಿಯ ಮನಸ್ಸಿನ ಹಿರಿಯ ಜೀವ

ಜೆ. ಹನುಮಂತ ಶಾಸ್ತ್ರಿ

ಆ ಕಾಲವೊಂದಿತ್ತು, ದಿವ್ಯ ತಾನಾಗಿತ್ತು, ಬಾಲ್ಯವಾಗಿತ್ತು
ಮಣ್ಣುಹೊನ್ನಾಗಿ, ಕಲ್ಲೆಹೂವಾಗಿ, ನೀರಮೃತವಾಗಿ
ಮನೆ ಮೇರುವಾಗಿ, ಕವಿಶೈಲ ತಾನೇ ಕೈಲಾಸವಾಗಿ
ಕಾಡೆ ನಂದನವಾಗಿ, ನೆಲವೆ ನಾಕವ ನಗುವ ಕಾಲವೊಂದಿತ್ತು
ಆ ಕಾಲವೊಂದಿತ್ತು । ದಿವ್ಯ ತಾನಾಗಿತ್ತು ಬಾಲ್ಯವಾಗಿತ್ತು.

— **ಕುವೆಂಪು**

ನಲವತ್ತೈದು ವರ್ಷಗಳ ಹಿಂದಿನಕಾಲ. ಅಂದಿನ ಬಳ್ಳಾರಿ ಸಾಹಿತ್ಯ ನಾಟಕ ಕಲೆಗಳ ಬೀಡು. ಆಗ ನಾನು ಬಳ್ಳಾರಿಯ ಅಧ್ಯಾಪಕ ಶಿಕ್ಷಣಾಲಯದಲ್ಲಿ ವಿದ್ಯಾರ್ಥಿಯಾಗಿದ್ದೆ. ನನ್ನನ್ನು ಹೆತ್ತ ಮಗನಂತೆ ಆದರಿಸಿದ ಮಹನೀಯರು ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳು. ಅವರ ಮನೆ ಸಾಹಿತ್ಯ ಕ್ಷೇತ್ರ. ನಾನಾ ಭಾಷೆಯ ಪಂಡಿತರು, ಕಲಾವಿದರು, ನಟರು ಅವರ ದರ್ಶನಕ್ಕಾಗಿ ಬರುತ್ತಿದ್ದರು. ಅವರ ಆತಿಥ್ಯವನ್ನು ಪಡೆಯುತ್ತಿದ್ದರು.

ಪ್ರತಿ ಭಾನುವಾರ ಅವರ ಮನೆಯಲ್ಲಿ ಸ್ನೇಹಿತರ ಕೂಟ. ತೆಲುಗು ಭಾರತ, ಗದಗು ಭಾರತ, ರನ್ನನ ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮುಂತಾದವು ಗಳ ವ್ಯಾಖ್ಯಾನ, ವಿಮರ್ಶೆ ನಡೆಯುತ್ತಿದ್ದ ಕಾಲ. ಅಂತಹ ಭಾನುವಾರಗಳಲ್ಲಿ ಆಗಾಗ ಬರುತ್ತಿದ್ದರು ಜೋಳದರಾಶಿ ದೊಡ್ಡನಗೌಡರು ಮತ್ತುಅವರ ಆತ್ಮೀಯ ಮಿತ್ರರಾದ ಕುಮಾರ ಸ್ವಾಮೀಗಳು. ಬಂದ ಹಿರಿಯರಿಗೆ ಉಪಚಾರ, ಕಾಫಿ, ಉಪಹಾರ ಸರಬರಾಜು ಮಾಡುವ ಕೆಲಸ ಭಾಸ್ಕರ ಪಂತುಲು ಅವರ ಮಗ ರಾಮಮೂರ್ತಿ ಮತ್ತು ನನ್ನದು ಆಗಿತ್ತು. ಗೌಡರ (ಗಾಯನ) ಕಾವ್ಯವಾಚನ ನನ್ನನ್ನು ಅವರ ಅಭಿಮಾನಿಯಾಗಿ ಮಾಡಿತು.

ಒಂದು ಸಲ ಪ್ರೊದ್ದುಟೂರು ಮುನಿಸಿಪಲ್ ಹೈಸ್ಕೂಲಿನ ಚರಿತ್ರೆ ಬೋಧಕ ರಾದ ಚಿಕುಪಲ್ಲಿ ಸುಂದರ ರಾಮಯ್ಯನವರು ಮಹಾಕವಿ ಗಡಿಯಾರಂ ಶೇಷಶಾಸ್ತ್ರಿಗಳು ಬರೆಯುತ್ತಿದ್ದ ವಿಜಯನಗರ ಸಾಮ್ರಾಜ್ಯ ಕಾವ್ಯಕ್ಕೆ ವಿಷಯ ಸಂಗ್ರಹ ಮಾಡುವುದಕ್ಕಾಗಿ ಬಳ್ಳಾರಿಗೆ ಬಂದರು. ಸುಂದರ ರಾಮಯ್ಯನವರು ಗೌಡರ 'ನಮ್ಮ ಹಂಪೆ' ಕಾವ್ಯವನ್ನು ಕೇಳಲು ಅಭಿಲಾಷೆಪಟ್ಟರು. ಭಾಸ್ಕರ ಪಂತುಲು ಅವರ ಆದೇಶದಂತೆ ಸುಂದರ ರಾಮಯ್ಯನವರನ್ನು ಕುಮಾರಸ್ವಾಮಿಯವರ ಮನೆಗೆ ಕರೆದುಕೊಂಡು ಹೋದೆ. ಕುಮಾರ ಸ್ವಾಮಿಯವರ ಹಾರ್ಮೋನಿಯಂ ನುಡಿಯಿತು. ಗೌಡರ 'ನಮ್ಮ ಹಂಪೆ' ಕಾವ್ಯವಾಚನವಾಯಿತು. ಪಂಪಾಪತಿಯನ್ನು ನಿಷ್ಠುರತೆಯಿಂದ ವಿಜಯನಗರ ಸಾಮ್ರಾಜ್ಯ ಹಾಳಾದುದಕ್ಕೆ "ಕಲ್ಲಾಗಿರುವ ನಿನ್ನನ್ನು ದೂರಿ ಫಲವೇನು ನೀನತಿ ಕಠಿನ ಮಾನಸನು" ಎಂದು ನಿಂದಿಸಿ 'ಮಾತೇ ಪಂಪಾಂಬಿಕೆಯೇ ನೀನಿರಲೀ ತೆರನ ದಾಯ್ದೊಂದೊಡೆ.......'ಎಂದು ಭಾವಯುಕ್ತವಾಗಿ ಓದುತ್ತಿದ್ದಾಗ ಸುಂದರ ರಾಮಯ್ಯನವರು ಗಟ್ಟಿಯಾಗಿ ಅತ್ತುಬಿಟ್ಟರು. ಗೌಡರ ಕಾವ್ಯವಾಚನಕ್ಕೆ ನಾನು ಮುಗ್ಧನಾದೆ. ಕಣ್ಣೀರನ್ನು ಒರೆಸಿಕೊಂಡೆ. ಗೌಡರು ಕರುಣಾರಸ ಭಾವೋದ್ವೇಗದಲ್ಲಿದ್ದು ಹತ್ತು ನಿಮಿಷಗಳಾದ ಮೇಲೆ ಚೇತರಿಸಿಕೊಂಡು ಕಾವ್ಯವನ್ನು ಪೂರ್ತಿಯಾಗಿ ಓದಿದರು. ಆ ಘಟನೆ ನನ್ನನ್ನು ಗೌಡರಿಗೆ ಮತ್ತಷ್ಟು ಹತ್ತಿರವಾಗುವಂತೆ ಮಾಡಿತು.

1948 ಡಿಸೆಂಬರ್ 5ನೇ ದಿನಾಂಕ ಗೌಡರ ಸ್ವಗ್ರಾಮವಾದ ಜೋಳದರಾಶಿ ಯಲ್ಲಿ, ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಪರಿಷತ್ ಮೊದಲನೇ ಅಧಿವೇಶನ ಅತ್ಯಂತ ವೈಭವವಾಗಿ ನಡೆಯಿತು. ಭಾಸ್ಕರ ಪಂತುಲು ಅವರೊಂದಿಗೆ ನಾನೂ ಜೋಳದರಾಶಿಗೆ ಹೋಗಿದ್ದೆ. ಗೌಡರು ಸ್ವಾಗತ ಸಮಿತಿಯ ಅಧ್ಯಕ್ಷರು, ಕರ್ನಾಟಕಾಲಂಕಾರ, ಅಭಿನಯ ಕೇಸರಿ ಗರುಡ ಸದಾಶಿವರಾಯರು ಸಮ್ಮೇಳನದ ಅಧ್ಯಕ್ಷರು. ನಾಟಕ ರತ್ನ ಗುಬ್ಬಿ ವೀರಣ್ಣನವರು ಉದ್ಘಾಟಕರು. 'ಜೋಳದರಾಶಿಯಲ್ಲಿರುವ ಪ್ರತಿಯೊಂದು ಕಾಳಿ ನಲ್ಲಿಯೂ ಕಲೆಯು ತುಂಬಿದೆ' ಎಂದ ಗುಬ್ಬಿವೀರಣ್ಣನವರ ಮಾತು ಅಕ್ಷರಶಃ ಸತ್ಯ ಪೂರ್ಣ. ಗೌಡರ ಕಾರ್ಯದಕ್ಷತೆ ಅಮೋಘವಾದದ್ದು.

ಶ್ರೀ ಗೌಡರು ನಟರಾಗಿ, ರಾಮದಾಸು. ಪ್ರಹ್ಲಾದ ಮುಂತಾದ ನಾಟಕಗಳಲ್ಲಿ ಕಬೀರ್, ನಾರದರ ಪಾತ್ರಗಳಿಂದ, ಮಹಾನಟ ಬಳ್ಳಾರಿ ರಾಘವರ ಒಡನಾಡಿಗಳಾಗಿ ಆಂಧ್ರಪ್ರದೇಶದ ದೊಡ್ಡ ಪಟ್ಟಣಗಳಲ್ಲಿ ಪ್ರದರ್ಶಿಸಿ ಕೀರ್ತಿಗಳಿಸಿದವರು. ನಾನು ಅವರ ಕನಕದಾಸ, ಕ್ರಾಂತಿ ಪುರುಷ ಬಸವಣ್ಣ ನಾಟಕಗಳನ್ನು ಮಾತ್ರ ನೋಡುವ ಅವಕಾಶ ದೊರಕಿತು.

ಗೌಡರು ಭಾಸ್ಕರ ಪಂತಂಲು ಅವರ 'ಯಾತ್ರಿಕುಡು' ಕಾವ್ಯವನ್ನು ಅತ್ಯಂತ ರಸವತ್ತಾಗಿ ಕನ್ನಡೀಕರಿಸಿದ್ದಾರೆ. ಅವರಿಬ್ಬರು ಕುಳಿತು ಪರಸ್ಪರ ವಿಚಾರ ವಿನಿಮಯ ಗಳೊಂದಿಗೆ ಅನುವಾದ ಪೂರೈಸಿದ್ದು ನಾನು ಕಂಡಿದ್ದೇನೆ.

ಗೌಡರು ಪ್ರಾಥಮಿಕ ಪಾಠಶಾಲೆ ಓದು ಮುಗಿಸಿದವರು. ಹೈಸ್ಕೂಲು ಹೊಸ್ತಿಲು ಹತ್ತಲಿಲ್ಲ. ಸ್ವಯಂ ಕೃಷಿಯೇ ಅವರ ಜೀವಾಳ. ನಿಜವಾದ ವಿಶ್ವ-ವಿದ್ಯಾಲಯ ಪದವೀಧರರು ಗೌಡರು.

ಬಾಲ್ಯದಲ್ಲಿ ಅವರ ಓದು ತೆಲುಗು ಮಾಧ್ಯಮದಲ್ಲಿ ನಡೆದ ಕಾರಣ ಅವರಿಗೆ ತೆಲುಗು ಭಾಷೆಯಲ್ಲಿ ಅಭಿಮಾನ. ತೆಲುಗು ಭಾರತ, ಭಾಗವತ ರಾಮಾಯಣಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ.

ಉದ್ಯೋಗ ನಿಮಿತ್ತದಿಂದ ನಾನು ಗುಂಟೂರು, ಬಾಪಟ್ಲ, ನೆಲ್ಲೂರು ಜಿಲ್ಲೆಯ ಕೆಲ ತಾಲೂಕುಗಳಲ್ಲಿ ವಿದ್ಯಾಶಾಖೆಯಲ್ಲಿ ಇನ್‌ಸ್ಪೆಕ್ಟರನಾಗಿ ಕೆಲಸ ಮಾಡುತ್ತಿರುವಾಗ ಗೌಡರೊಡನೆ ಪತ್ರವ್ಯವಹಾರ ನಡೆಸುತ್ತಾಯಿದ್ದೆ.

ಅವರು ತೆಲುಗಿನಲ್ಲಿ ಬರೆದ 'ಗೇಯ ಗುಂಜೂರವಮು' ಎಂಬ ಕವಿತಾ ಸಂಪುಟ ವನ್ನು ಕಡಪ ಪಟ್ಟಣದಲ್ಲಿ ಮುದ್ರಣ ಮಾಡಿಸಿ ಕಳಿಸಿದೆ. ಗೌಡರು ಚೇಳ್ಳಗುರ್ಕಿಯ ಶ್ರೀ ಎರ್ರಿ ಸ್ವಾಮಿಗಳ ಮಠದ ಶಿವಾನುಭವ ಮಂಟಪದಲ್ಲಿ ಆ ಕೃತಿಯನ್ನು ಆವಿಷ್ಕರಿ ಸುತ್ತಾ, ನನ್ನ ಅಲ್ಪ ಸೇವೆಯನ್ನು ಬಹಳವಾಗಿ ಮೆಚ್ಚಿ ಸತ್ಕರಿಸಿದ್ದು ನನ್ನ ಭಾಗ್ಯ.

ಅವರ ಆತ್ಮೀಯತೆಯ ಸವಿಯನ್ನು ಅನುಭವಿಸಿದವನು ನಾನು. ಸಾಮಾನ್ಯವಾಗಿ ನಾವು ದೊಡ್ಡವರೆನಿಸಿಕೊಂಡವರ ಹತ್ತಿರ ಹೋದಂತೆ ಅವರ ದೌರ್ಬಲ್ಯಗಳು ಅರ್ಥ ವಾಗುತ್ತವೆ. ಆದರೆ ಗೌಡರ ಹತ್ತಿರ ಹೋದಂತೆಲ್ಲಾ ಅವರ ಔನ್ನತ್ಯವನ್ನು ನಾನು ಕಂಡಿದ್ದಾಯಿತು. ಒಳ್ಳೆಯ ಕೆಲಸ ಮಾಡಿದವರನ್ನು ಪ್ರಶಂಸಿಸಿ ಪ್ರೋತ್ಸಾಹ ಕೊಡುವ ಹಿರಿಯ ಮನಸ್ಸಿನವರು ಗೌಡರು.

ಕನ್ನಡಿಗರು ತಮ್ಮ ಭಾಷೆಯನ್ನು ಸಂಪನ್ನವಾಗಿ ಬೆಳಸಬೇಕು. ಇತರ ಭಾಷೆ ಗಳನ್ನು ಗೌರವಿಸಬೇಕು ಎಂದು ಹಲವಾರು ಸಾರಿ ಸಭೆಗಳಲ್ಲಿ ಸಾರಿದ್ದಾರೆ.

ಗೌಡರ ಗ್ರಂಥ ಭಂಡಾರದಲ್ಲಿ ಅತ್ಯುತ್ತಮ ಗ್ರಂಥಗಳೆಷ್ಟೋ ಇವೆ. ಹಲವಾರು ತೆಲುಗು ಕಾವ್ಯಗಳಿವೆ.

ಅತಿಥಿಗಳನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸುವ ಸ್ವಭಾವ ಶ್ರೀ ಗೌಡರದು. ಅವರ ಅತಿಥಿಯಾಗಿ ಹಲವಾರು ಸಲ ಜೋಳದರಾಶಿಯಲ್ಲಿ ಆನಂದವನ್ನು ಅನುಭವಿಸಿದ ಅದೃಷ್ಟ ನನ್ನದು.

ದೊಡ್ಡನಗೌಡರ ಮತ್ತೊಂದು ದೊಡ್ಡಗುಣ ಚೊಕ್ಕಟ. ಅವರ ಪುಸ್ತಕವಾಗಲಿ, ಕುರ್ಚಿಯಾಗಲಿ, ಅವರ ಪರಿಕರಗಳಾಗಲಿ–ಎಲ್ಲಾ ಚೊಕ್ಕಟವಾಗಿರಬೇಕು.

ಅವರ ವಿದ್ವತ್ತೆಯ ಮಾತೂ, ವಿಚಾರ ಗಾಂಭೀರ್ಯದ ಮಾತೂ ನನ್ನ ಶಕ್ತಿಯನ್ನು ಮೀರಿದವು. ಹಿಂದಿನ ಕಾಲದ ವಿದ್ವಾಂಸರೆಂದರೆ ಅವರಿಗೆಷ್ಟೊ ಗೌರವ.

ಅವರ ಅಭಿಮಾನಿಗಳು ತೆಲುಗು ಕನ್ನಡ ಪ್ರಾಂತ್ಯಗಳಲ್ಲಿ ಎಷ್ಟೋ ಜನರಿದ್ದಾರೆ. ಅವರಲ್ಲಿ ನಾನೂ ಒಬ್ಬ. ಅವರ ನಾಟಕ ರಂಗಾನುಭವಗಳನ್ನು 'ಅನುಭವಾಲು–ಜ್ಞಾಪಕಾಲು' ರೂಪದಲ್ಲಿ ತೆಲುಗಿಗೆ ಅನುವಾದ ಮಾಡಿದ ಹೆಮ್ಮೆ ನನ್ನದು. ಆ ಗ್ರಂಥವನ್ನು ತೆಲುಗು ವಿಶ್ವ ವಿದ್ಯಾಲಯ ಪ್ರಕಟಣೆ ಮಾಡಿದೆ. ಆ ರೀತಿಯಲ್ಲಿ ಗೌಡರು ತೆಲುಗು–ಕನ್ನಡಗಳ ಸದ್ಭಾವನೆಗೆ ಸೇತುವೆಯಾಗಿದ್ದಾರೆ.

ಅವರ ಕಾಲ ನಿಯಮಪಾಲನೆ ಪ್ರಶಂಸನೀಯ. ಅವರಿಗೆ ಬರೆದ ಪ್ರತಿಯೊಂದು ಪತ್ರಕ್ಕೂ ತಪ್ಪದೆ ಸಮಾಧಾನ ಬರುತ್ತದೆ.

ಸೊಗಸಾದ ಅಕ್ಷರ, ಲಲಿತವಾದ, ಅರ್ಥಪೂರ್ಣವಾದ ವಾಕ್ಯಗಳು. ಆಡಂಬರವಿಲ್ಲದ ಸರಳ ಶೈಲಿ.

'ಗೌಡರು ತತ್ವವಿಶಾರದರು. ಅವರ 'ಬಯಲಾಟಗಳಿಕೆಯ ಬೆಳಗು' 30 ವರ್ಷಗಳ ಸತತ ಅಭ್ಯಾಸದ ಫಲವಾಗಿದೆ. 'ಶೂನ್ಯ ಸಂಪಾದನೆಯೆಂದರೆ ದೊಡ್ಡನಗೌಡರು ದೊಡ್ಡನಗೌಡರೆಂದರೆ ಶೂನ್ಯ ಸಂಪಾದನೆ' ಎನ್ನುವ ಮಾತು ಸತ್ಯಪೂರ್ಣ. ಅವರ ಜಂಗಮ ವಿಜ್ಞಾನ ಸರ್ವಸ್ವ,

ಗೌಡರ ಆತ್ಮಕಥೆ 'ನಂದೇ ನಾನೋದಿದೆ' ಗ್ರಾಮಜನ ಸಂಸ್ಕೃತಿ, ಗ್ರಾಮಜನ ಚರಿತ್ರೆಗಳನ್ನು ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾರೆ. ರೈತನ ಉದ್ಧಾರವಾಗದೇ ದೇಶದ ಉದ್ಧಾರ ಅದೆಂತು ಆದೀತು ಎಂದು ಪದೇ ಪದೇ ಹೇಳುವವರು ಗೌಡರು.

ಸುರೇಶ್ವರಾಚಾರ್ಯರು ನೈಷ್ಕರ್ಮಸಿದ್ಧಿಯ ಪ್ರಾರಂಭದಲ್ಲಿ ಹೀಗೆಂದಿದ್ದಾರೆ :

ನ ಖ್ಯಾತಿಲಾಭ ಪೂಜಾರ್ಥಂ
ಗ್ರಂಥೋ ಸ್ಮಾಭಿರುದೀರ್ಯತೇ
ಸ್ವಬೋಧ ಪರಿಶುದ್ಧ್ಯರ್ಥಂ
ಬ್ರಹ್ಮ ವಿನ್ನಿಕಷಾಸ್ಮಸು ॥

ಇದರಲ್ಲಿ 'ಸ್ವಬೋಧ ಪರಿಶುದ್ಧ್ಯರ್ಥ್ಯಂ' ಎಂಬುದು ಮುಖ್ಯಪದ. "ವಿಷಯವನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆಯೆ? ನನ್ನ ತಿಳಿವಳಿಕೆಯಲ್ಲಿ ದೋಷಗಳು ಲೋಪಗಳು, ಪ್ರಮಾದಗಳೂ ಏನೂಯಿಲ್ಲವೆ? ಇದನ್ನು ಪರೀಕ್ಷಿಸಿಮಾಡಿ ಕೊಳ್ಳುವುದಕ್ಕಾಗಿ ಬರೆಯಹೊರಟಿದ್ದೇನೆ. "ಇದು ಗೌಡರ ರಚನಾಯೋಗಸಾದ ವೆಂದು ನನ್ನ ಭಾವನೆ.

ಗೌಡರ ಸ್ವಭಾವ ಮೃದು. ಕರ್ಕಶವಾದುದನ್ನು ಕೇಳಲಾರರು. ಬದುಕು ಶುದ್ಧ ವಾಗಿರಬೇಕು, ಶುಚಿಯಾಗಿರಬೇಕು ಎನ್ನುವ ಉದಾರ ದೃಷ್ಟಿ ಅವರದು.

ಆಚಾರ ವ್ಯವಹಾರಗಳಲ್ಲಿ ಸಂಪ್ರದಾಯ ವರ್ತಿಗಳು. ಅವರು ಧರಿಸುವ ವಿಭೂತಿ ಅವರ ಸ್ವಂತಕ್ಕಾಗಿ, ಪ್ರದರ್ಶನಕ್ಕಾಗಿ ಅಲ್ಲ.

ಅವರು ದೊಡ್ಡ ಕುಟುಂಬದವರು. ಬಂಧು ವರ್ಗದಲ್ಲಿ ಪ್ರೀತಿವಾತ್ಸಲ್ಯಗಳು ಅಪಾರ. ಸೋದರಳಿಯ ಚೆನ್ನವೀರಗೌಡ ಅವರ ಪ್ರೀತಿಗೆ ಪಾತ್ರ. ದೊಡ್ಡನಗೌಡರ ಹೃದಯ ಸಂಪತ್ತು ಅಪಾರವಾದದ್ದು. ನನಗೆ ಆದರ್ಶಪ್ರಾಯರಾಗಿ ದೊಡ್ಡಣ್ಣನ ಸ್ಥಾನದಲ್ಲಿರುವ ಆ ಮಹಾನುಭಾವಿಗಳಿಗೆ ನನ್ನ ನಮಸ್ಕಾರಗಳು.

—★—

ಪ್ರಗತಿ ಪರನಾದ ನಟನು ತನಗೆ ಹಿಂದೆ ಬಂದ ಪ್ರಶಸ್ತಿಯನ್ನು ಆ ಚಂದ್ರಾರ್ಕವೆಂದು ನಂಬುವದಿಲ್ಲ. ಅದೇ ಶ್ರೇಷ್ಠವೆಂದು ಬಗೆಯು ವುದಿಲ್ಲ. ಅಂದಿನ ತನ್ನ ಕುಂದು ಕೊರತೆಗಳನ್ನು ಗ್ರಹಿಸಿ ತಿದ್ದಿ ಕೊಂಡು ಸದಾ ಮುನ್ನಡೆಯುತ್ತಿರುವಾಗ ಅಂದಂದಿಗೆ ಜನರಿಂದ ಬಂದ ಮೆಚ್ಚಿಕೆಗಳನ್ನು, ಗೌರವಾದರಪ್ರಶಸ್ತಿಗಳನ್ನು, ಪಡೆದರೂ ಅವುಗಳು ಆಯಾ ಕಾಲದ ತನ್ನ ಕಲಾ ವ್ಯಾಸಂಗದ ಅನುಭವಕ್ಕೆ ದೊರೆತ ಪುರಸ್ಕಾರಗಳೆಂದು ತಿಳಿಯುವನಲ್ಲದೆ ಆ ಪುರಸ್ಕಾರಗಳು ಪೂರ್ಣವೆಂದು ನಂಬುವುದಿಲ್ಲ.

★—★

ಎಲ್ಲಿಯದೋ ಕಥೆಯನ್ನು ನಾಟಕವಾಡಲು ಹೋಗಿ ನಮ್ಮ ಕಥೆಯನ್ನೇ ನಾಟಕಕ್ಕೆ ಯೋಗ್ಯವಾಗುವಷ್ಟು ಕಥೆಯನ್ನು ಕಟ್ಟಿ ಕೊಂಡು ಬಂದುದಾಯಿತು.

ಗಮಕಿಗಳ ದೊಡ್ಡಣ್ಣ

ಶಕುಂತಲಾಬಾಯಿ ಪಾಂಡುರಂಗರಾವ್

1945ನೇ ವರ್ಷದ ಡಿಸೆಂಬರ್ ಕಡೆಯವಾರದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಕರ್ಣಾಟಕ ಸಾಹಿತ್ಯ ಸಮ್ಮೇಳನವು ವೈಶಿಷ್ಟ್ಯಪೂರ್ಣವಾಗಿತ್ತು. ಕನ್ನಡಕ್ಕೆ ಒಬ್ಬನೇ ಆದ ಶ್ರೀ ಟಿ. ಪಿ. ಕೈಲಾಸಂ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡನಾಡಿನ ಸಂಪರ್ಕವಿರುವ ತಮಿಳುನಾಡಿನ ಮದ್ರಾಸ್ ರಾಜಧಾನಿಯಲ್ಲಿ ಸಮ್ಮೇಳನವು ನಡೆದುದು ಗಮನಾರ್ಹವಾದ ವಿಷಯ. ಕನ್ನಡಿಗರಲ್ಲಿ ವಿಶೇಷ ಆತ್ಮೀಯತೆಯುಳ್ಳ ರಾಜಾಜಿಯವರು ಸಮ್ಮೇಳನವನ್ನು ಉದ್ಘಾಟಿಸಿ ಕನ್ನಡದಲ್ಲಿ ಭಾಷಣ ಮಾಡಿದುದು ಹೆಚ್ಚು ಮಹತ್ವಪೂರ್ಣವಾಗಿತ್ತು.

ಸಾಹಿತ್ಯ ಸಮ್ಮೇಳನದಲ್ಲಿ ಏರ್ಪಾಡಾಗಿದ್ದ ಮನರಂಜನೆಯ ಕಾರ್ಯಕ್ರಮಗಳು ಆಕರ್ಷಣೀಯವಾಗಿದ್ದವು. ಮೂರು ದಿವಸಗಳ ಸಂಜೆಗಳಲ್ಲಿ ನಡೆದ ಗಮಕ ಕಾರ್ಯಕ್ರಮವು ಶ್ರೋತೃಗಳ ಗಮನವನ್ನು ಸೆಳೆಯಿತು. ಕಾರಣ ಬಳ್ಳಾರಿಯಿಂದ ವಿಶೇಷ ಆಹ್ವಾನಿತರಾಗಿ ಬಂದಿದ್ದ ಗಮಕಿ ಜೋಳದರಾಶಿ ದೊಡ್ಡನಗೌಡರು ಅದಕ್ಕೆ ಕಾರಣರಾದರು. ಸ್ವತಃ ಕವಿಯಾದ ಅವರು ತಾವೇ ರಚಿಸಿದ ಹಂಪೆಯನ್ನು ಕುರಿತು ಗಮಕ ಮಾಡಿದ ಪದ್ಯ ಶ್ರೋತೃಗಳ ಮನಸ್ಸನ್ನು ಆಕರ್ಷಿಸಿತು. "ಹರಿಶ್ಚಂದ್ರ

ಕಾವ್ಯ"ದ ಕೆಲವು ಭಾಗಗಳನ್ನು ಗಮಕ ಶೈಲಿಯಲ್ಲಿ ವಾಚನ ಮಾಡಿದರು. ನಾಟಕೀಯವಾಗಿ ಇರುವ ಹರಿಶ್ಚಂದ್ರ ಕಾವ್ಯದ ಕೆಲವು ಭಾಗಗಳನ್ನು ಆರಿಸಿಕೊಂಡು ಅಭಿನಯ ಪೂರ್ವಕವಾಗಿ ವಾಚನಮಾಡಿದುದು ಪ್ರಾಮುಖ್ಯವಾಗಿತ್ತು. ಸಾವಿರಾರು ಸಭಿಕರನ್ನು ಮಂತ್ರ ಮುಗ್ಧರನ್ನಾಗಿ ಮಾಡುವ ಶಕ್ತಿಯುಳ್ಳ ಜೋಳದರಾಶಿಯವರು ತಮ್ಮ ಕಂಚಿನಂತಹ ಗೌಳ ಶಾರೀರದಿಂದ ಸಭೆಯನ್ನು ರಂಜಿಸಿದುದು ಅವರ ದೈವದತ್ತವಾದ ಶಕ್ತಿ. ಸ್ವತಃ ಕವಿಗಳು, ನಾಟಕಕಾರರು, ಅಭಿನಯ ಕುಶಲಿಗಳಾದ ಜೋಳದರಾಶಿಯವರು ಸಭೆಯನ್ನು ಆಕರ್ಷಿಸಿದುದು ಶ್ಲಾಘ್ಯನೀಯವಾಗಿತ್ತು. ಅವರಿಗೆ ಸಹಾಯಕರಾಗಿ ಶ್ರೀಯುತ ಕುಮಾರ ಸ್ವಾಮಿಯವರು ಹಾರ್ಮೋನಿಯಂ ನುಡಿಸುತ್ತಿದುದು ಕಲಾಪೂರ್ಣವಾಗಿತ್ತು. ಸಭೆ ಸೇರಿದಿದ್ದ ಕನ್ನಡಿಗರಿಗೆ ಒಬ್ಬರ ಹೊಸ ಪರಿಚಯವಾಯಿತು. "ಭಾರತವಾಚನ ಪ್ರವೀಣ" ಎಸ್. ಜಿ. ಬಿಂದೂರಾಯರು, ಭಾರತದ ಸುಪ್ರಸಿದ್ಧ ಗಮಕ ವಿದ್ವಾನ್ ಕೃಷ್ಣಗಿರಿ ಕೃಷ್ಣರಾಯರು, ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾ ಚಾರ್ಯರು, ಗಮಕ ವಿದ್ವಾನ್ ತಲಕಾಡು ಮಾಯಿಗೌಡರು, ಭಾರತದ ಲಲಿತಮ್ಮನವರು ಈ ಗಮಕ ವಿದ್ವನ್‌ಮಣಿಗಳ ಕಾವ್ಯವಾಚನಗಳನ್ನು ಕೇಳಿದ್ದ ಗಮಕ ಕಲಾಭಿಮಾನಿಗಳಿಗೆ ಬಳ್ಳಾರಿಯ ಜೋಳದರಾಶಿ ದೊಡ್ಡನಗೌಡರು ಒಂದು ಹೊಸ ಪರಿಚಯ.

1946ರರಲ್ಲಿ ಬಸವ ಜಯಂತಿಯ ಸಂದರ್ಭ. ಶ್ರೀ ಜೇರಿಗೆ ಕಟ್ಟೆ ಬಸಪ್ಪನವರು ಬಸವ ಜಯಂತಿಯನ್ನು ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಬಸವಣ್ಣನವರ ವಿಷಯದಲ್ಲಿ ಕಾರ್ಯಕ್ರಮಗಳು ಗಾಂಧಿನಗರದಲ್ಲಿರುವ ಆರ್ಯ ವಿದ್ಯಾಶಾಲೆಯ ಹಿಂಭಾಗದಲ್ಲಿದ್ದ ಗುಬ್ಬಿ ವೀರಣ್ಣನವರ "ಚನ್ನಬಸವೇಶ್ವರ ನಾಟಕ ಸಭಾ" ಮಂದಿರದಲ್ಲಿ ಏರ್ಪಾಡಾಗಿತ್ತು. ಮೂರು ದಿವಸಗಳು ಜೋಳದರಾಶಿ ದೊಡ್ಡನಗೌಡರು ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಾರ್ಧಿಕ ಷಟ್ಪದಿಯಲ್ಲಿರುವ ರಾಘವಾಂಕನ ಹರಿಶ್ಚಂದ್ರಕಾವ್ಯದ ಗಮಕ ವಾಚನ ಮುಖ್ಯ ಕಾರ್ಯಕ್ರಮವಾಗಿತ್ತು. ನಾನು ಮತ್ತು ನಮ್ಮ ಯಜಮಾನರು ಜೋಳದರಾಶಿ ದೊಡ್ಡನಗೌಡರ ಕಾರ್ಯಕ್ರಮವನ್ನು ಕೇಳಲು ಮೂರು ದಿವಸಗಳು ಶ್ರೋತೃವಾಗಿ ಹೋಗಿದ್ದೆವು. ಎರಡನೆಯ ದಿನದ ಸಂಜೆ ಶ್ರೀ ಜೇರಿಗೆ ಕಟ್ಟೆ ಬಸಪ್ಪನವರು ನನ್ನ ಬಳಿಗೆ ಬಂದು "ಶ್ರೀ ಜೋಳದರಾಶಿಯವರ ಪರಿಚಯ ನಿಮಗಿದೆಯೇ ?" ಎಂದು ಪ್ರಶ್ನಿಸಿದರು. ನನಗೆ ಪರಿಚಯವಿಲ್ಲ. ತುಂಬಾ ಚೆನ್ನಾಗಿ ಹರಿಶ್ಚಂದ್ರ ಕಾವ್ಯವನ್ನು ವಾಚನ ಮಾಡುತ್ತಾರೆ. "ಶ್ಲೋಕ ಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರು ಹರಿಶ್ಚಂದ್ರ ಕಾವ್ಯದ ಕೆಲವು ಭಾಗಗಳನ್ನು ಅಲ್ಲಲ್ಲಿ ಆರಿಸಿಕೊಂಡು ವಾಚನ ಮಾಡುವುದನ್ನು ಕೇಳಿದ್ದೆ. ಆದರೆ ಜೋಳದರಾಶಿಯವರು ಇಡೀ ಕಾವ್ಯವನ್ನು ವಾಚನ ಮಾಡುವುದು ಒಂದು ಮಹತ್ತರವಾದ ವಿಷಯ. ನಾಟಕದ ಗತ್ತು, ಸಂಗೀತದ ರೀತಿಯ ಗಮ್ಮತ್ತು, ರಾಗಪೋಷಣೆ, ಅಲ್ಲಲ್ಲಿ ಸಂಗೀತ ಬಿರಕಾಗಳನ್ನೂ ಮಿಂಚಿ

ನಂತೆ ತೋರಿಸುತ್ತಾ, ಶ್ರೋತೃಗಳ ಮನ ರಂಜಿಸುವಂತೆ ಮತ್ತು ಕಾವ್ಯ ಲೋಕಕ್ಕೆ ಒಯ್ಯುವಂತೆ ವಾಚನ ಮಾಡಿದುದು ನನಗೆ ತುಂಬಾ ಮೆಚ್ಚುಗೆಯಾಯಿತು" ಎಂದು ಹೇಳಿದೆ. "ಹಾಗಾದರೆ ಬನ್ನಿ ಗಮಕ ಕಲಾನಿಧಿ ಜೋಳದರಾಶಿಯವರನ್ನು ಪರಿಚಯ ಮಾಡಿಕೊಳ್ಳುವಿರಂತೆ" ಎಂದು ನನ್ನನ್ನು ಮತ್ತು ನಮ್ಮ ಯಜಮಾನರನ್ನು ಸಭಾಂಗಣಕ್ಕೆ ಕರೆದುಕೊಂಡು ಹೋದರು. "ಶ್ರೀಮತಿ ಶಕುಂತಲಾಬಾಯಿಯವರು ಭಾರತ ವಾಚನ ಪ್ರವೀಣ ಬಿಂದೂರಾಯರ ಶಿಷ್ಯೆ ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ಚಾಮರಸನ ಪ್ರಭುಲಿಂಗಲೀಲೆ, ಭೀಮಕವಿಯ ಬಸವ ಪುರಾಣ, ಹರಿಹರನ ಬಸವರಾಜ ದೇವರ ರಗಳೆ, ಗಿರಿಜಾ ಕಲ್ಯಾಣ ಈ ಕಾವ್ಯಗಳನ್ನು ವಾಚನ ಮಾಡುತ್ತಾರೆ. ಬಸವಣ್ಣನ, ಅಕ್ಕಮಹಾದೇವಿಯ ವಚನಗಳನ್ನು ಗಮಕ ರೀತಿಯಲ್ಲಿ ವಾಚನಮಾಡುತ್ತಾರೆ" ಎಂದು ಪರಿಚಯಿಸಿದರು. "ನಾನು ಅವರ" "ಗಮಕ ವಾಚನವನ್ನು ಕೇಳಬೇಕಲ್ಲಾ !" ಎಂದರು ಜೋಳದರಾಶಿಯವರು. "ನಾಳೆ ಹರಿಶ್ಚಂದ್ರ ಕಾವ್ಯದ ಮುಕ್ತಾಯ. ನಮ್ಮ ವಾಚನಕ್ಕೆ ಮುಂಚೆ ಸ್ವಲ್ಪ ಹೊತ್ತು ಶಕುಂತಲಾಬಾಯಿಯವರ ಗಮಕ ವಾಚನವನ್ನು ಇಟ್ಟುಕೊಳ್ಳಬಹುದಲ್ಲಾ" ಎಂದರು ಜೋಳದರಾಶಿಯವರು. ಸಂತೋಷದಿಂದ ಒಪ್ಪಿದೆವು.

ಮಾರನೆಯ ದಿವಸ ನನ್ನ ಗಮಕ ವಾಚನವು ಅರ್ಧ ಗಂಟೆಗಳ ಕಾಲ ನಡೆಯಿತು. ಶ್ರೀಯುತ ಬಿ. ಎಂ. ಶ್ರೀ. ಯವರಿಂದ ಸಂಪಾದಿತವಾದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಯಾದ "ಕನ್ನಡದ ಬಾವುಟ" ಸಂಕಲನದಲ್ಲಿ ಹರಿಹರನ ಬಸವ ರಾಜದೇವರ ರಗಳೆಯಿಂದ ಆರಿಸಿದ ಬಸವಣ್ಣನವರ ಗುಣ ಎಂಬ 27ಸಾಲುಗಳನ್ನು ಆರಿಸಿಕೊಂಡಿದ್ದೆ —"ಎಲೆ ಬಸವ, ಬಸವರಸ ಬಸವಯ್ಯ, ಬಸವರಾಜ, ಬಸವದೇವ ಕೇಳಯ್ಯ ....ಈಶನ ಮೀಸಲಪ್ಪ ಭಕ್ತ ನೀನು, ನಿನಗೆಣೆಯಿಲ್ಲ, ಪಡಿಯಿಲ್ಲ, ಪಾಸಟಿಯಾಮ ?" ಈ ಸಾಲುಗಳನ್ನು ರಾಗಮಾಲಿಕೆಯಲ್ಲಿ ವಾಚನ ಮಾಡಿದೆ. ಇದು ವರೆಗೆ ಈ ವಚನವನ್ನು ಯಾರೂ ವಾಚನ ಮಾಡಿರಲಿಲ್ಲ. ನೆರದಿದ್ದ ಸಭೆ ಮುಗ್ಧ ವಾಯಿತು. ನನ್ನ ಸಹೋದರ ಎನ್. ಶ್ರೀನಿವಾಸ್ ನನ್ನ ಗಮಕಕ್ಕೆ ಪಿಟೀಲು ಧ್ವನಿ ಕೊಡಿಸಿ ಮತ್ತೂ ರಂಜಿಸಿದ. ಜೋಳದರಾಶಿಯವರು ಕೂಡಲೇ "ಭೇಷ್ ತಂಗಿ ವಾಚನ ಅದ್ಭುತವಾಗಿತ್ತು" ಎಂದು ಶ್ಲಾಘಿಸಿದರು. ಅಂದಿನಿಂದ ಅವರು ನನ್ನನ್ನು ತಮ್ಮ ಸ್ವಂತ ತಂಗಿ ಎಂದು ಸ್ವೀಕರಿಸಿದ್ದಾರೆ. ಬೆಂಗಳೂರಿಗೆ ಬಂದಾಗಲೆಲ್ಲಾ ನಮ್ಮ ಮನೆಗೆ ಬಂದು ಅವರ ದರ್ಶನವನ್ನು ಕೊಡುತ್ತಾರೆ. ತಿಂಗಳಿಗೆ—ಎರಡು ತಿಂಗಳಿಗೊಮ್ಮೆ ಪತ್ರ ವ್ಯವಹಾರ ನಡೆಸಿ ತಮ್ಮ ಯೋಗಕ್ಷೇಮವನ್ನು ತಿಳಿಸಿ, ನಮ್ಮ ಯೋಗಕ್ಷೇಮವನ್ನೂ ವಿಚಾರಿಸುತ್ತಾರೆ. ಇದು ಅವರ ಆತ್ಮೀಯತೆಯನ್ನು ತೋರಿಸುತ್ತದೆ. ದೊಡ್ಡನಗೌಡರು ವಯಸ್ಸಿನಲ್ಲಿ ಮಾತ್ರ ದೊಡ್ಡವರಲ್ಲ, ಗುಣ ನಡೆ, ನುಡಿಗಳಲ್ಲೂ ದೊಡ್ಡವರು ಹೌದು.

ಶೂನ್ಯ ಸಂಪಾದನೆಯ ಧ್ವನಿ ಮುದ್ರಿಕೆಗಳನ್ನು ಮಾಡಿಕೊಳ್ಳಲು ಜೋಳದ ರಾಶಿಯವರು ಬೆಂಗಳೂರಿಗೆ ಬಂದಾಗ ;

೧. ಸಿದ್ಧರಾಮಯ್ಯಗಳ ಸಂಪಾದನೆ (ಪ್ರಭು ಸೊನ್ನಲಿಗೆಗೆ ಬಂದುದು)

೨. ಪ್ರಭು ಸಿದ್ಧರಾಮಯ್ಯನೊಂದಿಗೆ ಕಲ್ಯಾಣಕ್ಕೆ ಬಂದ ಸಂಪಾದನೆ

೩. ಸಿದ್ಧರಾಮಯ್ಯಗಳ ಲಿಂಗ ದೀಕ್ಷಾ ಸಂಪಾದನೆ

೪. ಮೋಳಿಗೆ ಮಾರಯ್ಯನ ಸಂಪಾದನೆ

೫. ನುಲಿಯ ಚಂದಯ್ಯಗಳ ಸಂಪಾದನೆ

ಈ ಐದು ಸಂಪಾದನೆಗಳನ್ನು ಯಶಸ್ವಿಯಾಗಿ ಎರಡುವಾರಗಳಲ್ಲಿ ಧ್ವನಿಮುದ್ರಿಸಿ ಕೊಳ್ಳಲಾಯಿತು. ಜೊತೆಗೆ

೬. ಆಯ್ದಕ್ಕಿಮಾರಯ್ಯಗಳ ಸಂಪಾದನೆ

೭. ಮಹಾದೇವಿ ಅಕ್ಕಗಳ ಸಂಪಾದನೆ

೮. ಪ್ರಭುಲಿಂಗಲೀಲೆಯ ಅಕ್ಕಮಹಾದೇವಿಯ ಗತಿ (ಕಾವ್ಯವಾಚನ) ಜೋಳದರಾಶಿಯವರು ಈ ಮೂರು ಸಂಪಾದನೆಗಳ ವಿಷಯವಾಗಿ ಹೀಗೆ ಹೇಳಿ ಕೊಂಡಿದ್ದಾರೆ. ಅವರ ಹೃದಯ ಶ್ರೀಮಂತಿಕೆಯನ್ನು ಈ ಕೆಳಗಿನ ಸಾಲುಗಳು ಪ್ರದರ್ಶಿಸುತ್ತವೆ.

> "ಸುಪ್ರಸಿದ್ಧ ರಂಗಭೂಮಿ–ಸಿನೀಮಾನಟೀ ಮಣಿಯರಾದ ಶ್ರೀಮತಿ ಬಿ. ಜಯಮ್ಮನವರು ಭಕ್ತಿಯಿಂದ ಆಯ್ದಕ್ಕಿ ಮಾರಯ್ಯನ ಸಂಪಾದನೆಯಲ್ಲಿ "ಲಕ್ಕಮ್ಮನ ಪಾತ್ರ, ರಂಗಭೂಮಿಯ ನಟೀಮಣಿ ಶ್ರೀಮತಿ ಸ್ವರ್ಣಮ್ಮನವರು ಅಕ್ಕಮಹಾದೇವಿ ಅಕ್ಕನ ಸಂಪಾದನೆ ಯಲ್ಲಿ 'ಅಕ್ಕನ ಪಾತ್ರವನ್ನು ತಮ್ಮ ಧ್ವನಿಯ ವಿನ್ಯಾಸಗಳಿಂದ ಯಶಸ್ವಿಗೊಳಿಸಿದರು. ಪ್ರಸಿದ್ಧ ಗಮಕಿಯಾಗಿ ಕರ್ಣಾಟಕದಲ್ಲಿ ಕೀರ್ತಿವೆತ್ತ ಶಕುಂತಲಾಬಾಯಿ ಪಾಂಡುರಂಗರಾಯರು ಅಮೋಘ ವಾದ ತಮ್ಮ ಗೌಳ ಶಾರೀರದಿಂದ "ಅಕ್ಕಮಹಾದೇವಿ ಅಕ್ಕನ ಗತಿ" ಯನ್ನು ವಾಚಿಸಿದರು.

ಈ ಮೂವರು ನನ್ನ ಸಹೋದರಿಯರು. ಕಲಾರಂಗದಲ್ಲಿ ಇಂಥಹ ಸಹೃದಯ, ವಾತ್ಸಲ್ಯಪೂರಿತ ಸಹೋದರಿಯರನ್ನು ಪಡೆಯುವುದು ದುರ್ಲಭ. ಎಲ್ಲಾ ಭಾರವನ್ನು ಇವರು ಹೊತ್ತು ಸಮಾಜದ ಧರ್ಮಕಾರ್ಯ ಪ್ರಚಾರಕ್ಕಾಗಿ, ಸಹಕಾರವಿತ್ತುದನು ನಾನೆಂದೂ ಮರೆಯಲಾರೆ.

ನನಗೆ ಅರವತ್ತು ವರ್ಷ ತುಂಬಿದಾಗ ಕರ್ನಾಟಕ ರಾಜ್ಯ ಮಟ್ಟದ ಅಭಿನಂದನ ಮಹಾಸಭೆ ಏರ್ಪಾಡಾಗಿ ಅದರ ಆಶ್ರಯದಲ್ಲಿ "ಶಕುಂತಲಾಬಾಯಿ ಪಾಂಡುರಂಗ ರಾಯರ ಅಭಿನಂದನ ಗ್ರಂಥ-ಗಮಕ ಶಾರದೆ" ಪ್ರಕಟವಾಯಿತು. ಅದಕ್ಕೆ "ಅಣ್ಣನ ಅರವತ್ತರೊಸಗೆ—ಕೆ. ದೊಡ್ಡಣ್ಣ" ಎಂಬ ಲೇಖನವನ್ನು ಬರೆದುಕೊಟ್ಟರು. ಅದರಲ್ಲಿ ನನ್ನ ವಿಷಯವಾಗಿ ಗಮಕಿಗಳ ದೊಡ್ಡಣ್ಣ ಹೀಗೆ ಕೆಲವು ಮಾತುಗಳಲ್ಲಿ ತಮ್ಮ ಹೃದಯ ಶ್ರೀಮಂತಿಕೆಯನ್ನು ತೋರಿಸಿದ್ದಾರೆ.

"ಸಾಧಾರಣವಾಗಿ ಹೆಣ್ಣು ಮಕ್ಕಳಿಗೆ ಗೌಳ ಶಾರೀರವಿರುವುದಿಲ್ಲ, ಅದು ಶಕುಂತಲಾಬಾಯಿಗಿದೆ ಎಂದರೆ 'ಗಂಡುಬೀರಿ' ಎಂದವರು ಮೂರ್ಖರಾದಾರು. ಶಾರೀರ ಸಂಪತ್ತಿನಲ್ಲಿ ಗೌಳ ಶಾರೀರವೇ ಶ್ರೇಷ್ಠವಾದುದು. ಆ ಶಾರೀರ ಗುಡುತನದ ಒರಟುತನದಿಂದ ಪಾರಾಗಿ ಶುದ್ಧ ಮಧುರತೆಯಾಂತು, ಧ್ವನಿ ಎತ್ತಿದ ಕೂಡಲೇ ಮುಗ್ಧರಾಗುತ್ತಾರೆಂದರೆ ಯಾರೇನೆಂದರೂ ಅಂಗನೆಯರೇ ಅಣಕಿಸಿದರೂ ಅವರಿಗೆ ಲಭ್ಯವಾಗದ್ದು. ಆಕೆ ಹುಟ್ಟಿನೊಂದಿಗೇ ತಂದುಕೊಂಡಿದ್ದಾಳೆ. ಹುಟ್ಟಿದ ಮೇಲೆ ಯಾರಿಂದಲೂ ಕೊಂಡಿದ್ದಲ್ಲ. ಅದಕ್ಕೆ ಆಕೆಯ ಭಾಗ್ಯವೆಂದರೆ ಯಾರದೇನು ಆಕ್ಷೇಪ.

ಅಹುದು ಸಂಗೀತ ನಾಟಕ ಅಕಾಡಮಿಯಿಂದ ಯಾರೂ ಪಡೆಯದ ಗಮಕ ಪ್ರಶಸ್ತಿ ಪಡೆದಳು. ಪಡೆಯುವ ಯೋಗ್ಯತೆ ಇತ್ತು, ಪಡೆದಳು. ಅದಕ್ಕೆ ಆಕ್ಷೇಪವೇ? ಆಕೆ ಆದರಣೆಯನ್ನು ಸ್ವೀಕರಿಸಿ ಅಕಡಮಿ ಇತ್ತ ಪ್ರಶಸ್ತಿ ಕಾಣಿಕೆ ಧನಕ್ಕೆ ತನ್ನ ಕಾಣಿಕೆ ಯನ್ನು ಕೂಡಿಸಿ ಕನ್ನಡ ಪರಿಷತ್ತಿನಲ್ಲಿ ಗಮಕ ಕಲಾಭಿವೃದ್ಧಿಗಾಗಿಯೇ ದತ್ತಿನಿಧಿ ಯಾಗಿಟ್ಟುದು ಚಲೋದೇ ಆಯಿತಲ್ಲ. ಅಕಡಮಿಗೂ ಗೌರವ ನೀಡಿದಂತಾಯಿತಲ್ಲಾ."

ವರ್ಷದ ನೆನಪಿಲ್ಲ "ಶ್ರೀ ಎರ್ರಿಸ್ವಾಮಿ ಜೀವಸಮಾಧಿ'' ಚೇಳ್ಳಗುರ್ಕಿಯಲ್ಲಿ ಒಂದು ಮಹಾ ಸಮಾರಂಭ. ಅಲ್ಲಿ ಒಂದು ಕಾರ್ಯಕ್ರಮವನ್ನು ಕೊಡಬೇಕೆಂದು ಜೋಳದರಾಶಿ ದೊಡ್ಡನಗೌಡರು ಆಹ್ವಾನಿಸಿದರು. ಚೇಳ್ಳಗುರ್ಕಿಯಲ್ಲಿ ಎರಡು ದಿವಸ ನನ್ನ ಕಾರ್ಯಕ್ರಮವಾಯಿತು. ದೊಡ್ಡನಗೌಡರು ಮತ್ತು ಅವರ ಧರ್ಮ ಪತ್ನಿ ಗೌಡತಿ ಹನುಮಕ್ಕನವರು ನನ್ನ ಕಾರ್ಯಕ್ರಮಕ್ಕೆ ಬರುತ್ತಿದ್ದರು. ಊರನ್ನು ಬಿಡುವ ಮುಂದೆ ದೊಡ್ಡನಗೌಡ ದಂಪತಿಗಳು ನನ್ನನ್ನು ಮತ್ತು ನಮ್ಮ ಯಜಮಾನ ರನ್ನು ಜೋಳದರಾಶಿಗೆ ಆಹ್ವಾನಿಸಿದರು. ಗೌಡರು ಆಗರ್ಭ ಶ್ರೀಮಂತರು. ಆದರೆ ಅಷ್ಟೇ ಸರಳರು ಎಂಬುದು ಮನವರಿಕೆಯಾಯಿತು. ಹೋಳಿಗೆ ತುಪ್ಪದ ಔತಣ ವಾಯಿತು. ಐದು ಬೆಟ್ಟಗಲದ ಜರತಾರಿ ಕುಪ್ಪಸದ ಕಣವನ್ನು ಶ್ರೀಮತಿ ಹನುಮಕ್ಕ ಗೌಡತಿಯವರು ಬಾಗಿನವನ್ನಿತ್ತರು. ಆತ್ಮೀಯತೆಯ ಪ್ರೀತಿ, ವಿಶ್ವಾಸದಿಂದ ಬೀಳ್ಕೊಟ್ಟರು. ಇದು ಎಂದೆಂದಿಗೂ ಮರೆಯಲಾಗದ ಸಂದರ್ಭ.

ಗಮಕ ಕಲಾನಿಧಿ ಡಾ॥ ಶ್ರೀ ಜೋಳದರಾಶಿ ದೊಡ್ಡನಗೌಡರಿಗೆ ಈಗ ಎಂಬತ್ತು ವರ್ಷಗಳು ತುಂಬಿವೆ. ಕರ್ನಾಟಕ ಸಂಗೀತ ಮತ್ತು ಸಾಹಿತ್ಯ ಅಕಾಡಮಿಗಳು ಅವರನ್ನು ಗೌರವಪೂರ್ವಕವಾಗಿ ಸನ್ಮಾನಿಸಿವೆ. ಡಾಕ್ಟರೇಟ್ ಪದವಿಯನ್ನು ಇತ್ತು ನಮ್ಮ ಕರ್ನಾಟಕದ ವಿಶ್ವವಿದ್ಯಾನಿಲಯು ಗೌರವಿಸಿದೆ. ನಮ್ಮ ಗಮಕಿಗಳ ದೊಡ್ಡಣ್ಣ ಜೋಳರಾಶಿಯವರು ಬಹುಮುಖ ಪ್ರತಿಭಾನ್ವಿತರು. ಅವರು ಕವಿಯಾಗಿ, ನಾಟಕಕಾರರಾಗಿ, ಅಭಿನಯ ವಿಶಾರದರಾಗಿ, ಗಮಕ ಕಲಾ ನಿಧಿಯಾಗಿ, ವ್ಯಾಖ್ಯಾನ ಪ್ರವಚನಕಾರರಾಗಿ ಅಮೋಘವಾಗಿ ಕನ್ನಡ ನಾಡಿನ ನುಡಿಯ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಬಹುಮುಖ ಪ್ರತಿಭೆಗೆ ಸಾದೃಶವಾಗಿ **ನಂದೇ ನಾನೋದಿದೆ** ಎಂಬ ಜೀವನ ಪರಿಚಯು ತುಂಬಾ ಶ್ಲಾಘ್ಯವಾದ ಕೃತಿ ಯಾಗಿದೆ. ಅವರ ವಿದ್ವತ್ ಪಾಂಡಿತ್ಯಕ್ಕೆ ಸಾಕ್ಷಿಯಾಗಿ ರಚಿತವಾಗಿರುವ **ಬಯಲ ಗಳಿಕೆಯ ಬೆಳಗು**" ಮಹಾಕೃತಿ ಇದು. ಡಾ॥ ಜೋಳದರಾಶಿ ದೊಡ್ಡನಗೌಡರ ತುಂಬು ಜೀವನಕ್ಕೆ ಸಲ್ಲಿಸುವ ಅಮೋಘವಾದ ಕಾಣಿಕೆಯೆಂದರೆ ಅದು ಅವರ ಆಪ್ತರು. ಕಲಾಭಿಮಾನಿಗಳು, ಬಂಧು-ಬಳಗಗಳೂ ಅರ್ಪಿಸುವ ಅಭಿನಂದನ ಗ್ರಂಥ,

★★★

ನಾಯಕಿಯಿಲ್ಲದ ನಾಯಕನ ವೇಷಕ್ಕೆ
ನಲವಿಲ್ಲ ಒಲವಿಲ್ಲ ಸೊಬಗಿಲ್ಲ—ನಾಟಕ
ನೋಟವಿಷಾದವು ಕೊನೆಗೆಲ್ಲ.

★

ಒಂದಿಷ್ಟು ಉಳಿದಿದೆ ಕೊನೆ ನೋಟದಭಿನಯ
ಮುಗಿಸಿಬರುವೆ ಬಣ್ಣವರಸಿ—ರಾಮೇಶಗೆ
ವೇಷವೊಪ್ಪಿಸಿ ನಿನ್ನ ಬಳಿ ಬರುವೆ.

★

ಗಳಿಸಿದೀ ಕಲಾನಿಧಿಯ ನಾರಿಗೀಯಲಿ
ಗಳಿತವಾಯಿತೆನ್ನ ಬದುಕು ಕೇಳುವವರಾರಿಲ್ಲ ॥

ನಾನು ಕಂಡ ಸಹೃದಯ

ಎಂ. ಜಿ. ನಂಜುಂಡಾರಾಧ್ಯ

ಸುಮಾರು ನಾಲ್ಕು ದಶಕಗಳಷ್ಟು ಹಿಂದಿನಿಂದಲೂ ನನಗೆ ಶ್ರೀ ಕೆ. ದೊಡ್ಡನಗೌಡರ ಪರಿಚಯವುಂಟು. ಮೊದಲನೆಯದಾಗಿ ಧರ್ಮಸ್ಥಳದ "ಮಾತನಾಡುವ ಮಂಜುನಾಥ" ಎನಿಸಿದ ದೇವತಾಕಲ್ಪರಾದ ದಿ॥ ಮಂಜಯ್ಯ ಹೆಗ್ಗಡೆಯವರ ಕಾಲದಲ್ಲಿ, ಅಲ್ಲಿ ಪ್ರತಿವರ್ಷ ಕಾರ್ತೀಕದ ಕಡೆಯಲ್ಲಿ ಏರ್ಪಡುವ ದೀಪೋತ್ಸವದ ಸಂದರ್ಭದಲ್ಲಿ, ಸರ್ವಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನಗಳಿಗೆ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಅಧ್ಯಕ್ಷರಾದ ದಿ॥ಕೆ. ಎಸ್.ಧರಣೇಂದ್ರಯ್ಯನವರ ಮೂಲಕ ಕರೆ ಬರುತ್ತಿತ್ತು.

ಶ್ರೀಮಾನ್ ಧರಣೇಂದ್ರಯ್ಯನವರು ಈ ಉಭಯ ಸಮ್ಮೇಳನಗಳಿಗೆ ಭಾಷಣಕಾರರನ್ನು, ಕಲಾವಿದರನ್ನು ಗೊತ್ತುಪಡಿಸಿಕೊಂಡು ಬೆಂಗಳೂರಿನಿಂದ ಒಂದು ಬಸ್ ಏರ್ಪಡಿಸಿ ಬೇಲೂರು, ಶ್ರವಣಬೆಳುಗೊಳಗಳ ಮೂಲಕ ಧರ್ಮಸ್ಥಳಕ್ಕೆ ಬಿಡಿಸುತ್ತಿದ್ದರು. ಈ ತಂಡದಲ್ಲಿ ಖ್ಯಾತ ಸಾಹಿತಿಗಳಾದ ದಿ॥ ಅ. ನ. ಕೃಷ್ಣರಾಯರು, ಬಳ್ಳಾರಿಯ ಶ್ರೀಗಳಾದ ದೊಡ್ಡನಗೌಡರು (ಗಮಕಿ), ಶಿ.ವ. ಚನ್ನಬಸವೇಶ್ವರ (ಅರವಿಂದರ ಶಿಷ್ಯ),

ಪಂಡಿತರತ್ನ ದಿ॥ ಎ. ಶಾಂತರಾಜಶಾಸ್ತ್ರಿಗಳು (ವಿಶ್ವಬಂಧು ಸಂಪಾದಕರು) ಮುಂತಾದವರು ಕಡ್ಡಾಯವಾಗಿರುತ್ತಿದ್ದರು. ನಾನು ಅದೇ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದುದರಿಂದ ಈ ಗುಂಪಿನಲ್ಲಿ ನಾನೂ ಸೇರಿದ್ದೆ. ಆ ಸಂದರ್ಭದಲ್ಲಿ ದೊಡ್ಡನಗೌಡರು ಎರಡೂ ಸಭೆಗಳಲ್ಲಿ ಪ್ರಾರ್ಥನೆಗಳನ್ನು ಗಮಕವಾಚನವನ್ನೂ ಮಾಡಿ ಸಕ್ರಿಯ ಸಹಕರಿಹಿಸುತ್ತಿದ್ದರು.

ಅನಂತರ ಬಳ್ಳಾರಿ ಜಿಲ್ಲೆಯ ಚೇಳ್ಗುರಿಕಿ ಲಿಂ॥ ಪರಮಪೂಜ್ಯ ಎರ್ರಿತಾತನವರ ಜಾಗೃತ ಸ್ಥಾನವಾದ ಗದ್ದಿಗೆಯಲ್ಲಿ ಏರ್ಪಡುವ ಕಾರ್ಯಕ್ರಮಗಳಿಗೆ ಬೆಂಗಳೂರಿನ ಲಿಂ॥ ಶ್ರೀ ಎ. ಜಿ. ಶಾಮಣ್ಣನವರ ಆದರದ ಕರೆಯನ್ನು ಮನ್ನಿಸಿ ನಾನು ಪ್ರತಿ ವರ್ಷವೂ ಅಲ್ಲಿಗೆ ಹೋಗುತ್ತಿದ್ದೆ. ಅಲ್ಲಿಗೆ ಜೋಳದರಾಶಿ ಗ್ರಾಮ ತೀರ ಹತ್ತಿರದಲ್ಲಿದೆ. ಪೂಜ್ಯ ತಾತನವರಲ್ಲಿ ಗೌಡರಿಗೆ ಅಮಿತವಾದ ಭಕ್ತಿ. ಆದ್ದರಿಂದ ಅವರು ಪ್ರತಿ ಸಲವೂ ಕಾರ್ಯಕ್ರಮಗಳು ಮುಗಿದ ಮೇಲೆ ನಮ್ಮನ್ನು ಅವರ ಮನೆಗೆ ಬರಮಾಡಿ ಕೊಂಡು, ಪುಷ್ಕಳ ಆತಿಥ್ಯ ನೀಡುತ್ತಿದ್ದರಲ್ಲದೆ, ಅವರ ರಚನೆಗಳನ್ನು ಇಂಪಾಗಿ ಹಾಡಿ ಕೇಳಿಸಿ ಬೀಳ್ಕೊಡುತ್ತಿದ್ದರು. ಇದರ ಮೇಲೆ ಬಳ್ಳಾರಿ ನಿವಾಸಿಗಳಾದ ಸರ್ವದರ್ಶನ ತೀರ್ಥ, ಕಳಾಪ್ರಪೂರ್ಣರಾದ ನನ್ನ ಹಿರಿಯ ಮಿತ್ರರಲ್ಲದೆ ಋಷಿಕಲ್ಪರಾದ ಲಿಂ॥ ವೈ. ನಾಗೇಶಶಾಸ್ತ್ರಿಗಳಿಗೆ ನನ್ನಲ್ಲಿ ಅಮಿತ ವಾತ್ಸಲ್ಯವಾದ್ದರಿಂದ ನಾನು ಆ ಕಡೆ ಪ್ರಯಾಣಿಸಿದಾಗಲೆಲ್ಲ ನನಗೆ ಬಳ್ಳಾರಿಯಲ್ಲಿ ಶಾಸ್ತ್ರಿಗಳವರ ದರ್ಶನ-ಆಶೀರ್ವಾದಗಳು ಲಭಿಸುತ್ತಿದ್ದವಲ್ಲದೆ, ಪೂಜ್ಯ ಶಾಸ್ತ್ರಿಗಳ ಮನೆಯಲ್ಲಿ ಶ್ರೀ ಗೌಡರ ಸಂಪರ್ಕವೂ ಅನಿವಾರ್ಯವಾಗಿ ರುತ್ತಿತ್ತು.

ಪ್ರತಿಸಲವೂ ಶಾಸ್ತ್ರಿಗಳ ಮನೆಯಲ್ಲಿ ಏನಾದರೊಂದು ಸತ್ಸಂಗ ಪ್ರಸಂಗವು ಏರ್ಪಟ್ಟಿರುತ್ತಿತ್ತು. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಭುಲಿಂಗ ಲೀಲೆ ಅಥವಾ ಶೂನ್ಯ ಸಂಪಾದನೆಯ ಪ್ರವಚನಗಳಲ್ಲಿ ನಾನು ಕೆಲವು ಸಲ ಶ್ರೋತೃವಾಗಿದ್ದು ರಸಾಸ್ವಾದನ ಮಾಡಿದ್ದೇನೆ.

ಚಿತ್ರದುರ್ಗದ ಪ್ರಸಿದ್ಧ ಬರಹಗಾರರಾದ ದಿ॥ ಶ್ರೀಧರಮೂರ್ತಿಯವರು ಹಿರಿಯೂರು ನಗರ ಮತ್ತು ದುರ್ಗಗಳಲ್ಲಿ ಏರ್ಪಡಿಸಿದ್ದ ಶರಣ ಸಾಹಿತ್ಯ ಸಮ್ಮೇಳನಗಳಲ್ಲಿ ನಾನು ಮಿತ್ರರಾದ ದಿ॥ ಅ.ನ.ಕೃ. ಮತ್ತು ದಿ॥ ದೇವುಡು ನರಸಿಂಹಶಾಸ್ತ್ರಿ ಜೊತೆಯಲ್ಲಿ ಭಾಗವಹಿಸಿದ್ದಾಗ ಶ್ರೀ ದೊಡ್ಡನಗೌಡರ ಜೊತೆ ದೇವೀ ಉಪಾಸಕರೂ ಋಷಿಕಲ್ಪರೂ ಆದ ಬಳ್ಳಾರಿಯ ದಿ॥ ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳ ಸಖ್ಯವೂ ನನಗೆ ಏರ್ಪಟ್ಟಿತ್ತು. ಇದರಿಂದ ಬಳ್ಳಾರಿಯಲ್ಲಿ ಶ್ರೀ ಸ್ವಾಮಿಗಳ ಆಶ್ರಮದಲ್ಲಿ ಸೇರಿ ಅವರ ಅಮೃತವಾಣಿಯಿಂದ ಆನಂದಿಸುತ್ತಿದ್ದೆ. ಒಮ್ಮೆ ನಾನು ಚೇಳ್ಗುರಿಕಿಯಿಂದ ಜೋಳದರಾಶಿಗೆ ಭೇಟಿ ಕೊಟ್ಟಾಗ ಶ್ರೀ ಗೌಡರ ಮನೆ ದೇವರು ರಾಮಲಿಂಗೇಶ್ವರ ದೇವಾಲಯದಲ್ಲಿ ಸಹಸ್ರ ಬಿಲ್ವಾರ್ಚನೆ ಮುಗಿದು ತೆಲುಗು ಪುರಾಣ ಪ್ರವಚನವು ಏರ್ಪಟ್ಟಿತ್ತು. ಆ ದಿನ ಶ್ರೀ ಗೌಡರು ಪುರಾಣವನ್ನು ಗಮಕ ರೀತಿಯಲ್ಲಿ

ವಾಚಿಸಿ ತೆಲುಗು ಭಾಷೆಯಲ್ಲಿ ಅರ್ಥೈಸುತ್ತಿದ್ದ ವೈಖರಿ ನನಗೆ ರೋಮಾಂಚಕಾರಿಯೆನಿಸುತ್ತಿತ್ತು. ನಾನು ಚಿಕ್ಕವನಿದ್ದಾಗ ನಮ್ಮ ಹಳ್ಳಿಯಲ್ಲಿ ತೆಲುಗು ರಾಮಾಯಣ, ನನ್ನಯ ಕವಿ ಮಹಾಭಾರತಗಳನ್ನು ಓದಿ ಅರ್ಥೈಸುತ್ತಿದ್ದ ಬಾಕ್ರಿ ಸಿ. ನಾರಾಯಣಪ್ಪನವರ ಪ್ರವಚನ ನೆನಪಾಯಿತು. ಏಕೆಂದರೆ ನಮ್ಮ ಹಳ್ಳಿಯ ಜನಸಾಮಾನ್ಯರಿಗೆ ನಾರಾಯಣಪ್ಪನವರು ಪೂಜ್ಯರಾಗಿದ್ದರಲ್ಲದೆ ಅವರಿಗೆ ಜೈಮಿನಿಭಾರತ ಮುಂತಾದ ಕನ್ನಡ–ತೆಲುಗು ಕಾವ್ಯಗಳನ್ನು ಓದಿ ಕೇಳಿಸಿ ಅವರ ಆಸಕ್ತಿ ಕೆರಳಿಸಿದರಲ್ಲದೆ, ಅವರಿಂದ ಪ್ರಭಾವಿತನಾದ ನಾನೂ ಹಳ್ಳಿಯಲ್ಲಿ ಚನ್ನಬಸವಪುರಾಣ, ಆಂಧ್ರದ ಬೊಮ್ಮೆರ ಪೋತನ ಕವಿಯ ಭಾಗವತದ ಕೆಲವು ಭಾಗಗಳನ್ನು ಓದಿ ಅರ್ಥೈಸಿ ಹೇಳಿ ಸೂತ ಪುರಾಣಿಕನೆಂದು ಹಳ್ಳಿಯಲ್ಲಿ ಹೆಸರಾಂತಿದ್ದೆ. ರಾಮೇಶ್ವರಾಲಯದಲ್ಲಿ ನಡೆಯುತ್ತಿದ್ದ ಶ್ರೀ ಗೌಡರ ಪ್ರವಚನ ನನ್ನಲ್ಲಿ ಅನೇಕ ವಿಚಾರ ಕ್ರಾಂತಿಯನ್ನುಂಟು ಮಾಡಿತ್ತು. ಅದೆಂದರೆ ಶ್ರೀ ಗೌಡರು ಸಾಮಾನ್ಯರಲ್ಲ ; ಅವರ ಶಿಕ್ಷಣ ಕೇವಲ ಪ್ರಾಥಮಿಕದವರೆಗೆ ಮಾತ್ರ. ಪ್ರೌಢಶಾಲೆ ಮತ್ತು ಕಾಲೇಜುಗಳ ಮೆಟ್ಟಲೇರಿದವರಲ್ಲ. ಆದರೂ ಅವರು ತೆಲುಗು ಮತ್ತು ಕನ್ನಡ ಪ್ರೌಢ ಕಾವ್ಯ–ಪುರಾಣಗಳನ್ನು ಗಮಕ ರೀತಿಯಲ್ಲಿ ವಾಚಿಸಿ ಸವ್ಯಸಾಚಿಯೆನಿಸಿ ಎರಡೂ ಭಾಷೆಗಳಲ್ಲಿ ವ್ಯಾಖ್ಯಾನಿಸುವ ಸಾಮರ್ಥ್ಯ ಹೇಗೆ ಪಡೆದರು? ಎರಡನೆಯದಾಗಿ ಸಂಸ್ಕೃತ ತರಗತಿಗಳ ನೆರವಿಲ್ಲದೆ ಇಂಥ ಕಠಿಣ ಕಾವ್ಯ–ಪುರಾಣಗಳನ್ನು ಅರ್ಥೈಸುತ್ತಿದ್ದುದು ಹೇಗೆ ಎಂದು.

ಅವರು ಬಾಲ್ಯದಲ್ಲಿ ತಕ್ಕಷ್ಟು ಶಿಕ್ಷಣ ಪಡೆದು ಬಳ್ಳಾರಿಯ ಖ್ಯಾತ ಕಲಾವಿದರಾದ ದಿ॥ ಟಿ. ರಾಘವಾಚಾರ್ಯರ ಶಿಷ್ಯವರ್ಗದಲ್ಲಿ ಕೆಲಕಾಲವಿದ್ದು, ಅನೇಕ ಭೂಮಿಕೆಗಳಲ್ಲಿ ಪಾತ್ರವಹಿಸಿ ಮುಂದೆ ಬಂದಿದ್ದರು. ಅವರಿಗೆ ದೈವದತ್ತವಾದ ಶಾರೀರವಿತ್ತು. ಅವರು ಪ್ರೌಢಶಾಲೆ–ಕಾಲೇಜುಗಳಿಗೆ ಸೇರದಿದ್ದರೂ ವೇದಕಾಲದ ಉಪಮನ್ಯು ಮುಂತಾದ ಋಷಿಕುಮಾರರಂತೆ ದನಗಾಹಿಗಳಾಗಿದ್ದು ವಿಶ್ವವೆಂಬ ಮುಕ್ತ ವಿದ್ಯಾಲಯದಲ್ಲಿ ಅರ್ಹರಾದ ಪೂಜ್ಯ ನಾಗೇಶಶಾಸ್ತ್ರಿಗಳಂತಹ ಗುರುವರ್ಯರಲ್ಲಿ ಶಿಷ್ಯವೃತ್ತಿ ನಡೆಸಿದ್ದರು ಮತ್ತು ಶಾಸ್ತ್ರಿಗಳು ಕಂದ ಮತ್ತು ವೃತ್ತಗಳಲ್ಲಿ ರಚಿಸಿದ್ದ ಕುಮಾರ ಸಂಭವ ಮತ್ತು ರಘುವಂಶ ಮತ್ತು ಅನೇಕ ಇತರ ಪುರಾಣಗಳನ್ನು ಶಾಸ್ತ್ರಿಗಳ ಜೊತೆಗೆ ಓದಿ ಅರ್ಥವಿಸುವ ಸಾಮರ್ಥ್ಯ ಪಡೆದದ್ದು ಅನ್ಯಾದೃಶ.

ಅಷ್ಟೆ ಅಲ್ಲದೆ ಶ್ರೀ ಗೌಡರು ಧಾರವಾಡದ ಪರಮಪೂಜ್ಯ ಶಿವಯೋಗಿ ಶ್ರೀ ನಿ. ಮೃತ್ಯುಂಜಯಪ್ಪಗಳ ಅಧ್ಯಕ್ಷತೆಯಲ್ಲಿ ಮೊದಮೊದಲು ಪ್ರಭುಲಿಂಗಲೀಲೆ ಪ್ರವಚನಗಳನ್ನು ನಡೆಸಿ, ಮುನ್ನುಂದೆ ಉಕ್ಕಿನ ಕಡಲೆಯೆಂದು ಹೇಳಲಾಗುತ್ತಿದ್ದ "ಶೂನ್ಯ ಸಂಪಾದನೆ"ಯ ಪ್ರವಚನ ಮಾಡಿ ಅದನ್ನು "ಬಯಲ ಗಳಿಕೆ" ಎಂಬ ಹೆಸರಿನಲ್ಲಿ ಪ್ರಕಟಿಸಿದಾಗ ನಾನು ಅದನ್ನು ವಿಮರ್ಶಿಸಿಯೂ ಇದ್ದೆ. ಪತ್ರಿಕೆಗಳಲ್ಲಿ ಅದು ಪ್ರಕಟವೂ ಆಗಿದೆ.

ಚೇಳ್ಗುರಿಕಿಯ ಶ್ರೀ ಎರ್ರಿತಾತನವರ ಧರ್ಮಸಂಸ್ಥೆಯ ಅಪೇಕ್ಷೆಯಂತೆ ನಾನು ಸಂಸ್ಕೃತದಲ್ಲಿ ಶ್ರೀ ಎರ್ರಿತಾತನವರ ಸುಪ್ರಭಾತು (೧೯೬೩) ಕನ್ನಡದಲ್ಲಿ (೧೯೬೪)ರಲ್ಲಿ ರಚಿಸಿದಾಗ ಅವನ್ನು ಗಮಕ ರೀತಿಯಲ್ಲಿ ವಾಚನ ಮಾಡಿದವರೂ ಶ್ರೀ ಗೌಡರೇ. ಅದು ಧ್ವನಿಮುದ್ರಿತವಾಗಿ ಇಂದಿಗೂ ಶ್ರೀ ಕ್ಷೇತ್ರದಲ್ಲಿ ಮುಂಜಾನೆ ಧ್ವನಿತವಾಗುತ್ತಿದೆ.

ಡಾ॥ ಜೋಳದರಾಶಿ ದೊಡ್ಡನಗೌಡರ "ನಂದೇ ನಾನೋದಿದೆ" ಎಂಬ ಗ್ರಂಥದಲ್ಲಿ ಗೌಡರ ಜೀವನದ ಸರ್ವೇಸಮಸ್ತವೂ ಬಂದಿದೆ. ತಮ್ಮ ಜೀವನಯಾತ್ರೆಯಲ್ಲಿ ಅವರು ಅನುಭವಿಸಿದ ಏಳು-ಬೀಳುಗಳು, ಸ್ತುತಿ-ನಿಂದೆಗಳನ್ನು ಲೆಕ್ಕಿಸದೆ, ಅವರು ನಿರಂತರವೂ ಸತ್ಸಂಗದಲ್ಲಿ ಸೇರಿ ಕಷ್ಟ-ಸುಖಗಳಲ್ಲಿ ಸಮತಾಯೋಗವನ್ನು ಸಾಧಿಸಿದ್ದಾರೆ.

೧೯೮೭ರ ರಲ್ಲಿ ಕಲ್ಬುರ್ಗಿಯ ವಿಶ್ವವಿದ್ಯಾಲಯದಿಂದ ಅವರಿಗೆ ಲಭಿಸಿದ ಡಾಕ್ಟರೇಟ್ ಪುರಸ್ಕಾರವು ಅವರ ಪರಿಶ್ರಮದ ಫಲ. "ಗುರುಕುಲಕ್ಲಿಷ್ಟೋಪ್ಯಮಂರಾರಿಃ ಕವಿಂ" ಎಂಬಂತೆ ಗುರು ಕರುಣೆಯಫಲ, ಮೇಲಾಗಿ ಸಹೃದಯಲೋಕ ಅವರಲ್ಲಿಟ್ಟಿರುವ ಅಮಿತ ವಿಶ್ವಾಸದ ಫಲ. ಈಚೆಗಂತೂ ಸಾಂಸ್ಕೃತಿಕವಾಗಿ ನನಗೆ ಮತ್ತು ಶ್ರೀ ಗೌಡರಿಗೆ ನಿಕಟ ಬಾಂಧವ್ಯವೇ ಏರ್ಪಟ್ಟಂತಾಗಿದೆ. ಅವರು ಆಕಸ್ಮಿಕವಾಗಿ ಕೆಲದಿನಗಳ ಹಿಂದೆ ಅಪಘಾತಕ್ಕೆ ಸಿಕ್ಕಿದಾಗ ನಾನು ಅವರ ಮನೆಗೆ ಹೋಗಿ ಅನುತಾಪದಲ್ಲಿ ಸಹಭಾಗಿಯಾಗಿದ್ದೆ. ೧೯೮೭ರಲ್ಲಿ ಅವರಿಗೆ ವಿಶ್ವವಿದ್ಯಾಲಯದ ಪುರಸ್ಕಾರವುಪ್ರಕಟವಾದಾಗ ಚೇಳ್ಗುರಿಕಿ ಮಹಾಕ್ಷೇತ್ರದಲ್ಲಿ ಆ ಸಂಸ್ಥೆಯ ನೆರವು ಪಡೆದು ಪ್ರಕಟವಾದ ನನ್ನ "ಸಸ್ವರ ಮಹಾನ್ಯಾಸ ಪ್ರಯೋಗ"ದ ಬಿಡುಗಡೆಯನ್ನು ಪರಮ ಪೂಜ್ಯ ಶ್ರೀಶೈಲ ಜಗದ್ಗುರು ಡಾ॥ ಜ.ಚ.ನಿ. ಮಹಾಸ್ವಾಮಿಗಳವರು ನೆರವೇರಿಸಿದರು. ಆಗ ನನ್ನ ಅಭಿನಂದನೆಗಳನ್ನು ಅವರಿಗೆ ಅರ್ಪಿಸಿದ್ದೆ.

ಪ್ರಕೃತ ಬೆಂಗಳೂರಿನಲ್ಲಿ ಏರ್ಪಟ್ಟಿರುವ ಅವರ ಅಭಿನಂದನ ಸಮಿತಿಯು ಈ ಪವಿತ್ರ ಗ್ರಂಥಕ್ಕೆ ನನ್ನದೊಂದು ಪ್ರಬಂಧವನ್ನು ಕೇಳಿದಾಗ ನನಗೆ ಪರಮಾನಂದವಾಯಿತು. ಆ ಲೇಖನಕ್ಕೆ ಕರೆಬಂದಾಗ ನನಗೆ ಆರೋಗ್ಯ ಸರಿಯಿರಲಿಲ್ಲ. ಆದರೂ ಅದರ ಸಂಪಾದಕಿಯರಾದ ಶ್ರೀಮತಿ ಜಯಾರಾಜಶೇಖರ್ ಅವರು ಮತ್ತೆ ಮತ್ತೆ ಒತ್ತಾಯ ಮಾಡಿದರು. ಅವರು "ಸಂಗೀತವು ನಡೆದುಬಂದ ದಾರಿ"ಯನ್ನು ಕುರಿತು ಲೇಖನ ಕೇಳಿದ್ದರು. ಆದರೆ ಆ ದಿಸೆಯಲ್ಲಿ ನಾನು ಹೆಚ್ಚು ಪರಿಶ್ರಮ ಮಾಡದಿದ್ದ ಪ್ರಯುಕ್ತ ಈಗ ಗೌಡರ ಸುದೀರ್ಘಕಾಲದ ಪರಿಚಯಾತ್ಮಕವಾದ ಈ ಲೇಖನವನ್ನು ಕಳಿಸಿದ್ದೇನೆ. ಇದು ನನ್ನ ಮತ್ತು ಶ್ರೀಗೌಡರ ಗೆಳಮೆಯ ಕುರುಹಾಗಿ ಒಪ್ಪಿಸಿದ ಕುಸುಮ ಹೂವಾಗಲಿ ಎಂದು ಆಶಿಸುತ್ತೇನೆ.

—★—

ಬಾಂಧವ್ಯದ ಬಳ್ಳಿ ; ವಾತ್ಸಲ್ಯ ನಿಧಿ

ಜಿ. ವಿ. ಜಯಾರಾಜಶೇಖರ್

ನಮ್ಮ ಯಜಮಾನರು ಆಗ ಬಳ್ಳಾರಿಯ ಸ್ಯಾನಿಟೋರಿಯಂನಲ್ಲಿ ಸೂಪರಿನ್ ಟೆನ್‌ಡೇಟ್ ಆಗಿದ್ದರು. ಹತ್ತಿರದ ಊರಾದ ಚೇಳಗುರ್ಕಿಯ ಜಾತ್ರೆಗೆ 1956 ರಲ್ಲಿ ಹೋಗಿದ್ದೆವು. ಅಲ್ಲಿ ಶಿವಾನುಭವ ಕಾರ್ಯಕ್ರಮದಲ್ಲಿ ಶ್ರೀ ಜೋಳದರಾಶಿ ದೊಡ್ಡನ ಗೌಡರ ಕಾವ್ಯವಾಚನ ಇತ್ತು. ಅವರನ್ನು ಅದೇ ಮೊದಲು ನಾನು ನೋಡಿದ್ದು.

ಅವರು ತಮ್ಮ ಕಾವ್ಯವಾಚನ ಆದನಂತರ "ಯಾರಾದರೂ ಹೆಣ್ಣು ಮಕ್ಕಳು ಹಾಡುವವರಿದ್ದರೆ ಬಂದು ಹಾಡಿ" ಎಂದು ಪದೇ ಪದೇ ವಿನಂತಿಸಿಕೊಂಡರು. ಹೋಗಿ ವೇದಿಕೆಯ ಮೇಲೆ ಹಾಡಬೇಕೆಂದು ನನಗೆ ಅನ್ನಿಸಿದರೂ ಕಂಕುಳಲ್ಲಿ ಎಳೆಯ ಮಗುವನ್ನಿಟ್ಟುಕೊಂಡಿದ್ದ ಕಾರಣ, ಎದ್ದು ಹೋಗಿ ಹಾಡಲಿಲ್ಲ. ಆ ಪುಣ್ಯಕ್ಷೇತ್ರದಲ್ಲಿ, ಜೋಳದರಾಶಿಯವರ ಎದುರಿಗೆ ಹಾಡುವ ಅವಕಾಶವನ್ನು ಉಪಯೋಗಿಸಿ ಕೊಳ್ಳಲಿಲ್ಲವಲ್ಲ ಎಂದು ವ್ಯಥೆಯಾಯಿತು.

ಮುಂದೆ ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ, ಶ್ರೀ ಕು. ವೆಂ. ಪು. ಅವರ ಸನ್ಮಾನ ಆದ ಸಮಯದಲ್ಲಿ ಗೌಡರ ಬಾಯಿಂದ "ರಾಮಾಯಣ ದರ್ಶನಂ" ಕೇಳಿ ನಾನು ಮತ್ತು ನಮ್ಮ ಯಜಮಾನರು ರೋಮಾಂಚಿತರಾದೆವು. ಆ ಕಾವ್ಯವನ್ನು ಅಷ್ಟು ಚೆನ್ನಾಗಿ ವಾಚನ ಮಾಡಬಹುದೆಂಬ ವಿಷಯ ಅಂದು ತಿಳಿದೆ.

ಬಳ್ಳಾರಿಯಲ್ಲಿದ್ದಾಗ, ಅಲ್ಲಿ ನಡೆಯುತ್ತಿದ್ದ ಶಿವಾನುಭವ ಕಾರ್ಯಕ್ರಮಗಳಿಗೆ ನಮ್ಮವರು ಹೋಗುತ್ತಿದ್ದಾಗ, ಅವರಿಗೂ, ಗೌಡರಿಗೂ, ಸ್ನೇಹ ಬೆಳೆಯಿತು.

ನಮ್ಮವರು ಅವರ ಮನೆಯ ಕೆಲವರಿಗೆ ವೈದ್ಯಕೀಯ ಸೇವೆಸಲ್ಲಿಸಿದ್ದರು. ಆದರೆ ನನಗೆ ಅವರ ಪ್ರವಚನವನ್ನು ಹತ್ತಿರದಿಂದ ಕೇಳುವ ಸೌಭಾಗ್ಯ ಸಿಕ್ಕಿದ್ದು ಬೆಂಗಳೂರು ಬಸವ ಸಮಿತಿಯಲ್ಲಿ (1976 ಎಂದು ತೋರುತ್ತದೆ).

ಅಂದು ಶೂನ್ಯಸಂಪಾದನೆಯ ಪ್ರವಚನ ಕೇಳಿದ ನನಗೆ ಆ ಗುಂಗಿನಿಂದ ಹೊರ ಬರಲಾಗಲಿಲ್ಲ. ಏನೋ ಒಂದು ರೀತಿಯ ಹೇಳಲಾಗದ ಮಾನಸಿಕ ಒತ್ತಡ. ರಾತ್ರಿ ನಿದ್ರೆ ಬರದೆ ಹೊರಳಾಡಿದೆ. ಅಂದು ಕೇಳಿದ ಪ್ರವಚನದ ಬಗೆಗೆ ಏನಾದರೂ ಬರೆಯಲೇಬೇಕೆಂಬ ಉತ್ಕಟ ಬಯಕೆ. ಕೊನೆಗೆ ರಾತ್ರಿ 1 ಗಂಟೆಯಲ್ಲಿ ಎದ್ದು, ಅದಕ್ಕೆ ಬೇಕಾದ ಟಿಪ್ಪಣಿ ಮಾಡಿಟ್ಟ ಮೇಲೆ, ಮಲಗಿ ನಿದ್ರಿಸಿದೆ.

ಶೂನ್ಯಸಂಪಾದನೆಯ ಬಗೆಗೆ ನನ್ನ ಜ್ಞಾನದ ಮಿತಿಯಲ್ಲಿ ಒಂದು ಲೇಖನ ಸಿದ್ಧ ಪಡಿಸಿದೆ. ಅದು 28–8–76ರ "ಲೋಕವಾಣಿ" ಪತ್ರಿಕೆಯಲ್ಲಿ ಪ್ರಕಟವಾಯ್ತು. ಲೇಖನದ ಅಡಿಯಲ್ಲಿ "ಶ್ರೀಮಾನ್ ಜೋಳದರಾಶಿ ದೊಡ್ಡನಗೌಡರ ಪ್ರವಚನದಿಂದ ಪ್ರೇರಿತವಾದ ಲೇಖನ" ಎಂದು ಸಮೂದಿಸಿದ್ದೆ.

ಆ ಪತ್ರಿಕೆಯ ಒಂದು ಪ್ರತಿಯನ್ನು ಶ್ರೀ ಗೌಡರಿಗೆ ಕಳುಹಿಸಿದ್ದೆ. ಅದನ್ನು ಓದಿದ ಅವರು ಅಮ್ಮಯ್ಯಾ, "ನನ್ನ ಆರೋಗ್ಯವನ್ನೂ ಲೆಕ್ಕಿಸದೆ ಕಾಲು ಶತಮಾನದಿಂದ ಹಲವೆಡೆ ತಿರುಗಿ, ಶೂನ್ಯಸಂಪಾದನೆಯ ಪ್ರವಚನಗಳನ್ನು ಮಾಡಿದೆ. ಯಾರೊಬ್ಬರೂ ಇದರಲ್ಲಿ ಆಸಕ್ತಿ ವಹಿಸಿ, ಇದನ್ನು ಕುರಿತ ಲೇಖನವನ್ನು ಇದುವರೆಗೆ ಬರೆದುದಿಲ್ಲ. ಇಂದು ನಿನ್ನ ಈ ಲೇಖನವನ್ನು ನೋಡಿ, ನನಗೆ ಇನ್ನಷ್ಟು ವರುಷ ಬದುಕುವ ಬಯಕೆಯಾಗುತ್ತಿದೆ" ಎಂದು ಬರೆದರು ! ಲೇಖನ ಬರೆದವರಿಗೆ ಇದಕ್ಕಿಂತ ಬಹುಮಾನಬೇಕೆ ?

(ಇಲ್ಲಿ ಇನ್ನೊಂದು ಮಾತು ನೆನಪಿಗೆ ಬರುತ್ತದೆ. ಶ್ರೀ ಮಾಸ್ತಿಯವರೂ ನನ್ನಲ್ಲಿ ವಿಶೇಷ ಮಮತೆ ಇಟ್ಟಿದ್ದ ಇನ್ನೊಬ್ಬ ಹಿರಿಯರು. ಅವರು ದಿವಂಗತರಾಗುವ ಕೆಲವೇ ದಿನಗಳ ಮುನ್ನ ಅವರನ್ನು ನೋಡಲು ಅವರ ಮನೆಗೆ ಹೋಗಿದ್ದಾಗ, "ಮಗು, ನೀನು ತುಂಬಾ ಚೆನ್ನಾಗಿ ಮಾತನಾಡುತ್ತೀಯ. ನಾನು ನಿನ್ನ ಇಷ್ಟದಂತೆ ಶತಮಾನ ಕಾಣ ಬೇಕಾದರೆ, ನೀನು ಆಗಾಗ ಬಂದು ನನ್ನೆದುರಿಗೆ ಮಾತನಾಡು, ನನ್ನ ಆಯುಸ್ಸು ಹೆಚ್ಚುತ್ತದೆ" ಎಂದು ಅಂತಃಕರಣ ಪೂರ್ವಕ ನುಡಿದಿದ್ದರು.)

ಗೌಡರು ನನ್ನ ಅನೇಕ ರೇಡಿಯೊ ನಾಟಕಗಳನ್ನು ಕೇಳಿ ವಿಮರ್ಶಾತ್ಮಕವಾಗಿ, ಕಾಗದಗಳನ್ನು ಬರೆದರು. ಅವರ ಪ್ರತಿಯೊಂದು ಕಾಗದಗಳನ್ನೂ ಜತನದಿಂದ ಇಟ್ಟಿದ್ದೇನೆ. ಒಂದೊಂದೂ ಕಾವ್ಯಮಯ, ರಸಭರಿತ, ಸ್ನೇಹ ಸಿಂಚಿತ, ಅನುಭವ ಪೂರಿತ ! ಆ ಪತ್ರಗಳದೇ ಒಂದು ಸಂಕಲನ ಮಾಡಬಹುದು.

ನನ್ನ ಅಚ್ಚಾದ ಮೊದಲ ಪುಸ್ತಕ "ಐದು ಪ್ರಸಾರ ನಾಟಕಗಳು" ಐದು ರೇಡಿಯೊ ನಾಟಕಗಳ ಸಂಕಲನ. ಅದಕ್ಕೆ ಮಮತೆಯ ಮುನ್ನುಡಿ ಬರೆದರು. ಬರೆದ ಅಮೃತ ಘಳಿಗೆಯ ಫಲವೋ ಏನೋ, ಅದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ "ಮಹಿಳಾ ವರ್ಷದತ್ತಿನಿಧಿ"ಯ ಪ್ರಶಸ್ತಿ ಲಭಿಸಿತು. ಅದು ನನಗಿಂತ ಅವರಿಗೇ ಹೆಚ್ಚು ಹಿಗ್ಗನ್ನು ತಂದಿತು.

ಬರುಬರುತ್ತಾ ಕಲೆಯ ನಂಟಿನೊಂದಿಗೆ ನಮ್ಮ ಮನೆಗಳ ಸ್ನೇಹ ವರ್ಧಿಸಿತು. ಬೆಂಗಳೂರಿಗೆ ಬಂದಾಗ ನಮ್ಮ ಮನೆಗೆ ಬಂದು ಹಾಡಿ, ಭಾವೋದ್ವೇಗದಲ್ಲಿ ತಾವೂ ಅತ್ತು, ನಮ್ಮನ್ನೂ ಅಳಿಸುತ್ತಿದ್ದರು. ನನ್ನಿಂದಲೂ ಹಾಡಿಸಿ, ವೀಣೆ ನುಡಿಸುವಂತೆ ಮಾಡಿ, ಕೇಳುತ್ತಾ ತಲೆದೂಗುತ್ತಿದ್ದರು. ಕಾವ್ಯವಾಚನ ಮಾಡಿಸಿ, "ನಿಮ್ಮ ಹಳೆಯ ಮೈಸೂರು ಕಡೆಯ ಗಮಕ ಪಾಠ ಸರಿಯಿಲ್ಲ. ಎಳೆತ ಜಾಸ್ತಿ" ಎನ್ನುತ್ತಿದ್ದರು! ಹೋಗುವಾಗ "ಇದು ಕಲಾವಿದರ ಮನೆ, ನೀವು ಪುಣ್ಯ ದಂಪತಿಗಳು, ನಿಮ್ಮನ್ನು ಬಿಟ್ಟು ಹೋಗಲು ಮನಸ್ಸೇ ಬಾರದಲ್ಲ" ಎಂದು ಕೊಂಡು ಹೋಗುತ್ತಿದ್ದರು.

1988ರಲ್ಲಿ ನಮ್ಮ ಮನೆಯಲ್ಲಿ 15 ದಿನಗಳ ವಾಸ್ತವ್ಯ ಮಾಡಿದರು. ನಮಗೆ ಅವರ ಸಾನಿಧ್ಯದಲ್ಲಿ ಒಂದೊಂದೂ ಸಾರ್ಥಕ ದಿನಗಳು. ಅವರನ್ನು ನೋಡಲು ಸಾಹಿತಿಗಳು, ಸ್ನೇಹಿತರು, ಸಂಗೀತಗಾರರು, ಗಮಕಿಗಳು ಅಪ್ತೇಷ್ಟರು–ನಮ್ಮ ಮನೆಗೆ ದಯಮಾಡಿಸಿ, ನಮ್ಮ ಮನೆ ಪಾವನವಾಯ್ತು. ನಿತ್ಯ ನಿತ್ಯ ಸಾಹಿತ್ಯಗೋಷ್ಠಿ, ಸಂಗೀತದ ಸಮಾರಾಧನೆ, ಗಮಕದ ಗುಂಜಾರವದಿಂದ ಮನೆಯಲ್ಲಿ ಸುಳಿವ ಗಾಳಿಯೂ ನಾದಮಯವಾಯ್ತು.

ಎಷ್ಟೋ ಜನ ಗಮಕಿಗಳು ಅವರೆದುರಿಗೆ ಕಾವ್ಯವಾಚನ ಮಾಡಲಪೇಕ್ಷಿಸಿ ಬಂದು, ವಾಚನ ಮಾಡಿದರು. ಆ ಕಿರಿಯರನ್ನು ಬೆನ್ನು ತಟ್ಟಿ, ಮೆಚ್ಚುಗೆಯ ನುಡಿಗಳಿಂದ ಅವರನ್ನು ಈ ಹಿರಿಯರು ಪ್ರೋತ್ಸಾಹಿಸಿದ ಬಗೆ ಅವರ ಹೃದಯ ಶ್ರೀಮಂತಿಕೆಯ ದ್ಯೋತಕ. ಈ ಗಮಕಿಗಳಲ್ಲಿ ಈ ಸಾರಿಯ ರಾಜ್ಯ ಪ್ರಶಸ್ತಿಗಳಿಸಿದ–ರಾಮಾಯಣ ದರ್ಶನಂ ಕಾವ್ಯವನ್ನು ವಾಚೋವಿಧೇಯವನ್ನಾಗಿ ಮಾಡಿಕೊಂಡಿರುವ ಶ್ರೀ ನಾರಾಯಣಗೌಡರೂ ಒಬ್ಬರು.

ನಾನು, ನಮ್ಮ ಯಜಮಾನರು ಕುಟುಂಬ ಸಮೇತರಾಗಿ ಜೋಳದರಾಶಿಗೆ 4–5 ಬಾರಿ ಹೋಗಿ, ಅವರ ಮನೆಯ ಸರಳ ವಾತಾವರಣದಲ್ಲಿದ್ದು, ಪಟ್ಟಣದ ತಂಜಡದಿಂದ ಜಡವಾಗಿದ್ದ ಮನದ ಕೊಳೆಯನ್ನು ಝಾಡಿಸಿ, ಹೊಸ ಉತ್ಸಾಹ ಜುಂಬಿಕೊಂಡು ಬಂದಿದ್ದೇವೆ. ಬದುಕಿದ್ದಾಗ ಪತಿಯೊಂದಿಗೆ ನಮ್ಮ ಮನೆಗೆ ಬಂದಿದ್ದ. ಈಗ ಗೌಡರಿಂದ ಕಂಬನಿಯ ಕಾಣಿಕೆ—"ಗೌಡತಿ ಬರಲಿಲ್ಲ"ಯನ್ನು ಪಡೆದು ಬರ ವಿಶ್ರಾಂತಿಗೆ ತೆರಳಿರುವ ಅವರ ಶ್ರೀಮತಿ ಹನುಮಂಕ್ಕ ಗೌಡತಿಯ ಸಮಾಧಿಯನ್ನು ಸಂದರ್ಶಿಸಿ, ಅಲ್ಲಿ ಗೌಡರ ಹೃದಯ ವೇದನೆಯನ್ನು ಹೊರಚೆಲ್ಲುವ ಮುಖವನ್ನು ನೋಡಲಾರದೆ ದುಃಖಿಸಿದ್ದೇವೆ.

ಒಮ್ಮೆ ಜೋಳದರಾಶಿಗೆ ಹೋಗಿ 2-3 ಗಂಟೆಗಳ ಕಾಲ ಮಾತ್ರ ಇದ್ದೆವು. ಆಗ ಅವರ ಉನ್ನತ ಕೃತಿ "ಬಯಲ ಗಳಿಕೆಯ ಬೆಳಗು" ಬರವಣಿಗೆಯ ಹಂತದಲ್ಲಿತ್ತು. ಇದ್ದ ಸ್ವಲ್ಪ ಸಮಯದಲ್ಲಿ, ಮುತ್ತಿನಂತಹ ಅಕ್ಷರದಲ್ಲಿದ್ದ, ಆ ಹಸ್ತ ಪ್ರತಿಯನ್ನು ನನ್ನ ಕೈಲಿಕೊಟ್ಟರು. "ನೋಡು ಸರಿಯಾಗಿದೆಯಾ ? ಇನ್ನೇನಾದರೂ ಬರೆಯಬೇಕಾ ? ಬರೆದದ್ದನ್ನು ತೆಗೆಯಬೇಕಾ, ನೋಡಿ ಹೇಳು" ಎಂದರು. ಇದೆಂತಹ ಸರಳತೆ! ಅನುಭವಗಳಿಂದ ತುಂಬಿ ಅನುಭಾವಿಯಾದ ಅವರು ಮತ್ತು ಶಿವಾನುಭವದ ತತ್ವಗಳಿಂದ ಕಂಗೊಳಿಸುವ ಆ ಭವ್ಯ ಗ್ರಂಥವೆತ್ತ! ಯಾವ ಅರ್ಹತೆಯೂ ಇಲ್ಲದ ಪಾಮರಳಾದ ನಾನೆತ್ತ! (ಎತ್ತಣ ಮಾಮರ, ಎತ್ತಣ ಕೋಗಿಲೆ!) ಒಂದಕ್ಕೊಂದು ಸಂಬಂಧವೇ ಇಲ್ಲ. ಅಂತಃಕರಣ ಇರುವೆಡೆಯಲ್ಲಿ ಇಂತಹುದು ಸಹಜವೋ ಏನೋ.

ಈಗ್ಗೆ ಸುಮಾರು 3-4 ವರ್ಷಗಳ ಹಿಂದೆ ಗವಿಪುರ ಬಡಾವಣೆಯಲ್ಲಿರುವ "ಜಂಗಮ ಮಠ"ದಲ್ಲಿ ಶ್ರೀ ನಿಜಗುಣ ಸ್ವಾಮಿಜಿಯವರ ಆದೇಶದ ಮೇರೆಗೆ ನನ್ನಿಂದ "ಶೂನ್ಯ ಸಂಪಾದನೆ"ಯ ಪ್ರವಚನ ಸೇವೆ ಹತ್ತು ದಿನಗಳ ಕಾಲ ನಡೆಯಿತು. ಆಗ ಶ್ರೀ ಗೌಡರು ಅವರ ಸೋದರಳಿಯಂದಿರೂ ನಮಗೆ ಸೋದರ ಸಮಾನರೂ ಆದ ಶ್ರೀ ಚನ್ನವೀರಗೌಡರನ್ನು "ಪ್ರವಚನ ಹೇಗೆ ಸಾಗುತ್ತಿದೆ ನೋಡಿಕೊಂಡು ಬಾ" ಎಂದು ಕಳುಹಿಸಿದರು.

ಅವರು ಜೋಳದರಾಶಿಯಿಂದ ಇಲ್ಲಿಗೆ ಬಂದು ಮೂರು ದಿನಗಳ ಕಾಲ ಪ್ರವಚನ ಕೇಳಿ, ಊರಿಗೆ ಹೋಗಿ ವರದಿ ಒಪ್ಪಿಸಿದ ಮೇಲೆ "ನೀನು ಶೂನ್ಯ ಸಂಪಾದನೆಯ ವ್ಯಾಸಂಗ, ಪ್ರವಚನವನ್ನು ನಿರಂತರವಾಗಿ ಮುಂದುವರಿಸು. ಇದಕ್ಕೆ ನನ್ನ ಉತ್ತರಾಧಿಕಾರಿ ನೀನು" ಎಂದು ಬರೆದರು. ಇಂತಹ "ಘನನಿಧಿ"ಗೆ ಉತ್ತರಾಧಿಕಾರಿಯಾಗುವ ಅರ್ಹತೆ ಖಂಡಿತ ನನಗಿಲ್ಲ. ಅವರ ಸತತ ಸಾಧನೆಯ ಅಮೃತ ಫಲವನ್ನು, ಅವರಾಗಿಯೇ ಕೊಡುತ್ತೇವೆಂದರೂ ಸ್ವೀಕರಿಸುವ ಯೋಗ್ಯತೆಯು ನಮಗಿರಬೇಕಲ್ಲವೇ!

ಪ್ರತಿ ಸಾರಿ ಇಲ್ಲಿಗೆ ಬಂದಾಗಲೂ ಅವರ ಕಾವ್ಯವಾಚನದ ಧ್ವನಿಮುದ್ರಣ ಮಾಡಿಕೊಳ್ಳುತ್ತಿದ್ದೆ. ಈ ಹಿಂದೆ ತಿಳಿಸಿದಂತೆ ಅವರು ಇಲ್ಲಿದ್ದ 15 ದಿನಗಳಲ್ಲಿ ಅಪರೂಪದ ವಚನ, ಅಷ್ಟಪದಿಗಳು, ಮುಂತಾದುವನ್ನು ಧ್ವನಿ ಮುದ್ರಿಸಿಕೊಂಡೆ. ಶೂನ್ಯ ಸಂಪಾದನೆ, ಬಸವ ಪುರಾಣ, ಜೈಮಿನಿ ಭಾರತ, ಹರಿಶ್ಚಂದ್ರಕಾವ್ಯ ರಾಮಾಯಣ ದರ್ಶನಂ–ಮುಂತಾದ ಕಾವ್ಯ ಭಾಗಗಳ ಕ್ಯಾಸೆಟ್‌ಗಳೊಂದಿಗೆ ಅವರದೇ ಕಾವ್ಯ "ನಮ್ಮ ಹಂಪೆ" ಮತ್ತು ಈಗ ಮಾಡಿದವೂ ಸೇರಿಕೊಂಡು, ಈ ಅಪೂರ್ವ ಸಂಗ್ರಹ ಅವರು ನನಗೆ ಕೊಟ್ಟಿರುವ ಅಪರೂಪದ ಕೊಡುಗೆ. "ನನ್ನ ಧ್ವನಿಯಲ್ಲಿ ಬೇರೆಲ್ಲೂ ಇಲ್ಲದ ಈ ಅಪರೂಪದ ಹಾಡುಗಳ ಸಂಗ್ರಹ ನಿನ್ನಲ್ಲಿರಲಿ. ಮುಂದೆ ಯಾವಾಗಲಾದರೂ ಯಾರಿಗಾದರೂ ಉಪಯೋಗವಾಗುತ್ತದೆ" ಎಂದು ಹೇಳಿಯೇ

ಧ್ವನಿ ಮುದ್ರಣ ಕಾರ್ಯಕ್ಕೆ ಒಪ್ಪಿದ್ದರೂ "ಇಟ್ಟ ಊಟಕ್ಕಿಂತ ಹೆಚ್ಚು ಕೆಲಸ ಮಾಡಿಸುತ್ತೀಯ" ಎಂದು ಛೇಡಿಸುವುದನ್ನು ಬಿಡಲಿಲ್ಲ! "ನಿನಗೆ ಜ್ಞಾನದ ಹಸಿವು ಲೋಭಿನೀನು" ಎಂದೆನ್ನುತ್ತಿದ್ದರು.

15 ದಿನಗಳಲ್ಲಿ ಅವರಿಂದ ವರ್ಷವಿಡೀ ಕಲಿಯಲಾಗದಷ್ಟು ವಿದ್ಯೆಯನ್ನು ಕಲಿತೆ. ಪತ್ರಗಳ ಮೂಲಕ ನನ್ನ ಹಾಡುವಿಕೆಗೆ ಸಲಹೆ, ಸೂಚನೆಗಳನ್ನು ನೀಡುತ್ತಿದ್ದರು. ಈಗ ಪ್ರತ್ಯಕ್ಷವಾಗಿ ಗುರುಮುಖೇನ ಕಲಿಯುವ ಸದವಕಾಶ ನನಗೆ ಲಭಿಸಿತು.

ಶಿವಮೊಗ್ಗಾದಲ್ಲಿ ನನ್ನ ತೌರಿಗೆ ಹೋದಾಗ ಒಂದೆರಡು ಬಾರಿ ಶ್ರೀ ಗೌಡರೂ ಅಲ್ಲಿಯೇ ಮೊಕ್ಕಾಂ ಮಾಡಿದ್ದರು. ಅಲ್ಲಿಯ ಬಸವೇಶ್ವರ ದೇವಾಲಯದಲ್ಲಿ, ಬೆಕ್ಕಿನ ಕಲ್ಮಠದಲ್ಲಿ ಅವರ "ಬಯಲ ಗಳಿಕೆಯ ಬೆಳಗು" ಗ್ರಂಥದ ಬಿಡುಗಡೆಯ ಸಂದರ್ಭದಲ್ಲಿ, ಮತ್ತೂರು ಸಾಂಸ್ಕೃತಿಕ ಸಂಘದವರು, ಮತ್ತೂರು ಗ್ರಾಮದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ, ಅನಿರೀಕ್ಷಿತವಾಗಿ ನನಗೂ ಹಾಡುವ ಅವಕಾಶ ಒದಗಿ ಆ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆದು, ಎಲ್ಲರಿಗೂ ಸಂತೋಷ, ನನಗೂ ತೃಪ್ತಿಯನ್ನು ಕೊಟ್ಟವು. ನಮ್ಮ ತಾಯಿ, "ಗೌಡರೇ, ನನ್ನ ಮಗಳು ನಮ್ಮ ಮನೆಯಲ್ಲಿ 2 ದಿನಗಳಿಗಿಂತ ಹೆಚ್ಚು ಕಾಲ ಇದ್ದು ಹಲವು ವರ್ಷಗಳೇ ಆಗಿ ಹೋಗಿದ್ದವು. ಈಗ ನಿಮ್ಮ ದಯದಿಂದ ಮಗಳು 8 ದಿನಗಳು ಇಲ್ಲಿರುವಂತಾಯ್ತು!" ಎಂದು ಹರ್ಷದಿಂದ ಹೇಳಿದರು.

ನನ್ನ ತಂದೆ ಲಿಂಗೈಕ್ಯರಾದಾಗ "ಮುಕ್ತಾಯಕ್ಕಗಳ ಸಂಪಾದನೆಯನ್ನು ಪದೇ ಪದೇ ಓದಿ ದುಃಖ ನಿವೃತ್ತಿ ಮಾರ್ಗವನ್ನು ಕಂಡುಕೊ" ಎಂದು ಬರೆದರು ಗೌಡರು.

ಜೀವನದಲ್ಲಿ ಕಷ್ಟ ಎದುರಿಸುತ್ತಿದ್ದಾಗ "ಯಾವ ಶ್ರೀ ಗುರು ರೇಣುಕರನ್ನು ಹೃದಯದ ಪ್ರತಿ ಬಡಿತದೊಂದಿಗೆ ನೆನೆಯುತ್ತೀಯೋ, ಅವರು ನಿನಗೆ ದಾರಿ ತೋರುತ್ತಾರೆ. ಯಾವ ಬಸವಾದಿ ಪ್ರಮಥರನ್ನು ನೀನು ಹಾಡಿ, ಕೀರ್ತಿಸಿ, ಗುಣಗಾನ ಮಾಡುವೆಯೋ ಆ ಪ್ರಮಥರೆಲ್ಲ ನಿನ್ನ ಬೆನ್ನ ಹಿಂದಿದ್ದು ರಕ್ಷಿಸುತ್ತಾರೆ. ಇದನ್ನು ನಂಬು" ಎಂದು ಬರೆದು, ಧೈರ್ಯ ತುಂಬಿದರು.

"ನನ್ನ ಮಗಳು ಬಹಳ ಜಾಣೆ-(ಬದುಕಿನ ಕೆಲವು ಮೌಲ್ಯಗಳ ಬಗೆಗೆ ಆಕೆಯ ವಿಚಾರಧಾರೆ ಅಪೂರ್ವವಾದುದು) ಪರಿಮಳ ತುಂಬಿದ ಮೊಗ್ಗದು, ಬಿರಿದರೆ ಸೌರಭ ಸೂಸಿ ಹೋಗುತ್ತದೆಂದು, ಮೊಗ್ಗಾಗಿಯೇ ಇರುವ ಈ ನನ್ನ ಮಗಳನ್ನು ಜತನದಿಂದ ಕಾಪಾಡಿಕೊಳ್ಳಿ" ಎಂದು ನಮ್ಮವರಿಗೆ ಬರೆದರು.

"ನಿನ್ನ ಲಲಿತ ಕಲೆಗಳಿಗೆ ಪ್ರೋತ್ಸಾಹ ನೀಡಿ, ಅಜ್ಜಿಯಾದ ಮೇಲೂ ನೀನು ಇನ್ನೂ ಕೋಮಲತೆಯನ್ನು ವೈರ ಮನಗಳಿಂದ ಕಳೆದುಕೊಳ್ಳದಂತೆ ಕಾಪಾಡಿಕೊಂಡು

ಬಂದಿರುವ ಇಂತಹ ಕಲಾಪ್ರೇಮಿ, ಮೃದು ಹೃದಯದ ಗಂಡ ಸಿಕ್ಕಿರುವುದು ನಿನ್ನ ಪೂರ್ವಾರ್ಜಿತ ಪುಣ್ಯ. ಆತನನ್ನು ಚೆನ್ನಾಗಿ ನೋಡಿಕೊ" ಎಂದು ನನಗೆ ಬರೆದರು.

ತಂದೆಯ ಸ್ಥಾನದಲ್ಲಿರುವ ಅವರಲ್ಲದೆ ಬೇರೆಯವರು ಹೀಗೆ ಇಬ್ಬರಿಗೂ ಬುದ್ಧಿ ಮಾತು ಬರೆಯಲು ಸಾಧ್ಯವೇ ?

ನನ್ನಲ್ಲಿ ಅವರು ಇರಿಸಿರುವ ಅನುಪಮ ವಾತ್ಸಲ್ಯವನ್ನು ಕಂಡವರು ನನ್ನನ್ನು ಅವರ ಮಗಳೆಂದೇ ತಿಳಿದಿದ್ದಾರೆ. ನನ್ನ ವಿದ್ಯಾಗುರುಗಳಾದ ಡಾ॥ ಸಾ. ಶಿ. ಮರುಳಯ್ಯನವರು, "ನಿಮ್ಮ ಜೀವನದ ಪ್ರತಿಯೊಂದು ಘಟ್ಟದಲ್ಲೂ ಶೂನ್ಯ ಸಂಪಾದನೆಯ ದಟ್ಟ ಪ್ರಭಾವ ಆಗುವಂತೆ ಮಾಡಿದ್ದಾರೆ. ನೀವು ಗೌಡರ ಮಾನಸ ಪುತ್ರಿ" ಎಂದು ಹೇಳುತ್ತಿರುತ್ತಾರೆ. ಇದು ಶ್ರಿ ಚನ್ನವೀರಗೌಡರ ಮಾತೂ ಹೌದು. ಭಾವುಕ ಮನದ ಶ್ರೀ ಗೌಡರು ನಿಜವಾಗಿಯೂ ನನ್ನನ್ನು ತಮ್ಮ ದೈವದತ್ತ ಪುತ್ರಿ ಎಂದೇ ಹೇಳುತ್ತಾರೆ. ಇದು ಬೇರೆಯವರು ಅಸೂಯೆ ಪಡುವಂತೆ ನನಗೆ ದೊರಕಿದ ಅಲಭ್ಯ ಸೌಭಾಗ್ಯ.

ತೆಲುಗು, ಕನ್ನಡ ಎರಡೂ ಭಾಷೆಗಳ ಕಾವ್ಯಪ್ರೇಮ ಖಂಡಿತವಾದಿತನ, ಆತ್ಮ ಗೌರವ, ಮನ ಮೆಚ್ಚಿದ ತತ್ವದ ಬಗೆಗೆ ಶ್ರದ್ಧೆ, ನಂಬಿದ ದೈವದ ಬಗೆಗೆ ನಿಷ್ಠೆ, ಕ್ರಮಬದ್ಧ ಜೀವನಕ್ರಮ, ಶೀಘ್ರಕೋಪ, ತತ್‌ಕ್ಷಣ ಮೃದುಮಾತು–ವರ್ತನೆ. ಧಾರಾಳತೆ-ಮುಂತಾದ ಅನೇಕ ಗುಣಗಳಲ್ಲಿ ಗೌಡರಿಗೂ ನನ್ನ ತಂದೆ ದಿ॥ ಜಿ.ವಿ.ಎಸ್. ಮರುಳಯ್ಯನವರಿಗೂ ತುಂಬಾ ಸಾಮ್ಯ. ಅದಕ್ಕೇ ಇರಬೇಕು, ನನಗೂ ಅವರಲ್ಲಿ ನನ್ನ ತಂದೆಯಲ್ಲಿ ಇಟ್ಟಿದ್ದಂತಹದೇ ಭಾವ, ಗೌರವ, ಪೂಜ್ಯತೆ.

ಮೊನ್ನೆ ಕಾಗದ ಬರೆಸಿದ್ದಾರೆ-ಚೇಳಗುರ್ಕಿಯಲ್ಲಿ ಜೂನ್ ಮೊದಲ ವಾರದಲ್ಲಿ ನಡೆಯಲಿರುವ ಶಿವಾನುಭವ ಕಾರ್ಯಕ್ರಮದಲ್ಲಿ ಎರಡು ದಿನ ನಾನು ಶೂನ್ಯ ಸಂಪಾದನೆ ಹಾಡಬೇಕೆಂದೂ, ತಾವು ಅದಕ್ಕೆ ವ್ಯಾಖ್ಯಾನ ಮಾಡುವುದಾಗಿಯೂ– ಇದೆಂತಹ ಯೋಗಾ ಯೋಗ ! ಯಾವ ಪುಣ್ಯ ಕ್ಷೇತ್ರದಲ್ಲಿ, ಶಿವಾನುಭವ ಕಾರ್ಯ ಕ್ರಮದಲ್ಲಿ ಹಾಡುವ ಅವಕಾಶ ತಪ್ಪಿತ್ತೆಂದು ವ್ಯಥೆಯಾಗಿತ್ತೋ ಅದೇ ಕ್ಷೇತ್ರದಲ್ಲಿ 33 ವರುಷಗಳ ದೀರ್ಘಕಾಲದ ನಂತರ ಆ ಸೇವೆ ಸಲ್ಲಿಸುವ ಸುಯೋಗ ದೊರಕಿದೆ : ಅದೂ ನನ್ನ ತಂದೆಯ ಸ್ಥಾನದಲ್ಲಿರುವ, ಅನುಭಾವಿ ಶ್ರೀ ಗೌಡರ ವ್ಯಾಖ್ಯಾನ ದೊಂದಿಗೆ !

"ಈ ಉರಿಯುವ ಬಿಸಿಲಿನಲ್ಲಿ ಅಷ್ಟು ದೂರ ಪ್ರಯಾಣ ಮಾಡಿ ಹಾಡಬಲ್ಲೆನೆ" ಎಂದು ಅನುಮಾನವಿದ್ದರೂ, ಬಾಳಿನಲ್ಲಿ ಸಿಕ್ಕಿದ ಈ ಅಪರೂಪದ ಅವಕಾಶದಿಂದ ವಂಚಿತಳಾಗಲು ಇಷ್ಟವಿಲ್ಲದೆ ಒಪ್ಪಿಕೊಂಡಿದ್ದೇನೆ. ಶಿವನ ಕರುಣೆ ಇದ್ದರೆ ಯಾವುದು ಅಸಾಧ್ಯ ? "ನೀನೊಲಿದರೆ ಕೊರಡು ಕೊನರುವುದಯ್ಯಾ !"— ★

ಜೋಳದರಾಶಿ ಅವರ ಬಗ್ಗೆ ಎರಡು ನೆನಪಿನ ಝುಳುಕುಗಳು

ಎನ್ಕೆ

ಅನುಭವವು ಮಾಗಿ ಅನುಭಾವವಾಗಿ ಅನುಭಾವವೆ ಮುತ್ತಂತಿರುವ ಆ ಗುಂಗುರು ಗುಂಗುರು ಕೇಶರಾಶಿಯು ತುಂಬಿದ ಮುಖವನ್ನು ಕಂಡಾಗ ಬಾಗಿ ನಮಸ್ಕಾರ ಮಾಡಬೇಕು ಅನಿಸುತ್ತದೆ. ಬರಿ 'ಹೆಲೊ ಹೆಲೊ' ಮಾಡಿದರೆ ಹದುಳವೆನಿಸದು. ಹಾ ! ಈ 'ಹದುಳ' ಶಬ್ದ ನೆನಪಾದೊಡನೆಯೆ ಳಳ ವರ್ಷಗಳ ಆ 'ಚಂದ್ರಹಾಸ'ದ ಮುಂಬಯಿ ಚಿತ್ರೀಕರಣದ ಸವಿನೆನಪು ಝಗ್ಗನೆ ಕಣ್ಮುಂದೆ ಬೆಳ್ಳಿಯ ತೆರೆಯ ಚಿತ್ರ ವಾಗಿ ನಿಲ್ಲುತ್ತದೆ. "ಪಾಲಿಸೆನ್ನನು ಪಡುಳವೆರಸಿ......ಶರ್ವಾಣಿ ಸಂಪನ್ನೆ" ಎಂಬ ನಿಜಗುಣರ ಜೇನಿನಂತಹ ಗೀತೆಯನ್ನು ಭಕ್ತಿ ಪುರಸ್ಸರವಾಗಿ ಆನಂದಭೈರವಿಯಲ್ಲಿ ಗಮಕಿಸಿದ ಧ್ವನಿಮುದ್ರಿಕೆಯನ್ನು ಕೇಳಿದಾಗ ರೋಮಹರ್ಷಣೀಯವಾದ ರಸಾನುಭವ. ಸನ್ನಿವೇಶ, ಚಂದ್ರಹಾಸನ ಸಂಹಾರಕ್ಕಾಗಿ ವಿಷಯೆಯ ತಂದೆ ದುಷ್ಟಬುದ್ಧಿಯ ಕೊನೆಯ ಕಾರಸ್ಥಾನ. ವಿಷಯೆಯ ಕೈಯಿಂದ ವಿಷಪ್ರಾಶನ ಮಾಡಿಸಬೇಕೆಂದರೆ ಅದು ವಿಷಯೆಯ ಪಾಣಿಗ್ರಹಣದಲ್ಲಿ ಪರ್ಯವಸಾನಗೊಳ್ಳುತ್ತದೆ. ಅಂತೂ ಕೊನೆಗೆ ತಮ್ಮ ಕುಲ ದೇವತೆಯ ದರ್ಶನವನ್ನು ನವಜಾಮಾತನೊಬ್ಬನೇ ಹೋಗಿ ಪಡೆದು ಬರಬೇಕೆಂಬ ಕುಟಿಲ ಸಂಪ್ರದಾಯದ ಸೋಗಿನಲ್ಲಿ ಚಂದ್ರಹಾಸನನ್ನು ದೇವಿಯ ಸ್ಥಾನಕ್ಕೆ ಅಟ್ಟಿದರೆ

ಅಲ್ಲಿ ನಡೆದದ್ದೇನು ? ಚಂದ್ರಹಾಸನ ಹತ್ಯೆಯಲ್ಲ, ದುಷ್ಟಬುದ್ಧಿಯ ಮಗ ಮದನನ ಹತ್ಯೆ–ದುಷ್ಟಬುದ್ಧಿಗೆ ಪ್ರಾಯಶ್ಚಿತ್ತವೆಂಬಂತೆ ! ಈ ಸನ್ನಿವೇಶಕ್ಕೆ ಸರಿಹೋಗುವಂತೆ ಆನಂದಭೈರವಿಯಲ್ಲಿ ತಮ್ಮ ಅನುಭಾವ ತುಂಬಿ ಹಾಡಿದ ಜೋಳದರಾಶಿಯವರನ್ನು ನಿರ್ದೇಶಕ ಶಾಂತೇಶ ಪಾಟೀಲರು, ಸಂಗೀತ ನಿರ್ದೇಶಕ ಮಲ್ಲಿಕಾರ್ಜುನ ಮನ್ಸೂರ್ ಅವರು ಅಂತಃಕರಣ ಸೂಸಿ ಅಭಿನಂದಿಸಿದರು. 'ಚಂದ್ರಹಾಸ'ದ ಕತೆ—ಸಂಭಾಷಣೆಗಳನ್ನು ಬರೆದ 'ಎನ್ಕೆ' ಗಮಕಿ ಜೋಳದರಾಶಿಯವರ ಹದಗಾರಿಕೆಯ ಹಾಡುಗಾರಿಕೆಯಿಂದ ಮುಗ್ಧರಾಗಿ ಹೋದರು !

ಆದರೆ ವಸ್ತುತಃ ಬೆಳ್ಳಿಯ ತೆರೆಯ ಮೇಲೆ ಚಂದ್ರಹಾಸನ ಪಾತ್ರಧಾರಿ ಕಲಾವಿದ ವಿಕಾಸಶಹಾ ಇವರ ಬಾಯಲ್ಲಿ ಈ ಹಾಡು ಕೇಳಿದಾಗ ಮಾತಿನಲ್ಲಿ ಎಲ್ಲೂ ರಕಾರ ವರ್ಜ ಬರದ ಈ ನಟರಿಗೆ ಈ ಪಾಲಿಸೆನ್ನನು ಗೀತದಲ್ಲಿ ಒಮ್ಮೆಲೆ ರಕಾರ ವರ್ಜ ಬಂದು ಸ್ವಲ್ಪ ಆಭಾಸವೆನಿಸಿತು. ಆಗ ನನ್ನ ಬಳಿ ಥಿಯೇಟರ್‌ನಲ್ಲಿ ಪೂರ್ವಭಾವಿ ಚಿತ್ರ ದರ್ಶನ ಕಾಲಕ್ಕೆ ಗಮಕಿ ಜೋಳದರಾಶಿಯವರಿರಲಿಲ್ಲ. ಸ್ವತಃ ಗಮಕ ಗಂಧರ್ವ ಜೋಳದರಾಶಿಯವರು ಹಾಡುವಾಗ ಈ ರಕಾರ ವರ್ಜವು ಒಂದು ಬಗೆಯ ಬಾಲಮುಗ್ಧತೆಯಿಂದ ಕಿವಿಗೆ ಅಪೂರ್ವವಾದ ಹಿತವನ್ನೇ ಕೊಡುತ್ತದೆ. ಆದರೆ ಇನ್ನೊಬ್ಬರಿಗೆ ಧ್ವನಿ ಉಚ್ಚಾರಣೆ ಹೊಂದಾಣಿಕೆಯಿಲ್ಲದ ನಟನಿಗೆ ಕಂಠರಾಗ ನೀಡಿ ಪ್ಲೇ ಬ್ಯಾಕ್ ಹಾಡಿದಾಗ ಈ ಆಭಾಸ, ಅಸಂಗತಿ ಉಂಟಾಗುತ್ತದೆ. ಹಾಗೆಂದು ಇಂದಿಗೂ ನಾನು ಈ ಒಂದು ವ್ಯತ್ಯಾಸವನ್ನು ಜೋಳದರಾಶಿ ಅವರ ಮುಂದೆ ಇದುವರೆಗೂ ಎತ್ತಿ ತೋರುವ ಎದೆಗಾರಿಕೆ ತೋರಿಯೆ ಇಲ್ಲ !

* * *

೧೯೫೦ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರ ಆರಂಭವಾದಾಗ ಬಳ್ಳಾರಿ ಜಿಲ್ಲೆ ಧಾರವಾಡದ ಕಕ್ಷೆಯಲ್ಲಿ ಬಂದಾಗ ನಮ್ಮ ಜೋಳದರಾಶಿಯವರು ಈ ನಿಲಯದ ಕ್ಯಾಜುಅಲ್ ಕಲಾವಿದರಾಗಿ ಆಗಾಗ ಆಮಂತ್ರಿತರಾಗುತ್ತಿದ್ದರು. ಅವರೊಂದಿಗೆ ಅವರ ಚಿರಸ್ನೇಹಿತ ಪೇಟಿ ಸಾಥೀದಾರ ಚಂದ್ರಯ್ಯನವರೂ ಬರುತ್ತಿದ್ದರು. ಪ್ರಥಮ ಸಲ ಅವರು ಗಮಕ ಸಂಗೀತ ಕಾರ್ಯಕ್ರಮಕ್ಕೆ ಆಮಂತ್ರಿತರಾದಾಗ ಧಾರವಾಡ ಟೌನ್‌ಹಾಲ್ ರೂಮಿನಲ್ಲಿ ಉಳಿದು ಕೊಂಡಿದ್ದರು. ನಾನು ಅವರನ್ನು ಕಾಣಲು ಹೋದಾಗ ಮೂರು ವರ್ಷಗಳ ಹಿಂದಿನ ಚಂದ್ರಹಾಸದ ರಸನಿಮಿಷಗಳ ರಸಮೆಲುಕುಗಳಿಂದ ನಮ್ಮ ಪರಿಚಯದ ದ್ವಿತೀಯ ಘಟ್ಟ. ಆ ಕಾಲಕ್ಕೆ ಈ ರಸಋಷಿ ತಮ್ಮ ಹಾಗೂ ಬಳ್ಳಾರಿ ರಾಘವಾಚಾರ್ಯರ ಸವಿಸ್ಮೃತಿಗಳ ಪುನಃಸ್ಮರಣೆ ಮಾಡಿದರು. ಅವರ ಆ ಪುನಃಸ್ಮರಣೆ ಸಮೀಚೀನ ರಸಭೋಜನವಾಗಿತ್ತು. ನಡುನಡುವೆ ಈ ವರನಟರ ವಿನೋದ ಲಹರಿಗಳು, ಅದಕ್ಕೆ ಚಂದ್ರಯ್ಯನವರ ಕುಮ್ಮಕ್ಕುಗಳು. ಅದೆಂತಹ

ಮೈಮರೆವಿನ ರಸಗಳಿಗೆ ಅದು. ಅವರ ಪ್ರಸಾರ ಕಾರ್ಯಕ್ರಮವೇನೊ ಒಂದು ಚೌಕಟ್ಟಿನಲ್ಲಿ ನಡೆಯಿತು. ಅವಕ್ಕೆ ಈ ಬೀಸಾದ ರಸವಂತಿಕೆಯ ಭೂಮಿಕೆ ಇರಲಿಲ್ಲ.

ಕಳೆದ ಸಲ ನಾನು ಜೋಳದರಾಶಿಯವರ ಘನವ್ಯಕ್ತಿತ್ವದ ಸಾಕ್ಷಾತ್ಕಾರ ಪಡೆದದ್ದು ಜೋಳದರಾಶಿಯಲ್ಲಿಯ ಅವರ ಭವ್ಯ ಮನೆಯಲ್ಲಿಯೆ. ಮನೆಯ ಆ ಅಟ್ಟದ ಮೇಲೆಯೆ. ಅಂದು ಯುಗಾದಿ ೧೯೭೫ರ ಸಾಲು. ಗಮಕ ಭಗೀರಥ ಜೋಳದರಾಶಿ ಅವರು ಯುಗಾದಿಯ ನಿಮಿತ್ತ ಹೋಳಿಗೆ ಊಟ ನೀಡಿದರು. ಅದಕ್ಕೂ ಸವಿಕಟ್ಟಾಗಿ ಅವರು ನೀಡಿದ ಹೋಳಿಗೆ ಭೋಜನವೆಂದರೆ ಹರಿಶ್ಚಂದ್ರ ಕಾವ್ಯದ ಶಿವನ ಸಾಕ್ಷಾತ್ಕಾರದ ಭಾಗ ! ಇಂತಹ ಭಗೀರಥನಂತಹ ಗಮಕಿಯ ಗಂಟಲಿನಿಂದ ಕಾವ್ಯಗಂಗೆ ಆಕಾಶದಿಂದ ಭೂಮಿಗಿಳಿಯುವಾಗ ಅದಾವ ಶಿವ ಸಾಕ್ಷಾತ್ಕಾರವಾಗದೆ ಸುಮ್ಮನಿದ್ದಾನು ?

ಆ ಯುಗಾದಿಯ ಗಮಕ ಭೋಜನ ಸಂದರ್ಭ. ಕನ್ನಡ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರ ಪ್ರತಿನಿಧಿಗಳಾಗಿ ನಾನೂ ಮಿತ್ರ ಪಿ.ಆರ್. ಭಾಗವತ ಅವರೂ ಪರಿಷತ್ತಿನ ಆರ್ಕಾವ್ಸ್ (ಧ್ವನಿ ಮುದ್ರಣ ಭಾಂಡಾರ)ಕ್ಕಾಗಿ ಕರ್ನಾಟಕದ ಖ್ಯಾತ ಕವಿ, ಗಮಕಿ, ವಾದಿ, ವಾಗ್ಮಿಗಳ ಧ್ವನಿ ಸಂಚಯಕ್ಕಾಗಿ ಸಂಚಾರ ಮಾಡುತ್ತ ಜೋಳದರಾಶಿಗೆ ಬಂದಿದ್ದೆವು. ಬಳ್ಳಾರಿಯಿಂದ ಎಂಟು–ಹತ್ತು ಮೈಲಿ, ಜೋಳದ ರಾಶಿಯವರ ಮನೆಯ ಮಹಡಿಯಿಂದ ಗೋಚರಿಸುವ ಜೋಳದರಾಶಿಯಂತೆಯೇ ಕಂಗೊಳಿಸುವ ಎರಡು ಗುಡ್ಡಗಳನ್ನು ನೋಡಿದಾಗ ನನಗೆನಿಸಿತ್ತು, ಇವು ಜೋಳದರಾಶಿಯ ಗುಡ್ಡಗಳಲ್ಲ, ಮುತ್ತಿನ ರಾಶಿಯ ಗುಡ್ಡಗಳು ಎಂದು.

ವರುಷದುದ್ದಕ್ಕೂ ಬಡವನಂತೆ, ಲೋಭಿಯಂತೆ, ತನ್ನ ಕುಟುಂಬ ಜೀವನದಲ್ಲಿ ನಿರತನಾದರೈತ, ಈ ಸಮಯದಲ್ಲಿ ಕರ್ಣನಂತೆ ತ್ಯಾಗಿ.

★

ನಾಟಕ ಮಾಡುವ ಕಷ್ಟದಾಯಕ ಕೆಲಸ ಕೈಲಾಗದೆಂದು ದೂರವಿದ್ದ ನನಗೆ 'ಲಿಂಗಕ್ಕೆ ಹತ್ತಿದ ಕಂತೆಯಂತೆ; ಜಿಗುಟಾಗಿ ಹತ್ತಿಕೊಂಡಿತು.

ಶ್ರೀ ದೊಡ್ಡನಗೌಡರ "ಶಿವಮಯ, ಸ್ನೇಹಮಯ" ಜೀವನ

"ಶಿವಶ್ರೀ"

ಗೌಡರಿಗೆ ಯಾರು ದೊಡ್ಡನಗೌಡರೆಂದು ಹೆಸರಿಟ್ಟರೋ, ಅದೆಂಥ ದೇವ ಮುಹೂರ್ತದಲ್ಲಿ ಹೆಸರಿಟ್ಟರೋ. ಆ ಹೆಸರು ಕೊಟ್ಟ ಬಣ್ಣದಂತೆ, ಇಡಬೇಕೆಂದು ಇಟ್ಟ ಹೆಸರಿನಂತೆ ಅಂಕಿತನಾಮ ಮಾತ್ರವಾಗದೇ ಸಂಪೂರ್ಣ ಸಾರ್ಥಕನಾಮವಾಗಿದೆ; ಅನ್ವರ್ಥಕ ನಾಮವಾಗಿದೆ !

ದೊಡ್ಡನಗೌಡರು ಎಲ್ಲದರಲ್ಲಿಯೂ ದೊಡ್ಡವರೇ !
ಎಲ್ಲರಲ್ಲಿಯೂ ದೊಡ್ಡವರೇ !
ಹಣದಲ್ಲಿ ದೊಡ್ಡವರು ; ಗುಣದಲ್ಲಿ ದೊಡ್ಡವರು.
ವ್ಯಾಪ್ತಿಯಲ್ಲಿ ದೊಡ್ಡವರು ; ಪ್ರಾಪ್ತಿಯಲ್ಲಿ ದೊಡ್ಡವರು.
ಕಲೆಯಲ್ಲಿ ದೊಡ್ಡವರು ; ಬೆಲೆಯಲ್ಲಿ ದೊಡ್ಡವರು.
ಲೋಕಾನುಭವದಲ್ಲಿ ದೊಡ್ಡವರು ; ಶಿವಾನುಭವದಲ್ಲಿ ದೊಡ್ಡವರು.
ದೊಡ್ಡವರಲ್ಲಿಯೂ ದೊಡ್ಡವರೆಂದು ಗಣ್ಯರಾದವರು,
ದೊಡ್ಡವರಿಂದಲೂ ದೊಡ್ಡವರೆಂದು ಗಣನೆಗೇರಿದವರು.

ದೊಡ್ಡ ಆಸ್ತಿ ಮತ್ತು ಅಂತಸ್ತಿನ ದೊಡ್ಡಸ್ತಿಕೆ, ಅವರ ಹೆಣ್ಣುತಾತ ಹೊನ್ನನ ಗೌಡರಿಂದ ದೌಹಿತ್ರ ಬಾಧ್ಯತೆಯ ಹಕ್ಕಾಗಿ ಹರಿದು ಬಂದ ಹೊನ್ನಹೊಳೆ.

ಎಷ್ಟು ದುಡಿಸಿದರೂ ದಣಿಯದ, ಎಷ್ಟೊತ್ತು ದಣಿಸಿದರೂ ಮಣಿಯದ, ಮುಗ್ಗಲಾಗದ, ಮುಗ್ಗರಿಸದ ಮೈಕಟ್ಟಿನ ದೇಹದ ದೊಡ್ಡಸ್ತಿಕೆ ಅವರ ತಂದೆ ಪಂಪನಗೌಡರಿಂದ ತಾಯಿ ರುದ್ರಮ್ಮನವರಿಂದ ಬಳುವಳಿಯಾಗಿ ಬಂದ ಸಹಜ ಸಂಪ್ರಾಪ್ತವಾದ ಶಾರೀರಿಕ ಸಂಪತ್ತು.

ಕಲಾಕೌಶಲ್ಯದ ಔನ್ನತ್ಯದ ದೊಡ್ಡಸ್ತಿಕೆ, ಕಂಠಶ್ರೀಯುಳ್ಳ ಶ್ರೀಕಂಠದ ಸುಶ್ರಾವ್ಯ ಗಾಂಭೀರ್ಯದ ದೊಡ್ಡಸ್ತಿಕೆ ಅವರ ಜನ್ಮಾಂತರದ ಸುಕೃತ ವಿಶೇಷದಿಂದ ಶಿವಾನುಗ್ರಹದ ಮಹತಿಯಿಂದ ಸಂಪ್ರಾಪ್ತವಾದ ಗಂಧರ್ವಾಂಶ ಸಂಭೂತಿಯ ದೊಡ್ಡಸ್ತಿಕೆ.

ವಿಯದ್ವಿಸ್ತಾರದ ಅವರ ಮಾಧುರ್ಯಮಯ ಮೈತ್ರಿಯ ಸ್ನೇಹಿತರ ಬಳಗ ಅವರ ಸ್ನೇಹ–ಸಜ್ಜನಿಕೆ–ಸೌಜನ್ಯ–ಸೌಶೀಲ್ಯಗಳ ದೊಡ್ಡಸ್ತಿಕೆ.

ದೊಡ್ಡವರಾಗಿಯೇ ಹುಟ್ಟಿ, ದೊಡ್ಡವರ ನಡುವೆ ದೊಡ್ಡವರಾಗಿಯೇ ಬೆಳೆದು, ದೊಡ್ಡವರಾಗಿಯೇ ಉಳಿದಿರುವ ದೊಡ್ಡನಗೌಡರಂಥ ದೊಡ್ಡವರು ಅಪರೂಪವೇ ನಿಜ.

ಶ್ರೀಮಂತಿಕೆಯ ಅಟ್ಟಹಾಸದಲ್ಲಿ ಹುಟ್ಟಿ, ತಂದೆ, ತಾಯಿ, ತಾತ, ಅವ್ವ ಮತ್ತು ಬಳ್ಳಿಯಷ್ಟು ಬಳಗದ ಬಗೆ ಬಗೆಯ ಅಕ್ಕರೆಯ ಸಕ್ಕರೆಯನ್ನುಂಡು, ಬೆಳ್ಳಿಯ ಬಟ್ಟಲಲ್ಲಿ ಹಾಲ್ಗುಡಿದು, ಬಂಗಾರದ ತೊಟ್ಟಿಲಲ್ಲಿ ಆಡಿ, ತಂಬೂರಿ ಹಿಡಿದು ಹಾಡಿ, ವಿವಿಧ ವೇಷಗಳಲ್ಲಿ ವಿವಿಧ ಪ್ರಾಂತಗಳಲ್ಲಿ ನಾಟಕವಾಡಿ ಪ್ರಬುದ್ಧರ ಪ್ರಗಲ್ಭ ಪ್ರಶಂಸೆಗಳನ್ನು ಪಡೆದ ಗೌಡರಿಗೆ ಬಾಳು ಬ್ರಹ್ಮಾನಂದದ ನಂದನೋದ್ಯಾನ ; ಕಾವ್ಯಾ ನಂದದ ಕೈಲಾಸ ಗಿರಿಶಿಖರ ; ಗಾನ–ಗಮಕ–ನಾಟಕ ಕಲಾನಂದಗಳ ಹೇಮ ಕೂಟಾಗ್ರ ತ್ರಿಕೂಟಸ್ಥಾನ ; ಅವರ ಜೀವನ ಒಂದು ಶಿವಾನಂದದ ತಪೋವನ ; ಸಾಹಿತ್ಯ ಅವರಿಗೆ ಬಾಳ ಬಟ್ಟೆಯ ಪರಮಾಗಮ ; ಲಿಂಗಾಂಗ ಸಾಮರಸ್ಯ ಸಾಧನೆಯ, ಶಿವಜೀವೈಕ್ಯ ಸಿದ್ಧಿಯ ಸಂಗಮ. ಅವರ ಒಟನಾಟದಲ್ಲಿ ಸ್ನೇಹದ ಸೌರಭವಿದೆ ; ಮೈತ್ರಿಯ ಮಾಧುರ್ಯವಿದೆ ; ರಸೋತ್ಕರ್ಷತೆಯ ಆಧ್ಯಾತ್ಮಾನುಭೂತಿಯಿದೆ ; ನಿರಂಜನ ರಂಜನೆಯ ರಮಣೀಯ ಕತೆಯಿದೆ ; ಬಾಹ್ಯ ಜಗತ್ತನ್ನು ವಿಸ್ಮರಿಸುವಂತೆ ಮಾಡಿ, ಅಂತರಂಗದ ಅಲೌಕಿಕ ರಸಚೇತನದತ್ತ, ಕೈಹಿಡಿದು ಕರೆದೊಯ್ಯುವ ಸೋಮರಸದ ಮಾದಕತೆಯಿದೆ.

ಸ್ನೇಹ ದೊಡ್ಡದು ; ಶಿವನಷ್ಟೇ ದೊಡ್ಡದು ! ಶುದ್ಧ ಸ್ಫಟಿಕಸಂಕಾಶವಾನ ವಾದ ಶಿವನಂತೆಯೇ ನಿರ್ಮಲವಾದ ಸ್ನೇಹವೂ ಪರಿಶುದ್ಧವಾದದ್ದು. ಅಂಥ ಸ್ನೇಹದಲ್ಲಿ ಅಪೇಕ್ಷೆಯೂ ಇಲ್ಲ, ಆಕ್ಷೇಪವೂ ಇಲ್ಲ ! ಅಲ್ಲಿ ಒಲ್ಲೆನೆಂಬುದೂ ಇಲ್ಲ,

ಹೊಲ್ಲ ಆದದ್ದೂ ಇಲ್ಲ! ಅಲ್ಲಿ ಅರೆಕೊರೆಗಳಿಲ್ಲ; ಅದು ಪೂರ್ಣ; ಸ್ವಯಂ ಸಂಪೂರ್ಣ!

ಇಂಥ ಮತ್ತು ಇಂತಿಂಥ ದೊಡ್ಡವರೊಡನೆ ಇದ್ದರೂ ದೊಡ್ಡವನಾಗಲಾರದೇ ಸಣ್ಣವನಾಗಿಯೇ ಉಳಿದಿರುವ ದಡ್ಡ ನಾನು. ದಡ್ಡನಾಗಿಯೇ ದೊಡ್ಡವರ ಬಗ್ಗೆ ಬಹಳಷ್ಟು ಬರೆದಿರುವೆ; ದೊಡ್ಡವರಿಗಾಗಿಯೂ ಬಹಳಷ್ಟು ಬರೆದಿರುವೆ. ಇನ್ನೂ ಬಹಳಷ್ಟು ಬರೆಯುವುದೂ ಇದೆ; ಬರೆಯಬೇಕೆಂದೂ ಇರುವೆ. ಸಣ್ಣವನಾಗಿ ದೊಡ್ಡ ಕೆಲಸ ಎಷ್ಟು ಮಾಡಿದರೂ ಪ್ರಯೋಜನವಿಲ್ಲವೇನೋ ಎಂದು ಅನಿಸುತ್ತೆ ಒಮ್ಮೊಮ್ಮೆ. "ಪಡೆದಪ್ಪನಾಗದೇ ದುಡಿದಪ್ಪನಾದವಗೆ ಚಿಂತೆ ನೆರೆಯುವದೊಂದು ಸಂತೆಯಾಗಿ. ಪಡೆದು ದುಡಿದವ ಜಾಣ; ಇಲ್ಲದಿರೆ ಒರಿಕೋಣ; ಆಗಬಾರದು ಹಿಂತೆಮುಂತೆಯಾಗಿ."–ಅಂದಾರೆ ಬೇಂದ್ರೆ. ಬಹಳ ಒಳ್ಳೆಯ ಮಾತು.

ದೊಡ್ಡನಗೌಡರು ದೊಡ್ಡಸ್ತಿಕೆಯನ್ನು ದುಡಿದು ಪಡೆದವರಲ್ಲ; ದೊಡ್ಡಸ್ತಿಕೆಯನ್ನು ಪಡೆದೇ ಹುಟ್ಟಿದವರು. ಆದರೂ ಅವರಲ್ಲಿ ಬೀಜರೂಪದಿಂದ ಇದ್ದ ಕಲಾಭಿಜ್ಞತೆಯನ್ನು ಅರಳಿಸಿ, ಆವಿಷ್ಕಾರಗೊಳಿಸಿ, ಅಭಿವ್ಯಕ್ತಗೊಳಿಸಿ, ಪರಿಪೂರ್ಣತೆಯನ್ನೂ ಪರಿಪಕ್ವತೆಯನ್ನೂ ಪಡೆದು, ಶಿವಮಯವಾಗುವಂತೆ ನೆರವಾಗಿ ಸಹಕರಿಸಿದ ವ್ಯಕ್ತಿಗಳನ್ನೂ ಶಕ್ತಿಗಳನ್ನೂ ಮರೆಯುವಂತಿಲ್ಲ. ಅಂತೆ ಗೌಡರು ಅವರಿಗೆ ನೀಡಿದ ತಮ್ಮ ಸಹಜ ಸ್ನೇಹಮಯ ಸಹಕಾರ ಸೌಹಾರ್ದ್ರತೆಯೂ ಸಣ್ಣದಲ್ಲ; ಅವರೆಲ್ಲರಿಗಾಗಿ ದುಡಿದ ದುಡಿಮೆಯೂ ಸಣ್ಣದಲ್ಲ; ದಣಿದ ದಣಿವೂ ಸಣ್ಣದಲ್ಲ. ದೊಡ್ಡವರ ಜೀವನದಲ್ಲಿ ಸಣ್ಣತನಕ್ಕೆ ಸ್ಥಾನವಿಲ್ಲ. ಅವರ ಶಿವಮಯ, ಸ್ನೇಹಮಯ ಜೀವನ ನಿಜಕ್ಕೂ ಧನ್ಯವಾದದ್ದು. ಶಿವನೊಂದಿಗೆ ಸ್ನೇಹ ಬೆಳೆಸುವುದೇ ಕಲೆ; ಸ್ನೇಹದಲ್ಲಿ ಶಿವನನ್ನು ಕಾಣುವುದೇ ಜೀವನದ ಬೆಲೆ. ಇಂಥ ಕಲೆಯನ್ನೂ ಬೆಲೆಯನ್ನೂ ಅರಿತ ಮಹಾನ್ ವ್ಯಕ್ತಿತ್ವವೇ ಕವಿಯೂ ಕಲಾವಿದನೂ ಆದ ಶ್ರೀ ದೊಡ್ಡನಗೌಡರದು!

ಜೈಶಿವೇ!

—★—

ನಾ ಕಂಡ ಜೋಳದರಾಶಿ

ಕಂಡಾಕೆ, ಶ್ರೀಮತಿ ಸರೋಜ ವಿ. ಸಾಯ್ದು

ಹಾಲು ತುಂಬಿದ ಜೋಳದ ಕಾಳೊಂದು ಜೋಳದರಾಶಿಯ ದರ್ಶನಕ್ಕೆಂದು ವರ್ಷವಿಡೀ ಮಿಡಿಯುತ್ತಲಿತ್ತು. ಅಕ್ಷಯ ಸಂವತ್ಸರದ ವಸಂತದ ಕೊನೆಯ ಹಂತದಲ್ಲಿ ಹರಕೆಯನ್ನು ಪೂರೈಸಲು ಇಷ್ಟಮಿತ್ರ "ಎಲೆ" ದಂಪತಿಗಳು ಪಯಣಿಗರಾಗಿ ಕಾಳನ್ನು ಜೋಳದರಾಶಿಗೆ ಒಯ್ದರು.

ನವನಾಗರೀಕತೆಯ ಸೋಂಕಿಲ್ಲದೆ, ಸಹಜತೆಯ ಮುಸುಕನ್ನು ಹೊದೆದು ಪ್ರಕೃತಿದೇವಿಯ ಮಡಿಲ ಕೂಸಾಗಿಯೇ ಉಳಿದಿರುವ ಕೃಷಿಪ್ರಧಾನವಾದ ಈ ಊರನ್ನು ಬೆಕ್ಕಸಬೆರಗಾಗಿ ಕಾಳು ಅತ್ತಿತ್ತ ನೋಡತೊಡಗಿತು. ಕೊನೆಗೂ ರಾಶಿಯ ಸನಿಹಕ್ಕೆ ಬಂದ ಧನ್ಯತೆಯ ತಂಪಿನುಸಿರು ಉರಿಬಿಸಿಲ ಬೇಗೆಯನ್ನು ಮೆಟ್ಟಿ ಕೆಡವಿತ್ತು.

ಜೋಳದರಾಶಿಯವರ ಮಾಳಿಗೆ ಮನೆಯನ್ನು ಪ್ರವೇಶಿಸಿದಾಗ ಶಬ್ದಗಳ ಹಿಡಿತಕ್ಕೆ ಒಳಪಡದ ಒಂದು ಅಪೂರ್ವ ಅನುಭವವಾಯಿತು. ಚೊಕ್ಕಟವಾದ ಸಾಲುಗಂಬಗಳ ಪಡಸಾಲೆ, ಗೋಧನದಿಂದ ಶ್ರೀಮಂತವಾದ ವಿಶಾಲವಾದ ಕೊಟ್ಟಿಗೆ ವಾಸದ ಮನೆಯ ಒಂದು ಭಾಗವೇ ಆಗಿರುವುದನ್ನು ಮೊಟ್ಟಮೊದಲಿಗೆ ಇಲ್ಲಿ ನೋಡಿದೆ,

ಗೌಡರ ಪರಿವಾರದ ಸರಳ ಸಹಜ ವಾತಾವರಣ ಹಾಗೂ ತೋರಿಕೆಗೆ ಹೊರತಾದ ಆತ್ಮೀಯತೆಯಿಂದ ಬಂದ ಅತಿಥಿ ಅಭ್ಯಾಗತರು ಅನಾಯಾಸವಾಗಿ ಬಂಧಿಗಳಾಗುತ್ತಾರೆ. ಇಲ್ಲಿ ಪರಸ್ಪರರ ಪರಿಚಯವಾಯಿತು.

ಅರ್ಧ ಶತಮಾನಕ್ಕೂ ಮೀರಿದ ಕಾಲಮಾನದಲ್ಲಿ ಸಾಂಸ್ಕೃತಿಕ ಕಲಾಸಂಪತ್ತಿನ ಸಂಪ್ರತ್ತಿಗೆಯಲ್ಲಿ ಜೋಳದರಾಶಿಯು ಓಲಾಡಲು ಕಾರಣಕರ್ತರಿರಬೇಕಲ್ಲವೇ ಅಥವಾ ಆರಾಧ್ಯದೇವ ಶ್ರೀರಾಮೇಶನ ಅಪಾರ ಕರುಣೆಯೋ ! ಇವುಗಳೆರಡರ ಮೊತ್ತದ ಫಲವೇ "ಶರಣ ಚೋಳದರಾಶಿಯ ದೊಡ್ಡನಗೌಡ"ರೆಂದು ಜೋಳದಕಾಳು ಮನದಲ್ಲಿಯೇ ಹಿರಿಹಿರಿಹಿಗ್ಗಿತು.

ಹಿಮಾಚ್ಛಾದಿತ ಧವಳ ಗಿರಿಶೃಂಗಗಳ ಸೊಬಗನ್ನು ಹಿಮಾಲಯಾ ಪರ್ವತ ಪ್ರವಾಸದಲ್ಲಿ ಕಂಡಿರುವೆ. ಏಷ್ಯಾಖಂಡವನ್ನು ದಾಟಿ ಯುರೋಪನ್ನು ತಲಪುವಾಗ ಆಲ್ಪ್ಸ್ ಪರ್ವತ ಶ್ರೇಣಿಯ ಸೌಂದರ್ಯವನ್ನು ವಿಮಾನದ ಕಿಟಕಿಯ ಮೂಲಕ ಅನೇಕ ಬಾರಿ ನೋಡಿರುವೆ. ನ್ಯೂಯಾರ್ಕಿನಿಂದ ಲಾಸ್ಏಂಜಲೀಸ್‌ಗೆ ಹಾರುವ ಹಾದಿಯಲ್ಲಿ ರಾಕಿ ಪರ್ವತ ಶಿಖರಗಳ ಸಾಲಿನ ಅಗಾಧ ದರ್ಶನದಿಂದ ಮನಸ್ಸು ಪುಲಕಿತಗೊಂಡಿದೆ. ಅಂತೆಯೇ ಶುಭ್ರವಾದ ಬಿಳಿಯುಡುಪಿನಲ್ಲಿ ಜೋಳದರಾಶಿಯವರನ್ನು ಕಂಡಾಗ ಮೊದಲಿಗೆ ಅಪಾರ ಆನಂದವೂ ಜೊತೆಗೆ ನಾನು ಚಿಕ್ಕವಳಿದ್ದಾಗ ಮೈಸೂರು ಗವಿ ಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳನ್ನು ಕಾರ್ತೀಕ ಸೋಮವಾರದ ದಿನ ಕಾಣಲು ಗವಿಮಠಕ್ಕೆ ಹೋದಾಗ ಭಕ್ತಾದಿಗಳು ಶಿವಪೂಜೆಗಾಗಿ ಹೊಯ್ದು ಬಿಳೀ ತುಂಬೆ ಹೂವಿನ ರಾಶಿಯನ್ನು ಕಂಡ ನೆನಪಾಯಿತು.

ಶ್ರೀ ಗೌಡರ ಸಾಧನೆಯ ಕೊಠಡಿಗೆ ಮೇಲ್ಮಾಳಿಗೆಯನ್ನು ಹಾದು ಪ್ರವೇಶಿಸಬೇಕು. ನಡುವೆಯೇ ನಮ್ಮ ದೃಷ್ಟಿಯನ್ನು ಸೆರೆಹಿಡಿಯುವ ಅಸಂಖ್ಯ ಬಿನ್ನವತ್ತಳೆ, ಪ್ರಶಸ್ತಿ, ಬಿರುದು, ಸನ್ಮಾನ, ವಿಜಯ ಪತ್ರಗಳ ಜೋಡಣೆ–ಕನ್ನಡ ಹಾಗೂ ತೆಲುಗು ರಂಗಭೂಮಿಯ ನಟರಾಗಿ ಅನೇಕ ಪಾತ್ರಾಭಿನಯಿಸಿರುವ ಛಾಯಾಚಿತ್ರಗಳು, ವಿಶ್ವವಿದ್ಯಾನಿಲಯಗಳು ನೀಡಿರುವ ಗೌರವ ಡಾಕ್ಟರೇಟ್ ಪದವಿ ಸಮಾರಂಭದ ದೃಶ್ಯಗಳು ಶ್ರೀ ಗೌಡರು ಸಾಧಿಸಿರುವ ಕಲೆಯ ವೈವಿಧ್ಯತೆ ಹಾಗೂ ಸಾಹಿತ್ಯ ವೈಖರಿಗೆ ಹಿಡಿದ ಕನ್ನಡಿಯಂತಿವೆ.

ಇವೆಲ್ಲವುಗಳ ವಿಸ್ತಾರ ಪರಿಚಯ ನನಗಿಲ್ಲ. ಮಾಳಿಗೆ ದಾಟಿ ಸಾಧನಾ ಕೊಠಡಿಗೆ ಬಂದೆವು. ಎಲೆ ದಂಪತಿಗಳು ಗೌಡರ ಪಾದಗಳಿಗೆ ಅಡ್ಡ ಬಿದ್ದಿದ್ದರು. ನನಗೆ ಸ್ವಲ್ಪ ಪರದಾಟವಾಯಿತು. ಇಪ್ಪತ್ತೆರಡು ವರ್ಷಗಳ ಅಮೇರಿಕ ವಾಸ ಹಾಗೂ ಅಲ್ಲಿನ ಅಭಿನಂದನಾಕ್ರಮ ಅಭ್ಯಾಸವಾಗಿಹೋಗಿತ್ತು. ನೋಡಿದಾಕ್ಷಣ Hallo ! Hallo!! How are you ಎಂದು ಕೈಕುಲುಕಿ, ಮೈದಡವಿ, ತಿಳಿನಗೆ ಬೀರುವುದು ವಾಡಿಕೆ. ಇಲ್ಲಿ ಶ್ರದ್ಧಾಭಕ್ತಿಯಿಂದ ನೆಲಮುಟ್ಟುವಷ್ಟು ಸೊಂಟ ಬಗ್ಗಿಸಿದ್ದು ಕಸರತ್ತು ಮಾಡಿದಂತಿತ್ತು.

ನನ್ನ ಪಾಡನ್ನು ಕಂಡರಿತ ಗೌಡರು "ಏಳು ಏಳು ತಾಯಿ-ಆರಾಮವಾಗಿ ಕೂಡು" ಎಂದು ಬಲಭಾಗದಲ್ಲಿದ್ದ ಮೆಟ್ಟಲಿನ ಕಡೆ ಕೈತೋರಿಸಿದರು. ನಮ್ಮನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು. ಮಮತೆಯಿಂದ ನಮ್ಮೆಲ್ಲರ ಯೋಗಕ್ಷೇಮ ಗಳನ್ನು ವಿಚಾರಿಸಿದರು.

ಜೋಳದರಾಶಿಗೆ ಪ್ರಯಾಣ ಮಾಡುವಾಗ ಶ್ರೀ ಗೌಡರ ಶೂನ್ಯಸಂಪಾದನೆಯ ಪ್ರವಚನ ಸೇವೆ, ಗಮಕ ಕಲೆಯ ಪ್ರಚಾರ ಹಾಗೂ ಉನ್ನತಿಗೆ ಅವರ ಅಮೂಲ್ಯ ಕೊಡುಗೆಯ ಬಗ್ಗೆ ಸೋದರಿ ಜಯಮ್ಮನವರು ಸ್ಥೂಲವಾಗಿ ತಿಳಿಯಹೇಳಿದ್ದರು.

ಸಾಯಂಕಾಲದ ಸಮಯದಲ್ಲಿ ರಾಘವಾಂಕನ "ಹರಿಶ್ಚಂದ್ರಕಾವ್ಯ"ದ ಒಂದೆರಡು ಪ್ರಸಂಗಗಳನ್ನು ಹಾಡುವುದೆಂದಾಯಿತು-ಹರಿಶ್ಚಂದ್ರ ಹೊಲತಿಯರ ಸಂವಾದ, ವಿಶ್ವಾಮಿತ್ರ ಹರಿಶ್ಚಂದ್ರರ ಸಂಭಾಷಣೆ ಹಾಗೂ ಚಂದ್ರಮತಿಯ ವಿಲಾಪವನ್ನು ರಸಭರಿತವಾಗಿ ಗಮಕ ಧಾಟಿಯಲ್ಲಿ ಹಾಡಿದರು. ಭಾವಗಳ ವ್ಯತ್ಯಾಸವನ್ನು ಇಷ್ಟು ಸುಲಲಿತವಾಗಿ ವಿಂಗಡಿಸಿ ಮನಮುಟ್ಟುವಂತೆ ಹಾಡುವ ಗಮಕ ಕಲೆ ಇವರಿಗೆ ಕರತಲಾ ಮಲಕವಾಗಿದೆ ಎಂದೆನಿಸಿತು. ರಗಳೆಯನ್ನು ಯಾವ ರೀತಿ ಹಾಡಬೇಕೆಂದು ತಿಳಿಯಲು ಕೇಳಿದಾಗ ಶ್ರೀ ಗೌಡರು ಕರುಣಾರಸದ ಪ್ರವಾಹವನ್ನೇ ಹರಿಸಿದರು. ಅಂತೆಯೇ "ಗೌಡತಿ ಬರಲಿಲ್ಲ" ಹಾಡಿ ಗದ್ಗದಿತರಾಗಿ ತಾವೂ ಅತ್ತು ನಮ್ಮನ್ನೂ ಅಳಿಸಿಬಿಟ್ಟರು.

ನಮ್ಮ ಬಿನ್ನಹದಂತೆ ಮಾರನೇ ದಿನ ಶೂನ್ಯಸಂಪಾದನೆಯಲ್ಲಿನ ಬಸವಣ್ಣನವರ ಹಾಗೂ ಅನುಭವ ಮಂಟಪದಲ್ಲಿ ಇತರ ಶಿವಶರಣರೊಡನೆ ಅಕ್ಕಮಹಾದೇವಿಯವರ ವಾದಪ್ರವಾದಗಳ ಪ್ರವಚನವನ್ನು ಹಾಡುತ್ತಾ ಹಾಡುತ್ತಾ ರಸಸಮಾಧಿಸ್ಥರಾದರು. ಈ ಭಕ್ತಿಮಯ ವಾತಾವರಣವು ಉದಯದವರೆಗೂ ಮೌನವಾಗಿಯೇ ಇತ್ತು. ಇಂಥ ಅನುಭವ ನನಗೆ ಅತಿವಿರಳ.

ಬಗೆಬಗೆಯ ಬಣ್ಣದ ಎಳೆಗಳು ಒಂದುಗೂಡಿ ನೋಡಿದವರ ಮನಸ್ಸನ್ನು ತನ್ನೆಡೆ ಸೆಳೆಯುವ ಕಾಮನ ಬಿಲ್ಲಿನ ಮೋಡಿಯನ್ನು ಶ್ರೀ ಗೌಡರ ಶರಣ ಜೀವನದಲ್ಲಿ ಕಾಣಬಹುದು. ತ್ರಿಪಿಟಕವು ರಂಗುರಂಗಿನ ಕಿರಣಗಳನ್ನು ವಿಂಗಡಿಸಿ ಹರಡುವಂತೆ ಜೋಳದರಾಶಿಯವರ ಬಹುಮುಖವಾದ ಪ್ರತಿಭೆಯು ಅವರನ್ನು ಗಮಕಿಯಾಗಿ, ನಾಟಕಕಾರರಾಗಿ, ಸಾಹಿತಿಯಾಗಿ, ಕವಿಯಾಗಿ, ಧರ್ಮ ಪ್ರವಚನಕಾರರಾಗಿ ಕರ್ನಾಟಕದ ಜನತೆಗೆ ಮುಕುಟಪ್ರಾಯರಾಗುವಂತೆ ಮಾಡಿದೆ. ಸಾರಸ್ವತ ಭಂಡಾರಕ್ಕೆ ಅವರ ಕೊಡುಗೆ ವಿಪುಲವಾದುದು.

ಅಮೃತಕುಂಭದ ಸಮಾರೋಹಕ್ಕೆ ಹೊರಬರಲಿರುವ ಅಭಿನಂದನಾ ಗ್ರಂಥದ ಪುಟಗಳಲ್ಲಿ ನನ್ನ ಬರಹವಿರಲೇಬೇಕೆಂಬ ಬಯಕೆಯಿಂದ ಹಾರೈಸಿ ಅನುವು ಮಾಡಿಕೊಟ್ಟ ಗ್ರಂಥದ ಸಂಪಾದಕರಿಗೆ ನನ್ನ ಬಿಚ್ಚುಮನದ ಶರಣು ಶರಣಾರ್ಥಿಗಳು.

—★—

ಕಲಾ ಸಂಗಮ

ಜಿ. ವೆಂಕಟಸುಬ್ಬಯ್ಯ

ನನಗೆ ಶ್ರೀ ಜೋಳದರಾಶಿ ದೊಡ್ಡನಗೌಡರನ್ನು ಮೊದಲ ಸಲ ಪರಿಚಯ ಮಾಡಿಕೊಟ್ಟವರು ನನ್ನ ಹಿರಿಯ ಮಿತ್ರರೂ ಬಂಧುಗಳೂ ಆಗಿದ್ದ ದಿ॥ ಅ. ನ. ಕೃಷ್ಣರಾಯರು. ಇದು ನಡೆದದ್ದು ಬಳ್ಳಾರಿಯಲ್ಲೆಂದು ಸುಮಾರು 1956ರಲ್ಲೆಂದು ನನಗೆ ನೆನಪು. ನಾವು ಮೂವರೇ ಇದ್ದ ಆ ಸಂದರ್ಭ ಯಾವುದೆಂದು ನೆನಪಿಲ್ಲ. ಆದರೆ ಜೋಳದರಾಶಿಯವರನ್ನು ಕುರಿತು ನನಗೆ ಅ.ನ.ಕೃ. ಒಂದು ಸಣ್ಣ ಉಪನ್ಯಾಸವನ್ನೇ ಮಾಡಿದರು. ಅ.ನ.ಕೃ. ಅವರು ಸಾಮಾನ್ಯರಲ್ಲಿ ಅಂಥ ಆಸಕ್ತಿಯನ್ನು ತೋರಿಸುವುದು ಅಸಾಧ್ಯವೆಂದು ಅವರನ್ನು ಚೆನ್ನಾಗಿಬಲ್ಲ ನನಗೆ, ಜೋಳದರಾಶಿಯವರನ್ನು ಕಂಡು ಸ್ವಲ್ಪ ಅಸೂಯೆ ಉಂಟಾಯಿತು ಎಂದೇ ಹೇಳಬೇಕು.

ಆ ಸಂಜೆ ನಡೆದ ಲೋಕಾಭಿರಾಮವಾದ ಒಂದು ಮಿತ್ರಕೂಟದಲ್ಲಿ ಜೋಳದರಾಶಿಯವರು ಪ್ರಭುಲಿಂಗಲೀಲೆಯಿಂದ ಅಲ್ಲಮ ಮತ್ತೆ ಮಾಯೆ–ಇವರ ಸಂವಾದವನ್ನು ವಾಚನ ಮಾಡಿದರು. ಆಧ್ಯಾತ್ಮಿಕ ಅಂತರಾರ್ಥ ಉಳ್ಳ ಆ ಭಾಗವನ್ನು ಕೇಳುಗರು ಎರಡು ಸ್ತರಗಳಲ್ಲಿ ಅರ್ಥೈಸಿಕೊಳ್ಳುವಂತೆ ಅವರು ಮಾಡಿದ ಗಮಕವಾಚನ

ನನ್ನ ಮನಸ್ಸಿನಲ್ಲಿ ಬೇರೂರಿ ನಿಂತಿದೆ. ಹೀಗೆ ಕಾವ್ಯವನ್ನು ಗಮಕದಲ್ಲಿ ಪಾಚಿಸಿದರೆ ಕಾವ್ಯ ಸ್ವಾದಕ್ಕೆ ಎಷ್ಟು ಸಹಾಯವಾಗುತ್ತದೆ ಎನ್ನುವುದನ್ನು ದೃಷ್ಟಾಂತಪಡಿಸು ವಂತಿತ್ತು ಅವರ ವಾಚನ. ಅದಾದ ಮೇಲೆ ನಾನವರನ್ನು ಕಂಡಿದ್ದು ಅವರು ಗಮಕ ಸಮ್ಮೇಳನದ ಅಧ್ಯಕ್ಷರಾಗಿ ಬೆಂಗಳೂರಿನ ಒಂದು ಗಮಕಕಲೆಯನ್ನು ಕುರಿತು ಮಾಡಿದ ಪ್ರೌಢ ಭಾಷಣವನ್ನು ಕೇಳಿದಾಗ. ಅಲ್ಲಿಂದೀಚೆಗೆ ಆಗಾಗ ಕಂಡದ್ದು ಉಂಟು.

ಬರಹಗಾರರಾಗಿ, ನಟರಾಗಿ, ಹಾಡುಗಾರರಾಗಿ, ಗಮಕಿಗಳಾಗಿ ಜೋಳದ ರಾಶಿಯವರು ಕನ್ನಡನಾಡಿನ ಉದ್ದಗಲಕ್ಕೂ ಜನರನ್ನು ರಂಜಿಸಿದ್ದಾರೆ. ಹೋದ ಕಡೆಯಲ್ಲೆಲ್ಲಾ ಜನಮನ್ನಣೆಯನ್ನೂ ಪಡೆದಿದ್ದಾರೆ. ಆದರೆ ನನಗೆ ಆಶ್ಚರ್ಯ ಕಾದಿದ್ದು ಈಚೆಗೆ ನಾನು ಅವರನ್ನು ಶ್ರೀಮತಿ ಜಯಮ್ಮ ರಾಜಶೇಖರ ಅವರ ಮನೆಯಲ್ಲಿ ಕಂಡಾಗ. ವಯಸ್ಸು ಅವರ ದೈಹಿಕ ಶಕ್ತಿಯ ಮೇಲೆ ಸ್ವಲ್ಪ ಪರಿಣಾಮವನ್ನು ಬೀರಿದಂತಿತ್ತು. ಆದರೆ ಅವರ ಆಧ್ಯಾತ್ಮಿಕವಾದ ಅಂತರ್ಯದ ಚೈತನ್ಯ ಪ್ರಖರವಾಗಿ ಕಾಣುತ್ತಿತ್ತು. ಅವರ ಬೃಹದ್ಗ್ರಂಥ "ಬಯಲ ಗಳಿಕೆಯ ಬೆಳಕು"—ಶೂನ್ಯ ಸಂಪಾನೆಯ ಮೇಲಿನ ವ್ಯಾಖ್ಯಾನದ ಗ್ರಂಥವನ್ನು ನಾನು ನೋಡಿದ್ದೆ ; ಆದರೆ ಇನ್ನೂ ಕೊಂಡಿರಲಿಲ್ಲ. ಆ ಗ್ರಂಥದ ಬಗ್ಗೆ ನಾನವರೊಡನೆ ಮಾತನಾಡುತ್ತ-ಶೂನ್ಯ ಸಂಪಾದನೆಯನ್ನು ಕುರಿತು ಬಂದ ಎಲ್ಲ ಗ್ರಂಥಗಳನ್ನೂ ತುಲನಾತ್ಮಕವಾಗಿ ಪರಿಶೀಲಿ ಸುತ್ತ ಇದ್ದಾಗ, ಅವರೇ ತಮ್ಮ ಹಸ್ತಾಕ್ಷರಗಳೊಂದಿಗೆ ಅವರೇ ರಚಿಸಿದ ಗ್ರಂಥವನ್ನೇ ನನಗೆನೀಡಿದರು. ನನ್ನ ಭಂಡಾರದ ಗ್ರಂಥಗಳಲ್ಲಿ ಅದೊಂದು ಪ್ರಮುಖ ಗ್ರಂಥವಾಗಿದೆ.

'ಶೂನ್ಯಸಂಪಾದನೆ' ಕನ್ನಡದ ಅತಿಶ್ರೇಷ್ಠ ಗ್ರಂಥಗಳಲ್ಲಿ ಒಂದೆಂಬುದನ್ನು ವಿದ್ವಾಂಸರೆಲ್ಲ ಬಲ್ಲರು, ಅದನ್ನು ಕುರಿತು ಪಾಠಮಾಡಬೇಕಾಗಿ ಬಂದಾಗ ಸತ್ವ ಸಾಲದ ಅಧ್ಯಾಪಕರು ಅದನ್ನು ಕಾವ್ಯವಲ್ಲವೆಂದು ಜರಿದುದನ್ನು ನಾನು ಕೇಳಿದ್ದೆ. ಹೀಗಾಗಿ ಜೋಳದರಾಶಿಯವರು ರಚಿಸಿದ ಗ್ರಂಥದಲ್ಲಿದ್ದ ಕೆಲವು ವಿವರಣೆಗಳನ್ನು ನಾನು ಮೆಚ್ಚಿ ಕೊಂಡು ಮಾತನಾಡಿದಾಗ ಅವರು ವಿನಯವಾಗಿ, "ಅದೆಲ್ಲ ನಮ್ಮ ಗುರುಗಳು ನನ್ನ ಮೇಲಿಟ್ಟ ವಿಶ್ವಾಸದ ಪರಿಣಾಮ"ಎಂದು ವಿಷಯಾಂತರಕ್ಕೆ ಎಡೆ ಮಾಡಿದರು. ಆದರೂ ಅವರ 'ಬಯಲಗಳಿಕೆಯ ಬೆಳಕು' ಹೊಸ ಕನ್ನಡದ ವ್ಯಾಖಾನ ಗ್ರಂಥಗಳಲ್ಲಿ ಬಹು ಮುಖ್ಯವಾದುದಾಗಿ ಉಳಿಯುತ್ತದೆ ಎಂಬುದರ ಬಗ್ಗೆ ಸಂದೇಹವಿಲ್ಲ.

ಅದೇ ಸಂದರ್ಭದಲ್ಲಿ ನಾನು ಹೊರಡುವುದರಲ್ಲಿದ್ದಾಗ ಡಾ॥ ಸಾ. ಶಿ. ಮರುಳಯ್ಯ, ಗೊ. ರು. ಚನ್ನಬಸಪ್ಪ, ಹಿ. ಮ. ನಾಗಯ್ಯ ಮುಂತಾದ ಹಿರಿಯ ಲೇಖಕರು ಅನೇಕರು ಅಲ್ಲಿಗೆ ಬಂದು ಸೇರಿದಾಗ ಒಂದು ಕಿರುಸಾಹಿತ್ಯ ಸಮ್ಮೇಳನವೇ ನಡೆಯಿತು. ಸುಮಾರು 3 ಗಂಟೆಗಳ ಕಾಲ ಆದ ಲೋಕಾಭಿರಾಮವಾದ ಮಾತು ಕತೆಯಲ್ಲಿ ಕಾಲ ಕಳೆದುದೇ ತಿಳಿಯಲಿಲ್ಲ. ಅಂದು ಅಲ್ಲಿಗೆ ಕು.ವೆಂ.ಪು ಅವರ ರಾಮಾಯಣ ದರ್ಶನವನ್ನು ವಾಚನ ಮಾಡುತ್ತಿದ್ದ ಒಬ್ಬ ಉತ್ಸಾಹಿ ತರುಣ ಬಂದಿದ್ದರು. ಅವರು

ತಮ್ಮ ವಾಚನವನ್ನು ಶ್ರೀ ಜೋಳದರಾಶಿಯವರು ಕೇಳಬೇಕೆಂದು ಇಷ್ಟಪಟ್ಟರು. ಆ ಹಿರಿಯರಿಗೆ ಯುವಕ ವಾಚಕನ ಬಗ್ಗೆ ಮೆಚ್ಚಿಕೆಯುಂಟಾಗಿ, ಅದೊಂದು ಅರ್ಧ ಗಂಟೆ ನಡೆಯಿತು. ಆಗ ಯುವಕನ ಬೆನ್ನುತಟ್ಟಿ ಕೆಲವು ಸೂಚನೆಗಳನ್ನು ನೀಡಿ ಗಮಕವಾಚನದ ಗುಟ್ಟನ್ನು ಕುರಿತು ಕೆಲವು ಸೂಕ್ತ ವಿವರಗಳನ್ನು ನೀಡಿದರು.

ಈ ಸಮಯದಲ್ಲಿ ಶ್ರೀಮತಿ ಜಯಮ್ಮನವರು ನಮಗೆಲ್ಲ ಉಪಾಹಾರ ಪಾನೀಯಗಳನ್ನು ಇತ್ತು ಸಂತೃಪ್ತಿಪಡಿಸಿದರು. ಆ ದಿನದ ಸಭೆಯಲ್ಲಿ ನನ್ನೊಡನೆ ನನ್ನ ಪತ್ನಿಯು ಇದ್ದು ಜೋಳದರಾಶಿಯವರ ಅನುಭವವನ್ನು ರಸಾರ್ದ್ರವಾದ ಕಾವ್ಯಚಿಂತನೆಯನ್ನು ಸಾಕ್ಷಿಯಾಗಿ ನೋಡಿದ ಆನಂದವನ್ನು ಆಗಾಗ ನೆನಪಿಗೆ ತರುತ್ತಾಳೆ.

ಹೀಗೆ ಎಲ್ಲರೊಡನೆ ಹೊಂದಿಕೊಂಡು ತಮ್ಮ ಹಿರಿಮೆಯನ್ನು ಹೊಗೆಯನ್ನಾಗಿ ಮಾಡಿಕೊಳ್ಳುವ ಜೋಳದರಾಶಿಯವರಿಗೆ 80 ತುಂಬುತ್ತದೆಂದು ಕೇಳಿ ನಾವೆಲ್ಲ ಸಂತೋಷ ಪಟ್ಟಿದ್ದೇವೆ. ಜೋಳದರಾಶಿಯವರು ಹೀಗೆ ಆರೋಗ್ಯ ಧೃಢಕಾಯರಾಗಿ ಬಹು ಕಾಲ ನಮ್ಮೊಡನಿದ್ದು ಜನಮನವನ್ನು ಬೆಳಗುತ್ತಿರಲಿ ಎಂದು ನಾನು ಆಸೆ ಪಡುತ್ತೇನೆ.

ನಾಟಕದಲ್ಲಿ ಹಲವರಿಂದ ನಡೆವ ಸನ್ನಿವೇಶ ಏಕಾಂಗ ವೀರನಂತೆ ಇಲ್ಲಿ ಗಮಕಿಯಾದವನು ರಸಯುಕ್ತವಾಗಿ ಪ್ರತಿಪಾದಿಸಬೇಕು. ಈ ತಂತ್ರದ ಆಳವಾದ ಅಭ್ಯಾಸವಿಲ್ಲದ ಗಮಕಿಯು ಮುಗ್ಗರಿಸುವದು ಖಂಡಿತ.

ಜೋಳದರಾಶಿಯವರ ಬರಹ

ರಸವರ್ಷ–ಮುನ್ನುಡಿ

ಅ. ನ. ಕೃ.

ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ಕಣೇಕಲ್ಲಿನಲ್ಲಿ ನಡೆದ 'ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಳಾ ಪರಿಷತ್ತಿ'ಗೆ ಆಮಂತ್ರಿತನಾಗಿ ನಾನು ಹೋಗಿದ್ದೆ. ಪರಿಷತ್ತು ಮುಗಿಸಿಕೊಂಡು ಬಳ್ಳಾರಿಗೆ ಹಿಂದಿರುಗಿದ ಮೇಲೆ ನನ್ನ ಅಭ್ಯೇತೃಗಳಾದ ಶ್ರೀ ಜೋಳದರಾಶಿ ದೊಡ್ಡನಗೌಡರು ತಮ್ಮ ಸ್ವಗ್ರಾಮ, ಜೋಳದರಾಶಿಗೆ ಕರೆದೊಯ್ದರು. ಗೌಡರ ಹಾಗೂ ಅವರ ಧರ್ಮಪತ್ನಿ, ಸೌ॥ ಹನುಮಕ್ಕನವರ ಆದರಾತಿಥ್ಯದ ಜತೆಗೆ ಗೆಳೆಯರು ಚನ್ನಬಸವೇಶ್ವರ, ಮಲ್ಲಾಬಾದಿ, ಬೀಚಿ, ಹಿರಿಯರು ಭಾಸ್ಕರಾಚಾರ್ಯ ರಾಮಚಂದ್ರಸ್ವಾಮಿಗಳ ಸಖ್ಯವೂ ಬೆರೆತು ನನ್ನ ಪ್ರವಾಸ ಚಿರಸ್ಮರಣೀಯವಾಯಿತು. ಮಧ್ಯಾಹ್ನ ಗೌಡರು ತಮ್ಮ **'ನಮ್ಮ ಹಂಪೆ'** ಕಾವ್ಯ ಸಂಗ್ರಹದಿಂದ ಕೆಲವು ಕವನಗಳನ್ನೂ, ಹಸ್ತಪ್ರತಿಯಲ್ಲಿದ್ದ ಕೆಲವು ಕವಿತೆಗಳನ್ನೂ ಹಾಡಿದರು. ರಾಮಚಂದ್ರಸ್ವಾಮಿಗಳ ಮಹೋನ್ನತ ತೆಲುಗು ಕೃತಿ ಯಾತ್ರಿಕದಿಂದ ಕೆಲವು ಪದ್ಯಗಳನ್ನೂ ಗೌಡರು ಹಾಡಿದರು. ಸ್ವಾಮಿಗಳು ಮೂಲವನ್ನು ಓದಿ ಅರ್ಥ ವಿವರಿಸಿದರು. ಕಾವ್ಯಾನಂದದಿಂದ ಈ ಜೀವ ತುಂಬಿ ಹೋಯಿತು. ಈ ಸಂದರ್ಭದಲ್ಲಿ ನನಗಾದ ಮತ್ತೊಂದು ಹಿರಿಯ ಲಾಭವೆಂದರೆ ಗೌಡರ ತೀರ್ಥರೂಪರವರು

ಶ್ರೀ ಪಂಪನಗೌಡರ ಪರಿಚಯ. ಕಾವ್ಯ, ಕಲೆಗಳನ್ನು ಆರಾಧಿಸಿ ಪೋಷಿಸಿದ ಶ್ರೀ ಪಂಪನಗೌಡರ ಹಿರಿಮೆ ಅವರ ಬಗ್ಗೆ ತಿಳಿದ ಒಂದು ವೃತ್ತಾಂತದಿಂದ ನನಗೆ ಅರಿವಾಯಿತು. ಗೌಡರು ಸೂತ್ರಧಾರಿಗಳಾಗಿ ನಡೆಸುತ್ತಿರುವ 'ಬಳ್ಳಾರಿ ಜಿಲ್ಲಾ ನಾಟಕ ಕಲಾ ಪರಿಷತ್ತಿನ' ಎರಡನೆಯ ಅಧಿವೇಶನ ಜೋಳದರಾಶಿಯಲ್ಲಿ ಸೇರಿತ್ತು. ಸಮ್ಮೇಳನದ ನಿಯಮಗಳಿಗನುಸಾರವಾಗಿ ಸ್ವಾಗತಾಧ್ಯಕ್ಷರಾದ ಗೌಡರು ಪ್ರತಿನಿಧಿ ಶುಲ್ಕ, ಉಪಚಾರ ಶುಲ್ಕಗಳನ್ನುವಸೂಲ್ಮಾಡಿದ್ದರು. ಉಪಚಾರ ಶುಲ್ಕ ತೆಗೆದುಕೊಂಡುದು ಪಂಪನಗೌಡರಿಗೆ ತಿಳಿದಕೂಡಲೆ ಅವರು ಮಗನ ಮೇಲೆ ಸಿಟ್ಟಾಗಿ "ನಮ್ಮ ಊರಿಗೆ, ನಮ್ಮ ಮನೆಗೆ ಬರುವ ಅತಿಥಿಗಳಿಂದ ಹಣ ತೆಗೆದುಕೊಂಡು ಅನ್ನಹಾಕಬೇಕೆ" ಎಂದರು. ಗೌಡರು "ಇದು ಸಮ್ಮೇಳನ. ಸಾವಿರಾರು ಜನ ಸೇರುತ್ತಾರೆ. ಅವರ ಊಟ ಉಪಚಾರಕ್ಕೆ ಶುಲ್ಕ ತೆಗೆದುಕೊಳ್ಳುವುದು ಪದ್ಧತಿ" ಎಂದರು. ಪಂಪನಗೌಡರಿಗೆ ಸಮಾಧಾನವಾಗಲಿಲ್ಲ. ಉಪಚಾರ ಶುಲ್ಕವನ್ನು ಹಿಂದಿರುಗಿಸಿ ಎಲ್ಲ ಅತಿಥಿಗಳ ಸತ್ಕಾರದ ಜವಾಬುದಾರಿಯನ್ನು ತಾವೇ ಹೊತ್ತರು. ಕನ್ನಡ ಸಂಸ್ಕೃತಿಯ ಜೀವಂತ ವೈಭವಕ್ಕೆ ಇದಕ್ಕಿಂತ ನಿದರ್ಶನ ಬೇಕೇ ? ತಂದೆಯ ಸದ್ಗುಣ, ಸಹೃದಯತೆ, ಕಲಾನುರಾಗ ಮಗನಲ್ಲಿ ಮೂರ್ತೀಭವಿಸಿ ವಿಕಾಸಗೊಂಡಿದೆ.

ದೊಡ್ಡನಗೌಡರು ಶಾಲೆಗೆ ಹೆಚ್ಚು ಮಣ್ಣು ಹೊರಲಿಲ್ಲ. ಜಾನಪದ ಕವಿಗಳು, ಕಲಾವಿದರೇ ಅವರ ಗುರುಗಳು. ಆತ್ಮೋಲ್ಲಾಸಕ್ಕೆ ಕವಿತೆಗಳನ್ನು ಬರೆದುಕೊಂಡು, ತಾವೇ ಹಾಡಿಕೊಂಡು ಆನಂದಪಡುತ್ತಿದ್ದ ಗೌಡರ ಸುಪ್ತಚೇತನವನ್ನು ಜಾಗೃತಗೊಳಿಸಿದವರು ಕನ್ನಡಾಂಧ್ರ ಕಲಾಪ್ರಪಂಚದ ಅನಭಿಷಿಕ್ತ ಸಾಮ್ರಾಟರಾದ ದಿವಂಗತ ಬಳ್ಳಾರಿಯ ಟಿ. ರಾಘವರು. ರಾಘವರ ಕಲಾಪ್ರಯತ್ನಗಳಿಗೆ ಗೌಡರ ನೆರವು ಇರಲೇಬೇಕು. ತಮ್ಮ ಜತೆಯ ನಟರು ಕವಿ, ನಾಟಕಕಾರರಾಗಿದ್ದಾರೆಂದು ತಿಳಿದ ಮೇಲೆ ರಾಘವರ ಆನಂದಕ್ಕೆ ಹೆಮ್ಮೆಗೆ, ಎಣೆಯುಂಟೇ ? ಸ್ವಯಂ ರಾಘವರ ದಿಗ್ದರ್ಶನದಲ್ಲಿ ಗೌಡರ 'ಕನಕದಾಸ' ರಂಗದ ಮೇಲೆ ಪ್ರದರ್ಶನಗೊಂಡು ಅಖಿಲ ಕರ್ನಾಟಕದ ಗೌರವ, ವಿಶ್ವಾಸ ದೊರಕಿಸಿಕೊಂಡಿತು. ಗೌಡರ ಕಾವ್ಯಭಾಷೆಗೆ ಸಾಣೆ ಹಿಡಿದು ಮಾರ್ಗದರ್ಶನ ಮಾಡಿದ ಮಹಾನುಭಾವರು ಸರ್ವದರ್ಶನತೀರ್ಥ ವೈ. ನಾಗೇಶ ಶಾಸ್ತ್ರಿಗಳು. ಗೌಡರ ಪ್ರಸುಪ್ತ ಕುಂಡಲಿನಿ ಶಕ್ತಿಯನ್ನು ಪ್ರಚೋದನಗೊಳಿಸಿ, ಅವರ ಕಾವ್ಯಕ್ಕೆ ಜಗನ್ಮಾತೆಯ ಕೃಪಾಕಟಾಕ್ಷ ದೊರಕಿಸಿಕೊಟ್ಟವರು ಆನಂದಯೋಗಿ ರಾಮಚಂದ್ರಸ್ವಾಮಿಗಳು. ಈ ಮೂವರು ಪುಣ್ಯಪುರುಷರ ಕರುಣೆಯ ಕಂದ ದೊಡ್ಡನಗೌಡರು,

ಕಾವ್ಯ ಅವ್ಯಕ್ತಮಾನವ ರಸವಂತಿೀಗಳ ವ್ಯಕ್ತವಾಣಿ ; ಪ್ರಸುಪ್ತ ಮಾನವ ಚೇತನದ ಜಾಗ್ರತಶಕ್ತಿ. ಆ ಕಾವ್ಯ ಪಾತ್ರವೇ ಕವಿ. ಕವಿ ಗಮಕಿಯೂ ನಟನೂ ಆದರೆ ಅದೆಂಥ ಭಾಗ್ಯ ! ದೊಡ್ಡನಗೌಡರಲ್ಲಿ ಈ ಮೂರು 'ಮಹಾಶಕ್ತಿಗಳ ಸಮರಸ'

ಅನ್ಯಾದೃಶವಾಗಿ ಕೂಡಿಕೊಂಡಿದೆ. ಆದವಾನಿಯಲ್ಲೊಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿ ಸೇರಿತು. ಸಂಜೆ ಸಾರ್ವಜನಿಕರ ಸಭೆ. ಕಾರ್ಯಸಮಿತಿಯ ಅಧಿವೇಶನಕ್ಕೆ ಹೋಗಿದ್ದ ನಮ್ಮೆಲ್ಲರ ಭಾಷಣ–ಗೌಡರ ಕಾವ್ಯವಾಚನ. ನಾಲ್ಕೈದು ಸಾವಿರ ಜನ ಸೇರಿದ್ದ ಸಭೆಯ ಮುಂದೆ ಗೌಡರು 'ನಮ್ಮ ಹಂಪೆ' ಹಾಡಿದರು. ಹಂಪೆಯ ದುರಂತ ಬಾಳನ್ನು ಕೇಳಿದ ತುಂಬಿದ ಸಭೆ ಕಂಬನಿಸುರಿಸಿತು. ಸಭೆಯ ಮಾತಂತಿರಲಿ–ಹಾರ್ಮೋನಿಯಮ್ ನುಡಿಸುತ್ತ ಕುಳಿತಿದ್ದ ಶ್ರೀ ಕುಮಾರಸ್ವಾಮಿ– 'ನಮ್ಮ ಹಂಪೆ'ಯನ್ನು ಗೌಡರ ಬಾಯಿಂದ ನೂರಾರು ಬಾರಿ ಕೇಳಿದ್ದವರೂ ಗಳಗಳನೆ ಅಳುತ್ತಿದ್ದರು–ಹಾರ್ಮೋನಿಯಂ ನಿಶ್ಶಬ್ದವಾಯಿತು. ಆಚಾರ್ಯ ಬಿ. ಎಂ. ಶ್ರೀ. ಯವರು ಗೌಡರನ್ನು ಮನಃಪೂರ್ವಕವಾಗಿ ಹರಸಿ 'ನಿಮ್ಮ ಕಾವ್ಯ ಹಾಳು ಹಂಪೆಯನ್ನು ವಿಜಯನಗರ ಮಾಡುತ್ತದೆ ಗೌಡರೇ' ಎಂದರು.

ಗೌಡರ ಗಮಕ ವೈಯಕ್ತಿಕ ವೈಶಿಷ್ಟ್ಯದಿಂದ ಕೂಡಿದೆ. ರಸಾನುಭೂತಿ, ಸ್ಪಷ್ಟ ಸಾಹಿತ್ಯ ನಿರೂಪಣೆ, ಗತಿಯುತವಾದ ನಿಲುಗಡೆ, ತುಂಬಿದ ಕಂಠಶ್ರೀಗಳಿಂದ ನುಡಿ ಯುವ ಅವರ ಗಮಕ ಪಂಡಿತ, ಪಾಮರರನ್ನು, ಶಿಶು, ಪಶು, ಫಣಿಗಳನ್ನು ತಲೆದೂಗಿಸಬಲ್ಲುದು. ಅವರ ಜೀವನದಲ್ಲಿ ಉಕ್ಕಂದವಾಗಿ ತುಂಬಿರುವ ಸುಸಂಸ್ಕೃತಿ ಅವರ ಗಮಕದಲ್ಲಿ ಮಿಡಿಯುತ್ತದೆ. ಶ್ರಾವಕನ ಹೃದಯ ತಂತ್ರಿ ಗಮಕಿಯ ಹೃದಯ ತಂತ್ರಿಯೊಂದಿಗೆ ಮೇಳವಿಸುತ್ತದೆ.

ಗೌಡರ **"ನಮ್ಮ ಹಂಪೆ"** ಪರಿಚಯವುಳ್ಳವರಿಗೆ ಅವರ ಕಾವ್ಯಶ್ರೀಯ ಪರಿಚಯ ಹೊಸದಾಗಿ ಮಾಡಿಕೊಡುವ ಅಗತ್ಯವಿಲ್ಲ. ನಿಸರ್ಗರಮಣೀಯತೆ, ಆಳ ವಾದ ಆಧ್ಯಾತ್ಮ, ಗುರುಹಿರಿಯರ ಬಗ್ಗೆ ಅಚ್ಚಳಿಯದ ಭಕ್ತಿ, ನಾಡಪ್ರೇಮ, ಭಾಷಾಭಿಮಾನ, ಪ್ರಕೃತಿಯ ಬಗ್ಗೆ ಶಿಶುಸದೃಶವಾದ ಒಲವು ಗೌಡರ ಕವಿತೆಗಳ ಹೆಗ್ಗುರುತುಗಳಾಗಿವೆ. ಪಾಂಡಿತ್ಯ ಪ್ರಭಾವದಿಂದಾಗಲಿ, ಭಾಷೆಯ ದಕ್ಷಿಣೆ ಯಿಂದಾಗಲಿ, ಛಂದಸ್ಸಿನ ಗುಂಜಾರವದಿಂದಾಗಲಿ ತಾತ್ಕಾಲಿಕ ವಿಸ್ಮೃತಿಯನ್ನು ಗೌಡರ ಕಾವ್ಯ ತಂದುಕೊಡುವುದಿಲ್ಲ. ಅವರ ಭಾವಗಳು ದೇವಮಂದಾರಗಳಿಂದ ಮನೋಮಂದಿರವನ್ನಲಂಕರಿಸುತ್ತವೆ. ವಿಚಾರಗಳು ಶಲ್ಯಗಳಂತೆ ನಮ್ಮ ಹೃದಯದ ವಿಕಾರಗಳನ್ನು ಇರಿಯುತ್ತವೆ ಅಳಿಸಿ, ನಗಿಸಿ, ಕುಣಿಸಿ, ಕುಕಿಲರಿಸಿ, ರೇಗಿಸಿ, ಕೆರಳಿಸಿ, ಏಡಿಸುತ್ತದೆ ಗೌಡರ ಕಾವ್ಯದ ಸಪ್ತಭಂಗಿ.

"ರಸವರ್ಷ" ಸಂಗ್ರಹದಲ್ಲಿ ಕವಿಯ ಬಹುಮುಖ ಪ್ರತಿಭೆಯನ್ನು ಕಾಣ ಬಹುದು. ಆಧ್ಯಾತ್ಮಿಕ ಜೀವನದಿಂದ ಲಭ್ಯವಾದ ಶಾಂತಿಯನ್ನು ಕಾವ್ಯದಲ್ಲಿ ಚಿರಸ್ಥಾಯಿ ಗೊಳಿಸುವುದು ಪ್ರಾಚೀನ ಕಾವ್ಯದ ಲಕ್ಷಣವಾದರೆ, ನಿತ್ಯ ಚೇತೋಹಾರಿಯಾದ ಭಾವ ಗಳನ್ನು ಕೆರಳಿಸಿ, ಮಾನವನನ್ನು ಕೃತಿಸಿದ್ಧನನ್ನಾಗಿ ಮಾಡುವುದೇ ಆಧುನಿಕ ಕಾವ್ಯದ ನಿಲುವು. ಹೊರಗಣ್ಣಿಗೆ ವಿರಸವಾಗಿ ಕಾಣುವ ಈ ಉಭಯ ಭಾವ, ದೃಷ್ಟಿಗಳನ್ನು

ಸಮರಸವಾಗಿ ತಮ್ಮ ಕಾವ್ಯಕ್ಕೆ ಅಳವಡಿಸಿಕೊಳ್ಳುವ ಜಾಣ್ಮೆ, ದೊಡ್ಡನಗೌಡರಿಗೆ ಸಾಧಿಸಿದೆ.

'ರಸವರ್ಷ'ದಲ್ಲಿ ಭಕ್ತಿ ಗೀತೆಗಳು, ನಾಡಗೀತೆಗಳು, ಜೀವನ ವಿಮರ್ಶೆ, ಪ್ರಕೃತಿಗೀತೆಗಳು ಹೆಚ್ಚಾಗಿ ಬಂದಿವೆ.

೧) **ಭಕ್ತಿಗೀತೆಗಳು :** ರಸವರ್ಷದ ಕವಿ ಆಧ್ಯಾತ್ಮವಾದಿಯೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ತನ್ನ ಇಷ್ಟ ದೈವವಾದ 'ರಾಮೇಶ'ನ ಅಂಕಿತದಲ್ಲಿ ಕಾವ್ಯ ಬರೆಯುತ್ತಿರುವ ಗೌಡರು, ಆ ರಾಮೇಶನಲ್ಲಿ ಎಲ್ಲ ದೇವರುಗಳನ್ನೂ ಕಾಣುತ್ತಾರೆ. ಭಾರತೀಯರ ಆಧ್ಯಾತ್ಮಿಕ ಸಂಪನ್ನತೆಯನ್ನು ಭಗವದ್ಗೀತೆ ಒಂದು ದಿವ್ಯ ಶ್ಲೋಕದಲ್ಲಿ ಉಸುರಿದೆ :

"ಯೋ ಯೋ ಯಾಂ ಯಾಂ ತನುಂ ಭಕ್ತಃ
ಶ್ರದ್ಧಯಾರ್ಚಿತುಮಿಚ್ಛತಿ
ತಸ್ಯ ತಸ್ಯಾಚಲಾಂ ಶ್ರದ್ಧಾಂ
ತಾಮೇವ ವಿದಧಾಮ್ಯಹಮ್ ॥"

[ಭಗವದ್ಗೀತೆ. ಅ : ೭-ಶ್ಲೋ : ೨೧]

ಯಾವ ಯಾವ ಭಕ್ತನು ಯಾವ ಯಾವ ದೇವತೆಯನ್ನು ವಿಶ್ವಾಸದಿಂದ ಪೂಜಿಸಬೇಕೆಂದು ಬಯಸುತ್ತಾನೋ ಅವನವನಿಗೆ ನಾನು ಆಯಾ ದೇವತೆಯ ಮೇಲಿನ ವಿಶ್ವಾಸವನ್ನೇ ನೆಲೆಗೊಳಿಸುವೆನು.

ಶಿವ, ಶಕ್ತಿ, ರಾಮ, ರಾಮೇಶರೆಲ್ಲಾ ಆ ಮಹಾಪ್ರಭೆಯ ವ್ಯಕ್ತಸ್ವರೂಪವೆಂಬ ಉದಾತ್ತಭಾವನೆ ಕವಿಯ ಮನಸ್ಸಿನಲ್ಲಿ ಆಳವಾಗಿ ಮೂಡಿದೆ.

"ಎಲ್ಲರಿಗೆ ನೆಲೆಯಾಗಿ ಸಲಹುವ ನೆಲ ಒಂದೆ
ಎಲ್ಲರಾ ಜೀವನದ ನೀರುಗಾಳಿಗಳೊಂದೆ
ಎಲ್ಲೆಡೆಯಲಿಹ ಬೆಳಕು ಆಕಾಶಗಳು ಒಂದೆ
ಎಲ್ಲಿಹವು ಭೇದಗಳು ಒಂದೆಂಬುದನು ತಿಳಿದು ॥

ಏಸು ಮಹಮ್ಮದ ಬುದ್ಧ ಶಿವ ಕೇಶವಾದಿಗಳು
ಕ್ರೈಸ್ತ ಜೈನ ಮುಸಲ್ಮಾನ ಶಿವ ವೈಷ್ಣವಾದಿಗಳು
ಪಾಸಿಯಾಂತ ಬೈಬಲ್ ಖುರಾನ್ ವೇದಾದಿಗಳು
ಈ ಸಕಲಮತದೈವ ಶಾಸ್ತ್ರಗಳು ಒಂದೆಂಬ ॥"

ಭಕ್ತಿಯ ಮಾರ್ಗದಲ್ಲಿ ನಡೆಯುವ ಸಾಧಕ ಅನೇಕ ಎಡರು ತೊಡರುಗಳನ್ನು, ಭಯ ಸಂಶಯಗಳನ್ನು ಕಡೆ ಹಾಯಬೇಕು. ಲೋಕವ್ಯಾಪಾರವನ್ನು ನೋಡುತ್ತಿದ್ದಂತೆ ಅವನ ಮನಸ್ಸಿನಲ್ಲಿ ಹಲವಾರು ಸಂದೇಹಗಳುತ್ಪನ್ನವಾಗುತ್ತವೆ.

"ಎಲ್ಲ ಶಾಸ್ತ್ರಗಳೋದಿ ಪಂಡಿತರನಾ ಗೆಲಿದೆ
ನೆಲೆಯಿಲ್ಲದೈಶ್ವರ್ಯದ ಶಿಖರದಲಿ ಕುಳಿತೆ
ಹೇಳಲೇನಿಳೆಯೊಳಗೆ ನಡೆವಾಟಗಳ ಕಂಡೆ
ಒಳಗಾಗೋ ಆಟಗಳ ನಾ ನೋಡದಾದೆ"

ಮಾನವನ ಕ್ಷುದ್ರಕಲ್ಪನೆ ಮೀರಿ ಹಿಮಾಲಯಸದೃಶವಾಗಿ ನಿಂತಿರುವ ಭಗವಂತನ ವಿಶ್ವಾವತಾರದ ಕಲ್ಪನೆ ಮೂಡಿದಾಗ 'ಇದಂ ಗಮ್ಯವೇ–ಸಾಧ್ಯವೇ–ಹುಲುಮಾನವ ಈ ಅಗಾಧ, ಅಗಮ್ಯ, ಅಪ್ರಮಾಣ ಭವ್ಯತೆಯನ್ನು ನಿಲುಕ ಬಲ್ಲನೇ' ಎನ್ನುವ ಸಂಶಯ ಸಹಜವಾಗಿ ಮೂಡುತ್ತದೆ.

"ಘನಪರ್ವತ ನೀನು
ತೃಣಜೀವಿಯು ನಾನು
ದೀನ ರಕ್ಷಕ ನೀನು
ದೀನಳು ನಾನು

* * *

ಪಾವನನು ನೀನು
ಪಾಪಿಯು ನಾನು
ರಾಮೇಶಪ್ರಿಯ ನೀನು
ತವದಾಸಿ ನಾನು"

ಆದರೆ ನಮ್ಮ ಕವಿ ಪಾಶ್ಚಾತ್ಯ ಕವಿಯಂತೆ 'ಲೋಕವೆಲ್ಲಾ ಗೋಳಿನ ಸಂತೆ' ಎಂದು ನಿರ್ವಿಣ್ಣನಾಗಿ ಕೂಡುವುದಿಲ್ಲ. ಪರಂಪರಾಗತವಾಗಿ ಬಂದ ಆಧ್ಯಾತ್ಮಶಕ್ತಿ ಅವನ ಕೈ ಹಿಡಿದು ಮುನ್ನಡೆಸುತ್ತದೆ. ತಾತ್ಕಾಲಿಕವಾಗಿ ಅವನಲ್ಲಿ ಮೂಡಿದ ಭಯ, ಸಂಶಯಗಳನ್ನು ತೊಡೆದುಹಾಕಿ ದಿವ್ಯಜ್ಞಾನದ ಪ್ರಭಾಮಂಡಲಕ್ಕೆ ಒಯ್ಯುತ್ತದೆ.

"ಸರ್ವರ ಹೃದಯದಿ ಶಿವನಿದ್ದ ಮೇಲೆ
ಗರ್ವವ ತೋರಿಸಲೇಕಯ್ಯ ಮನುಜ

* * *

ನರಲೋಕದಿ ಶಿವ ನೆಲೆಸಿದ್ದ ಮೇಲೆ
ಸ್ವರ್ಗದ ಸುಖದಾಸೆಯೇಕಯ್ಯ ಮನುಜ

* * *

ಕಾಯಲು ನಮ್ಮನು ಶಿವನಿದ್ದ ಮೇಲೆ
ಭವದ ಅಂಜಿಕೆಯು ಏಕಯ್ಯ ಮನುಜ

* * *

ಪಾಪವ ಕಳೆಯಂಲು ಶಿವನಾಮವಿರಲು
ಯಂಮಪಾಶದಾಭಯವೇಕಯ್ಯ ಮನಂಜ"

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶೋಕ, ಭಯವಿಹ್ವಲರಾಗುವ ಸಾಧಕರಿಗೆ ಕವಿ ತನ್ನ ಸಂತೈಕೆಯಲ್ಲಿ (೭೨) ಹೇಳಿರುವ ಮಾತು ಸ್ವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾಗಿದೆ.

"ಭೋಗಯುತ ಭವಿತವ್ಯ ಗರ್ಭದೊ
ಳಾಗಮದ ಪರಮಾರ್ಥ ಸಿದ್ಧಿಯು
ನೌಕಿ ರತಿಯೊಳ್ ವಿರತಿತೋರ್ದಾಶಾವನೊಲಿದೀವ ॥
ಆಕೆಯೊಲುಮೆಯೊಳಿಲ್ಲ ಸುಖಸಂ–
ಯೋಗ ಸಫಲತೆಯಾಂತು ಸಲೆಸುರ
ಲೋಕ ಸೌಖ್ಯಗಳಲ್ಪವೆಂದೆನಿಸುಂವವು ಅನುಭವದಿ ॥

*   *   *

ತುಳುಕಿಸೌ ಎಲೆತಾಯೆ ಚಿನ್ಮಯೆಂ
ಸಂಲಲಿತಮೃತಾಂತಃಕರಣ ಸೀ
ತಲ ವಿಮಲಚಿದ್ರಸ ಸಮುಂದ್ರದೊಳೊಂದುಂ ಬಿಂದುವನು ॥
ಬಳಿಕಲೊಂದೊಂದಾಗಿ ಬಿಂದುಂವ
ನಿಲಿಸಿ ನೆರೆ ತೊರೆಯಾಗಿ ಮೇಲ್ವರಿ
ದುಲುಕಿ ಸಾಗರವಾಗಿ ನಿನ್ನೊಳು ತುಳುಕಿ ಧುಂಮುಕುವೆನು ॥"

೨) **ನಾಡಗೀತೆ:** ೧೯೪೭ನೆಯ ಇಸವಿ ಆಗಸ್ಟ ೧೫ ಭಾರತ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಉಲ್ಲಿಖಿತವಾಗುವ ಮಹಾದಿನ. ಆದಿನ ನಮ್ಮ ನಾಡು ಬ್ರಿಟಿಷರ ಬಂಧನದಿಂದ ಬಿಡುಗಡೆ ಹೊಂದಿತು. ಸ್ವಾತಂತ್ರ್ಯವನ್ನು ನಾವು ರೂಢಿಸಿಕೊಳ್ಳುವಷ್ಟರಲ್ಲಿ ಅಣ್ಣತಮ್ಮಂದಿರ ಕಲಹವಾರಂಭವಾಗಿ ರಕ್ತಪಾತವಾಯಿತು. ಬಂಡವಾಳಭೂತ ಅವತರಿಸಿ ಬಡವರ ಗೋಣು ಮುರಿಯತೊಡಗಿತು. ಮನುಷ್ಯ ಮನುಷ್ಯನನ್ನು ತನ್ನ ಸ್ವಾರ್ಥಸಾಧನೆಗಾಗಿ ಕಿತ್ತು ತಿನ್ನಲಾರಂಭಿಸಿದ. ಈ ಪರಿಸ್ಥಿತಿ ನೋಡಿ ಕವಿಯ ಹೃದಯ ಮಮ್ಮಲ ಮರುಗಿದೆ.

"ಅಯ್ಯೋ ನೋಡಲೆ ನೋಡ ಜಾತಿಭೂತದ ಸೇಡು
ಕೊಲೆ ಸುಲಿಗೆ ತಾಂಡವದ ನೃತ್ಯದಿಂ ಮೆರೆಯುತಿದೆ
ಸ್ವಾರ್ಥಶಾಕಿನಿ ನೋಡ ಕಳ್ಳಪೇಟೆಯನೊಡ್ಡಿ
ಬಡವರೆಡಲಲಿ ಲಾಸ್ಯ ನೃತ್ಯಮಂ ಗೈಯುತಿದೆ
ಆತ್ಮಪ್ರಶಂಸೆಯಲಿ ಡಿಳ್ಳಿಯನು ಟೀಕಿಸುವ

ಮತ್ಸರದ ಮೋಹಿನಿಯು ಆಲೆದಾಟವದು ನೋಡ
ದಾರಿದ್ರ್ಯ ಸಂತಾಪ ದುಃಖ ಬರಗಾಲಗಳು
ದೇಶಶಕ್ತಿಯನಳಿಪ ದಾರುಣ ವಿಷಾಹಿಗಳು
ಸ್ವಾತಂತ್ರ್ಯದಮೃತದಲಿ ಸಿಡಿದೆದ್ದ ಘನವಿಷವ
ಸೇವಿಸುವ ಮಹದೇವ ಗಾಂಧಿತಾನಿಂದಿಲ್ಲ
ಬನ್ನಿ ರೈ ಭಾರತದ ಮಾದೇವಿ ಮಕ್ಕಳೆ
ಒಬೊಬ್ಬರೊಂದಿಷ್ಟು ನಾವೆಲ್ಲರುಂಬುವ."

ಭಾರತದ ಹಿರಿಮೆಯನ್ನು ಕೊಂಡಾಡುತ್ತಾ

"ಸತ್ಯಶಾಂತಿಗಳ ದೇಶದೇಶದಲಿ
ಸಾರಿಸಾರಿ ಜಯನಾದ ಬೀರಿದ
ಸಕಲ ಜಾತಿಮತ ಪಂಥ ಧರ್ಮದಲಿ
ಸಮತೆತೋರಿ ಸ್ವಾರಾಜ್ಯ ಸಾಧಿಸಿದ"

ಈ ನಾಡಿನ ಸ್ವಾತಂತ್ರ್ಯ ಸ್ಥಿರವಾಗಿರುವಂತೆ ಜನತೆ ಒಮ್ಮನಸ್ಸಿನಿಂದ ದುಡಿಯ ಬೇಕೆಂದು ಕವಿ ಸೂಚಿಸುತ್ತಾನೆ.

ಕನ್ನಡ ನಾಡದೇವಿಯ ನಲ್ಮೆಯ ವರನಾದ ಕವಿ ಕನ್ನಡನಾಡಿನ ಗತವೈಭವವನ್ನು ಹಾಡಿ ಹೊಗಳಿ ಇಂದಿನ ಪರಿಸ್ಥಿತಿಯನ್ನು ಮನಮುಟ್ಟುವಂತೆ ಚಿತ್ರಿಸುತ್ತಾನೆ. ಕನ್ನಡಿಗರಿಗೆ ಅವರ ಹಿರಿಯರ ಕ್ಷಾತ್ರ, ಪೌರುಷವನ್ನು ನೆನಪಿಸಿಕೊಟ್ಟು 'ಕ್ಷುದ್ರಂ ಹೃದಯದೌರ್ಬಲ್ಯಂ' ಎಂದು ಎಚ್ಚರಿಸುತ್ತಾನೆ. ಸಂಸ್ಕೃತಿಯ ಆರಾಧಕನಾದ ಕವಿಯ ಮನಸ್ಸಿನಲ್ಲಿ ಪರರ ಬಗ್ಗೆ ಅಸೂಯೆ, ದ್ವೇಷಗಳಿಲ್ಲ. ಕನ್ನಡದ ಗಡಿಗಳನ್ನು ನುಂಗಲು ಬರುವವರ ಪುಂಡತನ ಖಂಡಿಸಲು ಕವಿಯ ಮನಸ್ಸು ಧಾವಿಸುವಂತೆ ಮೈತ್ರಿಗೂ ಧಾವಿಸುತ್ತದೆ. ಕರ್ನಾಟಕಾಂತರ್ಗತ ಭಾರತದೇವಿಯ ಉಪಾಸಕನಾದ ಕವಿ ಹಲವರ ಸಂಸ್ಕೃತಿಯನ್ನು ತನ್ನ ಸನ್ನಿಯಲ್ಲಿ ಬೆಸೆಯಲು ಪ್ರಯತ್ನಿಸಿದ್ದಾನೆ.

೩) **ಜೀವನ ವಿಮರ್ಶೆ :** ಜೀವನಸೌಂದರ್ಯವನ್ನು ತೆರೆದ ಕಣ್ಣಿನಿಂದ ನೋಡಿರುವಂತೆ ಕವಿ ಜೀವನದ ಕಾಳ್ಕೆ, ಕೃತ್ರಿಮ, ಕಸರುಗಳನ್ನೂ ನೋಡಿದ್ದಾನೆ. ನಿತ್ಯ ಚೇತೋಹಾರಿಯಾದ ಸುವಿಚಾರಗಳು, ಋಜುಬಾಳ್ವೆಯನ್ನು ಬಿಟ್ಟು ಮಾನವ ನೇಕೆ ಅಪಗತಿಯ ಹಾದಿ ಹಿಡಿಯುತ್ತಾನೆಂದೂ ಕವಿ ವಿಚಾರ ಮಾಡಿದ್ದಾನೆ. ಲೋಕದ ಲೋಪ, ದೋಷ, ಅವಿವೇಕಕ್ಕಾಗಿ ಅದನ್ನು ಖಂಡಿಸುವುದಕ್ಕೆ ಹೊರಡುವುದಿಲ್ಲ. ಅನುಕಂಪದ ಅಮೃತಕುಂಭವಾಗಿರುವ ಕವಿಹೃದಯದಲ್ಲಿ ಪಾಪಿಗಳಿಗೂ ಎಡೆಯಿದೆ. ಅವರನ್ನು ತಿದ್ದಿ ಸನ್ಮಾರ್ಗಕ್ಕೆ ತರುವ ಬಯಕೆ ಕವಿಯಲ್ಲಿ ಉತ್ಕಟವಾಗಿದೆ.

ಬಡವರುದ್ಧಾರದಾ ಉದ್ದುದ್ದ ಮಾತಾಡಿ
ಕಡುಹಸಿದ ಬಡವರಾ ಕಿವಿತುಂಬುವುದಕ್ಕಿಂತ
ಕಡೆಗೊಂದುದಿನ ಒಮ್ಮೆ ತಾನುಣ್ಣುವುದರಲ್ಲೆ
ಬಡವನೊಬ್ಬನಿಗೆ ತುತ್ತನ್ನ ವಿಡುವುದು ಲೇಸು ॥

* * *

ತಾನರಿಯಂ ಜನರರಿಯದಾಗಹನ ತತ್ತ್ವವನಂ
ತಾನರಿತೆನೆಂದವರ ಗುರುವಾಗಿ ಕಡೆಗೊಮ್ಮೆ
ತನ್ನೊಂದಿಗವರನೂ ನರಕಕೆಳೆವುದಕಿಂತ
ತನಗರಿವಾಗದೊಡೆ ಸುಮ್ಮನಿರುವುದು ಲೇಸು ॥

* * *

ಲೇಸಂ ಬಯಸುವರೆಲ್ಲ ತಮ್ಮ ತಮ್ಮ ನಡೆನುಡಿಯಂ
ದೆಸೆಗೊಮ್ಮೆ ನಿಟ್ಟಿಸುತೆ ಹಮ್ಮಳಿದು ನಿಜವರಿತು
ಈ ಸಕಲ ಜೀವರಾಶಿಗೆ ಲೇಸನೆಸಗುವಡೆ
ಲೇಸಾದ ರಾಮೇಶ ಲೇಸೀಯಲಾರನೆ ॥"

ಲೋಕ ತನ್ನ ಆರಾಧ್ಯಮೂರ್ತಿಗಳನ್ನು ಕಿತ್ತೆಸೆದು 'ಧನಪಿಶಾಚಿ'ಯಂ ಪೂಜೆಗೆ ಮನತೆತ್ತುದೇ ಅಲ್ಲವೇ ಅದರ ಎಲ್ಲ ಸಮಸ್ಯೆಗಳ ರಹಸ್ಯ. ಹಣವೇ ಇಂದು ಸರ್ವಾಂತರ್ಯಾಮಿಯಾದ ಸರ್ವಶಕ್ತನಾದ ಸರ್ವೇಶ್ವರ. ಅದರ ವಿರಾಟ್-ಶಕ್ತಿಗೆ ಅಸಾಧ್ಯವಾದುದು ಯಾವದೂ ಇಲ್ಲ.

"ಬಡವರಿಂದ ದುಡಿಸಿ ದುಡಿಸಿ
ತಾನು ದಣಿಯದೆಲ್ಲ ಗಳಿಸಿ
ದೊಡ್ಡಮನುಜನಂತೆ ಮೆರೆದು
ಬಡವರೆದೆಯ ಮೆಟ್ಟಿತುಳಿದು
ಕಳ್ಳಕಪಟ ಮೋಸದಿಂದೆ
ಕಾಲಗತಿಯನೆಲ್ಲ ಕಡಿಸಿ
ಒಳ್ಳೆತನಕೆ ದೂರವಾಗಿ
ಮಾಡಬಾರದೆಲ್ಲಗೈವ
—ಹಣದ ಗುಣ ನೋಡಾ ॥

ಈಯೆಲ್ಲ ಉಪಾಧಿಗಳಿಂದ ಮಾನವತೆಯನ್ನು ರಕ್ಷಿಸಬಲ್ಲುದು ಯಾವದು ?

"ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ಅಕಲಂಕ ಸತ್ಯ ಸಂಜೀವ ಮಾನವಧರ್ಮ"

ಹೆಣ್ಣಿನ ಬಗ್ಗೆ ಕವಿ ತಳೆದಿರುವ ಧೋರಣೆ, ವ್ಯಕ್ತಮಾಡಿರುವ ಉದಾತ್ತ ಭಾವನೆ ಆತನ ಆತ್ಮಸಂಸ್ಕಾರದ, ರಸಜ್ಞತೆಯ ಕುರುಹಾಗಿದೆ.

"ಹೊನ್ನೆಂಬುದು ದಾನ ಧರ್ಮದ ಮೂಲವು
ಹೆಣ್ಣೆಂಬುದು ನರ ಜನ್ಮದ ಮಾತೆಯು
ಮಣ್ಣೆಂಬುದು ಸರ್ವಜೀವರ ನೆಲೆಯು"
"ತಂಗಿ ತಾಯ್ ತನುಜಾತೆ ಸತಿಯಾದಿಯಾಗಿ
ವಿಶ್ವನಾಟಕ ರಂಗಭೂಮಿಯಲಿ ನಲಿವ
ವಿವಿಧ ಪಾತ್ರಾಭಿನಯ ರಂಜಿತವು ಹಿತವು
ಎಮ್ಮ ಭಾರತ ಭಾಗ್ಯವೀ ಹೆಣ್ಣಿನಿರವು"

ಜೀವನ ವಿಮರ್ಶೆ ಹಾಗೂ ಜೀವನ ಸಮಸ್ಯೆಗಳ ಪರಿಜ್ಞಾನವೇ ಆಧುನಿಕ ಕಾವ್ಯದ ಮುಖ್ಯ ಲಕ್ಷಣವಾಗಿದೆ. ಆ ಬಗ್ಗೆ ದೊಡ್ಡನಗೌಡರು ಅಜಾಗರೂಕರಾಗಿಲ್ಲ ವೆಂಬುದಕ್ಕೆ 'ರಸವರ್ಷ'ದ ಹಲವು ಗೀತೆಗಳು ಸಾಕ್ಷ್ಯವೊದಗಿಸುತ್ತವೆ.

೪) **ಪ್ರಕೃತಿ ಗೀತೆಗಳು :** ಪ್ರಕೃತಿಯ ತೂಗುತೊಟ್ಟಿಲಾದ ಜೋಳದ ರಾಶಿ ಗ್ರಾಮದಲ್ಲಿ ಹುಟ್ಟಿ ಬೆಳೆದಿರುವ ಗೌಡರಿಗೆ ಪ್ರಕೃತಿದೇವಿಯಲ್ಲಿ ಅಸದಳ ಪ್ರೇಮ ವಿರುವುದು ಸಹಜವಾಗಿದೆ. ಪ್ರಕೃತಿಯ ಪ್ರತಿಯೊಂದು ಆವಿಷ್ಕಾರದಲ್ಲಿ ಕವಿ ಪ್ರಗಾಢ ಉದ್ದೇಶವನ್ನು ಕಾಣುತ್ತಾನೆ. ಜಗದಬಾಳು ನಲವರಿಯಬೇಕಾದರೆ ಪ್ರಕೃತಿಯ ಕಟಾಕ್ಷವೀಕ್ಷಣ ಬೇಕೇಬೇಕು.

"ಕೂಗು ಕೂಗು ಕೋಗಿಲೆ
ನರಕ ನಾಕವಾಗುವಂತೆ"

*   *   *

"ಕಾಗಿ ಗೂಗಿ ಕೂಗಿನಿಂದೆ
ಜಗದ ದನಿಯೆ ಕೆಟ್ಟಿತಿಂದು
ಈಗಲಿವುಗಳಡಗುವಂತೆ
ಸೊಗದ ಸವಿಯ ಸರವನೆತ್ತಿ"

ಯಾರಿಗೂ ತಲೆಬಾಗದೆ, ಮುತ್ತಿನ ಗೊಂಡೆಯ ಕಿರೀಟ ಹೊತ್ತು ನಿಂತಿರುವ ಜೋಳದಪೈರು ನೋಡಿ ಕವಿ.

"ಒಂದಕ್ಕೆ ಹತ್ತಾಗಿ ನೂರಾಗಿ ಬೆಳೆವೆ
ನಂಬಿದೋರಿಗೆ ನಿನ್ನ ಜೀವಕೊಡುವೆ
ತಿಂಬುಂಬ ಮನೆಯೊಂದು ಹೆಸರಿಗೆ ತರುವೆ
ನಂಬದ ಜನಕೆಲ್ಲ ಮಣ್ಣಮುಕ್ಕಿಸುವೆ"

"ಬಡವ ಬಲ್ಲಿದರೆಂಬ ಭೇದವನೀಗಿ
ಸಡಗರದೆಲ್ಲರ ಗೆಳೆಯನೀನಾಗಿ
ನಡೆಯಿಂದ ರಾಮೇಶಗೊಪ್ಪುವ ಮಗನಾಗಿ
ನಾಡಬೋನದ ಬೊಮ್ಮನೆನಿಸಿದೆ ತ್ಯಾಗಿ"

ಎಂದು ಸಂಬೋಧಿಸುತ್ತಾನೆ. 'ನಾಡಬೋನದ ಬೊಮ್ಮನೆನಿಸಿದ ತ್ಯಾಗಿ'ಗೆ ಮಣಿಯುತ್ತಾನೆ.

ಈ ನಾಲ್ಕು ವರ್ಗಗಳಿಗೆ ಸೇರುವ ಕವಿತೆಗಳಲ್ಲದೆ ಗುರುಹಿರಿಯರಿಗೆ ತಮ್ಮ 'ಭಕ್ತಿ ಕುಸುಮಾಂಜಲಿ'ಯನ್ನು ಕವಿ ಅರ್ಪಿಸುವ ಹಲವು ಗೀತೆಗಳೂ ಸೇರಿವೆ. ವಿದ್ಯಾರಣ್ಯರು, ಬಸವಣ್ಣನವರು, ಎರ್ರಿಸ್ವಾಮಿಗಳು, ಗಾಂಧೀಜಿ, ಪಂಡಿತ ತಾರಾನಾಥರು, ಟಿ. ರಾಘವರು, ಬಸವನಾಳರು, ಪಂಚಾಕ್ಷರಿ ಗವಯ್‌ಗಳು, ಇವರ ಗುಣಗೌರವವನ್ನು ಕವಿ ಮುಕ್ತಕಂಠದಿಂದ ಹಾಡಿ ಹೊಗಳಿದ್ದಾನೆ. ಕನ್ನಡ ದಲ್ಲಿ ಈ ವರೆಗೆ ಬಂದಿರುವ 'ದುಃಖಗೀತೆ'ಗಳಲ್ಲಿ ಅತ್ಯುತ್ತಮವಾದವುಗಳ ಮಟ್ಟಕ್ಕೆ ನಿಲ್ಲುತ್ತವೆ ಗೌಡರು ಗಾಂಧೀಜಿ, ತಾರಾನಾಥರು, ರಾಘವ, ಬಸವನಾಳರ ಮೇಲೆ ಬರೆದಿರುವ ಗೀತೆಗಳು.

ರಸೋಪಾಸಕರಾದ ದೊಡ್ಡನಗೌಡರು 'ಹಾಸ್ಯರಸ'ವನ್ನು ನಿರಾಕರಿಸಿಲ್ಲ. ಅವರ 'ದೇವರ ಪಜೀತಿ' ಉತ್ತಮ ಅಣಕವಾಡಾದರೆ, 'ಉಪಕಾರಿ' ಹೃದಯಂಗಮ ಹಾಸ್ಯಗೀತೆಯಾಗಿದೆ. 'ನಕ್ಕು ನಗಿಸುವಾ ನಗೆಲೇಸು' ಎಂಬ ಸರ್ವಜ್ಞ ಸಾರೋಕ್ತಿಯ ಸ್ವಾರಸ್ಯವನ್ನು ಗೌಡರು ಬಲ್ಲರು.

ದೊಡ್ಡನಗೌಡರು ತಮ್ಮ 'ನಮ್ಮ ಹಂಪೆ'ಯಲ್ಲಿ ಶ್ರೀ ಭಾಸ್ಕರಾಚಾರ್ಯ ರಾಮಚಂದ್ರಸ್ವಾಮಿಗಳವರ '**ಯಾತ್ರಿಕ**' ಕಾವ್ಯದಿಂದ ಮೂವತ್ತುಮೂರು ಆಣಿ ಮುತ್ತುಗಳನ್ನಾಯ್ದು ಕನ್ನಡ ರಸಿಕರನ್ನು ತಣಿಸಿದರು. ಈ ಸಂಗ್ರಹದಲ್ಲಿ ಹೊಸ ಹನ್ನೆರಡು ಮುತ್ತುಗಳನಾರಿಸಿಕೊಟ್ಟು ಮತ್ತಷ್ಟು ಉಪಕಾರ ಮಾಡಿದ್ದಾರೆ. ಆಧುನಿಕ ಕಾವ್ಯಪ್ರಪಂಚದಲ್ಲಿ ರಾಮಚಂದ್ರಸ್ವಾಮಿಗಳ ಕೃತಿ ಒಂದು ಅನರ್ಘ್ಯರತ್ನ. ಉಮರ್‌ಖಯ್ಯಾಂ, ಹಾಫೀಸರ ರುಬಾಯಿಯಾತ್ ದಿವಾನ್‌ಗಳ ಮಟ್ಟಕ್ಕೆ ನಿಲ್ಲುವ ಅಮರಕಾವ್ಯ. "'ಯಾತ್ರಿಕುಡು' ಶ್ರೀ ಶ್ರೀಗುರು ಭಾಸ್ಕರ ಪಂಡಿತರ ಕಿರಿಯ ಕಾವ್ಯಕುಸುಮ. ಆಕಾರದಲ್ಲಿ ಬಹು ಕಿರಿದು, ಆದರೆ ಅದರ ನಲ್‌ಗಂಪು ಬಹಳ ಹಿರಿದು. ಶ್ರೀ ಪಂಡಿತರ ಈ ಕೃತಿ ಪಾರಿಜಾತ ಪುಷ್ಪದಂತೆ; ಶೀತಾಳಿ ಹೂವಿನಂತೆ." ಎಂದು ಶ್ರೀ ಎಸ್. ವಿ. ಚನ್ನಬಸವೇಶ್ವರರು ನುಡಿದಿರುವುದು ಅಕ್ಷರಶಃ ಸತ್ಯ. 'ಯಾತ್ರಿಕ' ಒಂದು ಕಾವ್ಯವಲ್ಲ—ಅದೊಂದು ಕಾವ್ಯರಾಶಿ. 'ಯಾತ್ರಿಕ' ಬರೆದ ಕವಿ ಕವಿಯಲ್ಲ—ಕವಿಗುರು. ಒಂದೊಂದು ಪದ್ಯವೂ ಒಂದೊಂದು ಮಹಾಕಾವ್ಯಕ್ಕೆ ಗ್ರಾಸ.

ತೆಲುಗಿನ ಅಮರಕೃತಿಯೊಂದನ್ನು ಕನ್ನಡಕ್ಕಿಳಿಸಿ ದೊಡ್ಡನಗೌಡರು ಉಭಯ ನಾಡವರನ್ನೂ ಋಣಿಗಳನ್ನಾಗಿ ಮಾಡಿದ್ದಾರೆ.

ಗೌಡರ 'ರಸವರ್ಷ' ಅವರ ಕಾವ್ಯದೀಧಿತಿಯ ಹಾಗೂ ಜೀವನದೀಧಿತಿಯ ಪ್ರತೀಕವಾಗಿದೆ. 'ಎಂತು ಬಾಳೋ–ಅಂತ ಕಾವ್ಯ.' ತಮ್ಮ ಕಲೆಯಿಂದ, ಗಮಕ ದಿಂದ, ಸಾಹಿತ್ಯದಿಂದ ಗೌಡರು ಈ ನಾಡನ್ನು ಕಟ್ಟುತ್ತಿದ್ದಾರೆ. ನಾಡವರನ್ನು ಪ್ರೇಮದ ಬಂಧುರಬಂಧನದಲ್ಲಿ ಬಿಗಿಯುತ್ತಿದ್ದಾರೆ. ಗೌಡರು ಚಿರಾಯುಗಳಾಗಿರಲಿ– ಅವರ ಕಾವ್ಯಶ್ರೀ ನಾಡಶ್ರೀಯಾಗಲಿ–ಅವರ 'ರಸವರ್ಷ' ಧಾರೆ ನಮ್ಮನ್ನು ಸತತವಾಗಿ ತಣಿಸಲಿ.

ವಿಳಾಸ :
"ಅನ್ನಪೂರ್ಣ"
ವಿಶ್ವೇಶ್ವರಪುರಂ
ಬೆಂಗಳೂರು–೪
೬–೫–೧೯೫೩

ಅರಸಿ ಕಂಡವರುಂಟು. ಕಾಣದವರುಂಟು.
ಕಂಡವರು ಕಾಣದವರಿಗೆ ಕಂಡುದ ನುಡಿವರಲ್ಲದೆ
ತೋರಲಾರರಯ್ಯಾ.

★

ವರವೀವ ದೇವರೆಂದು ನಿಮ್ಮನಾರಾಧಿಸುವರಲ್ಲದೆ
ಬಚ್ಚಬರಿ ದೇವರನಾದರಿಪರಾರಯ್ಯಾ ?

ಜೋಳದರಾಶಿಯವರ
ಬಯಲ ಗಳಿಕೆಯ ಬೆಳಗು

ಡಾ॥ ಸಾ. ಶಿ. ಮರುಳಯ್ಯ

ಜೀವ–ದೇವರ ಜೈವಿಕ ಬಾಂಧವ್ಯದ ಎತ್ತರ ಬಿತ್ತರಗಳನ್ನು ಅನುಭವಕ್ಕೆ ತರುವ ಅನುಭಾವ ಗ್ರಂಥ ಶೂನ್ಯಸಂಪಾದನೆ. ಅದು ವಚನಗಳ ಒಂದು ಸಂಕಲನ ಅಲ್ಲ ; ಅಂದೊಂದು ವಿಶುದ್ಧ ವಾದವೇದಿಕೆ ; ಅನುಭಾವದ ಕೈಪಿಡಿ ; ವೀರಶೈವ ಧರ್ಮದ ಪಠ್ಯ ಪುಸ್ತಕ, ಅನುಭಾವ ಬೋಧಿ, ಅನುಷ್ಠಾನವೇದೀ, ಧರ್ಮಗ್ರಂಥ. ಅದು ರೂಪಗೊಂಡದ್ದು ಹದಿನೈದನೆಯ ಶತಮಾನದಲ್ಲಿ. ಆದರೆ ಅದರ ತಾಯಿಬೇರು ಇರುವುದು ಹನ್ನೆರಡನೆಯ ಶತಮಾನದಲ್ಲಿ. ಅಂದು ಕಲ್ಯಾಣದ ಶರಣ ಶರಣೆಯರು ಅನುಭವ ಮಂಟಪದಲ್ಲಿ, ಅಣ್ಣನ ಮಹಾಮನೆಯಲ್ಲಿ, ಸಿದ್ಧರಾಮನ ಸೊನ್ನಲಿಗೆಯಲ್ಲಿ, ಅಲ್ಲಿ-ಇಲ್ಲಿ ಅಭಿವ್ಯಕ್ತಿಸಿದ, ಇಲ್ಲವೇ ಸಾಂದರ್ಭಿಕವಾಗಿ ಆಡಿಕೊಂಡ ಅನುಭಾವದ ಬಿಡಿ ನುಡಿಗಳನ್ನು ಯಾರೊ ಪ್ರತಿಮಾಡಿಕೊಂಡು ಹಲವು ಕಟ್ಟುಗಳಲ್ಲಿ ಕಟ್ಟಿಟ್ಟಿದ್ದರು. ಕಲ್ಯಾಣದ ಕ್ರಾಂತಿ ವೇಳೆಯಲ್ಲಿ ಅಳಿದುಳಿದ ಶರಣರು ಆ ಕಟ್ಟುಗಳನ್ನು ತಮ್ಮ ಬೆನ್ನುಗಳಿಗೆ ಕಟ್ಟಿಕೊಂಡು ಓಡಿಹೋಗಿ ಉಳವಿ, ಶ್ರೀಶೈಲ, ಹಂಪೆ ಮೊದಲಾದೆಡೆಗಳಲ್ಲಿ ನೆಲೆಸಿದರು. ಈ ರೀತಿ ಕಲ್ಯಾಣದಿಂದ ವಲಸೆಬಂದ ಶರಣರು ಹೊತ್ತುತಂದ ವಚನದ ಕಟ್ಟುಗಳನ್ನು 15–16ನೆಯ ಶತಮಾನಗಳ ಧರ್ಮಾಭಿಮಾನಿಗಳು ಬಿಚ್ಚಿ, ತಮ

ತಮಗೆ ಅನುಕೂಲವಾದ ರೀತಿಯಲ್ಲಿ ಸಂಕಲಿಸುತ್ತಾ ಬಂದರು. ಪ್ರಾಚೀನರ ವಚನಗಳನ್ನು ಉಳಿಸುವುದಕ್ಕಾಗಿ ಕೆಲವರು, ಅದರಲ್ಲಿನ ಧರ್ಮದರ್ಶನಗಳನ್ನು ಪ್ರಚುರಪಡಿಸುವುದಕ್ಕಾಗಿ ಕೆಲವರು, ಅದರ ನೀತಿ, ತತ್ತ್ವ ಬೋಧಿಸುವುದಕ್ಕಾಗಿ ಕೆಲವರು, ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಕೆಲವರು, ಕೇವಲ ನಿತ್ಯದ ಪೂಜೆಗಾಗಿ ಇರಲಿ ಎಂದು ಕೆಲವರು–ಹೀಗೆ ಹಲವು ಉದ್ದೇಶಗಳಿಂದ ವಚನಗಳನ್ನು ಪ್ರತಿಮಾಡಿಕೊಂಡರು, ಇಲ್ಲವೇ ಸಂಕಲಿಸುತ್ತಾ ಬಂದರು. ಕೆಲವರು ಕ್ರಮಬದ್ಧವಾಗಿ ಜೋಡಿಸಿ, ಶಾಸ್ತ್ರೀಯ ಅಧ್ಯಯನ ನಡೆಸಿ, ವ್ಯಾಖ್ಯಾನಗಳನ್ನು ಬರೆದರು, ಅವು ಸಂಪಾದನೆಗಳೆಂದು ಪ್ರಸಿದ್ಧವಾದುವು. ಅವರು 12ನೇ ಶತಮಾನದ ಶರಣರ ಅನುಭಾವಕ್ಕೆ ಸಿದ್ಧಾಂತದ ದೀಕ್ಷೆ ಕೊಟ್ಟರು. ಅವರಲ್ಲಿ 'ಲಿಂಗಲೀಲಾವಿಲಾಸ ಚಾರಿತ್ರ'ದ ಕಲ್ಲುಮಠದ ಪ್ರಭುದೇವ, 'ಏಕೋತ್ತರ ಶತಸ್ಥಲದ' ಜಕ್ಕಣಾರ್ಯ, ಮತ್ತೊಂದು 'ಏಕೋತ್ತರ ಶತಸ್ಥಲ'ವನ್ನು ಸಂಕಲಿಸಿದ ಮಹಾಲಿಂಗದೇವ; ಮಿಶ್ರಸ್ತೋತ್ರದ ವಚನ ಮತ್ತು ಬಸವಸ್ತೋತ್ರದ ವಚನಗಳ ಸಂಕಲನಕಾರ ಚೆನ್ನಂಜೇದೇವ ಮೊದಲಾದವರು ಮುಖ್ಯರು. ಇವರೆಲ್ಲರಿಗೂ ಹಿರಿಯನಾಗಿ, ವಿಭಿನ್ನ ಸಂಪಾದನಕಾರನಾಗಿ 'ಶಿವಗಣಪ್ರಸಾದಿ ಮಹಾದೇವಯ್ಯ' ನಿಲ್ಲುತ್ತಾನೆ. ವಚನ ಕಟ್ಟುಗಳ ಆಲೋಡನ ಮಾಡಿ, ಅವುಗಳಿಂದ 'ಅನುಭಾವಕ್ಕೆ ಸೀಮಿತವಾದ ವಚನಗಳನ್ನು ಹೆಕ್ಕಿ ತೆಗೆದು, ಅವುಗಳಿಗೆ ಸಂಭಾಷಣೆಯ ಸೌಷ್ಠವವನ್ನೂ, ಧಾರ್ಮಿಕ ಕಾವ್ಯವೆನ್ನುವಂತಹ ಒಂದು ಸಂವಿಧಾನ ಸ್ವರೂಪವನ್ನೂ ಆತ ದಯಪಾಲಿಸಿದ; ಅಲ್ಲಮಪ್ರಭುವನ್ನು ಕೃತಿಯ ನಾಯಕನನ್ನಾಗಿ ಕಲ್ಪಿಸಿಕೊಂಡು ಸಂಯೋಜಿಸಿದ; ಅದನ್ನು 'ಪ್ರಭುದೇವರ ಶೂನ್ಯ ಸಂಪಾದನೆ' ಎಂದು ಕರೆದ. ಅವನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟ–ಇಲ್ಲವೇ ಶಿವಗಣ ಪ್ರಸಾದಿ ಮಹಾದೇವಜ್ಜನ ಹೆಗಲ ಮೇಲೆ ಏರಿಕುಳಿತ ಇನ್ನು ಕೆಲವರು ಮೂರು ನಾಲ್ಕು ಮಂದಿ ಅವನಿಗಿಂತಲೂ ಹೆಚ್ಚು ದೂರ ನೋಡಿದರು. ಇಲ್ಲಿ ಇಲ್ಲದ್ದನ್ನು ಅಲ್ಲಿ ಸೇರಿಸಿದರು; ತಮಗೆ ಬೇಡವೆನಿಸಿದ್ದನ್ನು ತೆಗೆದು ಹಾಕಿದರು. ಒಟ್ಟಿನಲ್ಲಿ, ಮುಂದಿನವರು ಅನುಕ್ರಮವಾಗಿ ಪರಿಷ್ಕರಿಸುತ್ತಾ ಬಂದರು. ಅಂತಹ ಸಿದ್ಧಪ್ರಸಿದ್ಧ ಕೃತಿಯೇ ಶೂನ್ಯಸಂಪಾದನೆ.

ಶಿವಗಣ ಪ್ರಸಾದಿ ಮಹದೇವಯ್ಯನ (ಕ್ರಿ. ಶ. 1400) ತರುವಾಯ ಅವನನ್ನು ಅನುಸರಿಸಿ ಶೂನ್ಯಸಂಪಾದನೆಗಳನ್ನು ರಚಿಸಿದವರು.

ಕೆಂಚವೀರಣ್ಣೊಡೆಯ	(ಕ್ರಿ. ಶ. 1580)
ಗುಮ್ಮಳಾಪುರದ ಸಿದ್ಧಲಿಂಗ	(ಕ್ರಿ. ಶ. 1583)
ಹಲಗೆಯಾರ್ಯ ಮತ್ತು	(ಕ್ರಿ. ಶ. 1584)
ಗೂಳೂರು ಸಿದ್ಧವೀರಣ್ಣೊಡೆಯ	(ಕ್ರಿ. ಶ. 1600)

ಇವರಲ್ಲಿ ಕೊನೆಯ ಸಂಪಾದನಕಾರನದು ತುಂಬಾ ವೈಜ್ಞಾನಿಕವೂ, ವ್ಯವಸ್ಥಿತವೂ ಆದ ಕೃತಿ. ಅವನನ್ನು ಆಧರಿಸಿ ಡಾ॥ ಜ. ಚ. ನಿ. ಮತ್ತು ಪ್ರೊ॥ ಸಂ. ಶಿ. ಭೂಸನೂರ ಮಠರವರು ವಿಸ್ತೃತ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಅದೇ ಕಾರ್ಯದ ಪುಣ್ಯಪಂಕ್ತಿಯಲ್ಲಿ ಬರುವ ದೊಡ್ಡ ಹೆಸರು ದೊಡ್ಡನಗೌಡರದು. ಭೂಸನೂರಮಠರ "ಪರಾಮರ್ಶೆ" ಅಧ್ಯಾತ್ಮ ಭೂಯಿಷ್ಠವಾದ ವ್ಯಾಖ್ಯಾನ ನೀಡಿದ್ದಾರೆ. ಡಾ॥ ಜ. ಚ. ನಿ ಯವರ 'ಸಂಪಾದನೆಯ ಸೊಂಪು' ಅನುಭಾವದ ಎಳೆಎಳೆಯನ್ನೂ ಬಿಡಿಸಿಕೊಟ್ಟಿದೆ. ಡಾ॥ ಜೋಳದರಾಶಿ ದೊಡ್ಡನಗೌಡರ 'ಬಯಲ ಗಳಿಕೆಯ ಬೆಳಗು' ವಿಶುದ್ಧ ವಿವರಣೆ; ವಿವೇಚನೆಗಳನ್ನು ನೀಡಿದೆ. ಅಂತೆಯೇ ವ್ಯಾಖ್ಯಾನ ಸಂದರ್ಭದಲ್ಲಿ ಬೆಡಗು, ಮುಂತಾದ ವಚನಗಳ ಸ್ಪಷ್ಟ ಅರ್ಥ ತಿಳಿಯದಿದ್ದಾಗ ಪ್ರಾಮಾಣಿಕವಾಗಿ ತಮ್ಮ ಸೋಲನ್ನು ಒಪ್ಪಿಕೊಂಡು ಓದುಗರ ವ್ಯಾಖ್ಯೆಗೆ ಅದನ್ನು ಕೈಬಿಟ್ಟಿರುವುದೂ ಉಂಟು. ಅದನ್ನು ಅವರೇ ಈ ರೀತಿ ಸ್ಪಷ್ಟಪಡಿಸಿದ್ದಾರೆ :

"ಶೂನ್ಯಸಂಪಾದನೆ ತನಗೆ ತಾನೆ ಸಮಗ್ರತೆಯ ಜಾಡು ಹಿಡಿದಿತ್ತು. ತಾತ್ತ್ವಿಕ ತೊಡಕಿಗಿಂತ ಬೆಡಗಿನ ವಚನಗಳು ಭೇತಾಳವಾಗಿ ನಿಂತವು. ವಚನಗಳಿಗೆ 'ವಿವರಣೆ' ಎಂದು ಅರ್ಥ ಬರೆಯುವುದಕ್ಕೆ ಹೆಸರಿಟ್ಟುಕೊಂಡು, ಅದರ ಮೇಲೆ ನನ್ನ ಅಭಿಪ್ರಾಯ ತಿಳಿಸಲಿಕ್ಕೆ 'ವಿವೇಚನೆ' ಎಂದಿಟ್ಟುಕೊಂಡೆ. ಅರ್ಥದ ಅವಸರವೇ ಇಲ್ಲದೆ ಸುಲಭವಾಗಿ ತಿಳಿಯುತ್ತಿದ್ದ ವಚನಗಳಿಗೆ 'ಈ ವಚನದಲ್ಲಿ ಕಂಡು ಬಂದರ್ಥ' ಎಂದಿಟ್ಟುಕೊಂಡು ವಿವೇಚನೆಗೆ ಸೂಕ್ಷ್ಮವಾಗಿಸಿ ಮುಂದೆ ಸಾಗುವ ನಿಯಮವೇನೋ ಇರಿಸಿಕೊಂಡುದು ಒಂದು ರೀತಿ ಬರಹಕ್ಕೆ ಸುಲಭವಾದಂತಾದರೂ ಬೆಡಗಿನ ಭೇತಾಳ ಮುಂದೆ ಸಾಗಗೊಡದಂತೆ ಪ್ರಥಮೋಪದೇಶದಲ್ಲಿಯೇ ತಡೆದ. ನನ್ನ ಹಳೆಯ ಮಿತ್ರರು ಪ್ರೊ॥ ಭೂಸನೂರು ಮಠರು ಪ್ರಸಿದ್ಧವಾದ ತಮ್ಮ ಪರಾಮರ್ಶೆಯಲ್ಲಿ ಸರ್ವಸ್ವತಂತ್ರದ ವಿಹಂಗಮ ಮಾರ್ಗ ಸಿಕ್ಕಂತೆ ನನಗೆ ಸಿಕ್ಕಲಿಲ್ಲ. ಅವರು ವಿದ್ವಾಂಸರು, ತಮಗೆ ಬೇಡವಾದುದನ್ನು ಬಿಟ್ಟು ಬೇಕಾದುದರ ಮೇಲೆ ಬಿಟ್ಟ ಅಭಿಪ್ರಾಯವನ್ನು ವ್ಯಕ್ತೀಕರಿಸಿ ಯಶಸ್ವಿಯಾಗಿ ಮುಗಿಸಿ, ರಾಷ್ಟ್ರ ಪ್ರಶಸ್ತಿಗಳಿಸಿ ಅವರು ಶೂನ್ಯ ದಾಟಿದರು. ನನಗೆ ಗಂಟಲಿಗೆ ಬಿದ್ದಾಗ ಸಮರ್ಥನೀಯವಾಗಿ ಸಮಗ್ರವಾಗಿ ಶೂನ್ಯ ಸಂಪಾದನೆಯ ೧೫೪೩ ವಚನಗಳ ೨೧ ಸಂಪಾದನೆಗಳಿಗೆ ಸಂಪಾದನೆಯ ಸೊಂಪಾಗಿ ನಾಲ್ಕು ಸಂಪುಟಗಳಲ್ಲಿ ಅನರ್ಗಳವಾಗಿ ೨೬೭೯ ಪುಟಗಳ ವ್ಯಾಖ್ಯಾನ ಬರೆದವರು ಡಾ॥ ಜ. ಚ. ನಿ. ಯವರು. ಅವರು ತಮಗನಿಸಿದ್ದುದನ್ನು ನಿರ್ದಾಕ್ಷಿಣ್ಯವಾಗಿ ಬರೆಯುತ್ತ, ಯಾವುದೂ ಬಿಡದೆ ಗೂಳೂರು ಸಿದ್ಧವೀರಣ್ಣೊಡೆಯರ ಗದ್ಯಗಳನ್ನು ಬರೆದಿದ್ದಾರೆ. ಪ್ರತಿಯೊಂದು ವಚನಕ್ಕು ತಕ್ಕುದಾದ ತಲೆಬರಹ-ಪ್ರತಿ ಸಂಪಾದನೆಗೆ ಮುನ್ನುಡಿ ಹಿನ್ನುಡಿಗಳು. ಆಶ್ಚರ್ಯ ! ಕನ್ನಡ ವಚನಗಳಿಗೆ ಇಷ್ಟೊಂದು ಪುಟಗಳ

ವ್ಯಾಖ್ಯೆ ಬರೆಯುವಷ್ಟು ವಸ್ತು ಸಂಗ್ರಹವಿದೆಯೆ ಎನ್ನುವವರಿಗೆ, ಬಾಯಿ ಮಾತಲ್ಲ ಬರೆದು 'ಓದಿ' ಎಂದು ಕೈಗೆ ಕೊಟ್ಟಿದ್ದಾರೆ. ಇನ್ನೊಂದು, ವಚನಗಳ ವಾಕ್ಯಾರ್ಥಗಳಿಗೆ ಬಹಳಷ್ಟು ಇತರೇತರ ಶರಣರ ವಚನಗಳನ್ನೇ ದೃಷ್ಟಾಂತವಾಗಿ ಆಧಾರಗಳನ್ನಿತ್ತು ಶಾಸ್ತ್ರೀಯ ಪ್ರಮಾಣಬದ್ಧವಾಗಿ ಪ್ರತಿಪಾದಿಸಿದ್ದಾರೆ. ಸಂಸ್ಕೃತ ಶಬ್ದಗಳಿಗೆ ಹಲವು ಅರ್ಥಗಳಿದ್ದಂತೆ ಕನ್ನಡದಲ್ಲಿಯೂ ಇವೆ ಎಂದು ಸಾಧಿಸಿ ತೋರಿಸಿ ಕೊಟ್ಟಿದ್ದಾರೆ. ವಚನ ಭಂಡಾರವೇ ತಾವಾಗಿ ಸರಾಗವಾಗಿ ಗೀತೆಗೆ ಪ್ರತಿಗೀತೆಯಂತೆ ಉಪನ್ಯಾಸ ವನ್ನೂ ಮಾಡುತ್ತಾರೆ. ಆದರೆ ನಮ್ಮ ನಾಡಿನವರು ಸರಿಯಾಗಿ ಅವರ ಪಾಂಡಿತ್ಯ ಪ್ರತಿಭೆಗಳನ್ನು ತಿಳಿಯಬೇಕಾದಷ್ಟು ತಿಳಿದಿಲ್ಲವೆಂಬುದು ವಿಷಾದನೀಯ."

ಇಂತಹ ಸಾಮಾಜಿಕ ಕಳಕಳಿಯೊಂದಿಗೆ ಜೋಳದರಾಶಿಯವರು ಸಮಾಜದ, ಸಂಸ್ಕೃತಿಯ ಸಂರಕ್ಷಣೆಗಾಗಿ ಶ್ರಮಿಸಿದ್ದಾರೆ. ಧರ್ಮದ ಉದ್ದೀಪನಕ್ಕಾಗಿ ಅಥವಾ ಪುನರುತ್ಥಾನಕ್ಕಾಗಿ ಅಥವಾ ಜಾಗೃತಿಗಾಗಿ ಅನೇಕ ಸಲಹೆ, ಸೂಚನೆಗಳನ್ನು ನೀಡಿದ್ದಾರೆ. ಅಂತೆಯೇ ತಮ್ಮ ವ್ಯಾಖ್ಯಾನದ ವೈಖರಿ ಅಥವಾ ವಿನ್ಯಾಸವನ್ನು ತಾವು ಪಡೆದ ಅನನ್ಯ ಆಶೀರ್ವಾದಗಳನ್ನು ಸ್ಪಷ್ಟೀಕರಿಸಿದ್ದಾರೆ ಕೃತಿಯ ಆರಂಭದಲ್ಲಿ. ಅದು "ವಿವರಣೆಕಾರನ ಬಿನ್ನಹ" ಎಂಬ ಶೀರ್ಷಿಕೆಯೊಂದಿಗೆ ಅಭಿವ್ಯಕ್ತಗೊಂಡಿದೆ.

"ಸಿದ್ಧವೀರೊಣ್ಣೊಡೆಯರು ತಾವು ಹೇಳುವ ಶೂನ್ಯಸಂಪಾದನೆಯ ಹಿನ್ನೆಲೆ ಗಳನ್ನು ವಿವರಿಸಿ ರಚನೆ ಮುಂದುವರಿಸುವಲ್ಲಿ ಈ ಶೂನ್ಯಸಂಪಾದನೆಗೆ 'ಬಯಲ ಗಳಿಕೆಯ ಬೆಳಗು' ಎಂಬ ಹೆಸರಿನಿಂದ ವಿವರಣೆಯನ್ನು ಶರಣರಡಿಯಾಳಾಗಿ ಬರೆಯಲು ಲೋಕದ ಶರಣ ಸಮಾಜವನ್ನು ಬೇಡುವೆ.

ಮೊದಲಿಗೆ ಶೂನ್ಯಸಂಪಾದನೆಯ ರಚನೆ ಮಾಡಿದ ಶಿವಗಣಪ್ರಸಾದಿ ಮಹದೇವಯ್ಯನವರ ಚರಣಗಳಿಗೆರಗಿ–ತರುವಾಯ ರಚನೆಕಾರರಾದ ಕೆಂಚ ವೀರಣ್ಣೊಡೆಯರನ್ನು, ಗುಮ್ಮಳಾಪುರದ ಸಿದ್ಧಲಿಂಗದೇವರನ್ನು, ಗೂಳೂರು ಸಿದ್ಧವೀರಣ್ಣೊಡೆಯರನ್ನು, ಹಲಗೆಯ ದೇವರನ್ನು ಅನನ್ಯ ಭಕ್ತಿಯಿಂದ ಪ್ರಣಾಮ ಗಳನ್ನರ್ಪಿಸಿ, ನನ್ನ ಆಧ್ಯಾತ್ಮಿಕ ಗುರುಗಳಾದ ಸರ್ವದರ್ಶನತೀರ್ಥ ಪಂಡಿತ ವೈ. ನಾಗೇಶಶಾಸ್ತ್ರಿಗಳಿಗೆ ವಂದಿಸಿ, ಅವರ ಬೋಧೆ ಹೃದಯದಲ್ಲಿ ತುಂಬಿಕೊಂಡು, ಧಾರವಾಡದ ಮುರುಘಾಮಠದ ಶ್ರೀ ಮ. ನಿ. ಪ್ರ. ಮೃತ್ಯುಂಜಯ ಮಹಾ ಸ್ವಾಮಿಗಳ ಶ್ರೀಪಾದಪದ್ಮಂಗಳಲ್ಲಿ ಸಾಷ್ಟಾಂಗವೆರಗಿ, ಅವರ ಕೃಪಾಮೃತ ಪಾನ ದಿಂದ ಪವಿತ್ರತೆಗೊಂಡು, ಚೇಳ್ಳಗುರಿಕೆಯ ಮಹಾತ್ಮ ಎರ್ರಿತಾತನ ಕೃಪೆಯನ್ನು ಪಡೆದು, ಸಕಲ ಶಿವಶರಣರನ್ನು ಸ್ಮರಿಸಿ, ನನ್ನ ಯೋಗ್ಯತೆಯನ್ನು ನೆನೆಯದೆ, ಮಹಾ ಮಹಿಮರಾದ ಶಿವಗಣಂಗಳ ಪಾದಾಂಕಿತನಾಗಿ ಕೇಳಿದಷ್ಟು, ತಿಳಿಯಬಂದಷ್ಟು, ನೋಡಿದಷ್ಟು, ಅನುಭವಕ್ಕೆ ಬಂದಷ್ಟು, ಈ ಶೂನ್ಯಸಂಪಾದನೆಗೆ ಸಾಧ್ಯವಾದಷ್ಟು

ಸುಲಭವಾದ ವಿವರಣೆಯನ್ನು ಶ್ರೀ ರೇಣುಕಾಚಾರ್ಯರನ್ನು ಬಸವಾದಿ ಪ್ರಮಥರನ್ನು ಪ್ರಾರ್ಥಿಸಿ ಬರೆಯುತ್ತಿರುವೆ."

ಜೋಳದರಾಶಿಯವರ ವ್ಯಾಖ್ಯಾನ ಪುರಾಣಪಠಣದ ಸಂಪ್ರದಾಯಕ್ಕೆ ಸೇರಿದ್ದು. ಮೊದಲು ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯ ಪ್ರತಿಯೊಂದು ವಚನವನ್ನು ಅತ್ಯಂತ ಮಧುರವಾದ ಕಂಠದಲ್ಲಿ ಸಾಂದರ್ಭಿಕ ರಾಗ-ರಾಗಿಣಿಯರ ಸಂಯೋಜನೆಯೊಂದಿಗೆ ಗಮಕ ರೂಪದಲ್ಲಿ ಹಾಡಿ ಅಥವಾ ಸಂಗೀತದಲ್ಲಿ ಮಾತನಾಡಿ ಪ್ರತಿ ವಚನಕ್ಕೂ ಅರ್ಥ ವಿವರಣೆಯನ್ನು ಕೊಟ್ಟು ಅದರ ಮೇಲೆ ತಮಗೆ ಸ್ಫುರಿಸಿದ ಅನಿಸಿಕೆಯನ್ನು ವಿವೇಚನೆ ಎಂಬ ಶೀರ್ಷಿಕೆಯಡಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಉದಾ :

ಅಲ್ಲಮ :

ಶರಣು ಶರಣಾರ್ಥಿ ಎಲೆ ತಾಯೆ, ಧರೆಯಾಕಾಶ ಮನೆ
ಗಟ್ಟದಂದು, ಹರಿವನಿಲ ಅಗ್ನಿ ಜಲ ಮೊಳೆದೋರದಂದು
ಹುಟ್ಟಿದಳೆಮ್ಮವ್ವೆ. ಅದಕ್ಕೆ ಮುನ್ನವೆ ಹುಟ್ಟದೆ ಬೆಳೆದ
ನೆಮ್ಮಯ್ಯ. ಈ ಇಬ್ಬರ ಬಸುರಲ್ಲಿ ಬಂದೆ ನಾನು. ಎಮ್ಮ
ತಂಗಿಯರೈವರು ಮೊರೆಗೆಟ್ಟು ಹೆಂಡಿರಾದರೆನಗೆ, ಕಾಮಬಾಣ
ತಾಗದೆ ಅವರ ಸಂಗವ ಮಾಡಿದೆನು. ನಾ ನಿಮ್ಮ ಭಾವನಲ್ಲ
ಯ್ಯನು; ನೀನೆನಗೆ ನಗೆವೆಣ್ಣು. ನಮ್ಮ ಗುಹೇಶ್ವರನ ಕೈವಿಡಿದು
ಪರಮಸುಖಿಯಾಗಿ ಕಳವಳ ಕಂದೆರವಿಯೇನು ಹೇಳಾ ?

ವಿವರಣೆ :

ಮಹಾತಾಯೆ ಶರಣು ಶರಣಾರ್ಥಿಗಳು. ಭೂಮಿ ಹುಟ್ಟಿರಲಿಲ್ಲ. ಆಕಾಶವು ಹುಟ್ಟಿರಲಿಲ್ಲ. ಈಗಿರುವ ನೀರು-ಬೆಂಕಿ-ಗಾಳಿ ಯಾವುದೂ ಇರಲಿಲ್ಲ. ಆಗ ನಮ್ಮಮ್ಮ ಮಾಯೆ ಪರಾಶಕ್ತಿ ಎಂಬಾಕೆಹುಟ್ಟಿದಳು. ಅದಕ್ಕೆ ಮುಂಚೆ ನಮ್ಮಪ್ಪ ಹುಟ್ಟದೆ ಬೆಳೆದಿದ್ದ. ಆತ ಪರಶಿವ. ಇವರಿಬ್ಬರ ಮಗ ನಾನಮ್ಮ! ಅಷ್ಟೇ ಅಲ್ಲ ನನ್ನ ಒಡಹುಟ್ಟಿದ ಸೋದರಿಯರು ಐದು ಜನ ನನ್ನ ಬಯಸಿ ಪತ್ನಿಯರಾದರು. ಆ ಪತ್ನಿಯರು ಇಚ್ಛಾ, ಜ್ಞಾನ-ಕ್ರಿಯಾ-ಆದಿ-ಪರಾಶಕ್ತಿಯರು. ಆಸಕ್ತಿ-ಆಸೆ-ಆಮಿಷಗಳಿಲ್ಲದೆ ಇವ ರೊಂದಿಗೆ ಮನೋವಿಕಾರವಳಿದು ಸಂಸಾರ ಮಾಡಿದೆ. ಈ ಸಂಬಂಧದಿಂದ ನಾನು ನಿನಗೆ ಭಾವ, ನೀನು ಎನಗೆ ನಗೆವೆಣ್ಣು. ನೋಡು ನನ್ನ ಹೆಸರು ಅಲ್ಲಯ್ಯ. ಹೀಗಿರುವಾಗ ನಮ್ಮ ಗುಹೇಶ್ವರನನ್ನು ಕೈಹಿಡಿದು ಸುಖಿಯಾದ ನಿನಗೆ ಈ ಕಳವಳ ವೇಕಮ್ಮಾ ?

ಪರ್ಯಾಯವಾಗಿ ಪ್ರಭು ತನ್ನ ಹುಟ್ಟಿನ ಗುಟ್ಟನ್ನು ಹೇಳುವಲ್ಲಿ ಸೃಷ್ಟಿಯ ಮೂಲವನ್ನೇ ವಿಶದೀಕರಿಸಿದ್ದಾನೆ. ಆ ಸೃಷ್ಟಿಯ ಸಂಬಂಧವನ್ನು ಮುಕ್ತಾಯಿಗೂ

ತನಗೂ ಜೋಡಿಸಿಕೊಂಡಿದ್ದಾನೆ. ಅಲ್ಲದೆ ಮುಕ್ತಾಯಿಯನ್ನು ಬಹಳ ಪೂಜ್ಯ ಭಾವನೆಯಿಂದ ಕಂಡು ಶರಣಾರ್ಥಿಗಳನ್ನು ಅರ್ಪಿಸುತ್ತಾನೆ. ಮಹಾಜಂಗಮನಾಗಿ ಕೊನೆಯಲ್ಲಿ ಆಕೆಯ ಕಳವಳಕ್ಕೆ ಮತ್ತೆ ಸಮಾಧಾನ ನೀಡುತ್ತಾನೆ.

ವಿವೇಚನೆ :

ಮುಕ್ತಾಯಿ ಅಲ್ಲಮನ ಈ ದಯಾಮೃತ ಸೇಚನೆಯಿಂದ ಕರಗಿ ಹೋಗುತ್ತಾಳೆ. ತನಗಿತ್ತ ಸಜ್ಜನ ಸದ್ಭಾವನೆಗೆ ತಲೆಬಾಗುತ್ತಾಳೆ. ಲಿಂಗವಿಡಿದ ಅಂಗ ಮತ್ತೆ ದುಃಖ-ದುಗುಡಕ್ಕೆ ಸಿಲುಕುವುದೇಕೆ ಎಂಬ ಎಚ್ಚರಿಕೆಯು ನೀಡಿದಾಗ ಅಹುದೆನ್ನುವಂತಾಗಿ ಆನಂದಗೊಂಡು ಹೀಗೆನ್ನುವಳು.

ಅಲ್ಲಮ :

ತನು ಉಂಟೆಂದರೆ ಪಾಶಬದ್ಧ; ಮನ ಉಂಟೆಂದರೆ
ಭವಕ್ಕೆ ಬೀಜ. ಅರಿವ ನುಡಿದು ಕೆಟ್ಟೆನೆಂದರೆ ಅಜ್ಞಾನ; ಭಾವ
ದಲ್ಲಿ ಸಿಲುಕಿದೆನೆಂಬ ಮಾತು ಬಯಲ ಭ್ರಮೆ ನೋಡಾ ! ಒಮ್ಮೆ
ಕಂಡೆನೊಮ್ಮೆ ಕಾಣೆ, ಒಮ್ಮೆ ಕೂಡಿದೆನೊಮ್ಮೆ ಅಗಲಿದೆ
ನೆಂದರೆ ಕರ್ಮ ಬೆಂಬತ್ತಿ ಬಿಡದು, ನಿನ್ನೊಳಗೆ ನಿನ್ನ ತಿಳಿದು
ನೋಡಲು ಭಿನ್ನಉಂಟೇ ? ಗುಹೇಶ್ವರ ಲಿಂಗವನರಿವರೆ
ನೀನೆಂದೆ ತಿಳಿದು ನೋಡಾ ಮರುಳೆ.

ವಿವರಣೆ :

ಅಕ್ಕಾ ! ಉಂಟು-ಇಲ್ಲೆಂಬುದಕ್ಕೆಲ್ಲ ಅವರವರು ಕಲ್ಪಿಸಿದ ಕಲ್ಪನೆಗಳೇ ಮೂಲವಾಗುತ್ತವೆ. ಇಲ್ಲದ ಕಾಯ ಉಂಟೆಂಬುದೇ ತನ್ನ ತಾನು ಬಂಧಿಸಿಕೊಂಡಂತೆ. ಅವರಂತೆ ಮನ ಉಂಟೆಂದು ಭಾವಿಸಿದರೆ ಭವಕ್ಕೆ ಬೀಜವಾಗುತ್ತದೆ. ಯಾಕೆ ಹಾಗೆಂದು ತಿಳಿಯುತ್ತಿ ? ಅರಿವ ನುಡಿದು ಕೆಟ್ಟೆನೆಂದರೇನು ? ಅದು ಅಜ್ಞಾನವಲ್ಲವೆ ? ಇನ್ನು ಭಾವದಲ್ಲಿ ಸಿಕ್ಕಿದೆ, ಕೂಡಿದೆ-ಅಗಲಿದೆ........ಇದೆಲ್ಲಾ ಭ್ರಾಂತಿಯಮ್ಮಾ ! ಇದರ ಗೊಡವೆಗೆ ಹೋದರೆ ಅದೊಂದು ಕರ್ಮವಾಗಿ ಬೆನ್ನುಹತ್ತುವುದು. ಮೊದಲು ಕಲ್ಪನೆಗೆ ವಿರಾಮವಿತ್ತು, ನಿನ್ನೊಳಗಿಳಿದು ನೋಡು ನೀನಾರೆಂಬುದು ತಿಳಿದುಕೋ ಭಿನ್ನತೆ ಎಂಬುದಿಲ್ಲೇಯಿಲ್ಲ. ಗುಹೇಶ್ವರ ಲಿಂಗವೆಂದರಾವುದು ? ಅದು ನೀನೆಂದೇ ತಿಳಿ.

ವಿವೇಚನೆ :

ಪ್ರಭುದೇವರು ಕೊಂಚ ಜಾಡು ತಪ್ಪಿದಂತಾಗಿ, ಅದು ಕೇವಲ ಅದ್ವೈತದ ಹಾದಿ ಹಿಡಿದುದರಿಂದ ಮುಕ್ತಾಯಕ್ಕ ವಿಚಾರಸ್ಥಿರತೆಯನ್ನು ಮುಂದಿಟ್ಟು ಹೀಗೆನ್ನುತ್ತಾಳೆ.

ಹಿಡಿದಾಚಾರವ ಬಿಡದನ್ನಕ್ಕರ, ಎನ್ನ ಅರಿವು ಮರೆಯ
ದನ್ನಕ್ಕರ, ಎನ್ನಮನವ ಸುಡದನ್ನಕ್ಕರ, ಎನ್ನಬೆಡಗಿನ ಗುರುವ
ತೊರೆಯದನ್ನಕ್ಕರ, ಸುಸುರ ವೆಂತಪ್ಪದೊ ಹೇಳಾ? ಹೋಹ
ಬಟ್ಟೆಯನರಿಯದನ್ನಕ್ಕರ ತಾನಾಗಬಾರದು ಕಾಣಾ, ಎನ್ನ
ಅಜಗಣ್ಣ ತಂದೆಯಂತೆ.—

ಜೋಳದರಾಶಿಯವರು ನಟ-ನಾಟಕಕಾರ, ಕವಿ–ಕಲಾವಿದ, ಗಮಕಿ-ವ್ಯಾಖ್ಯಾನಕಾರ. ಅಷ್ಟೇಅಲ್ಲ, ಅವರು ಶ್ರೇಷ್ಠತಮ ಅನುಭಾವಿಗಳೂ ಆಗಿದ್ದಾರೆ. ಶೂನ್ಯಸಂಪಾದನೆಯಂತಹ ಆಧ್ಯಾತ್ಮ ಭೂಯಿಷ್ಠವಾದ ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕಾಗಲಿ, ಅಭಿವ್ಯಕ್ತಿಸುವುದಕ್ಕಾಗಲಿ, ಅನುವಾದಿಸುವುದಕ್ಕಾಗಲಿ, ವಿಶೇಷ ಅರ್ಹತೆಗಳು ಬೇಕಾಗುತ್ತವೆ. ಅವೆಲ್ಲವೂ ಜೋಳದರಾಶಿಯವರಲ್ಲಿ ವಿಶೇಷ ಪ್ರಮಾಣದಲ್ಲಿವೆ. ಅವರು ಅನುಭಾವಿಗಳು. ತುಂಬು ಜೀವನವನ್ನು ಕಂಡವರು, ಉಂಡವರು. ಅನುಭಾವದ ಮಹೋನ್ನತಿಯ ಮಜಲನ್ನು ಮೆಟ್ಟಿ ನಿಂತವರು. ಬದುಕನ್ನು ದಿಟ್ಟಿಸಿ ನೋಡಿದವರು, ಬದುಕಿನಾಚೆಯ ಬೆಳಗನ್ನು ಬೆಳಗಿದವರು. ಇವರು ವೀರಶೈವ ಪರವಾದ ಧಾರ್ಮಿಕ ಪ್ರಕ್ರಿಯೆಗಳನ್ನು, ಆಚರಣೆ ಅನುಷ್ಠಾನಗಳನ್ನು, ಅವುಗಳ ಫಲ–ಪುಣ್ಯಗಳ ಪ್ರತಿಪಾದನೆಯನ್ನು ಕೇವಲ ತುದಿನಾಲಗೆಯಲ್ಲಿ ಹೇಳದೆ ತಮ್ಮ ಹೃದಯದಾಳದಿಂದ ತೆಗೆದಿಡುತ್ತಾರೆ. ಇಂತಹ ಅಭಿವ್ಯಕ್ತಿ ಅನುಭಾವಿಗೆ ಮಾತ್ರ ಸಾಧ್ಯ.

ಆಸೆ ಎಂಬಂಗನೆಯ ಸುಳಿನೋಟಕ್ಕೆ ಸಿಲುಕಿ
ನಾಶವಾದರು ನಾಮರೂಪಂಗಳಳಿದು ರಾಜಾಧಿರಾಜರು.

★

ಕಸದ ಲೋಕದಲ್ಲಿ ವಾಸಕ್ಕೊಂದು ಮನೆಯ ಕಟ್ಟಿ
ಕಸಗುಡಿಸಿಹೆನೆಂದರೆ ಅದಾರವಶಯ್ಯಾ.

ನಂದೇ ನಾನೋದಿದೆ

ಡಾ॥ ಎಸ್. ವಿದ್ಯಾಶಂಕರ

ಶ್ರೀ ಜೋಳದರಾಶಿ ದೊಡ್ಡನಗೌಡರ ಕಲಾಜೀವನ ಆತ್ಮಕಥನ ರೂಪದಲ್ಲಿ— 'ನಂದೇ ನಾನೋದಿದೆ' ಎಂಬ ಕೃತಿರೂಪದಲ್ಲಿ ನಿರೂಪಣೆಗೊಂಡಿದೆ. ಪ್ರಾಥಮಿಕ ನಾಲ್ಕನೆಯ ತರಗತಿಯವರವಿಗೆ ಓದಿದ ದೊಡ್ಡನಗೌಡರು ಶಾಲೆಯಲ್ಲಿ ಕಲಿತದ್ದ ಕ್ಕಿಂತ ಹೊರಗೆ ಕಲಿತದ್ದೇ ಹೆಚ್ಚು. ಶ್ರೀಮಂತ ರೈತ ಮನೆತನದಲ್ಲಿ ಹುಟ್ಟಿಬಂದ ಅವರಿಗೆ ಬದುಕು ಕಲಿಸಿದ ಪಾಠ ಅಮೂಲ್ಯವಾದುದು. ಕವಿಯಾಗಿ, ಗಮಕಿಯಾಗಿ, ನಟನಾಗಿ, ಪ್ರವಚನಕಾರನಾಗಿ ಅವರು ನಡೆಸಿದ ಸಾಧನೆ, ಪಡೆದ ಸಿದ್ಧಿ ಅದ್ಭುತ ವಾದುದು. ಐದು ದಶಕಗಳಿಗಿಂತಲೂ ಹೆಚ್ಚಿಗೆ ಕಲಾರಂಗದಲ್ಲೂ ಧರ್ಮ ಪ್ರಸಾರದಲ್ಲೂ ದೇಶದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸುತ್ತಿ ದೊಡ್ಡವರ ಪರಿಚಯ–ಸ್ನೇಹ–ಗೌರವ ಗಳನ್ನು ಪಡೆದ ಈ ಹಿರಿಯ ಚೇತನದ ಬದುಕು ಮಹಾಕಾವ್ಯದಂತೆ ಮಹೋನ್ನತ ವಾದುದು. ಜೋಳದರಾಶಿಯೆಂಬ ಒಂದು ಸಣ್ಣ ಗ್ರಾಮದಲ್ಲಿ ಜನಿಸಿದ ಈ ಜೀವ ಸ್ವಂತ ಪರಿಶ್ರಮದಿಂದ, ಕ್ಲಿಷ್ಟಕರವಾದ ಸಾಧನೆಯಿಂದ ಎಷ್ಟೆಲ್ಲ ಗೌರವ–ಆದರ– ಪ್ರೀತಿಗಳನ್ನು ಸಂಪಾದಿಸಿದರೆಂಬುದನ್ನು ಆತ್ಮಕಥನದಲ್ಲಿ ಓದಿದಾಗ ಹೆಮ್ಮೆಯೆನಿಸುತ್ತದೆ.

ಶ್ರೀಗಳು, ಸರ್ಪಭೂಷಣಮಠದ ಮಹದೇವಸ್ವಾಮಿಗಳು, ನವಿಲುಗುಂದದ ಗವಿಮಠದ ಬಸವಲಿಂಗಸ್ವಾಮಿಗಳು, ನಿಡುಮಾಮಿಡಿ ಜಗದ್ಗುರುಗಳು—ಈ ಮಹಿಮಾಪುರುಷರ ಕೃಪಾಶೀರ್ವಾದಗಳು ಎಷ್ಟರಮಟ್ಟಿಗೆ ಚೈತನ್ಯ ಸ್ವರೂಪವಾಗಿದೆ ಎಂಬುದರ ವಿವರಣೆ ಈ ಆತ್ಮಕಥನದ ಪ್ರಮುಖ ಭಾಗಗಳಲ್ಲಿ ಒಂದಾಗಿದೆ. ಈ ಮಠಾಧಿಪತಿಗಳ ಸಂಪರ್ಕ, ಸಾನ್ನಿಧ್ಯದಲ್ಲಿ ತಾವು ಕಂಡ ವಿಶೇಷಾಂಶಗಳು, ಪಡೆದ ಸಿಹಿ–ಕಹಿ ಅನುಭವಗಳು ಸ್ವಾರಸ್ಯಕರವಾಗಿ ನಿರೂಪಣೆಗೊಂಡಿವೆ. ವೀರಶೈವ ಮಠಗಳ ಇತಿಹಾಸ ಬರೆಯುವ ವರಿಗೆ ಈ ವಿವರಣೆ ಹೆಚ್ಚಿನ ನೆರವು ನೀಡುತ್ತದೆ. ಚಿತ್ರದುರ್ಗದ ಜಯದೇವಸ್ವಾಮಿ ಗಳ ಸಂಸ್ಕೃತ ಪ್ರೇಮ ಸರ್ಪಭೂಷಣಮಠದ ಮಹದೇವಸ್ವಾಮಿಗಳ ಕನ್ನಡ ಪ್ರೇಮ ಒಮ್ಮೆ ಈರ್ವರ ನಡುವೆ ಘರ್ಷಣೆಗೆ ಎಡೆ ಮಾಡಿಕೊಟ್ಟದ್ದರ ವಿವರ (ಪು. 250–251) ಸ್ವಾರಸ್ಯಕರವಾಗಿದೆ. ಧಾರವಾಡದ ಮುರುಘಾಮಠದಲ್ಲಿ ಚಿತ್ರದುರ್ಗದ ಜಯದೇವ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಯೊಂದು ನಡೆಯಿತು. ಪ್ರಾರ್ಥನೆಯು ಶಿವಾನಂದ ಲಹರಿಯ ಸಂಸ್ಕೃತ ಶ್ಲೋಕಗಳಿಂದಾಯಿತು. ಸಂಸ್ಕೃತ ಪ್ರೇಮಿಗಳಾದ ಜಗದ್ಗುರುಗಳಿಗೆ ಅದನ್ನು ಕೇಳಿ ಹಿಡಿಸಲಾರದಷ್ಟು ಸಂತೋಷವಾಯಿತು. ಸರ್ಪ ಭೂಷಣಮಠದ ಮಹದೇವಸ್ವಾಮಿಗಳು ಕನ್ನಡದ ಕಟ್ಟಾ ಪ್ರೇಮಿಗಳು. ಅವರು ಆವೇಶಗೊಂಡು ಕನ್ನಡದ ಮೇಲಿನ ಅಭಿಮಾನದ ಕೆಚ್ಚಿನಿಂದ, ತಮ್ಮ ಭಾಷಣದ ನಡುವೆ ಸಂಸ್ಕೃತವನ್ನು, ಸಂಸ್ಕೃತ ಸಾಹಿತ್ಯವನ್ನು ಅಲ್ಲಗಳೆಯುತ್ತ ಕನ್ನಡದ ಉನ್ನತಿ ಯನ್ನು ಎತ್ತಿ ಹಿಡಿದು "ಸಂಸ್ಕೃತದಲ್ಲೇನುಂಟು" ? ಎಂದು ದಿಟ್ಟತನದಿಂದಲೇ ನುಡಿದು ಭಾಷಣ ಮುಗಿಸಿದರು. ಜಯದೇವ ಜಗದ್ಗುರುಗಳು ಮಹದೇವಸ್ವಾಮಿಗಳ ಭಾಷಣವನ್ನು ಖಂಡತುಂಡವಾಗಿ ವಿಮರ್ಶಿಸಿ, "ಸಂಸ್ಕೃತದ ಹಿರಿಮೆಯನ್ನು ಈ ರೀತಿ ಕನ್ನಡದ ಅಭಿಮಾನದಿಂದ ಅಲ್ಲಗಳೆಯಬಹುದೆ" ? ಎಂದು ಕೆರಳಿ ನುಡಿದಾಗ ಪ್ರಸಂಗವು ವಿಕೋಪಕ್ಕೆ ಹೋಗಿ, ಎಲ್ಲಿ ರಸಾಭಾಸವಾಗುವುದೋ ಎಂದು ಸಭೆ ಕಂಗಾಲಾದಾಗ ಮಹದೇವಸ್ವಾಮಿಗಳು ಎದ್ದು ವಂದಿಸಿ "ಬುದ್ಧಿ ! ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆ ? ಕೃಪೆಮಾಡಬೇಕು" ಎಂದಾಗ ಜಗದ್ಗುರುಗಳು ಸಮಾಧಾನಗೊಂಡು ಮಂಗಳಾಶೀರ್ವಾದ ಮಾಡಿದಾಗ ಸಭೆಗೆ ಉಸಿರು ಬಂದಂತಾಯಿತು.

ನಾಡಿನ ಮಠಮಾನ್ಯಗಳ ಅಧಿಪತಿಗಳು, ಅನೇಕ ಮಹನೀಯರುಗಳು ಇವರ ಜೊತೆ ಜೋಳದರಾಶಿಯವರು ಕಳೆದ ರಸನಿಮಿಷಗಳ ಅಪೂರ್ವ ದಾಖಲೆ ಈ ಆತ್ಮ ಕಥನದಲ್ಲಿದೆ. ಶೂನ್ಯಸಂಪಾದನೆಯ ವಾಚನದ ನೆಪದಲ್ಲಿ ಧರ್ಮಪ್ರಸಾರ ಕಾರ್ಯ ವನ್ನೂ ಜೋಳದರಾಶಿಯವರು ಕೈಗೊಂಡರು. ಶೂನ್ಯ ಸಂಪಾದನೆಯ ಬಗೆಗೆ ಇರುವ ಪ್ರೀತ್ಯಾದರಗಳಿಂದಾಗಿ ಅವರು ಅದಕ್ಕೆ ಸಮಗ್ರ ವ್ಯಾಖ್ಯಾನವನ್ನು ಬರೆದು ಸ್ವತಃ ತಾವೇ ಪ್ರಕಟಪಡಿಸಿರುವರು. ಶ್ರಮಪಟ್ಟು ಶೂನ್ಯಸಂಪಾದನೆಯ ಧ್ವನಿಮುದ್ರಿಕೆ ಗಳನ್ನು ಅವರು ಹೊರತಂದಿರುವರು. ಜೋಳದರಾಶಿಯವರೇ ಒಂದೆಡೆ ಹೀಗೆ ಹೇಳಿ ರುವರು : "ನನ್ನ ನಲ್ಮೆಯ ಸಂಗಡಿಗರೆಂದರೆ ಒಂದು 'ತಂಬೂರಿ' ಮತ್ತೊಂದು

'ಶೂನ್ಯಸಂಪಾದನೆ'. ಯಾರಿಂದ ಅಗಲಿದರೂ ಈ ನಾದ-ತತ್ವಾರ್ಥಗಳಿಂದ ಅಗಲಲಾರೆ. ಶೂನ್ಯ ಸಂಪಾದನೆ ನನ್ನ ಜೀವನದ ಆಧ್ಯಾತ್ಮಿಕ ಮಸ್ತಕದ ಮಣಿ. ತಂಬೂರಿ ನನ್ನ ನಾದಬ್ರಹ್ಮ. ಎದುರಾದ ಎಂತಹ ಶೋಕ ಸಾಗರದಲ್ಲಿಯೂ ಈ ಸಂಗಡಿಗರ ನೆರವಿನಿಂದ ಈಜಿ ದಡ ಸೇರಿ ಪಾರಾಗಬಲ್ಲೆನೆಂಬ ದೃಢ ವಿಶ್ವಾಸವಿದೆ." ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕವಿಗಳ ಕಾವ್ಯಗಳ ಬಗೆಗೆ ಇರುವ ಅನಾಸಕ್ತಿ (ಪು. 181), ಬಸವೇಶ್ವರರ ಅಷ್ಟಶತಮಾನೋತ್ಸವದ ಸಂದರ್ಭದಲ್ಲಿ (ಬಸವಕಲ್ಯಾಣದಲ್ಲಿ) ಹಾಗೂ ಸಿದ್ಧಗಂಗಾ ಮಠದ ಕಾರ್ಯಕ್ರಮದಲ್ಲಿ ತಮಗಾದ ಕಹಿ ಅನುಭವಗಳನ್ನು ಹೇಳುವಾಗ ಜನಗಳ ಹಾಗೂ ಕಾರ್ಯಕ್ರಮ ವ್ಯವಸ್ಥಾಪಕರ ಅನಾದರಣೆಯ ಬಗೆಗೆ ಬೇಸರ ವ್ಯಕ್ತವಾಗಿದೆ.

ತಮ್ಮ ಕಲಾರಾಧನೆಯಲ್ಲಿ ದೇಶದ ದೊಡ್ಡ ದೊಡ್ಡ ಪಟ್ಟಣಗಳನ್ನು ಸುತ್ತಿ ದೊಡ್ಡವರ ಪರಿಚಯ–ಸ್ನೇಹ–ಗೌರವಗಳನ್ನು ಪಡೆದಿದ್ದರೂ ಜೋಳದರಾಶಿಯವರಿಗೆ ತಮ್ಮ ಹಳ್ಳಿಯಲ್ಲಿ ಸಿಗುವ ಶಾಂತಿ ಸಮಾಧಾನಗಳು ಅಲ್ಲಿ ಸಿಗುವುದಿಲ್ಲ. "ನನ್ನ ಹಳ್ಳಿ ನನಗೆಂದೂ ಸಣ್ಣದಲ್ಲ. ಇಲ್ಲಿ ದೊರೆಯುವ ಸಹಜ ಶಾಂತಿಯು ನನಗೆಲ್ಲಿಯೂ ದೊರೆಯಲಿಲ್ಲ. ಆಡಂಬರದ ಜೀವನಕ್ಕೆ ಹೇಸಿದ ನನಗೆ ನನ್ನ ಹಳ್ಳಿಯೇ ಹರುಷದಾಯಕವಾಗಿದೆ" ಎಂದು ಅವರು ಹೇಳುವರು. ಹಳ್ಳಿಗಳ ಇಂದಿನ ದುಸ್ಥಿತಿಗೆ ಇಂದಿನ ಅಪಕ್ವ ರಾಜಕಾರಣಿಗಳೇ ಕಾರಣರೆಂದು ಕಟುವಾಗಿ ಟೀಕಿಸಿರುವರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿನ ಇಂದಿರಾಗಾಂಧಿಯವರ ಆಡಳಿತ ವಿಧಾನದ ಬಗೆಗೆ ತಮ್ಮ ಕೋಪತಾಪವನ್ನು ಅವರು ವ್ಯಕ್ತಪಡಿಸಿರುವರು. ಪರಂಪರೆಯಿಂದ ಬಂದ ಪಿತ್ರಾರ್ಜಿತ ಜಮೀನನ್ನು ಭೂಸುಧಾರಣಾ ಕಾನೂನಿನನ್ವಯ ಕಳೆದುಕೊಂಡಾಗಿನ ಸಂದರ್ಭದಲ್ಲಿ ಜೋಳದರಾಶಿಯವರು ತೋರಿದ ಸಂಯಮ ಮೆಚ್ಚುವಂತಹದು. ಇಂದಿನ ಹಳ್ಳಿಗಳ ವಿಪನ್ನಾವಸ್ಥೆಯನ್ನು ಹೇಳುವಾಗ ತ್ಯಾಗ, ಅರ್ಪಣಾ ಮನೋಭಾವ, ದೃಢವಾದ ಸಂಕಲ್ಪ–ಇವುಗಳಿದ್ದಲ್ಲಿ ಹಳ್ಳಿಗಳ ಪುನರುದ್ಧಾರ, ಅಭಿವೃದ್ಧಿ, ಏಳಿಗೆ ಸಾಧ್ಯವೆಂಬುದನ್ನು ಮಾದರಿ ಹಳ್ಳಿಯ ಮಾಂತ್ರಿಕ (ಚಿಕ್ಕಜೋಗಿ ಹಳ್ಳಿಯ) ವೆಂಕಟಸ್ವಾಮಿಯವರ ಸಾಧನೆಯ ಮೂಲಕ ಜೋಳದರಾಶಿಯವರು ಪರಿಚಯಿಸಿರುವರು.

ಜೋಳದರಾಶಿಯವರದು ಮುಚ್ಚುಮರೆಯಿಲ್ಲದ ನೇರ ಸ್ವಭಾವ. ಕೋಮಲ ಮನಸ್ಸು, ಒಳ್ಳೆಯದನ್ನು ಮೆಚ್ಚುವ ಗುಣ. ತಮ್ಮ ಆತ್ಮೀಯ ಮಿತ್ರರು, ಗುರು–ಹಿರಿಯರನ್ನು ಕಳೆದುಕೊಂಡಾಗ ಈ ಜೀವ ಪಡುವ ಸಂಕಟ, ಒದ್ದಾಟಗಳನ್ನು ಕಂಡಾಗ ಮೃದುಹೃದಯದ ಪರಿಚಯವಾಗುತ್ತದೆ. ತರೀಕೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಾಹಿತ್ಯ ಸಮ್ಮೇಳನದಲ್ಲಿ ಸೋಬಾನೆ ಚಿಕ್ಕಮ್ಮ ದನಿಯೆತ್ತಿ ಹಾಡಿದಾಗ ಅವರು ಅನುಭವಿಸಿದ ಸುಖವನ್ನು ಹೇಳುವಾಗಿನ ಆತ್ಮೀಯತೆಯನ್ನು, ಭಾವಸಂಪನ್ನತೆಯನ್ನು, ಹೃದಯ ವೈಶಾಲ್ಯವನ್ನು ನಾವು ಗಮನಿಸಬಹುದು. "ಸೋಬಾನೆ ಚಿಕ್ಕಮ್ಮ ದನಿಯೆತ್ತಿ ಹಾಡಿದಾಗ ಗಂಧರ್ವಲೋಕವೇ ಭೂಮಿಗಿಳಿದು

ಸಾಮಾನ್ಯ, ಅಸಾಮಾನ್ಯರನ್ನು ಮುಗ್ಧಗೊಳಿಸುತಿತ್ತು. ಆಕೆಯ ಧ್ವನಿಯಲ್ಲಿ ಈಶ್ವರನು ಎಂತಹ ಮೃದುಮಧುರ ನಿನಾದವನ್ನು ಅಡಗಿಸಿದ್ದನೊ ಹೇಳಲಿಕ್ಕೆ ಬಾರದ, ಅನುಭವಕ್ಕೆ ಮಾತ್ರ ವೇದ್ಯವಾಗುವ ಇಂಪನ್ನು ತಂಪನ್ನು ನಾಡಿನ ಖ್ಯಾತ ಸಂಗೀತ ಗಾರರು ತಲೆದೂಗಿ ಮೆಚ್ಚುವ ಗಾನಮಾಧುರ್ಯ ವೈಖರಿ ವಿಲಾಸಗಳು ವಿಕಾಸವಾಗಿ ಎಲ್ಲರ ಹೃದಯವನ್ನು ಮುಟ್ಟಿ ತಟ್ಟಿ ತಣಿಸುತ್ತಿದ್ದವು. ಚಿಕ್ಕಮ್ಮ ವಯಸ್ಸಿನಾಕೆ ಏನೂ ಅಲ್ಲ. ಎಪ್ಪತ್ತರ ಅಂಚಿಗೆ ಸುಳಿಯುತ್ತಿದ್ದ ಮುದುಕಿ. ಹಳ್ಳಿಯ ಸಹಜ–ಸರಳತೆಯ ವಾತಾವರಣದಲ್ಲಿ ಸಿರಿತನದ ಕಲ್ಪನೆಯಿಲ್ಲದೆ ಶಿವನು ಕೊಟ್ಟ ಬಡತನವೇ ಪ್ರಸಾದವಾಗಿ ಉಂಡು ಬಾಳಿದ ಕಲಾವಿದೆ. ಕಲೆಯೆಂದರೇನೋ ಅದರ ವೈವಿಧ್ಯತೆ ಯೇನೋ ಅರಿಯದ ಮುಗ್ಧೆ. ಹುಟ್ಟಿನೊಂದಿಗೆ ತನ್ನ ಕಾಯಕದ ಶೀಲತೆಯೊಂದಿಗೆ ಬೆಳೆದು ಬಂದು ಅಪಾರ ಜಾನಪದ ಕಲಾಸಂಪತ್ತು ಆಕೆಯ ಇನಿದಾದ ದನಿಯನ್ನು ಆಶ್ರಯಿಸಿತ್ತು...." (ಪು. 220). ಈ ಜಾನಪದ ಕೋಗಿಲೆಯ ಹಾಡುಗಾರಿಕೆಯನ್ನು ಮೆಚ್ಚುವ ಮನಸ್ಸೇ ಹಿಂದೂಸ್ಥಾನಿ ಸಂಗೀತದಲ್ಲಿ ಹೆಸರಾಂತ ಕಲಾವಿದ ಗಿರೀಶ್ ವಜೀರ್ ವಾಲಾರ ಹಾಡು ಕೇಳಿದಾಗಲೂ ದಿವ್ಯವಾದ ಆನಂದದ ಸವಿಯನ್ನು ಅನುಭವಿಸುತ್ತದೆ, ಧ್ಯಾನಿಸುತ್ತದೆ (ಪು. 417–18).

ದೊಡ್ಡನಗೌಡರ ಆತ್ಮಕಥೆ ಹಲವೆಡೆ ಚಿಂತನಮುಖಿಯಾಗಿದೆ. 'ನನ್ನಲ್ಲಿಯೇ ನಾನಿಳಿದು ನನ್ನನ್ನು ನಾನೇ ಪರೀಕ್ಷಿಸಿ ನೋಡಿಕೊಳ್ಳುವುದು' ಎಂದು ಅವರೇ ಒಂದೆಡೆ ಹೇಳಿರುವ ಮಾತು ಈ ಆತ್ಮಕಥೆ ಚಿಂತನಮುಖಿಯೆಂಬುದನ್ನು ಸ್ಪಷ್ಟಪಡಿಸು ತ್ತದೆ. ಉದಾಹರಣೆಗೆ, ಸಭೆಗಳಲ್ಲಿ ಪ್ರಾರ್ಥನೆ ಮಾಡಲು ನಿಂತಾಗ ತುಂಬಿ ಬರುವ ಒಂದು ದಿವ್ಯಶಕ್ತಿ ಪ್ರಾರ್ಥನೆ ಮುಗಿದ ಮೇಲೆ ಎಲ್ಲಿ ಹೋಗುತ್ತದೆ ಎಂದು ಅವರು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವರು; "ಎಲ್ಲಿಯ ಶಕ್ತಿ ಎಲ್ಲಿಯ ಸ್ಫೂರ್ತಿ! ನಾನು ಪಾಮರ. ಈ ಪ್ರಾರ್ಥನೆಯಿಂದ ನನ್ನಲ್ಲಿಲ್ಲದ ಒಂದು ದಿವ್ಯಶಕ್ತಿಯು ಒಮ್ಮೆಗೇನೇ ವಿದ್ಯುದ್ವೇಗದಂತೆ ಸಂಚರಿಸಿದಂತಾಗುತ್ತದೆ. ಪ್ರಾರ್ಥನೆಯ ನಂತರ ಇದೆಲ್ಲಿಗೆ ಹೋಗುತ್ತದೆ? ಅದು ನನ್ನಲ್ಲಿ ಸದಾ ಏಕಿರುವುದಿಲ್ಲ? ಏಕಾಂತದಲ್ಲಿ ಪ್ರಾರ್ಥಿಸಿದಾಗ ಆ ಶಕ್ತಿ ಏಕೆ ಬರುವುದಿಲ್ಲ? ಜನಶಕ್ತಿಯೇ ಶಿವಶಕ್ತಿಯಾಗಿ ಪರಿಣಮಿಸು ವುದೆ?" (ಪು. 109)

ಆತ್ಮಕಥನದಲ್ಲಿ ಲೇಖಕ ತನಗೆ ಪ್ರಿಯವಾದದ್ದನ್ನು ಹೇಳುವ, ಪ್ರಿಯವಾಗದೆ ಇರುವುದನ್ನು ಹೇಳದಿರುವ ಪ್ರವೃತ್ತಿ ಸಹಜ, ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಘಟನೆಗಳನ್ನೂ ನಿರೂಪಿಸುವಾಗ ಲೇಖಕ ತೀರಾ ಎಚ್ಚರವಹಿಸುವನು. ತನ್ನ ವ್ಯಕ್ತಿತ್ವದ ಬೇರೊಂದು ಮುಖವನ್ನು ಪರಿಚಯಿಸಲು ಹೋಗುವುದೇ ಇಲ್ಲ. ಆದರೆ ಈ ಆತ್ಮ ಕಥೆಯಲ್ಲಿ ಇಂತಹದ್ದೇನೂ ಇಲ್ಲ. ಮುಚ್ಚುಮರೆಯಿಲ್ಲದೆ ತಮ್ಮ ಗುಣದೋಷಗಳನ್ನು ಸಮಾನವಾಗಿ ನಿರೂಪಿಸುವ ದೊಡ್ಡನಗೌಡರ ಪ್ರಾಮಾಣಿಕತೆ ಮೆಚ್ಚುವಂತಿದೆ.

ಯೌವನದ ದಿನಗಳಲ್ಲಿ ತಮ್ಮ ಶೀಲಸಂಪನ್ನತೆಯನ್ನು ಉಳಿಸಿಕೊಳ್ಳದೆ ಹೋದುದನ್ನು ದೊಡ್ಡನಗೌಡರು ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳುವರು. "ನಾಟಕದೊಂದಿಗೆ ಹೆಣ್ಣು, ಹೆಣ್ಣಿನೊಂದಿಗೆ ನಾಟಕ–ಇವೆರಡರೊಂದಿಗೆ ನನ್ನ ಯೌವನದ ಕಲಾಜೀವನ ಒಂದಕ್ಕೊಂದುಶೀಲಭ್ರಷ್ಟತನಕ್ಕೆ ಪೋಷಕವಾದವುಗಳೇ ತಾನೇ ! ಜಾರುಬಂಡೆಯಲ್ಲಿ ನಿಧಾನದ ಹೆಜ್ಜೆಗಳಿಗೆಡೆಯುಂಟೆ !" (ಪು. 478–479) ತಮ್ಮ 'ಗರುಡ ಗರ್ವಭಂಗ' ನಾಟಕಕ್ಕೆ ನಾಯಕಿಯಾಗಿ ಆದವಾನಿ ಲಕ್ಷ್ಮಿಯನ್ನು ಕರೆದುತಂದದ್ದು ಹಾಗೂ ಸಂಸಾರ ಸುಖದಲ್ಲಿನ ಕೊರತೆಯನ್ನು ನಾಟಕದ ನಾಯಕಿಯಲ್ಲಿ ತುಂಬಿಕೊಂಡದ್ದು ನಿಸ್ಸಂಕೋಚ ವಾಗಿ ಅವರು ನಿರೂಪಿಸಿರುವರು; "ನಾಟಕದ ಶೃಂಗಾರಮಯ ಸನ್ನಿವೇಶವು ನನ್ನನ್ನು ಕೆಣಕಿತು–ಆ ಹೆಣ್ಣಿಗೂ ಅಂತೆಯಾಯಿತು–ಪರಸ್ಪರ ಆಕರ್ಷಣೆಯಲ್ಲಿ ಆ ವಾಸ್ತವಿಕ ನಾಟಕೀಯ ದೃಶ್ಯ ಶೃಂಗಾರಾಭಿನಯವು ಕೆಲದಿನ ಅಂಜಿಕೆ–ಅನುಮಾನಗಳು ವಾಸ್ತವಿ ಕತೆಯಲ್ಲಿ ಪರಿಣಾಮಗೊಂಡಿತು. ನನ್ನ ಆಕೆಯ ಸಖ್ಯವೇನೋ ನಡೆದಿತ್ತು. ಒಂದು ಕಡೆ ನಾಟಕ ಕಲಾಭಿರುಚಿಯು ಈ ಸಖ್ಯದಿಂದ ಉತ್ತೇಜಿತವಾಗಿ ನಡೆದಿತ್ತು. ಆಕೆಯ ಅಹಂಕಾರ ಬೇಸರಕ್ಕಿಟ್ಟುಕೊಂಡಿತ್ತು. ಈಕೆಯ ಸಹವಾಸ ಪ್ರಾರಂಭಿಕವಾಗಿ ಪಡೆದ ಸೌಖ್ಯದಲ್ಲಿ ಅನಾರೋಗ್ಯವನ್ನು ಮೂಡಿಸಿತ್ತು. ಅಂದಿನ ಅಪಕ್ವ ಯೌವನದ ಬುದ್ಧಿಮಾಂದ್ಯದ ಪರಿಣಾಮವನ್ನು ನಾನಿಂದು ಸರಿಯಾಗಿ ಚಿತ್ರಿಸಲಾರೆ. ಕಾಲ ಕಳೆಯಿತು. ಮಧ್ಯದಲ್ಲಿ ನಾಟಕ ನಿಂತಿತು. ಆಕೆ ತನ್ನೂರಿಗೆ ಹೋದಳು-ಯಾವಾಗ ಲಾದರೂ ಬಂದು ಹೋಗುತ್ತಿದ್ದಳು. (ಪು. 474–475).

'ಆತ್ಮಕಥೆ' ಬರೆಯುವಾಗಿನ ದೊಡ್ಡನಗೌಡರ ಪ್ರಾಮಾಣಿಕ ನಿರೂಪಣೆಗೆ ಮೇಲಿನ ವಿವರಣೆ ಒಂದು ನಿದರ್ಶನವಷ್ಟೇ.

ವಯಸ್ಸಾದಂತೆ ಜೀವನಾನುಭವಗಳು ಪಕ್ವಗೊಳ್ಳುತ್ತವೆ; ವಿವೇಕವೂ ಸಾಣೆ ಹಿಡಿಯಲ್ಪಟ್ಟು ಸರಿದಾರಿಯಲ್ಲಿ ನಡೆಯುತ್ತದೆ. ಸಾಹಿತ್ಯಾಧ್ಯಯನವು ರಾಗಭಾವ ಗಳನ್ನು ಸಂಸ್ಕರಿಸುತ್ತದೆ. ಈಗ ಶೃಂಗಾರವು ಕಾಮವನ್ನು ಉದ್ದೀಪಿಸಲು ಸಮರ್ಥ ವಾಗುವುದಿಲ್ಲ. ಕಾಮವನ್ನು ಮೆಟ್ಟಿನಿಲ್ಲುವಷ್ಟು ಶಕ್ತವಾಗಿರುತ್ತದೆ ಮನಸ್ಸು– ಇಂದ್ರಿಯ. ಇಂತಹ ಘಟ್ಟದಲ್ಲಿ ಒಮ್ಮೆ ಓರ್ವ ನಾಯಕಸಾನಿ ಸಂಚುಹೂಡಿ ತನ್ನ ಶೃಂಗಾರಚೇಷ್ಟೆಗಳಿಂದ ದೊಡ್ಡನಗೌಡರನ್ನು ವಶಮಾಡಿಕೊಳ್ಳಲು ಯತ್ನಿಸುವಳು. ಅವಳ ದೈಹಿಕ ಆಕರ್ಷಣೆಗೆ ಒಳಗಾಗದೆ ಅವಳ ಬಯಕೆಯನ್ನು ನಿರಾಕರಿಸಿ ಬರುವರು. ದೊಡ್ಡನಗೌಡರ ಬದುಕಿನ ಇನ್ನೊಂದು ಮುಖದ ಚಿತ್ರ ನಮಗಿಲ್ಲಿ ಸಿಗುತ್ತದೆ. ಈ ಮನೋವ್ಯಾಪಾರಕ್ಕೆ ದಾಸರಾಗದ ಅವರ ಚಿತ್ತಸ್ಥಿರತೆಯ ಬಗೆಗೆ ಗೌರವ ಮೂಡು ತ್ತದೆ.

ದೊಡ್ಡನಗೌಡರದು ತುಂಬುಬಾಳು. ಶರಣರ ಬದುಕನ್ನು ಅವರ ನಡೆ– ನುಡಿಯಲ್ಲಿ ಕಾಣಬೇಕಂತೆ. ದೊಡ್ಡನಗೌಡರು ತಮ್ಮ ನಿಡುಬಾಳಿನಲ್ಲಿ ಅನೇಕ

ಏರಿಳಿತಗಳನ್ನು ಕಂಡಿರುವರು, ನಲಿವು ನೋವುಗಳನ್ನು ಉಂಡಿರುವರು. ಸಂತೃಪ್ತಿಯ ಬದುಕನ್ನು ನಡೆಸಿರುವರು. ನಾಟಕ–ಕಾವ್ಯಗಳು ಅವರ ಬದುಕನ್ನು ಅರಳಿಸಿದೆ. ಮಹಾನುಭಾವರ, ಹಿರಿಯ ಚೈತನ್ಯಗಳಿಂದ ಅವರ ಬದುಕು-ಚೈತನ್ಯ ದಿವ್ಯವಾಗಿದೆ. ತಮ್ಮ ಬದುಕನ್ನು ಮೆಲುಕು ಹಾಕಹೊರಟ 'ನಂದೇ ನಾನೋದಿದೆ' ಎಂಬ ಆತ್ಮಕಥೆ ಅವರ ಬದುಕಿನ ಮೂರು ಘಟ್ಟಗಳು ಸವೆದದಾರಿಯನ್ನು ಬಿಚ್ಚುಮನಸ್ಸಿನಿಂದ ಪರಿಚಯಿಸಿರುವರು. ದೊಡ್ಡನಗೌಡರ ಬದುಕಿನಲ್ಲಿ ಬಂದ, ಅವರ ಬಾಳನ್ನು ಬೆಳಗಿದ, ಮಹನೀಯರ ಚಿತ್ರ ಈ ಕೃತಿಯಲ್ಲಿ ಶಾಶ್ವತವಾಗಿ ಉಳಿದಿದೆ. ಎಲ್ಲೂ ಬೇಸರ ತರದೆ ಓದಿಸಿಕೊಂಡು ಹೋಗುವ ಈ ಆತ್ಮಕಥನ ಒಳ್ಳೆಯ ಕಾಣಿಕೆಯೆಂದು ಹೇಳಬಹುದು.

ಹೊತ್ತಭಾರವದೇನೆಂಬುದರಿಯದ
ಕತ್ತೆಯಂತಾಯಿತ್ತು ಎನ್ನ ಸಂಸಾರ.

★

ಮಾಡಲಾಗದ ಮಾತು, ನೀಡಲಾಗದ ಸಂಪತ್ತು,
ಕೂಡಿಬಾಳದ ಬದುಕು, ಎಂತಿದ್ದರೇನು ? ಎನಿತಿದ್ದರೇನು ?

★

ಎನ್ನವರೆಂದೆಂಬ ಮಮಕಾರ ಹಿಂಗದು !
ಎನ್ನದೆನ್ನದೆಂಬ ಧನದಾಶೆ ತೀರದು !

ಜೋಳದರಾಶಿಯವರ ವಚನಸಾಹಿತ್ಯ

ಶಾಂತಾದೇವಿ, ಮಾಳವಾಡ

೩೫ ವರುಷಗಳ ಹಿಂದೆ ಅಣ್ಣ ಜೋಳದರಾಶಿ ದೊಡ್ಡನಗೌಡರು 'ಶಿವ ಮಹಾದೇವ' ಪ್ರಾರ್ಥನಾಗೀತೆಯನ್ನು ಧಾರವಾಡ ಮುರಘಾಮಠದಲ್ಲಿ ಮೃತ್ಯುಂಜಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಹಾಡಿದ್ದರು. ಅವರ ಕಂಚಿನ ಕಂಠದಿಂದ ಗೀತ ಭಕ್ತಿರಸ ಪ್ರವಾಹದಂತೆ ಹರಿದು ಬಂದಿತು. ಕುಳಿತು ಕೇಳುವವರನ್ನು ಭಕ್ತಿರಸ ಸಾಗರದಲ್ಲಿ ತೇಲಿಸಿತು, ನಾನು ನನ್ನ ಯಜಮಾನರು ಆ ಪ್ರಾರ್ಥನೆಯನ್ನು ಬಹಳ ಮೆಚ್ಚಿಕೊಂಡೆವು. ಆಗ ಅವರ ಪರಿಚಯವಾಯಿತು. ನಿಜಗುಣ ಶಿವ ಯೋಗಿಗಳ ೧೦೮ ಹರನಾಮಾವಳಿಯನ್ನು ನಾನು ನಿತ್ಯ ಪಠಿಸುತ್ತಿದ್ದೆ, ಆದರೆ ಆ ಶಬ್ದಸಂಪತ್ತಿನಲ್ಲಿ ಮನವನ್ನರಳಿಸುವ ದೈವೀಶಕ್ತಿ ಅಡಗಿದೆ ಎಂಬ ಅರಿವು ಅಣ್ಣನವರಿಂದ ಸಂಗೀತರೂಪದಲ್ಲಿ ಕೇಳಿದಾಗ ಗೊತ್ತಾಯಿತು.

ಮುಂದೆ ಹಲವಾರು ಸಲ ಶ್ರೀ ವೈ. ನಾಗೇಶಶಾಸ್ತ್ರಿಗಳವರ ಪ್ರವಚನ. ಟಿ. ಕುಮಾರಸ್ವಾಮಿಯವರ ಹಾರ್ಮೋನಿಯಂ ವಾದನದೊಂದಿಗೆ ಶ್ರೀ ಜೋಳದ ರಾಶಿಯವರ 'ಶೂನ್ಯಸಂಪಾದನೆ' ಪ್ರವಚನ ಕೇಳಿ ಆನಂದ ಪಟ್ಟಿದ್ದೇನೆ. ಅಣ್ಣನವರು,

ಗೌಡತಿಯೊಂದಿಗೆ ಮನೆಗೆ ಬಂದಿದ್ದರು. ಮಾಳವಾಡರಿಗೂ, ಜೋಳದರಾಶಿಯವರಿಗೂ ಆತ್ಮೀಯತೆ ಬೆಳೆದು ಬಂದಿತ್ತು. ಅದಕ್ಕೆ ಕಾರಣ ಅವರಿಬ್ಬರಲ್ಲಿರುವ ಸ್ಪಷ್ಟವಾದಿತ್ವ, ಸತ್ಯ ನಿಷ್ಠುರತೆ ಎಂದು ಹೇಳಬಹುದು. ನೂರಾರು ಸನ್ಮಾನಗಳನ್ನು, ಪ್ರಶಸ್ತಿಗಳನ್ನು ಪಡೆದ ಶ್ರೀ ದೊಡ್ಡನಗೌಡರಿಗೆ ೧೯೮೭ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಿಂದ ಶ್ರೀ ದೊಡ್ಡನಗೌಡರ 'ಬಯಲು ಗಳಿಕೆಯ ಬೆಳಗು' ಗ್ರಂಥಕ್ಕೆ "ಮಾಳವಾಡ ಸಾಹಿತ್ಯ ಪ್ರಶಸ್ತಿ" ದೊರೆಯಿತು. ನಮ್ಮಿಬ್ಬರಿಗೆ ಹರುಷವಾಯಿತು. ಅಣ್ಣನವರ "ಗೌಡತಿ ಬರಲಿಲ್ಲ" ದುಃಖಪೂರ್ಣ ಕಾವ್ಯವನ್ನು ಓದಿ ನಾನು ಅವರಿಗೆ ಪತ್ರ ಬರೆದಿದ್ದೆ. ಆಗಿನಿಂದ ದೊಡ್ಡನಗೌಡರನ್ನು ದೊಡ್ಡಣ್ಣ ಎಂದೇ ಪತ್ರದಲ್ಲಿ ಸಂಬೋಧಿಸುತ್ತಿದ್ದೇನೆ. ಎಲ್ಲರೊಂದಿಗೆ ಪ್ರೀತಿ, ಅಂತಃಕರುಣೆಯಿಂದ ನಡೆದು ಕೊಳ್ಳುವ ವಿಶಾಲ ಹೃದಯ, ದೊಡ್ಡಗುಣ ದೊಡ್ಡಣ್ಣನವರದು.

ಜೋಳದರಾಶಿ ಹಳ್ಳಿಯಾದರೂ ಶ್ರೀ ದೊಡ್ಡನಗೌಡರಿಂದ ಆ ಊರು ಕನ್ನಡ ನಾಡಿನ ಎಲ್ಲ ಭಾಗದ ಜನರಿಗೆ ಪರಿಚಿತವಾಗಿದೆ. ನಟ–ನಾಟಕಕಾರ. ಕವಿ-ಗಮಕಿ, 'ಶೂನ್ಯಸಂಪಾದನೆಯ' ಪ್ರವಚನ ಪ್ರವೀಣ. ಹೀಗೆ ಅವರ ವ್ಯಕ್ತಿತ್ವ ವಿವಿಧ ಮುಖವಾಗಿ ಬೆಳೆದಿದೆ. ನಾಟ್ಯಜೀವನದಿಂದ, ಶರಣ ಜೀವನದತ್ತ ಪರಿವರ್ತನ ಹೊಂದಿದುದು, ಪೂಜ್ಯ ಮೃತ್ಯುಂಜಯಪ್ಪನವರ ಪ್ರಭಾವದಿಂದ, ಎಂಬುದನ್ನು "ನಂದೇ ನಾನೋದಿದೆ" ಅವರ ಆತ್ಮಚರಿತ್ರೆಯಿಂದ ಅರಿಯಬಹುದಾಗಿದೆ. 'ಶೂನ್ಯ ಸಂಪಾದನೆ'ಯನ್ನು ಆಳವಾಗಿ ಅಭ್ಯಾಸಮಾಡಿ, ಅನುಭವ ಪಡೆದರು. ನಂತರ ಸತತ ೩೦–೪೦ ವರುಷ 'ಶೂನ್ಯಸಂಪಾದನೆ'ಯನ್ನು ಗಮಕದ ಮೂಲಕ ಸೊಗಸಾಗಿ ಪ್ರವಚನ ಮಾಡುತ್ತ, ಊಟ, ನಿದ್ರೆಗಳ ಪರಿವೆಯಿಲ್ಲದೆ ಊರೂರು ತಿರುಗಾಡಿದ್ದಾರೆ. ಕಬ್ಬಿಣದ ಕಡಲೆಯಂತಿದ್ದ 'ಶೂನ್ಯಸಂಪಾದನೆ'ಯ ಕಠಿಣ ವಚನಗಳನ್ನು ಅದರ ಭಾವಾರ್ಥ, ಗೂಢಾರ್ಥಗಳನ್ನು ಸುಲಭಗೊಳಿಸಿ ಹುರಿದ ಕಡಲೆಯಂತೆ ಹಗುರಗೊಳಿಸಿ ಕನ್ನಡ ಜನತೆಗೆ ತಿನ್ನಲು ಕೊಟ್ಟಿದ್ದಾರೆ. 'ಶೂನ್ಯಸಂಪಾದನೆ'ಯನ್ನು ಜನರ ಹೃದಯಕ್ಕೆ ತಟ್ಟುವಂತೆ, ಮನಕ್ಕೆ ಮುಟ್ಟುವಂತೆ, ಚಿತ್ತದಲ್ಲಿ ನೆಲೆಗೊಳ್ಳುವಂತೆ ಮಾಡಿದ ಶ್ರೇಯಸ್ಸು ದೊಡ್ಡಣ್ಣನವರದು. 'ಶೂನ್ಯ ಸಂಪಾದನೆ' ಎಂದರೆ ದೊಡ್ಡನಗೌಡರು ದೊಡ್ಡನಗೌಡರು ಎಂದರೆ 'ಶೂನ್ಯಸಂಪಾದನೆ' ಎಂದು ಜನ ಅನ್ನುವಷ್ಟು ಜನಪ್ರಿಯ ರಾದರು. ಆ ವಚನ ಸಾಹಿತ್ಯ ಓದಿ, ಓದಿ ಪ್ರವಚನಮಾಡಿ, ಸ್ವಾನುಭವದಿಂದ ಅವರೂ ವಚನಗಳನ್ನು ರಚಿಸಿದ್ದಾರೆ. ಆ ವಚನಗಳು ಶಬ್ದಗಳ ಡೊಂಬರಾಟವಲ್ಲ, ಕೀರ್ತಿ, ವಾರ್ತೆಗೆ ಬರೆದವುಗಳಲ್ಲ, ಅಂತರಂಗದ ಅನುಭವವೇ ವಚನರೂಪ ತಾಳಿವೆ. ಜೋಳದರಾಶಿಯವರ ವಚನಗಳು ಮುತ್ತಿನರಾಶಿಯಾಗಿವೆ. ಆ ಊರ ಆರಾಧ್ಯದೇವತೆ ರಾಮೇಶನ ಅಂಕಿತದಲ್ಲಿವೆ.

ದೊಡ್ಡಣ್ಣ ೩೫ ವರುಷಗಳಿಂದ ದಿನಚರಿ ಬರೆಯುತ್ತಿದ್ದರಂತೆ ಹಾಗೆ ದಿನಚರಿ ಬರೆಯುತ್ತಿರುವಾಗ, ಕೊನೆ ಕೊನೆಗೆ ಅಂತರಂಗದ ಭಾವನೆಗಳೆಲ್ಲ ವಚನರೂಪ ತಾಳಿವೆ "ಅಂದಿನ ಭಾವಸ್ಫೂರ್ತಿಯು ಎಳೆಯುನ್ನು ಎಳೆದಂತೆಲ್ಲ ಈ ವಚನಗಳ ಮಣಿಗಳು ರೂಪುಗೊಂಡು ಮಾಲೆಗಟ್ಟಿ" ನಿಂತವು "ನೋವಿನ ಬೇವು ದೈವೀಕೃಪೆಯಿಂದ ಮಾವಾಗಿ ಪರಿಣಮಿಸಿತು" ಲೌಕಿಕ ದುಃಖದುಗುಡಗಳನ್ನು ದಿನಚರಿಯಲ್ಲಿ ಬರೆದು ಮನವನ್ನು ಹಗುರುಗೊಳಿಸಿಕೊಳ್ಳ ಬಯಸಿದ ಅಣ್ಣನವರ ಲೋಕಾನುಭವ, ಜೀವನದ ಅನುಭವ ಒಂದುಗೂಡಿ ವಚನಗಳಾಗಿವೆ. 'ಬಹಿರಂಗದ ಆಚಾರ, ಅಂತರಂಗದ ವಿಚಾರ' ಒಂದುಗೂಡಿ ದೊಡ್ಡಣ್ಣನವರ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿವೆ 'ರಾಮೇಶನ ವಚನಗಳು,' ಪಿಂಡಜ್ಞಾನ ಸ್ಥಲದ ವಚನ ಹೀಗಿದೆ :—

'ತಾಳೆಯ ಮರದಂತೆ ತೋಳನ ಗುಣದಂತೆ
ಬೆಳೆದರೇನೋ ಬಾಳಿದರೇನೋ
ಬಾಳೆಯಂತೆ ಬಾಳು ಬೆಳಗಬಲ್ಲುದೇ ?
ಅರಿಕೆಯ ಲೋಕಕ್ಕೆ ನರನಾಗಿಬಂದು
ರಾಮೇಶನೊಲುಮೆಯ ಪಡೆಯದಿದ್ದೊಡೆ
ನರಿನಾಯಿಗಿಂತ ಕರಕಷ್ಟವಯ್ಯಾ'

ಅರಿವನ್ನು ಪಡೆಯಲು ನರನಾಗಿ ಹುಟ್ಟಿದವನು. ದೈವೀ ಜ್ಞಾನವನ್ನು ಪಡೆಯ ದಿದ್ದರೇನು ಪ್ರಯೋಜನ ! ಎಂಬುದನ್ನು ಮಾರ್ಮಿಕವಾಗಿ ನಿರೂಪಿಸಿದ್ದಾರೆ. ಬಾಳೆಯ ಗಿಡದ ಎಲೆ ಕಾಂಡ, ಕಾಯಿ, ಹಣ್ಣುಗಳು ಮನುಷ್ಯನಿಗೆ ಉಪಯುಕ್ತ ವಾಗಿವೆ. ದೇವಪೂಜೆಗೆ ಸಲ್ಲುತ್ತವೆ. ಅದೇ ತಾಳೆಯ ಮರ, ಮನುಷ್ಯನನ್ನೇ ಹಾಳು ಮಾಡುತ್ತದೆ. ಮಾನವನು ತನ್ನ ಸುತ್ತಲಿನ ಸಮಾಜಕ್ಕೆ, ಶಾಂತಿ, ಸಂತೃಪ್ತಿಯನ್ನು ಕೊಡಬೇಕಾದರೆ, ಬಾಳೆಯಂತೆ ಪ್ರಯೋಜನಕಾರಿಯಾಗಬೇಕಾದರೆ ಅವನ ಅಂತರಂಗ ಪರಿಶುದ್ಧವಾಗಿರಬೇಕು. ಆಧ್ಯಾತ್ಮ ಜ್ಞಾನ ಪಡೆಯಬೇಕು. ಇಲ್ಲದಿದ್ದರೆ ಅವನ ಬಾಳು ನರಿನಾಯಿಗಿಂತ ಹೀನವಾದುದು, ಎಂದು ಭಾವಪೂರ್ಣವಾಗಿ ಬರೆದಿದ್ದಾರೆ.

ತಾಮಸ ನಿರಸನ ಸ್ಥಲ :—

ಓದುವುದು ಓದುವುದು ಓದಿನರ್ಥವನರಿಯರು,
ಬದುಕುವರು ಬದುಕಿನರ್ಥವನರಿಯರು,
ನಯವಿಲ್ಲ ಭಯವಿಲ್ಲ ದಯೆಯಿಲ್ಲ ಧರ್ಮವಿಲ್ಲ,
ನೀತಿ ನಿಯಮವಿಲ್ಲ ನಿಮ್ಮರಿವಿಲ್ಲದ ಹೀನ ಶ್ವಾನಂಗಳು
ಏಕೆ ಹುಟ್ಟುವರೋ ಮಾತೃಯೌವನದ ಕೇಡಿಗರು ?

ಅನ್ನ ಬಟ್ಟೆಗಾಗಿ ಬಡಿದಾಡಿ ಸಾಯುವ ವ್ಯರ್ಥ ಜೀವಿಗಳಯ್ಯಾ ರಾಮೇಶಾ" ಇಂದಿನ ಜನಜೀವನ ಮೇಲಿನ ವಚನದಂತೆ ಸಾಗಿದೆ, ಓದುವುದು ! ಕೇವಲ ಡಿಗ್ರಿ ಪಡೆಯಲು ಓದುವುದು, ವಿದ್ಯಾ ಸಂಸ್ಥೆಗೆ ಪ್ರವೇಶ ಪಡೆಯಲು ಡೊನೇಷನ್ ! ಪದವಿ ಪಡೆಯಲು ಲಂಚ, ನೌಕರಿಗೆ ಸಾವಿರ-ಗಟ್ಟಲೆ ಹಣ ಸುರಿಯುವರು, ಬುದ್ಧಿಗೆ ಬೆಲೆಯಿಲ್ಲ, ಜ್ಞಾನಕ್ಕೆ ಸ್ಥಾನವಿಲ್ಲ, ಕಿರಿಯರಿಗೆ, ಹಿರಿಯರಲ್ಲಿ ನಯಭಯವಿಲ್ಲ. ದೀನ ದುರ್ಬಲರ ಬಗೆಗೆ ದಯೆ ಧರ್ಮವೆಂಬುದಿಲ್ಲ. ಹಣ, ಸ್ಥಾನಮಾನಕ್ಕಾಗಿ ನೀತಿ ನಿಯಮಗಳನ್ನೇ ಮರೆಯುತ್ತಿದ್ದಾರೆ, ಇಂದು ದೇಶದ ಸ್ಥಿತಿಯನ್ನು ಕಂಡರೆ, ದಿನಾಲೂ ನೂರಾರು ಜನ ನಿರಪರಾಧಿಗಳ ಕೊಲೆಯಾಗುವದನ್ನು ಕೇಳಿದರೆ ಮಾನವ ನಾಯಿಗಿಂತ ಕಡೆ, ಎಂದು ತೋರುವದು ಸ್ವಾಭಾವಿಕ.

ಸಂಸಾರ ಹೇಯ ಸ್ಥಲ :

"ಏಕೆ ಹುಟ್ಟುವರೋ ? ಏಕೆ ಸಾಯುವರೋ ? ಹುಟ್ಟು ಸಾವಿನ ಗುಟ್ಟು ಬಲ್ಲವರಾರು ಹೇಳಯ್ಯಾ" ಹುಟ್ಟು, ಸಾವನರಿಯದವರು ಬಾಳಿನರ್ಥವನು ಹೇಗೆ ಅರಿಯಬಲ್ಲರು ? "ನೀಗದ ಬೇನೆ, ಸಾಗದ ಸಂಸಾರ, ಬಿಡಲಾಗದ ಬಂಧನಕ್ಕೆ ಬೇಸತ್ತು ದೇವರನ್ನು ಕರೆದರೆ ಆತಬಾರದೇ ಇದ್ದಾಗ ಸಾವೇ ಲೇಸು" ಎಂದೆನಿಸುವುದು ಸ್ವಾಭಾವಿಕ. 'ಮಾಡಲಾಗದ ಮಾತು, ನೀಡಲಾಗದ ಸಂಪತ್ತು, ಕೂಡಿ ಬಾಳದ ಬದುಕು ಎಂತಿದ್ದರೇನು ? ಎಂಬುದನ್ನು ಇಲ್ಲಿಯ ವಚನಗಳಲ್ಲಿ ಕಾಣಬಹುದಾಗಿದೆ.

ಗುರುಕಾರುಣ್ಯ ಸ್ಥಲ :

ದೊಡ್ಡಣ್ಣನವರು ತಮ್ಮ ಪೂಜ್ಯ ಗುರುಗಳನ್ನು ಹೃದಯ ತುಂಬಿ ನೆನೆದಿದ್ದಾರೆ. "ನಾನೆಂತಿದ್ದರೂ, ಏನು ಮಾಡಿದರೂ ನಮ್ಮಪ್ಪ ಮೃತ್ಯುಂಜಯನು ಎತ್ತಿ ಸಲುಹಿದ ಕಾರಣ ಇಂದು ನಾ ನಿಂತಿದ್ದೆ" ಜನ್ಮ ಜನ್ಮಾಂತರದ ಕರ್ಮಕಥೆ ಬರೆಯಲು ಭೂಮಿ-ಆಕಾಶಗಳನ್ನು ಒಂದುಗೂಡಿಸಿ ಕಾಗದ ಮಾಡಿ, ಸಪ್ತ ಸಾಗರಗಳನ್ನು ಮಸಿ ಕುಡಿಕೆ ಮಾಡಿ, ಕಾಲವೆಂಬ ಲೇಖನಿಯಿಂದ ಬರೆದರೆ ಅಣ್ಣನವರಿಗೆ ಸಾಲುವದಿಲ್ಲವಂತೆ !

"ಪುರಾತನ ಪುಣ್ಯಪುರುಷರ ಪಾತ್ರಗಳನಭಿನಯಿಸಿ ನಟನಾದೆ,
ಅವರ ಚಾರಿತ್ರಗಳ ನಾಟಕವಾಗಿ ರಚಿಸಿ ಕವಿಯಾದೆ,
ಅವರ ಕಾವ್ಯಪುರಾಣಗಳನೋದಿ ಗಮಕಿಯಾದೆ,
ಅವರ ಕೃತಿಗಳ ಕಟ್ಟಿ ಹಾಡುವ ಗಾಯಕನಾದೆ,
ಅವರ ಚರಿತಾರ್ಥಂಗಳ ವಿವರಿಸಿ ಪ್ರವಚನ ಕಾರನಾದೆ"

ಇದೆಲ್ಲ ಗುರುಕೃಪೆ, ಹರಕರಣೆ. ಎನ್ನುವ ಸೌಜನ್ಯ, ಗುರುಭಕ್ತಿ ದೊಡ್ಡಣ್ಣನವರಲ್ಲಿ ಅಪಾರವಾಗಿದೆ, ಕಲಿಯದೆ ಕವಿಯಾಗುವ ಪ್ರತಿಭೆ ಅವರ ಅಂತರಂಗದಲ್ಲಿತ್ತು. ಗುರು ಕೃಪೆಯಿಂದ ಹೊರಹೊಮ್ಮಿ ಕನ್ನಡ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿತು.

ಭಕ್ತಸ್ಥಲ :

ಲಿಂಗ, ಪ್ರಾಣ, ಆತ್ಮವೆಂಬ ತ್ರಿಕೂಟಾದ್ರಿಯ
ಮೊನೆಯ ಕೊನೆಯ ಮೇಲೆ ನಿಂದಿತ್ತು ಸದಾಚಾರ ಸದ್ಭಕ್ತಿ.
ಆ ಭಕ್ತಿಯು ಮಹಾಪ್ರಕಾಶದಲ್ಲಿ
ನಿರಾಕಾರವು ಆದುರಿನಿಲಲಾರದೆ ಸಾಕಾರಗೊಂಡಿತ್ತು."

ಜ್ಯೋತಿರ್ಲಿಂಗವಾಗಿತ್ತು. ಶಿವಾನುಭವ ಸೇವೆಯೆ ಜೀವನದ ಉಸಿರಾಯಿತು. ತಮ್ಮನ್ನು ದೊಡ್ಡಣ್ಣ ಸಂಪೂರ್ಣವಾಗಿ ಗುರು ಲಿಂಗ ಜಂಗಮಕ್ಕೆ ಅರ್ಪಿಸಿಕೊಂಡರು, 'ಬ' ಎಂದೊಡಾಯಿತ್ತು ನಾದ 'ಸ' ಎಂದೊಡಾಯಿತ್ತು ಬಿಂದು, 'ವ' ಎಂದೊಡಾಯಿತ್ತು ಕಲಾ, ಹೀಗೆ ನಾದ ಬಿಂದು ಕಲಾಸ್ವರೂಪಿಯಾದ ಬಸವಣ್ಣ, ಭಕ್ತಿಭಂಡಾರಿಯಾದ ಷಟ್‌ಸ್ಥಲ ವಿಹಾರಿಯಾದ, ಬಸವ ಬಸವಾ! ಮಂತ್ರ ದೊಡ್ಡಣ್ಣನವರ ಪಾಲಿಗೆ ದಿವ್ಯಮಂತ್ರವಾಯಿತು. ಬಸವಣ್ಣನಿಗೆ ಭೃತ್ಯಾಚಾರಿಯಾಗಿ ಶರಣರಾದರು.

ಮಾಹೇಶ್ವರ ಸ್ಥಲ :

"ಅಂಗದಲ್ಲಿ ಲಿಂಗದ ಸದ್ಗುಣಂಗಳು ನೆಲೆಗೊಳ್ಳದನ್ನಕ್ಕ ಲಿಂಗಾಂಗಿ ತಾನಾಗ ಬಲ್ಲನೇ ಹೇಳಾ ರಾಮೇಶ" ಎಂದು ಆರಾಧ್ಯ ದೈವ ರಾಮೇಶನನ್ನು ಅಣ್ಣನವರು ಕೇಳಿದ್ದಾರೆ. "ಗುರುಲಿಂಗ ಜಂಗಮರ ಕಾದಾಟ ಲಿಂಗವನ್ನ ಮರೆತಿತ್ತು" ಎಂದು ಹೇಳುತ್ತ 'ಪಕ್ಷಪಾತವನಳಿದು ಮುಂಬರುವ ಸದ್ಭಕ್ತರನೆತ್ತಿಕೊಂಬ ನೋಡಾ ಸ್ವಾಮಿ ರಾಮೇಶ" ಎಂಬ ಭಾವನೆ ಮಾಹೇಶ್ವರ ಸ್ಥಲದ ವಚನಗಳಲ್ಲಡಗಿದೆ :–ಎಲ್ಲಿದ್ದರೇನು ? ಎಂತಿದ್ದರೇನು ? ನೀತಿಯುಳ್ಳಾತಂಗೆ ಲೋಕದಂಜಿಕೆಯುಂಟೆ ? ಮನಸ್ಸು ಸಂತೃಪ್ತವಾಗಿದ್ದರೆ ಶಾಂತಿ, ಸಮಾಧಾನ ಬೆಂಬತ್ತಿ ಬರುವದು, ಒಳಗೆ ತೃಪ್ತಿಯಿಲ್ಲದವನ ಮೇಲೆ ಹೊನ್ನಮಳೆಗರೆದರೂ ತೃಪ್ತಿಯಾಗದು.

ಪ್ರಸಾದಿ ಸ್ಥಲ :

ತನು, ಮನ, ಧನ, ಯಾರದೆಂದರಿಯದೆ, ಅಹಂಕಾರ–ಮಮಕಾರದಿಂದ ಲೋಕ ಕೆಟ್ಟಿತ್ತು. ಈ ತನು, ಮನ, ಧನ, ಗುರು, ಲಿಂಗ, ಜಂಗಮದ ಸೊತ್ತು. ಅವರು ಕೊಟ್ಟುದನ್ನು ಅವರಿಗಿತ್ತು ತೊತ್ತಾಗಿದ್ದರೆ ತನು, ಮನ, ಧನಗಳೆಲ್ಲ ಶುದ್ಧ, ಸಿದ್ಧ,ಪ್ರಸಿದ್ಧ ಪ್ರಸಾದವಾಗುವವು. ನಿಷ್ಠೆಯಿಂದ ದುಡಿದು ಗಳಿಸಿದುದನ್ನು ಗುರುವಿಗೆ ಲಿಂಗಕ್ಕೆ ಅರ್ಪಿಸಿದರೆ ಅದು ಮಹಾಪ್ರಸಾದವಾಗುವದು.

ಪ್ರಾಣಲಿಂಗಿಸ್ಥಲ :

ಶಿವಾನುಭವ, ಪುರಾತನರ ವಚನಗಳನ್ನೋದಿ ತಾವೇ ಅನುಭಾವಿಗಳೆಂಬಂತೆ ಅರ್ಥವಿವರಿಸುವವರನ್ನು ಕಂಡು ದೊಡ್ಡಣ್ಣ ಅಚ್ಚರಿಗೊಂಡಿದ್ದಾರೆ, "ನಡತೆ ಹೀನರಿಗೆ

ಶಿವಾನುಭವ ಅಲಭ್ಯ, ತನ್ನ ತಾನರಿದಾಗಲೆ ಶಿವಾನುಭವದ ಅರಿವಾಗುವದು," "ಶರಣರ ಸಂಗದಿಂದ ಶಿವಾನುಭವದ ಅರಿವು ಆಗುವದು–ಇಷ್ಟಲಿಂಗ ಜೀವಿಯು ಪ್ರಯೋಗಶಾಲೆ, ಮನದ ಏಕಾಗ್ರತೆ ಸಾಧಿಸಲು ಸಾಧನೆ ಅವಶ್ಯ, ಅದರಿಂದ ಮನದ ಅಲೆದಾಟ ನಿಯಂತ್ರಿಸಿ ದೃಷ್ಟಿಯೋಗ ಸಾಧಿಸಬಹುದಾಗಿದೆ, "ಇಂತು ಲಿಂಗವಿಡಿದು, ಭಕ್ತಿ ಮಾರ್ಗದಿ ಭೃತ್ಯಾಚಾರಿಯಾಗಿ ನಡೆವ ಸದ್ಭಕ್ತನೆ ಶಿವಾನುಭವಿ ನೋಡಾ ಸ್ವಾಮಿ ರಾಮೇಶ" ಎಂದಿದ್ದಾರೆ.

ಶರಣ ಸ್ಥಲ :

"ಕಾಲ ತೀರಿತ್ತು, ಆಯುಷ್ಯ ಕಳೆದಿತ್ತು. ಎದುರಾಗಿ ನಿಂತಿತ್ತು ಮೃತ್ಯು" ನಿರ್ವಂಚನೆಯ ಸದ್ಭಕ್ತನಿಗೆ ಮೃತ್ಯುಭಯವಿಲ್ಲ, ಲಿಂಗದಲ್ಲಿ ಹುಟ್ಟಿ, ಲಿಂಗದಲ್ಲಿ ಬೆಳೆದು ಲಿಂಗೈಕ್ಯನಿಗೆಲ್ಲಿಯ ಮೃತ್ಯು" ಆತ್ಮಕ್ಕೆ ಹುಟ್ಟು ಸಾವುಗಳಿಲ್ಲ. ಎಂಬುದು ಭಾರತೀಯರ ನಂಬುಗೆ. ವೀರಶೈವರಲ್ಲಿ 'ಶರಣಸತಿ, ಲಿಂಗಪತಿ' ಎಂಬ ಭಾವನೆಗೆ ಮಹತ್ವವಿದೆ. ಶರಣ ಸ್ಥಲದ ವಚನಗಳು ಭಾವಪೂರ್ಣವಾಗಿವೆ, ಶರಣರು "ಬೇಡಿಕೆಟ್ಟ ಪುರಾಣ ಪುರುಷರಂತಾಗದೆ, ಬೇಡದೆ ಕಾಯಕದಲ್ಲಿಯೇ ಕೈಲಾಸ ಕಂಡಿದ್ದಾರೆ. "ಸರ್ವಸ್ವತಂತ್ರರಯ್ಯಾ ಶರಣರು. ಬಾಯೆಂದೊಡೆ ಬಾರರು, ಹೋಗೆಂದೊಡೆ ಹೋಗರು, ಇಚ್ಛಾಮಾತ್ರದಿ ಸುಳಿದು ಲೋಕವ ಸಲಹುತ್ತಿಪ್ಪರಯ್ಯಾ" ಎಂದು ದೊಡ್ಡಣ್ಣ ತಮಗೆ ಕೃಪೆದೋರಿದ ಗುರುಗಳನ್ನೆಲ್ಲ ಹೃದಯತುಂಬಿ ಹೊಗಳಿದ್ದಾರೆ. ಹರುಷಗೊಂಡಿದ್ದಾರೆ.

ಐಕ್ಯಸ್ಥಲ :

—ದ ಬಗೆಗೆ ಅಣ್ಣ ದೇವರನ್ನೇ ಪ್ರಶ್ನಿಸುತ್ತಾರೆ "ಇಳಿದು ಬಾ ನಿನ್ನ ಸೋಹಂ ಭಾವವ ಬದಿಗಿಟ್ಟು, ನಾನೇರಿ ಬರುವೆ ದಾಸೋಹಂಭಾವ ಕಳೆದಿಟ್ಟು, ನಾವಿಬ್ಬರೊಂದಾಗಿ ಸಾಮರಸ್ಯಾನಂದ ಸಾಗರದಿ ತೇಲುವ" ದೇ ವೀರಶೈವ ಧರ್ಮತತ್ವದ ಕೊನೆಯ ಐಕ್ಯಸ್ಥಲವಾಗಿದೆ. ಇಲ್ಲಿ ಅರ್ಚನ, ಅರ್ಪಣ ಮಹತ್ವದ್ದಾಗಿದೆ, ಜೀವಾತ್ಮ ದಾಸೋಹಂಭಾವದಿಂದ ಪರಮಾತ್ಮನಲ್ಲಿ ಒಂದಾಗುವದೇ, ಐಕ್ಯಸ್ಥಲ.

"ರಾಮೇಶ ವಚನಗಳು" ದೊಡ್ಡಣ್ಣನವರ ಅನುಭಾವದ ರಸಘಟ್ಟಿಗಳಾಗಿವೆ. ಪಿಂಡಸ್ಥಲದಿಂದ, ಐಕ್ಯಸ್ಥಲದವರೆಗೆ ವಚನದ ಬಳ್ಳಿ ಹಬ್ಬಿದೆ. ವಚನಗಳು ಓದುಗರ ಮನವನ್ನು ಮಿಡಿಯುತ್ತವೆ–ಹೃದಯವನ್ನರಳಿಸುತ್ತವೆ, ಶೂನ್ಯಸಂಪಾದನೆಯನ್ನು ಕಡೆದು ತೆಗೆದ ಬೆಣ್ಣೆಯಂತಿವೆ. ಶರಣರ ವಚನಗಳಲ್ಲಿ, ಅರಿಯಲು ಕಠಿಣವೆಂದು ತೋರುವ ಷಟ್‌ಸ್ಥಲಗಳನ್ನು ಇಲ್ಲಿ ಸುಲಭಗೊಳಿಸಿದ್ದಾರೆ. ಈ ವಚನಗಳ ಸಂಗ್ರಹ ಉಪಯುಕ್ತವಾಗಿದೆ.

"ದೇಶೀಯ ವಚನಗಳು" ಗಾತ್ರದಲ್ಲಿ ಕಿರಿದಾದರೂ, ಪಾತ್ರದಲ್ಲಿ ಹಿರಿದಾಗಿದೆ, ಭಾರತ ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡವರು, ಅಂದಿನ ತ್ಯಾಗ, ಬಲಿದಾನವನ್ನು ಕಣ್ಣಾರೆ ಕಂಡವರಿಗೆ ಇಂದಿನ ಜೀವನ ನಿರಾಶೆ, ನೋವುಗಳನ್ನುಂಟುಮಾಡುತ್ತದೆ. ಸ್ವಾತಂತ್ರ್ಯೋತ್ತರದ ಜನ ಅಧಿಕಾರ, ಹಣ, ಕೀರ್ತಿಗೆ ಬಲಿಬಿದ್ದು ದೇಶದ ಅವನತಿಗೆ ಕಾರಣರಾಗುತ್ತಿದ್ದಾರೆ, ಈ ಹೀನಸ್ಥಿತಿಯನ್ನು ಕಂಡು ದುಃಖಿತಪ್ತರಾದ ದೊಡ್ಡಣ್ಣ, ರಾಷ್ಟ್ರಪಿತ ಗಾಂಧೀಜಿಯವರ ಶತಮಾನೋತ್ಸವದ ಕಹಿನೆನಪಿಗಾಗಿ "ದೇಶೀಯ ವಚನಗಳು" ಎಂಬ ವಚನ ಸಂಗ್ರಹದ ಕಿರಿಕೃತಿಯನ್ನು ಗಾಂಧೀಜಿಯವರಿಗೆ ಅರ್ಪಿಸಿದ್ದಾರೆ :—

"ಸತ್ಯ ಅಹಿಂಸೆಗಳ ಸೋಗಿನಲಿ
ಮತ್ತೊಮ್ಮೆ ಗಾಂಧಿಯ ಕೊಲೆಯಾಯಿತ್ತು,
ಅಂದಿನಾ ಕೊಲೆಯಲ್ಲಿ ಕಾಯಸತ್ತಿತ್ತು.
ಇಂದಿನಾ ಕಲೆಯಲ್ಲಿ ತತ್ವವೇ ಸತ್ತಿತ್ತು"

ಎಂಬ ವೇದನೆ ಈ ವಚನಗಳಲ್ಲಿ ಹೊರಹೊಮ್ಮಿದೆ, ಗೋಡಸೆ ಗಾಂಧೀಜಿಯವರ ಶರೀರವನ್ನು ನಾಶಗೈದರೆ, ನಂತರದ ರಾಜಕೀಯ ಜನ ಗಾಂಧೀಜಿಯ ತತ್ವಗಳನ್ನು ಬಾಯಿಂದ ಹೇಳುತ್ತ ಆ ತತ್ವಗಳ ಸಮಾಧಿ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಸಮರದ ಕಾಲಕ್ಕೆ ಗಾಂಧಿ ಟೊಪ್ಪಿಗೆಗೆ ಅಪಾರ ಗೌರವವಿತ್ತು. ಅದು ಕಾಂಗ್ರೆಸ್ ಧ್ವಜದಂತಿತ್ತು, ಈಗ:—

"ಟೋಪಿಗೆ ಗಾಂಧಿಯೆಂಬ ಹೆಸರಿಟ್ಟು, ಆ ಟೋಪಿಯ ಹಾಕಿ
ಜನರ ವಂಚಿಸುತಿಪ್ಪಗಾಂಧಿಭಕ್ತರ ನೋಡಿರೆ !
ತಲೆ ತಮ್ಮದು ಟೋಪಿ ಗಾಂಧಿಯದು,
ನಡೆ ತಮ್ಮದು, ನುಡಿಗಾಂಧಿಯದು"

ಎಂಬ ಮರ್ಮಿಕ ವಚನಗಳನ್ನು ರಚಿಸಿದ್ದಾರೆ–ನೊಂದ ಮನದಿಂದ "ಟೊಪ್ಪಿಗೆಯ ಮರಿಂದ ಉಳಿಸಿ, ಇನ್ನಾರಿಂದಲಾದರೂ ದೇಶವನ್ನು ಸಲಹಯ್ಯಾ ! ಸ್ವಾಮಿರಾಮೇಶ" ಎಂದು ದೇವರನ್ನು ಮೊರೆಹೊಕ್ಕಿದ್ದಾರೆ, ಯಾರು ಬಂದರೂ ತಮ್ಮ ಖುರ್ಚಿಗಾಗಿ ಬಡಿದಾಡುವದನ್ನು ಕಾಣುತ್ತಿದ್ದೇವೆ. "ಗಾಂಧಿನುಡಿ ಮುಂದಿಟ್ಟು ನಡೆ ಹಿಂದಿಟ್ಟು ದೊಡ್ಡವರಾದವರ ನೋಡಿ ಲೋಕಬೆರಗಾಗಿತ್ತು". ಆಗ ಸತ್ಯ ಅಹಿಂಸೆಯೇ ಸ್ವಾತಂತ್ರ್ಯ ಹೋರಾಟದ ಅಸ್ತ್ರವಾಗಿತ್ತು. ಈಗ "ತ್ಯಾಗ ಓಡಿತ್ತು. ಭೋಗಲಾಲಸೆ ಧಾವಿಸಿ ಬಂದಿತ್ತು. ದೇಶಹಾನಿಗೊಂಡಿತ್ತು."

"ಕೈಗೆ ಬಂದ ತುತ್ತು ಬಾಯ್ಗೆ ಬರಲಿಲ್ಲ'ವೆಂಬ
ಗಾದೆಯಂತಾಯಿತು. ಈ ಯುಗದ ಬಾಳು"
"ಮಾತಿಲಿಸಗಾಂಧಿ ಮರೆಯಲ್ಲಿ ಬ್ರಾಂದಿ
ಇಂದು ಶತಮಾನದುತ್ಸವ ಗಾಂಧಿಯದೋ? ಬ್ರಾಂದಿಯದೋ ?"

ಎಂದು ಬಿಚ್ಚುನುಡಿಯಲ್ಲಿ ಕೇಳಿದ್ದಾರೆ. ಈ ವಚನಕ್ಕೆ ಬುದ್ಧಿಜೀವಿಗಳೇ ಉತ್ತರ ಕೊಡಬೇಕು. ರಾಜಕಾರಣಿಗಳೂ ಮೌಲ್ಯಾಧಾರಿತರೂ ಅಂತರಂಗವನ್ನು ಪರೀಕ್ಷಿಸಿ ಕೊಳ್ಳಬೇಕು. ಭಾರತದೇಶದಲ್ಲೀಗ "ಪ್ರಜಾಪ್ರಭುತ್ವಕ್ಕೆ ಘನತೆಯಿಲ್ಲ, ನಿಮ್ಮ ನಂಬಿದ ದೇಶಕ್ಕೆ ಹಿತವಿಲ್ಲ" ಪಕ್ಷಾತೀತ, ನ್ಯಾಯನಿಷ್ಠುರರು ರಾಷ್ಟ್ರಕ್ಕೆ ಬೇಕೆಂದು ಹಂಬಲಿಸಿದ್ದಾರೆ,

"ರಾಜತಂತ್ರವ ಬದಿಗಿಟ್ಟು, ಸತ್ಯ ಅಹಿಂಸೆಯ ಹಿಡಿದು
ಗಾಂಧಿಶತಮಾನದುತ್ಸವವನಾಚರಿಸು ಕಂಡ್ಯಾದೇಶನಾಯಕಾ",

ಎಂಬ ವಚನ ಮನಮಿಡಿಯುವಂತಿದೆ.

"ಚುನಾವಣೆಯ ಚದುರಂಗದಾಟದಲಿ ಜಾಣರಾದರಲ್ಲದೆ
ದೇಶಹಿತ ರಕ್ಷಣೆಯ ಧುರೀಣರಾಗಲಿಲ್ಲವಯ್ಯ !"

ನಮ್ಮ ಜನ ಎಂಬ ವ್ಯಥೆ ದೊಡ್ಡಣ್ಣನವರದು, ಚುನಾವಣೆಯ ಚಿತಾವಣೆಯನ್ನು ವಚನದಲ್ಲಿ ವರ್ಣಿಸಿದ್ದಾರೆ,"ಮಳೆನಿಂತರೂ ಮರದಹನಿ ನಿಲ್ಲಲಿಲ್ಲ"ಎನ್ನುವ ಮಾತಿನಂತೆ ಬ್ರಿಟಿಷರು ಭಾರತವನ್ನು ಬಿಟ್ಟುಹೋದರೂ, ದಾಸ್ಯದ ಮುದ್ರೆ ಇನ್ನೂ ಹೋಗಿಲ್ಲ. 'ಪ್ರಜಾಪ್ರಭುತ್ವ ಸ್ವಯಂಮಾಧಿಕಾರ ಏನಿದ್ದರೂ ಕುರಿಯ ಕೂಗಲ್ಲದೆ ಭಾರತೀಯರಿಗೆ ಸಿಂಹಗರ್ಜನೆ ಬಾರದಲ್ಲ' ಎನ್ನುತ್ತ ರಾಷ್ಟ್ರರಕ್ಷಣೆ ಈಗ ಉಳಿದಿರುವುದು, ಮಂತ್ರಿಗಳ ಒಡಿವಾರದ ಭಾಷಣಗಳಲ್ಲಿ, ಸಮಿತಿಗಳ ಜಾಲ ರಾಷ್ಟ್ರವನ್ನು ಮುತ್ತಿದೆ. ಸಮಸ್ಯೆಗಳನ್ನು ಬಿಡಿಸಲಾರದ ಮಂತ್ರಿಗಳು 'ಬೀಸುವ ದೊಣ್ಣೆ ತಪ್ಪಿದರೆ ಸಾಸಿರವರುಷಾಯುಷ್ಯ' ಎಂದು ಸಮಿತಿಗಳನ್ನು ರಚಿಸುತ್ತ ತಮ್ಮ ಸ್ಥಾನ ಭದ್ರಗೊಳಿಸಿಕೊಳ್ಳುವುದರಿಂದ ದೇಶಕ್ಕೆ ಹಿತವಾದೀತೆ ? ದೇವರೆ, ದೇಶವನ್ನು ರಕ್ಷಿಸು, ಎಂಬ ವಿಚಾರ ವಚನಗಳಲ್ಲಿ ಒಡಮೂಡಿದೆ.

'ರಾಮೇಶ ವಚನಗಳು' ದೊಡ್ಡಣ್ಣನವರ ಅಂತರಂಗದ ಅನುಭಾವದ ಸಾರ ಸಂಗ್ರಹವಾಗಿದೆ ! 'ದೇಶೀಯ ವಚನಗಳು' ಇಂದಿನ ರಾಜಕೀಯ, ಸಾಮಾಜಿಕ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ವ್ಯಕ್ತಿ ಸುಧಾರಿಸದೆ ಸಮಾಜ ಸುಧಾರಿಸ ಲಾರದು. ಸಮಾಜ ಸುಧಾರಿಸಲಾರದೆ, ರಾಷ್ಟ್ರ ಉದ್ಧಾರವಾಗಲಾರದು, ಮಾನವನ ಜೀವನ ಒಳಹೊರಗೆ ಹಸನಾದಾಗ, ಸರ್ವಜೀವಾತ್ಮರಿಗೆ ಲೇಸನೆ ಬಯಸಿದ 'ಶರಣ ಮಾರ್ಗದತ್ತ ಮಾನವ ಸಾಗಿದಾಗ ಮಾನವನ ಬಾಳು ಬಂಗಾರವಾಗುವುದು. ದೇಶದ ಹಿತರಕ್ಷಣೆಯಾಗುವದು ಎಂಬ ವಿಚಾರ ದೊಡ್ಡಣ್ಣನವರ ವಚನ ಸಂಗ್ರಹದಲ್ಲಿ ಮೂಡಿ ಬಂದಿದೆ.

೮೦ರ ಅಂಚಿನತ್ತ ಸಾಗಿದ ದೊಡ್ಡಣ್ಣನವರ ಶತಮಾನೋತ್ಸವ ಆಚರಿಸುವ ಭಾಗ್ಯ ಕನ್ನಡಿಗರದಾಗಲಿ, ದೇವರು ಅವರಿಗೆ ಆಯುರಾರೋಗ್ಯ ದಯಪಾಲಿಸಲಿ, ಇನ್ನೂ ಹೆಚ್ಚಿನ ಸಾಹಿತ್ಯ ಸೇವೆ ಅವರಿಂದಾಗಲಿ, ಕನ್ನಡ ಸಾಹಿತ್ಯ ಕಣಜ ಸಮೃದ್ಧವಾಗಲಿ. ★

ಡಾ॥ ಕೆ. ದೊಡ್ಡನಗೌಡರ ಲಾವಣಿಗಳು

ಡಾ॥ ಮಲ್ಲಿಕಾರ್ಜುನ ಸಿ. ಲಕ್ಕೆ

ನಾಡ-ನುಡಿಯ ಅಭಿವೃದ್ಧಿಗೆ ಅಪ್ರತಿಮಸೇವೆಸಲ್ಲಿಸಿದ ಮಹನೀಯರಲ್ಲಿ ಬಳ್ಳಾರಿ ಜಿಲ್ಲೆಯ ಜೋಳದರಾಶಿ ಗ್ರಾಮದ ಡಾ॥ ಕೆ. ದೊಡ್ಡನಗೌಡರೂ ಒಬ್ಬರು. ರೈತ ಮನೆತನದಲ್ಲಿ ಹುಟ್ಟಿದಗೌಡರು ರಾಷ್ಟ್ರದ ಶ್ರೇಷ್ಠ ಗಮಕ ಕಲಾಕಾರರೆನಿಸಿದುದು ಕನ್ನಡ ನಾಡಿನ ಹೆಮ್ಮೆಯ ವಿಷಯವಾಗಿದೆ. ಇವರದು ಬಹುಮುಖ ವ್ಯಕ್ತಿತ್ವ. ಸುಪ್ರಸಿದ್ಧ ನಟರಾಗಿ, ಪ್ರವಚನಕಾರರಾಗಿ ಧರ್ಮದರ್ಶಿಗಳಾಗಿ, ಕವಿಗಳಾಗಿ, ರಸಿಕರಾಗಿ, ಮೇಲಾಗಿ ಸುಸಂಸ್ಕೃತ ಮಾನವರಾಗಿ ಜೀವಸವೆಸಿ ನಮ್ಮ ಮಧ್ಯದಲ್ಲಿ ಈಗಲೂ ಬದುಕಿರುವುದು ಅಭಿಮಾನದ ಸಂಗತಿಯಾಗಿದೆ.

ದೊಡ್ಡನಗೌಡರು ಪಂಪನಗೌಡರ ಸತ್ಪುತ್ರರು, ಹೆಸರೇ ಸೂಚಿಸುವಂತೆ ದೊಡ್ಡನಗೌಡರು ದೊಡ್ಡಗುಣದವರು, ದೊಡ್ಡ ಮನೆತನದವರು. ಇವರು ಹೆಚ್ಚು ಕಲಿತವರಲ್ಲ. ಆದರೂ ವಿಶ್ವವಿದ್ಯಾಲಯದ ಉನ್ನತವಾದ ಗೌರವ ಡಾಕ್ಟರೇಟ್ ಪದವಿ ಪಡೆದವರು. ಸ್ನೇಹಜೀವಿಗಳು. ಇವರು ವೃತ್ತಿಯಿಂದ ರೈತರು, ಪ್ರವೃತ್ತಿಯಿಂದ ಕಲೋಪಾಸಕರು. ಕನ್ನಡ, ತೆಲುಗು ಭಾಷಾ ಪ್ರವೀಣರು. ಆಂಧ್ರ ಮತ್ತು

ಕರ್ನಾಟಕ ರಾಜ್ಯಗಳೆರಡರಲ್ಲೂ ತಮ್ಮ ಅಭಿನಯ ಕಲೆಯನ್ನು ಪ್ರದರ್ಶಿಸಿ ಜನಮೆಚ್ಚುಗೆ ಪಡೆದವರು. ಅಂತೆಯೆ ರಾಜ್ಯಸರಕಾರ, ಅಕಾಡೆಮಿ ನಾಡಿನ ಹಲವಾರು, ಸಂಘ-ಸಂಸ್ಥೆಗಳು ಮತ್ತು ಗುಲ್ಬರ್ಗ ವಿಶ್ವವಿದ್ಯಾಲಯ ಗೌಡರಿಗೆ ಪ್ರಶಸ್ತಿ-ಪದವಿಗಳನ್ನು ನೀಡಿ ಗೌರವಿಸಿದೆ.

ಗೌಡರು ಬಳ್ಳಾರಿ ನಾಟ್ಯಕಲಾ ಪ್ರಪೂರ್ಣ ರಾಘವಾಚಾರ್ಯರ ಆತ್ಮೀಯ ಶಿಷ್ಯರು. ಆಂಧ್ರ ಕನ್ನಡ ನಾಟಕರಂಗಭೂಮಿಯ ವಿಜಯಪತ್ರ ವಿಜೇತರು. ಕರ್ನಾಟಕಾಂಧ್ರ ಸಾಹಿತ್ಯದ ವಚನಕಾರರು, ಗಮಕ ಕಲಾಪ್ರವೀಣರು, ಗಮಕಕಲಾನಿಧಿ, ಶರಣ ಕವಿಗಳು ಡಾ॥ ದೊಡ್ಡನಗೌಡರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ನೂರಾರು ಪ್ರವಚನಗಳನ್ನು ಮಾಡಿದ್ದಾರೆ. ನಾಟಕಪ್ರದರ್ಶನ ನೀಡಿದ್ದಾರೆ. 'ನಂದೇ ನಾನೋದಿದೆ' ಎಂಬ ಬೃಹದ್ಗ್ರಂಥ ಅವರ ಅಂತರಂಗದ ಐಸಿರಿಗೆ ನಿದರ್ಶನವಾಗಿದೆ. ಗೌಡರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಾಭಿಮಾನಿಗಳು, ಕರ್ನಾಟಕ ಏಕೀಕರಣಕ್ಕಾಗಿ ದುಡಿದ ನಾಡ ಧೀರರು. ಆ ಈ ಸಂದರ್ಭಗಳಲ್ಲಿ ಸ್ವತಃ ಲಾವಣಿಗಳನ್ನು ರಚಿಸಿ, ತಮ್ಮ ಕಂಚಿನ ಕಂಠದಿಂದ ಹಾಡಿ, ಪಾಡಿ ಜನರನ್ನು ಎಚ್ಚರಿಸಿದ ಹಿರಿಯ ನಾಯಕರೆನಿಸಿದ್ದಾರೆ.

ಸ್ವರಾಜ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ಸಿನ ಕಥೆಯನ್ನು 'ಆಧುನಿಕ ಪಾಂಡವರು' ಹೆಸರಿನ ಲಾವಣಿಯಲ್ಲಿ ಎರಕಹೊಯ್ದು ೧೯೪೭ ರಲ್ಲಿ ಹೊರಹಾಕಿದ್ದಾರೆ. ಈ ಲಾವಣಿ ೬೨ ಪದ್ಯಗಳಿಂದ ಕೂಡಿದೆ.

'ದೇಶಾನುದೇಶದೊಳಗೆ
ಲೇಸಯ್ಯ ಈ ನಮ್ಮ ಭರತದೇಶ
ಹೇ ತಮ್ಮ, ಇದು ನಮ್ಮ ಪುಣ್ಯಕೋಶ
ಹೇ ತಂಗಿ, ಇದು ನಮ್ಮ ಜನ್ಮವಾಸ' ॥ ೧ ॥

ಈ ಜನ್ಮವಾಸದಲಿ ಮುನ್ನಾ
ಕೌರವರ ಕುಟಿಲದಲಿ ಕರಗಿ ಬೆಂದು
ಪಾಂಡವರು ಕಡೆಗವರ ಕುಲವಕೊಂದು
ಸ್ವಾತಂತ್ರ್ಯ ಧರ್ಮವನು ಪಡೆದರಂದು ॥ ೨ ॥

ಈ ಐವರಲಿ ಹಿರಿಯನಾತ
ಧರ್ಮಜನ ಅಂಶವನು ತಾಳಿದ್ದಾತ
ಸತ್ಯಾಗ್ರಹದ ಸೂತ್ರಧಾರನೀತ
ಬೇರಿಲ್ಲ ಗಾಂಧಿಮಹಾತ್ಮನೀತ
ಹೇ ದೇಶಬಾಂಧವರೆ ಏಳಿ,
ಐಕ್ಯತೆಯ ಮಂತ್ರವನು ಪಠಿಸಿರಯ್ಯ'— ॥ ೩ ॥

ಎಂದು ಈ ಲಾವಣಿ ಉದ್ದಕ್ಕೂ ದೇಶಬಾಂಧವರನ್ನು ಎಚ್ಚರಿಸಿದ್ದಾರೆ. ಕೌರವರನ್ನು ಸದೆಬಡಿವ ವಿಶ್ವಪ್ರಯತ್ನಕ್ಕಾಗಿ ಗೌಡರೂ ಹೋರಾಡಿದ್ದಾರೆ.

'ತಾಯಿ ಮಕ್ಕಳು' ಎಂಬ ಲಾವಣಿಯೊಂದನ್ನು ಗೌಡರು ೨೪-೧೦-೧೯೪೩ ರಲ್ಲಿ ಬರೆದದ್ದುಂಟು. ೧೯೪೩ರಲ್ಲಿ ಬಳ್ಳಾರಿಯಲ್ಲಿ ಆಂಧ್ರವನ್ನು ಪ್ರತಿಭಟಿಸಿ ದಕ್ಷತೆಯಿಂದ ನಡೆಯಿಸಿದ ಕೆಚ್ಚಿನ ಕನ್ನಡಿಗರ ಚಳುವಳಿಯನ್ನು ಕುರಿತಾದ ಲಾವಣಿ ಇದಾಗಿದೆ. ನಡುನಾಡಿನ ಮಕ್ಕಳಲ್ಲಿದ್ದ ತಾಯಿಯು ಕಡೆನಾಡಿನ ಮಕ್ಕಳನ್ನು ನೋಡಿಹೋಗಲು ದೀಪಾವಳಿ ಹಬ್ಬಕ್ಕೆ ಬಂದಾಗ ಕನ್ನಡಮ್ಮನಿಗೆ ತಮ್ಮ ಯೋಗಕ್ಷೇಮಗಳನ್ನು ಆಂಧ್ರದಿಂದ ಉಂಟಾದ ತೊಡಕನ್ನು ಸಂಭಾಷಣೆಯ ಮೂಲಕ ವಿವರಿಸುವ ಕಥಾನಕ ಲಾವಣಿಯಾಗಿದೆ. ಈ ಲಾವಣಿಯಲ್ಲಿ ಒಟ್ಟು ೭೬ ಪದ್ಯಗಳಿರುತ್ತವೆ.

'ಸತ್ಯೌದಾರ್ಯದಿ ಲಕಲಕಿಸುವ ಬಲು
ಚೆಲುವಿನ ಮಂಗಳ ದೇವತೆಯು
ವರಕವಿ ಜನ ಸನ್ಮಾನಿತೆಯು
ಸುಮಧುರನುಡಿ ಸಂಭಾವಿತೆಯು
ದೀಪಾವಳಿಗಳ ಬೆಳಗುತ ಬಂದಳು
ನಮ್ಮಯ ಕನ್ನಡ ಶಾರದೆಯು ॥ ೧ ॥

ಗೌಡರಿಗೆ ಅತ್ಯಂತ ಆದರಣೀಯ ವ್ಯಕ್ತಿ ಬಳ್ಳಾರಿಯ ರಾಘವಾಚಾರ್ಯರು. ದಿ. ೫-೧-೧೯೪೧ ರಂದು ಬ್ರಿಟಿಷ್ ಸರಕಾರ ಈ ರಾಘಾವಾಚಾರ್ಯರಿಗೆ 'ರಾವ್ ಬಹದ್ದೂರ' ಬಿರುದು ನೀಡಿದ ಸಮಯದಲ್ಲಿ ಬಳ್ಳಾರಿ ಆರ್ಟ್‌ಲವರ್ಸ ಲೀಗ್ ಸದಸ್ಯರು ಸತ್ಕಾರ ನೀಡಿದ್ದರು. ಆ ಸಂದರ್ಭದಲ್ಲಿ ಗೌಡರು ರಚಿಸಿ ಹಾಡಿದ ಲಾವಣಿಯೆಂತು ಮನಮೋಹಕವಾಗಿದೆ.

'ಭಪ್ಪರೆ ಹೌದೋ ಭಲೇ ರಾಘವ
ಭಾರತಕೆಲ್ಲ ಹೆಸರಾಯ್ತು
ಬಳ್ಳಾರಿ ನಗರಕೆ ಬೆಳಕಾಯ್ತು.

"ಭಳಿಭಳಿರೆ ರಾವ್‌ಬಹಾದ್ದೂರೆಂಬುವ ಬಿರುದಿನ ಬಲುಹದು ಘನವಾಯ್ತು." ಈ ಲಾವಣಿಯಲ್ಲಿ ಒಟ್ಟು ೮ ಪದ್ಯಗಳಿದ್ದು 'ರಾಮೇಶ' ಮುದ್ರಿಕೆಯಲ್ಲಿರುತ್ತದೆ.

ಬಾಗಲಕೋಟೆಯಲ್ಲಿ ಕನ್ನಡಿಗರನ್ನು ಅಣಕಿಸುವ ಮಹಾರಾಷ್ಟ್ರದ ನಾಟಕ ಸಂಘವೊಂದು 'ಭಾವಬಂಧನ' ವೆಂಬ ನಾಟಕವಾಡಿದಾಗ ಅಲ್ಲಿಯ ಕನ್ನಡಿಗರು ಪ್ರತಿಭಟಿಸಿ ಅಲ್ಲಿಂದ ಆ ನಾಟಕ ಕಂಪನಿಯನ್ನು ಹೊರಕಳಿಸಿದಾಗ ಈ ವಿಷಯವನ್ನು ಕೇಳಿದ ಗೌಡರು 12-10-45 ರಂದು ಒಂದು ಲಾವಣಿಯನ್ನು ರಚಿಸಿ ಇಲಕಲ್ಲ ಮಹಾಂತ ಮಠದಲ್ಲಿ ಹಾಡಿತೋರಿಸಿದರು. ಈ ಲಾವಣಿ ಹದಿನೆಂಟು ಪದ್ಯಗಳಿಂದ ಕೂಡಿದ್ದು ಕನ್ನಡದ ಕೆಚ್ಚನ್ನು ತೋರಿಸಿಕೊಟ್ಟಿದೆ.

'ಕನ್ನಡ ಜನರನು ಅಣಕಿಸುವ ಮಹಾರಾಷ್ಟ್ರದ
ನಾಟಕ ನೋಡಿರಾ–ನೀವ್‌ಕೇಳಿದಿರಾ'
ಎಲೆಲಾ ಪರಮಾಶ್ಚರ್ಯವು ನೋಡಲಂ
ಇಲಿಯೇ ಹುಲಿಯಾಯ್ತಿಂದಿನಲಿ ಬಲು ಗರ್ವದಲಿ ॥ ೧ ॥

ಕನ್ನಡ ಜನರಂ ಜರೆದು ಜಂಕಿಸುವ
ಮಹರಾಷ್ಟ್ರದ ಘನಕೂಟವಿದು ನಗೆ ಯಾಟವಿದು
ಕನ್ನಡ ನಾಡನು ಕಸಿಯಲು ಬಂದಾ
ಕಪಟನಾಟಕದ ಸಂಘವಿದು – ನಟರಂಗವಿದು ॥ ೨ ॥

ಎಲೆಲೆಲೆ ಶಿವಶಿವ ಏನೆಂದ್ಹೇಳುವೆ
ಕನ್ನಡ ಕೆಚ್ಚೆದೆ ಧೈರ್ಯವನು – ಘನ ಶೌರ್ಯವನು
ಬಳಿರೇ ಬಾಸುರೆ ಕನ್ನಡ ವೀರರ
ಸ್ಮರಣೆ ಮೀರಿದ ಕೋಪವನು – ಬಲುತಾಪವನು ॥ ೩ ॥

ಎಂದು ಹಾಡಿ ಕನ್ನಡದ ವೀರತೇಜವನ್ನು ಒಡನುಡಿಸಿದ್ದಾರೆ.

ದಿ. ೨೫–೧೨–೧೯೪೨ ರಲ್ಲಿ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಬೆಳ್ಳಿಯ ಹಬ್ಬದ ಸಮಾವೇಶದಲ್ಲಿ 'ಬೆಳ್ಳಿಯ ಹಬ್ಬದ ಬೆಳಕು' ಹೆಸರಿನ ಲಾವಣಿ ಯೊಂದನ್ನು ರಚಿಸಿದ್ದಾರೆ. ಇದರಲ್ಲಿ ೫ ನುಡಿಗಳಿರುತ್ತವೆ.

'ಭಳಿರೆ ಭಾಪುರೆ ಬಳ್ಳಾರಿ ನಗರದಿ
ಬೆಳಗುವ ಬೆಳ್ಳಿಯ ಹಬ್ಬವಿದು
ಬಲು ಚೆಲುವಿನ ಬೆಳದಿಂಗಳಿದು
ಬೆಡಗಿನ ಕವಿಗಳ ಶಬ್ದವಿದು
ಭಳಿರೆ ಭಾರತ ವೀರಶೈವರ
ಸಂಸ್ಕೃತಿ ಬೀರುವ ಭಾಗ್ಯವಿದು ॥ ೧ ॥

ಲೋಕಮಾನ್ಯ ಬಸವೇಶನು ಅಂದಿನ
ಪ್ರೇಮದಿ ಬೆಳಸಿದ ಬಳ್ಳಿಯಿದು
ವೀರಶೈವ ನವಜ್ಯೋತಿಯಿದು
ವಿದ್ಯಾದಾನದ ಹಸ್ತವಿದು
ಬಾಳಿನ ಉರಿಯೊಳು ಬಳಲುವ
ಬಡವರ ಬಡತನ ನೀಗಿಪ ನಿಲಯವಿದು ॥ ೨ ॥

ವೀರಶೈವ ಹೈಸ್ಕೂಲನು ಸ್ಥಾಪಿಸಿ
ಬಹುಜನ ನಲ್ಮೆಯ ಗಳಿಸಿತಿದು

ಕವಿಪಂಡಿತರನು ಕರೆಸಿತಿದು
ಕನ್ನಡ ನುಡಿಗಳ ಬೆಳೆಸಿತಿದು
ಬಾರೆಟ್ಲ್ ಸರದಾರ ಮಾನ್ಯರ
ಪರಿಚಯ ಭಾಗ್ಯವ ನೀಡಿತಿದು ॥ ೩ ॥

ವೀರಶೈವ ಪ್ರಮುಖಾದಿಗಳಿಂದಲಿ
ಶೋಭಿಪ ಸುಂದರ ರಂಗವಿದು
ಕನ್ನಡನುಡಿಗಳ ಬಳಗವಿದು
ಕಲೆಗಳ ಬೆಳೆಯಿಪ ಕಾವ್ಯವಿದು
ವೀರನಾರಿ ಕರ್ನಾಟಕ ಮಾತೆಯ
ಮನಕತಿಮೋದದ ಸೇವೆಯಿದು ॥ ೪ ॥

ಆ ಮತವೀಮತವೆಣಿಸದೆ ಕನ್ನಡ
ಬಾಂಧವರೊಂದೇಯೆಂಬುದಿದು
ಅನ್ಯಭಾಷೆಗಳ ಪಳಿಯದಿದು
ಮಲ್ಲರಸವಿಗೇ ಅಮೃತವಿದು
ವೀರಶೈವ ವರವಿದ್ಯಾವರ್ಧಕ
ಸಂಘದ ಸಡಗರ ಸುಗ್ಗಿಯಿದು ॥ ೫ ॥

ಎಂದು ವೀರಶೈವ ವಿದ್ಯಾವರ್ಧಕ ಸಂಘದ ಧ್ಯೇಯ–ಧೋರಣೆಗಳನ್ನು ಈ ಲಾವಣಿಯಲ್ಲಿ ಚಿತ್ರಿಸಿ ಹಾಡಿದ್ದಾರೆ.

ಈ ಲಾವಣಿಗಳನ್ನು ಗೌಡರ ಬಾಯಿಂದಲೇ ಕೇಳಬೇಕು. ಅವುಗಳ ಪರಿಣಾಮ ಎಂದೆಂದೂ ಮಾಸದ ಸಂತೋಷವನ್ನುಂಟು ಮಾಡುತ್ತದೆ. ಬಯಲು ಲಾವಣಿಗಳ ಧಾಟಿ ಇವುಗಳಿಗಿದ್ದು ಉತ್ತಮ ಕಾವ್ಯಾಂಶದಿಂದಲೂ ಕೂಡಿಕೊಂಡಿವೆ. ಈ ಶತಮಾನದ ಭವ್ಯ ಇತಿಹಾಸ ನಿರ್ಮಾಣಕಾರ್ಯದಲ್ಲಿ ಗೌಡರ ಈ ಲಾವಣಿಗಳು ಉತ್ತಮ ದಾಖಲೆಗಳಾಗಿರುತ್ತವೆ. ಗೌಡರು ಶ್ರೇಷ್ಠ ಲಾವಣಿಕಾರರೆಂಬುದನ್ನು ಇವು ತೋರಿಸಿ ಕೊಟ್ಟಿರುತ್ತವೆ.

೧೯೭೫ ರಲ್ಲಿ ದೊಡ್ಡನ ಗೌಡರು ನಮ್ಮ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿ ಆಗಮಿಸಿದಾಗ ಮತ್ತು ಅದಕ್ಕೂ ಮೊದಲು ಅವರ ಊರಲ್ಲಿಯೆ ಅವರನ್ನು ಕಂಡಾಗ ಈ ಲಾವಣಿಗಳನ್ನು ಕೇಳಿ ಸಂತೋಷಪಟ್ಟಿದ್ದೇನೆ. ೧೯೭೬ರಲ್ಲಿ ತಮ್ಮ ಕೆಲ ಲಾವಣಿಗಳನ್ನು ಪ್ರತಿಮಾಡಿ ನನಗೆ ಕಳಿಸಿಕೊಟ್ಟಿದ್ದನ್ನು ತುಂಬುಹೃದಯದಿಂದ ಸ್ಮರಿಸಿಕೊಂಡು ಆಗಾಗ ಅವುಗಳನ್ನು ಸವಿಯುತ್ತ ಸಂತೋಷಪಡುತ್ತಿರುತ್ತೇನೆ.

ಜೋಳದರಾಶಿಯವರ ತೆಲುಗು ಕೃತಿಗಳು

ಜಿ. ಚಂದ್ರಶೇಖರರೆಡ್ಡಿ

ಹಿಂದಿನ ಕಾವ್ಯದ ಹಿರಿಮೆಯು ಅಳತೆ ಹದಿನೆಂಟು ಪರ್ವಗಳಾದರೆ ಇಂದಿನ ಕಾವ್ಯಕ್ಕೆ ಅದು ಹದಿನೆಂಟು ಪೇಜಿಗಳೇ ಎಂದಿದ್ದಾರೆ ಮಹಾಕವಿ ಶ್ರೀ ಶ್ರೀ [ಮಹಾ ಪ್ರಸ್ಥಾನದ ಮಹಾಕವಿ ಶ್ರೀರಂಗಂ ಶ್ರೀನಿವಾಸರಾವ್].

ಆ ಜಾಡಿನಲ್ಲಿ ನೋಡಿದಾಗ ಜೋಳದರಾಶಿಯವರ ತೆಲಂಗು ಕೃತಿಗಳು ರಾಶಿಯಲ್ಲಿ ಕಡಿಮೆ ಆದರೂ ವಾಸಿಯಲ್ಲಿ ತಮ್ಮ ಹಿರಿತನವನ್ನು ಎತ್ತಿ ಹಿಡಿದಿರುತ್ತವೆ. ಜೋಳದರಾಶಿಯಂವರ ತೆಲುಗು ಕೃತಿಗಳು ಮುಖ್ಯವಾಗಿ ಮೂರು. ಅವು

1. ಗೇಯ ಗುಂಜಾರವಮು
2. ವಚನಾಮೃತಮು.
3. ಬಯಲುಗೊನ್ನವೆಲುಗು

ಇವುಗಳಲ್ಲಿ ವಚನಾಮೃತಮು ಬಸವ, ಅಲ್ಲಮ, ಅಕ್ಕಮಹಾದೇವಿ, ಆದಿ ಶಿವಶರಣರ ಆರಿಸಿದ ವಚನಗಳ ಅನುವಾದವಾಗಿದೆ. ಬಯಲುಗೊನ್ನವೆಲುಗು

ತತ್ವಗ್ರಂಥವಾಗಿದ್ದು ಗೂಳೂರು ಸಿದ್ಧವೀರಣ್ಣ ಒಡೆಯರು ಸಂಕಲನೆ ಮಾಡಿದ ಶೂನ್ಯ ಸಂಪಾದನೆಯ ಇಪ್ಪತ್ತೊಂದು ಪ್ರಕರಣಗಳ ಅನುವಾದದೊಂದಿಗೆ ವಿವರಣೆಗೆ ವಿವೇಚನೆಗಳನ್ನು ಒಳಗೊಂಡಿದೆ. ಇವೆರಡೂ ಕೃತಿಗಳು ಕನ್ನಡದಿಂದ ಆಂಧ್ರೀಕರಣ ಹೊಂದಿದ್ದು ಅವುಗಳ ಮೌಲ್ಯಗಳು ಮೂಲಗ್ರಂಥಗಳಿಗೂ ಸಲ್ಲುವುದರಿಂದ ಗೇಯ ಗುಂಜಾರವಮು –ನಲ್ಲಿನ ಜೋಳದರಾಶಿ ಗೀತಮುಲು ಎನ್ನುವದು ಅವರ ಸ್ವತಂತ್ರ್ಯ ಕೃತಿ ಎಂದು ಹೇಳಬಹುದು.

ಜೋಳದರಾಶಿಯವರ ತೆಲುಗು ಕೃತಿಗಳ ಬಗ್ಗೆ ವಿವರಿಸುವ ಮುನ್ನ ಜೋಳದ ರಾಶಿಯವರ ಮತ್ತು ತೆಲುಗಿನ ಸಂಬಂಧವನ್ನು ನೆನೆಯುವುದು ಉಚಿತವಲ್ಲವೆ ?

ಅವರು ಹುಟ್ಟಿದ್ದು ಕರ್ನಾಟಕ-ಆಂಧ್ರಗಳ ಗಡಿ ಗ್ರಾಮವಾದ ಜೋಳದರಾಶಿಯಲ್ಲಿ. ಅಲ್ಲಿ ಹುಟ್ಟಿದವರಿಗೆ ತೆಲುಗು–ಕನ್ನಡಗಳೆರಡೂ ಸಹಜವಾಗಿಯೇ ಒದಗಿ ಬರುತ್ತವೆ. ವೈಯಕ್ತಿಕವಾಗಿ ಅವರು ಮೋಟಾಟಿ–ರೆಡ್ಡಿ ಲಿಂಗಾಯತರು ಆಗಿದ್ದು [ಇಲ್ಲಿ ಕುಲದ ಹೆಸರನ್ನು ಕೇವಲ ಭಾಷಾ ನಿರೂಪಣೆಗಾಗಿ ಮಾತ್ರವೇ ಬಳಸಿಕೊಳ್ಳಲಾಗಿದೆ.] ಅವರ ಸ್ವಭಾಷೆ ತೆಲುಗು ಆಗಿದ್ದರೂ ಕ್ರಮೇಣ ಬಹಳಷ್ಟು ವೀರಶೈವರಲ್ಲಿ ವ್ಯಾಪಕವಿರುವ ಕನ್ನಡವು ಅವರ ಮನೆ ಮಾತಾಯಿತು. ಶಾಲೆಯಲ್ಲಿ ತೆಲುಗು ನಲ್ಲಿಯೇ ಅಕ್ಷರಾಭ್ಯಾಸವಾಗಿ ಆಂಧ್ರ ನಾಮ ಸಂಗ್ರಹ ಉತ್ತರ ರಾಮಾಯಣ ಪೋತನ್ನನ ಭಾಗವತಮು ಮತ್ತು ಕವಿತ್ರಯದ ಭಾರತಮು ಚಿಕ್ಕಂದಿನಲ್ಲಿಯೇ ವ್ಯಾಸಂಗ ಮಾಡಿದ ಆ ಭಾಷೆಯ ಮೇಲೆ ಸಹಜ ಪ್ರಭುತ್ವವನ್ನು ಸಿದ್ಧಿಸಿಕೊಂಡವರು. ಅಲ್ಲದೆ ಈ ಬಂಗಾರದ ತಟ್ಟೆಗೆ ಆಧಾರವಾಗಿ ನಿಂತ ಅವರ ನಾಟಕ ಗುರುಗಳಾದ ಕಳಾ ಪ್ರಪೂರ್ಣ ಶ್ರೀ ಬಳ್ಳಾರಿ ರಾಘವರ ಸಾಂಗತ್ಯ, ಒಡನಾಟ, ನಾಟಕ ಪ್ರದರ್ಶನಗಳು ಅವರ ತೆಲುಗು ಸಾಹಿತ್ಯವನ್ನು ಸ್ಥಿರೀಕರಿಸಿದವು. ಮಹಾಪಂಡಿತರು, ಭಾಸ್ಕರ ಪೀಠಾಧ್ಯಕ್ಷರು, ಮಹಾಮನೀಷಿಗಳು ಆದ ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳ ಸಹವಾಸ ಶುಶ್ರೂಷೆ ಲಭಿಸಿ ಅವರ ಭಾಷೆ ಮೆರುಗುಗೊಂಡಿತು. ಈ ವಿಧವಾಗಿ ತೆಲುಗು ಸಾಹಿತ್ಯಾಭ್ಯಾಸದ ತಳಹದಿಯ ಮೇಲೆ ಅವರ ಕನ್ನಡ ಭಾಷಾ ಪಾಂಡಿತ್ಯವು ವಿಕಾಸಗೊಂಡಿದೆ. ತೆಲುಗು ಸಾಹಿತ್ಯವು ಬೇರಾಗಿ ಕಾಣಸದೇ ಅವರ ಭಾವಗಳು ಕನ್ನಡದಲ್ಲಿ ಕುಸುಮಿಸಿ, ಕನ್ನಡಕ್ಕೆ ಘನತೆಯನ್ನು ತಂದವು. ಇದನ್ನು ಅವರು ತೆಲುಗಿನಿಂದ ಕನ್ನಡೀಕರಿಸಿದ "ಬಸವರಾಜು ಅಪ್ಪಾರಾವು ಭಾವಗೀತಮುಲು ಮತ್ತು ರಾಮಚಂದ್ರಸ್ವಾಮಿಗಳ ಯಾತ್ರಿಕುಡು" ಸಾರಿ ಹೇಳುತ್ತಿವೆ. ಅವರ ಮೇಲೆ ಪ್ರಖ್ಯಾತ, ಪ್ರಾಚೀನ, ಅರ್ವಾಚೀನ ತೆಲುಗು ಕವಿಗಳಾದ ಪೋತನ್ನ, ಪಾಲ್ಕುರ್ಕಿ ಸೋಮನಾಥ, ವೇಮನ ದೇವುಲಪಲ್ಲಿ ಕೃಷ್ಣಶಾಸ್ತ್ರಿ, ತಿರುಪತಿ ವೆಂಕಟರವುಲು, ಬಳ್ಳಾರಿಯ ಧರ್ಮವರಂ ರಾಮಕೃಷ್ಣಮಾಚಾರಿಗಳು ತಮ್ಮ ಪ್ರಭಾವವನ್ನು ಬೀರಿದ್ದಾರೆ. ಜೋಳದರಾಶಿಯವರ ತೆಲುಗು ಕೃತಿಗಳು ಸಹಜವಾಗಿ, ಸರಳವಾಗಿ, ಸೊಗಸಾಗಿ

ಶಿವಮಯವಾಗಿ ಮೂಡಿಬಂದಿವೆ. ಪುನರುಕ್ತಿ ದೋಷವು ಬಂದರೂ ಮತ್ತೊಮ್ಮೆ, ಮಗುದೊಮ್ಮೆ ಸಾರಿ ಹೇಳುತ್ತೇನೆ. ಜೋಳದರಾಶಿಯವರ ತೆಲುಗು ಕೃತಿಗಳು ಸಹಜವಾಗಿ, ಸರಳವಾಗಿ, ಸೊಗಸಾಗಿ, ಶಿವಮಯವಾಗಿ ಮೂಡಿಬಂದಿವೆ. ಇವು ಬಹುಮಟ್ಟಿಗೆ ಅವರ ಇಷ್ಟ ದೈವವಾದ ರಾಮೇಶನ ಅಂಕಿತವನ್ನು ಹೊಂದಿ, ಭಾವಪರವಶರಾಗಿ ಹಾಡಿಕೊಂಡಿರುವವೇ ಆಗಿವೆ. ಸಾಮಾನ್ಯವಾಗಿ ಇಂದಿನ ತೆಲುಗು ಸಾಹಿತ್ಯ ಭಾವಕವಿತೆ, ಅಭ್ಯುದಯಕವಿತೆ, ವಿಪ್ಲವಕವಿತೆ ಇತ್ಯಾದಿಗಳ ವರ್ಗೀಕರಣ ವನ್ನು ಹೊಂದಿರುತ್ತವೆ. ಜೋಳದರಾಶಿಯವರ ರಚನೆಗಳು ಇವೆಲ್ಲವನ್ನು ಒಳಗೊಂಡು ಅನುಭವ ಸಾಹಿತ್ಯವಾಗಿ ಹೊರಹೊಮ್ಮಿವೆ. ಸಹಜವಾಗಿ ನಟರು, ಗಮಕಿಗಳು ಆಗಿರುವ ಹಿನ್ನಲೆಯಲ್ಲಿ ಅವರ ಗೀತೆಗಳು ಸುಲಭವಾಗಿ ಹಾಡುಗಾರಿಕೆಗೆ ಬರುವಂತೆ ರಚನೆಗೊಂಡಿವೆ. ಭಾಷೆಯು ರಾಯಲಸೀಮ ಭಾಗದ ಮಾಂಡಲಿಕವನ್ನು ಪ್ರತಿನಿಧಿ ಸುತ್ತದೆ. ಅವರ ಜೀವನ ನಡೆದುಬಂದ ಎಂಭತ್ತು ವರ್ಷಗಳ ಜೀವನ ಮಾರ್ಗದಲ್ಲಿ ಭಾವಜೀವಿಗಳಾಗಿ, ಸೌಂದರ್ಯೋಪಾಸಿಗಳಾಗಿ, ಸಮಾಜದ ಹಿತಚಿಂತಕರಾಗಿ, ಸತ್ಯ ಶೋಧಕರಾಗಿ, ಇಂದು ಅನುಭವಿಗಳಾಗಿ, ಭಕ್ತರಾಗಿ ವಿವಿಧ ಹಂತಗಳಲ್ಲಿ ಹೊರ ಹೊಮ್ಮಿದ ಅವರ ಕೃತಿಗಳು ಸುಂದರವಾಗಿ, ಭಾವನಾಮಯವಾಗಿ, ಸಾರ್ವಜನಿಕವಾಗಿ, ನಿಚ್ಚಳವಾಗಿ, ಭಕ್ತಿ ಅನುಭವಗಳ, ಮಧುರ ಸಮ್ಮಿಲನವಾಗಿ ಕಣ್ಮನಗಳನ್ನು ತಣಿಸುವ ರಸದೂಟಗಳಾಗಿವೆ.

ಸಹಜವಾಗಿ ಕೃತಿಗಳನ್ನು ಅಳೆಯುವ ಸಾಧನೆಗಳು ಹೀಗಿರುತ್ತವೆಂದು ನನ್ನ ಭಾವನೆ. ಅವು 1. ಸ್ಪಷ್ಟತೆ 2. ಸರ್ವಕಾಲೀನತೆ 3. ಸೌಂದರ್ಯತೆ ನಿಷ್ಕಲ್ಮಷತೆ ಮತ್ತು ನಿಬದ್ಧತೆಗಳು. ಜೋಳದರಾಶಿಯವರ ಕೃತಿಗಳಲ್ಲಿ ಅವರ ಭಾವಗಳು ಅಸಂದಿಗ್ಧತೆಯ ಗೊಂದಲವಿಲ್ಲದೆ ಸ್ಪಷ್ಟವಾಗಿ ಇರುತ್ತವೆ.

ಏಂದಂಕೋ ನೀಕಿಂತ ಪೋರಾಟಮೋಯಿ
ಉನ್ನದಾನಿತೊ ತೃಪ್ತಿ ಚಂದವಾ ಮನಸಾ

ಇದು ಅವರ ಒಂದುಗೀತೆಯ ಪಲ್ಲವಿ.

ರಾನಿದಿರಮ್ಮನ್ನ ರಾದುರಾಯನ್ನ
ರಾನಿ ಕೋರಿಕಲನ್ನ ಉನ್ನದಾನಿಕಿಸುನ್ನ
ರಾನಿದಾನಿಕನ್ನ ಉನ್ನದೇ ಮಿನ್ನ
ಲೇನಿ ಸೇರಾಶಲನಂ ಪೆಂಚುಕೊಕನ್ನ ॥

ಭಾವ, ಅರ್ಥ, ಅನುಭವ ಪೂರ್ಣವಾಗಿದ್ದು, ಚಿಕ್ಕ ಚಿಕ್ಕ ಪದಗಳಲ್ಲಿ ಸರಾಗ ವಾಗಿ ಬಂದ ಈ ಗೀತೆಯಲ್ಲಿ ಸ್ಪಷ್ಟತೆಯು ಪರಾಕಾಷ್ಟವನ್ನು ತಲುಪಿದೆ. ಇದು ಆಧ್ಯಾತ್ಮಿಕವಾಗಿ ಜೀವನಸಾರವನ್ನು ಸುಲಲಿಲತವಾಗಿ, ಬಾಳೆಯಹಣ್ಣನ್ನು ಸುಲಿದು

ಕೊಟ್ಟಂತೆ ಓದುಗನ ಹೃದಯದ ಆಳವನ್ನು ತಟ್ಟಿ ನಿಲ್ಲುತ್ತದೆ. ಇದೇ ಸ್ಪಷ್ಟತೆಯನ್ನು ಅವರ ಅನುವಾದ ಗ್ರಂಥಗಳಲ್ಲಿಯೂ ನೋಡಬಹುದು. ಈ ದಿಶೆಯಿಂದ ಪಂಡಿತರಿಂದ ಪಾಮರರವರೆಗೂ ಅವರ ಕವನಗಳು ಓದುಗರ ಮನಸ್ಸನ್ನು ಸೆರೆ ಹಿಡಿಯುತ್ತವೆ.

ಕನ್ನಡಿಯಲ್ಲಿಯ ತನ್ನ ಪ್ರತಿಬಿಂಬವನ್ನು ಪ್ರೀತಿಸಿದಷ್ಟು ಮಾನವನು ಮತ್ತಿನ್ನಾವದನ್ನು ಪ್ರೀತಿಸಲಾರ. ಅವರ ಗೇಯಗಳ ವಸ್ತುವು ಓದುಗರಿಗೆ ಬಹು ಸನ್ನಿಹಿತವಾಗಿ ಒಬ್ಬೊಬ್ಬನಿಗೆ ಅವು ಕೇವಲ ತಮಗಾಗಿಯೇ ಬರೆದಿರುವಂತೆ ಆನಂದ ಗೊಳಿಸುತ್ತವೆ. ಆ ಗೀತೆಗಳಲ್ಲಿನ ಅವರ ಅನುಭವಗಳು ತಮ್ಮವೆಂಬಂತೆ ಓದುಗನು ತಲ್ಲಣಿಸಿ ಕವಿಯೊಂದಿಗೆ ಮಮೇಕವಾಗುತ್ತಾನೆ.

ಪೋಯಿ ವಸ್ತಾನಂಡಿ ಮಾ ಊರಿಕಿ
ಅಂದರಿಕಿ ಶರಣಂಡಿ ಶಲವಿಚ್ಚಿ ಪಂಪಂಡಿ.
ಬ್ರತಿಕೆನನ್ನಾಳ್ಳನೇನೇ ಮೇಮೋಜೇಶಾನು
ತಪ್ಪುತಿನ್ನಕನನ್ನು ಕೃಪತೊ ಮನ್ನಿಂಚಂಡಿ
ಮಾಯೂರಿ ರಾಮೇಶುಡು ಪಿಲುವನಂಪೇಡು–
ಕನ್ನೀರು ನಿಂಚಕ ದೀವನಲೀಯಂಡಿ ॥

ಕವಿಬ್ರತಿಕಿತೆ ಕವಿಕಾವ್ಯಮುಚಚ್ಚುನು–
ಕವಿಚಚ್ಚಿನ ಆ ಕಾವ್ಯಮುಬ್ರತುಕುನು
ಕವಿಕಿ ಕಾವ್ಯಮುನಕೊಕ ಬ್ರತುಕುಂಡದು–
ಲೊಕಮುಲೊನಿದಿ ಚಿತ್ರಚರಿತ್ರಮು

ಭಾವವು ಸರ್ವಜನೀಯವಾಗಿ ಕವಿಯು ಮುಂದೆ ನಿಂತು ಕೇಳಿದಂತಾಗಿ ಓದುಗನು ಗದ್ಗದನಾಗುತ್ತಾನೆ. ಬೀಳ್ಕೊಡುಗೆಯ ವೇದನೆಯ ಕಣ್ಣೀರು ಕಂಗಳಲ್ಲಿ ಕದಲಾಡುತ್ತವೆ. ಇಷ್ಟು ನೇರವಾಗಿ ಹೃದಯವನ್ನು ತಾಕುವ ಕವಿಗಳನ್ನು ಬೆರಳುಗಳ ಮೇಲಷ್ಟೇ ಎಣಿಸಬಹುದಾಗಿದೆ.

ಸಹಜ ಸೌಂದರ್ಯೋಪಾಸಿಗಳಾದ ಇವರ ಗೀತೆಗಳಲ್ಲಿ ಸೌಂದರ್ಯವು ಪರಿಮಳದೊಂದಿಗೆ ವಿಕಾಸಗೊಂಡಿದೆ.

ನಾಕೇಮಿ ಕೊರತ ಕವಿ ಶೇಖರೊಡನೇನು
ನಾ ದಿವ್ಯ ಸೌಂದರ್ಯ ಕಾವ್ಯ ಸುಂದರಿಯುಂಡ
ನಾ ಕವನ ಸಾಮ್ರಾಜ್ಯ ಲಕ್ಷ್ಮೀನಿವಾಸಮುನ
ನಿರ್ಭಯ ವಿಲಾಸಮುಲು ಸುರತ ಸಲ್ಲಾಪಮುಲು.

ನಿತ್ಯ ಯೌವನರಸಿಕ ರಸಗಂಧ ವಾಹಿನುಲು
ಮೃತ್ಯುವೇಲೇನಿ ನಾ ಕಾವ್ಯಾಮೃತಮುಲುಂಡ ॥

ಇದಂ ಅವರ ಕಾವ್ಯ ಸೌಂದರ್ಯದ ಅವಗಾಹನೆಗೆ ಚಿಕ್ಕ ಉದಾಹರಣೆ ಮಾತ್ರ. ಅಂತ್ಯಾನು ಪ್ರಾಸಗಳೊಂದಿಗೆ ಲಘು ಸಮಾಸಗಳೊಂದಿಗೆ, ಸುಕುಮಾರವಾಗಿ, ವಿದ್ಯುಲ್ಲತೆಗಳಾಗಿ, ಅವರ ಕವನಗಳು ನೋಟಮಾತ್ರದಲ್ಲಿ ಓದುಗರನ್ನು ತಡೆದು ನಿಲ್ಲಿಸುತ್ತವೆ.

ಕವಿಯು ಸಾಧಾರಣ ಮನುಷ್ಯನೇ. ಅವನು ಮಾನವ ಸಹಜವಾದ ರಾಗ ಮೋಹಗಳಿಗೆ ಅತೀತನಾಗಿರುವುದಿಲ್ಲ. ಮಹಾಕವಿಯಾದವನು ಇವಕ್ಕೆ ಅತೀತನಾಗಿ ನಿಂತು ಸತ್ಯವನ್ನು ಪ್ರಕಟಿಸಬೇಕು. ಅವರ ಕಾವ್ಯ ವಸ್ತುವಿನಲ್ಲಿ ವಿಚಾರಗಳ, ತತ್ವಗಳ. ಸಂಘರ್ಷಣೆಯಾದಲ್ಲಿ ಅವರು ವಿವಾದೀತವಾಗಿ ಸ್ಪಷ್ಟವಾದ ನಿಲುವನ್ನು ತಾಳುತ್ತಾರೆ. ಇದನ್ನು ನೆಚೇಸಿಂದೇಮಿ (ನಾ ಮಾಡಿದ್ದೇನು) ಎನ್ನುವ ಗೀತೆಯಲ್ಲಿ ಅಕ್ಷರಕ್ಷರವಲ್ಲೂ ನಾವು ಕಾಣುತ್ತೇವೆ. ತಾನು ಮಾಡಿದ್ದೇನು ಎಂದು ಕವಿ ಪ್ರಶ್ನಿಸಿಕೊಂಡು ಮಾಡದದ್ದರಲ್ಲಿ ಮಾಡಿದ್ದು ಮುಳುಗಿ ಹೋದಾಗ ಉಳಿಸಿದ್ದು ಬೃಹದಾಕಾರದ ಭೂತವಾಗಿ ಎದುರು ನಿಂತಾಗ, ವಿವೇಕವು ನಕ್ಕು ಕಣ್ಣು ಮುಚ್ಚಿದೆಯಂತೆ. ಆಗ

ವಿವಶುಂಡ್ನೈ ನಾಲೋಪಲನೇ ಚೂಶಾನಪುಡು
ಅಂತಾಚೀಕಟ ವೆಲುಗುಲ ತುಮುಲ ಸಂಕುಲಮು.
ಅಡಲುಚು ಮತಿವಿಭ್ರಾಂತಿತೊ ನಿಲಿಚಾನು
ಅಪ್ಪುಡೇಮೊ ಕಳ ಸೌಂದರ್ಯಮು ತಾಲ್ಚಿಂದಿ
ಆ ಕಳ ಮರುಗೈ ವೆಲುಗೈ ಪ್ರಸರಿಂಚಿಂದಿ.
ಆ ವೆಲುಗಂತಟ ನಾದಮಯಂಬೈ ಮ್ರೊಗಿಂದಿ
ಆ ಮ್ರೊತಂತಟ ನಿಷ್ಕಲ ನಿಜಮೈಪೋಯಿಂದಿ.

ನಿಷ್ಠುರವಾಗಿ ಒಮ್ಮೊಮ್ಮೆ ಅವರು ತಮ್ಮ ಪ್ರಿಯದೈವವನ್ನು ಪ್ರಶ್ನಿಸುವ ಬಗೆಯಂತೂ ಮಧುರಾತಿ ಮಧುರ.

ಆಯಪ್ಪಕಿಚ್ಚಾವು ಈಯಪ್ಪಕಿಚ್ಚಾವು,
ಅಡಿಗಿನಪ್ಪಲಕಂತ ಈರಾಗನಿದಿ ಇಚ್ಚಾವು.
ಏಯಪ್ಪ ಈಯನಿಧಿ ನೀವೆಂದುಕಿಚ್ಚಾವು
ಬಿಚ್ಚಗಾಡೈತುದುಕು ಬುರ್ರ ಛೇಟ್ಟಾವು.

ಮೃದು ಹಾಸ್ಯದ ತುಣುಕುಗಳನ್ನು ದರ ಹಾಸಿಸುವ ಈ ಕವನ ಎಷ್ಟು ಸಿಹಿಯೋ ಅಷ್ಟು ನಿರ್ಮಮತಾಪೂರ್ಣ.

ಜೋಳದರಾಶಿಯವರು ಸಾಮಾಜಿಕ ಪುರುಷರು. ಅವರ ಆತ್ಮಕಥೆಯಾದ "ನಂದೇ ನಾನೋದಿದೆ"ಯಲ್ಲಿ ಅವರ ಭಾವನೆಗಳನ್ನು ನಿಚ್ಚಳವಾಗಿ ತೋಡಿಕೊಂಡಿರುವಂತೆ ಅವರ ತೆಲುಗು ಕವನಗಳಲ್ಲಿಯೂ, ಏಕೈಕ ಲಕ್ಷ್ಯವಾದ ಮಾನವತೆ ಸ್ಪಷ್ಟವಾಗಿ ಕಾಣಿಸುತ್ತದೆ. ಆಡಂಬರ ರಹಿತನಾದ, ನಿಚ್ಚಳನಾದ ಪರಸ್ಪರೋಪಕಾರಿಯಾದ ಸರಳ ಮಾನವನು ಅವರ ಗುರಿ. ಜನಕ್ಕೆ ಅನ್ನ ನೀಡುವ ರೈತನ ಬಗ್ಗೆ ಅವರ ಗೋಳಿನ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ಪವಿತ್ರವಾದ ಹಳ್ಳಿಯ ಬಾಳನ್ನು ವಿಲಾಸಮಯ, ಸತ್ವ ಹೀನದ ಕಡೆಗೆ ಎಳೆದೊಯ್ಯುತ್ತಿರುವ ಕೃತಕ ನಾಗರಿಕತೆಯ ಬಗ್ಗೆ ಈ ಕವಿಯು ಬೇಸುಗೆಯ ನಡು ಹಗಲ ರವಿಯಾಗಿ ಜ್ವಲಿಸುತ್ತಾರೆ. ಮಠ, ಮಠಗಳ ಅಧಿಪತಿಗಳು ತಾವು ಬಾಳಿ ತೋರಿಸದೆ ಇಂದು ಸಾಮಾನ್ಯ ಮಾನವನು ಆಚರಿಸಲಾಗದ ಬೋಧೆಗಳನ್ನು ಮಾಡುತ್ತಿರುವುದು ಅವರು ಸಹಿಸರು.

> ವೀರಶೈವುಲೇಮಂಟಾರು ? ತನುಮನ ಧನಂಬುಲಿಮ್ಮಂಟಾರು
> ಇಸ್ತೇ ಮಿಗೆಲೇದೇಮುಂದಿ ಅಂತಾಮುನಿಗೇಪೋತುಂದಿ

ಎಂದು ನಿರ್ಭಯರಾಗಿ ಪ್ರಶ್ನಿಸುತ್ತಾರೆ.

ಕಾಯಕವೇ ಕೈಲಾಸವೆನ್ನುವುದು ಅವರು ನಂಬಿದ ಜೀವನ ತತ್ವ. ಅದನ್ನು ಕಾವ್ಯಗಳಲ್ಲಿ ಮಾತ್ರವೇ ಅಲ್ಲದೆ ತಮ್ಮ ಜೀವನದಲ್ಲೂ ನಡೆದು ತೋರಿಸಿದ ಕರ್ಮಯೋಗಿ ಅವರು.

ಅವರ ಭಕ್ತಿ ಗೀತೆಗಳ ಮೇಲೆ ಪೋತನ್ನನ ಪ್ರಭಾವ ಎತ್ತಿ ಕಾಣುತ್ತದೆ. ಪೋತನ್ನನು ಹೇಳಿದಂತೆ

> ಕೈತಣಿಯುವಂತೆ ಶಿವಪೂಜೆ ಮಾಡದವನು
> ಬಾಯಿ ನೊಯ್ಯುವಂತೆ ಹರಿ ಕೀರ್ತಿ ಹಾಡದವನು
> ದಯೆಯು ಸತ್ಯವನೊಳಗೆ ತಾನೆನೆಯದವನು
> ಹುಟ್ಟಲೇತಕೆ ತಾಯಿಯ ಹೊಟ್ಟೆ ಕೆಡಗು

ಎನ್ನುವ ಮಟ್ಟವನ್ನು ಸೇರಲು ಅವರು ತಮ್ಮ ದೈನಂದಿನ ಜೀವನದಲ್ಲಿ ಎಡೆಬಿಡದ ಹೋರಾಟ ನಡೆಸುತ್ತಲೇ ಸಾಗಿದ್ದಾರೆ. ಶಿವನು ಅವರಿಗೆ ಮೊದಲು ತಂದೆಯಾಗಿ, ನಂತರ ಸ್ನೇಹಿತನಾಗಿ, ಬಂಧುವಾಗಿ, ಆತ್ಮೀಯನಾಗಿ ಕಡೆಗೆ ಹಸುಗೂಸಾಗಿ ಅವರ ಕೈಗಳಲ್ಲಿ ಪಳಗುತ್ತಾನೆ. ಶಿವನನ್ನು ನೆನೆದು, ನಗಿಸಿ, ನಕ್ಕು, ನಲಿದಾಡಿಸಿ, ಆಟವಾಡಿಸಿ, ಅನೇಕ ಪರಿಪರಿಯಾಗಿ ತಮ್ಮ ಭಕ್ತಿಯನ್ನು ಅವರ ಗೀತೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಒಂದು ಕಡೆ ವೀರಭದ್ರನ ಜನ್ಮದ ಬಗೆಗೆ

ನಿನ್ನದೆಷ್ಟು ವಿಚಿತ್ರ ಸಂಸಾರವಯ್ಯ, ಅಪ್ಪನಿಗೊಬ್ಬ ಮಗ [ಷಣ್ಮುಖ] ಅಮ್ಮನಿಗೊಬ್ಬ ಮಗ [ವಿನಾಯಕ] ಸಾಲದೇ ಕೋಪಕ್ಕೆ ಒಬ್ಬ ಮಗ [ವೀರಭದ್ರ] ಎಂದು ತಮ್ಮ ವಿಮರ್ಶಾ ಭಕ್ತಿಯಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಗಳಲ್ಲಿ ಗೌಡರು ಒಮ್ಮೊಮ್ಮೆ ಬಸವಣ್ಣನಾಗಿ, ನಂಬಿಯಕ್ಕನಾಗಿ, ಶಿಲಾದನಾಗಿ, ನಂದಿಯಾಗಿ, ಕಾರೈಕಾಲಮ್ಮೆಯಾಗಿ. ಯಶೋಧೆಯಾಗಿ ತಮ್ಮ ಅಂತರಂಗವನ್ನು ಬಹು ಪಾತ್ರಗಳ ನಾಟಕ ರಂಗವನ್ನಾಗಿ ಪ್ರದರ್ಶಿಸಿ ರಂಜಿಸಿದ್ದಾರೆ.

ವಚನಾಮೃತದ ಅನುವಾದ ಸುಂದರವಾಗಿ ಮೂಲಕ್ಕೆ ಅತಿ ಸನ್ನಿಹಿತವಾಗಿ, ಅರ್ಥ ಪೂರ್ಣವಾಗಿ ಸಾಗಿ ಬಂದಿದೆ. ಮುಖ್ಯವಾಗಿ ವಚನಾಮೃತಕ್ಕೆ ಅವರು ಬರೆದ ಪ್ರಸ್ತಾವನೆ ಅನೇಕ ವಿದ್ವಾಂಸರ. ಪಂಡಿತರ ಪ್ರಶಂಸೆಯನ್ನು ಪಡೆದಿದೆ. ಅವರ ಅನುವಾದದ ತತ್ವತೆಯನ್ನು ಪಂಡಿತಮಾನ್ಯರಾದ ದಿವಾಕರ್ಲ ವೆಂಕಟಾವಧಾನಿಯವರು ಸಭಾ ಮುಖವಾಗಿ ಹೊಗಳಿ-ಹೊಗಳಿ ಹೇಳಿದ್ದಾರೆ.

ಅವರ "ಬಯಲುಗೊನ್ನ ವೆಲುಗು"ನಲ್ಲಿ ಹೊರಬಂದ ಶೂನ್ಯಸಂಪಾದನೆಯ ವಿವೇಚನಾ ವ್ಯಾಖ್ಯಾನಗಳಿಗೆ ತಲೆದೂಗಿದ, ತೆಲುಗು ವಿಶ್ವ ವಿದ್ಯಾನಿಲಯದ ಕುಲಪತಿ ಗಳಾದ ಶ್ರೀ ಧುಮಾಡಿ ದೊಣಪ್ಪನವರು ಅದರ ಪ್ರಕಟಣೆಯ ಕಾರ್ಯವನ್ನು ತಮ್ಮ ಭಾಗ್ಯವೆಂದು ಒಪ್ಪಿಕೊಂಡಿದ್ದಾರೆ. ಅದನ್ನು ಕುರಿತು ಪ್ರಕಟನಾ ಪೂರ್ವದ ವಿಮರ್ಶಕರೊಬ್ಬರು ಬಯಲುಗೊನ್ನ ವೆಲುಗು "ತೆಲುಗು ಭಾಷಕ್ಕೆ ಒಕ ವೆಲುಗು" ಎಂದು ಮನ ಮುಟ್ಟಿ ಹೇಳಿದ್ದಾರೆ. ಅದು ಇನ್ನೂ ಅಚ್ಚಿನಿಂದ ಹೊರಬಂದು ಜೀವನ ತತ್ವ ಜಿಜ್ಞಾಸುಗಳ ಜ್ಞಾನತೃಷೆಯನ್ನು ನೀಗಿಸಬೇಕಾಗಿದೆ.

ಪ್ರಕೃತಿಯಂತೆ ಅದರ ಆರಾಧಕರೂ ಬಹುಮುಖರು. ಜೋಳದರಾಶಿ ದೊಡ್ಡನ ಗೌಡರು ಪ್ರಕೃತಿ ಪೂಜಾರಿಗಳು. ಅವರ ಸಾಹಿತ್ಯದ ಸರ್ವ ಮುಖಗಳನ್ನು ಇಲ್ಲಿ ಸ್ಪರ್ಶಿ ಸಲು ಅಸಾಧ್ಯ. "ಚಂದ್ರುನಿಕೊಕ ನೂಲು ಪೋಗು" (ಚಂದ್ರಮನಿಗೊಂದು ನೂಲೆಳೆ) ಎಂಬಂತೆ ನನ್ನ ಈ ಚಿಕ್ಕಬರಹದಲ್ಲಿ ಅವರನ್ನು ಅಲ್ಪಸ್ವಲ್ಪ ತೋರಿಸಲು ಯತ್ನಿಸಿದ್ದೇನೆ. ಸಾಧಿಸಿದ್ದರೆ ಅದು ಅವರ ಸಾನ್ನಿಹಿತ್ಯದ ಫಲ. ಅಪಯಶಸ್ಸಿಗೆ ಕನ್ನಡದಲ್ಲಿ ನನ್ನ ಅಲ್ಪ ಪರಿಶ್ರಮವೇ ಕಾರಣ.

ಕೃತಿಗಳೆಂದರೆ ಕೇವಲ ಅಕ್ಷರ ರೂಪ ತಾಳಿದುವು ಮಾತ್ರವಲ್ಲ ಎಂಬುದನ್ನು ಒಪ್ಪಿಕೊಳ್ಳುವಂತಿದ್ದರೆ, ಅವರು ಹೈದರಾಬಾದಿನಲ್ಲಿ, ಗುಂತಕಲ್ಲಿನಲ್ಲಿ (ನಾನು ಕೇಳಿ ದವುಗಳು) ಮಾಡಿದ ಉಪನ್ಯಾಸಗಳು ಒಂದೊಂದು, ಒಂದೊಂದು ಬೇರು ಕೃತಿ ಯನ್ನು ಮಾಡಬಹುದು. ಅವರು ಜಗತ್ಪ್ರಸಿದ್ಧನಾದ ಪೋತನ್ನನ ಭಾಗವತದಲ್ಲಿನ ಗಜೇಂದ್ರ ಮೋಕ್ಷದಲ್ಲಿನ ಗಜೇಂದ್ರನ ಪ್ರಾರ್ಥನೆಗೆ ನೀಡಿದ ವ್ಯಾಖ್ಯಾನ....ಒಂದೇ... ಎರಡೇ....ಮೂರೇ... ಒಂದೊಂದೂ ಒಂದೊಂದು ರಸದೌತಣ. ಅವರ ಕೃತಿಗಳನ್ನು

ನೆನೆಯುವ ಈ ಭಾಗ್ಯವು ನನಗೊದಗಿದ್ದು ಜೋಳದರಾಶಿ ಅಭಿನಂದನಾ ಸಮಿತಿಯವರ —ಶ್ರೀಮತಿ ಜಯಮ್ಮನವರ ಕೃಪೆ

ದೊಡ್ಡನ ಗೌಡನು ನನಗೆ ಪೆದ್ದನ್ನ (ದೊಡ್ಡಪ್ಪ)
ಬಲ್ಲರೇ ನಿನ್ನಂತೆ ಓದಲಾರಾದರೂ ?
ಅದು ಮಹಾನದಿಯಂತೆ ಸಾಗುತಿಹುದು.
ಬಲ್ಲರೇ ನಿನ್ನಂತೆ ಅರ್ಥವ ವಿವರಿಸಲ್
ಶಿಲೆ, ಕಲ್ಲುಸಕ್ಕರೆಯಾಗಿ ಬಂತು
ಮತ್ತು ವ್ಯಾಖ್ಯಾನವೋ ಮತ್ತೊಮ್ಮೆ ಮಂಗುದೊಮ್ಮೆ
ಹಲಸಿನಣ್ ತೊಳೆಗಳ ಹಂಚಿದಂತೆ
ವಿವಿಧೋಪಮೆಗಳನ್ನು ಸವಿಯಾಗಿ ಪೇಳ್ವುದೋ
ಬಣ್ಣಬಣ್ಣದ ಹೂವ ಹಾರವಹುದು.
ಎರಡು ಭಾಷೆಯ ಉದ್ದಂಡ ಕವಿಯು ನೀನು
ಅರಿಯೆ, ಜೋಳದರಾಶಿಯಸರ್ಘ್ಯ ಮಣಿಯೆ,
ದೊಡ್ಡವನು ನೀನು ನಿಜವಾಗಿ ತೂಗಿ ನೋಡೆ
ನನ್ನ ಪೆದ್ದನ್ನ ಕೊಳ್ಳೆನ್ನ ನಮನಗಳನು ॥

ಎಂದು ಕೈಮುಗಿಯುವದೇ ನನಗೆ ಆಶೀರ್ವಾದ.

★★★

ಕಲಿಯದೆ ಕವಿತೆಗಳ ರಚಿಸಿದೆ
ಕವಿಯಾಗಿ ಕೀರ್ತಿಗೊಳ್ಳುವಾಸೆಯಿಂದಲ್ಲ.

★

ಆದದ್ದು ನಿನ್ನ ಕೃಪೆ, ಆಗದ್ದು ನಿನ್ನ ಕೃಪೆ
ಇದ್ದದ್ದು ನಿನ್ನ ಕೃಪೆ, ಇಲ್ಲದ್ದು ನಿನ್ನ ಕೃಪೆ

ನಾಟ್ಯಯೋಗಿ ಬಳ್ಳಾರಿ ರಾಘವರು

ಶಂಭು ಬಳಿಗಾರ

ಕನ್ನಡ ರಂಗಭೂಮಿಯ ಖ್ಯಾತನಾಮರಲ್ಲಿ ಒಬ್ಬರಾದ, ಬಳ್ಳಾರಿ ರಾಘವರ ಗರಡಿಯಲ್ಲಿ ತಯಾರಾದ, ಶ್ರೀ ಜೋಳದರಾಶಿ ಕೆ. ದೊಡ್ಡನಗೌಡರದು ಅಷ್ಟೇ ಖ್ಯಾತಿವೆತ್ತ ಹೆಸರು. ಹಾಗೆ ನೋಡಿದರೆ ಇವರೊಬ್ಬ ಹಳ್ಳಿಯ ಗೌಡರು. ಶ್ರೀಮಂತ ಸುಸಂಸ್ಕೃತ ಕೃಷಿಕ ಮನೆತನದಲ್ಲಿ ಜನಿಸಿದ ಗೌಡರು, ಶಾಲೆಯಲ್ಲಿ ಓದಿದ್ದು ತೀರಾ ಕಡಿಮೆ. ಬಾಲ್ಯದಲ್ಲಿಯೇ ಬಯಲಾಟದ ಗೀಳು ಗೌಡರಿಗಂಟಿಕೊಂಡಿತು. ಅಲ್ಲಿಂದಲೇ ಅವರ ಕಲಾಜೀವನದ ಪ್ರವೇಶವಾಯಿತೆನ್ನಬೇಕು. 'ನಟನೆ' 'ಗಮಕ' 'ಹಾಡುಗಾರಿಕೆ' ಕಲೆಗಳು 'ಬಾಲಕ' ಗೌಡರಿಗೆ ಸಹಜವಾಗಿ ಮೈಗೂಡಿಕೊಂಡವು. ಅಲ್ಲದೆ ಸ್ವತಂತ್ರವಾಗಿ ಅಧ್ಯಯನ ಕೈಕೊಂಡು ಅಪಾರವಾದ ಜ್ಞಾನ ಸಂಪಾದಿಸಿಕೊಂಡರು. ಲೌಕಿಕ ಬದುಕಿನ ಆಗುಹೋಗುಗಳಿಗೆ ವಿಶೇಷ ಗಮನ ಕೊಡಲಿಲ್ಲ. ಹಾಗೆ ನೋಡಿದರೆ ಸ್ಫುರದ್ರೂಪಿ, ತುಂಬುಯೌವ್ವನದ ಗೌಡರು ತಮ್ಮ ಮನೆತನದ ಶ್ರೀಮಂತಿಕೆಯ ವೈಭವ ವಿಲಾಸಗಳಲ್ಲಿಯೇ ಕಾಲ ಕಳೆಯಬಹುದಾಗಿತ್ತು. ಅದನ್ನು ದೂರ ವಿರಿಸಿ, ತಮ್ಮ ಬದುಕನ್ನು ಕಲಾಸೇವೆಗೆ ಮುಡಿಪಾಗಿರಿಸಿದರು. ತಾವು ಕಂಡುಂಡ ಅನುಭವವನ್ನು ಕಾವ್ಯವಾಗಿಸಿ ಹಾಡಿಕೊಂಡರು. ಹಾಡಿಕೊಂಡ ಹಾಡುಗಳನ್ನೇ

ಕೃತಿರೂಪದಲ್ಲಿ ಹೊರತಂದರು. ಬಯಲಾಟದಿಂದ ನಾಟಕಕ್ಕೆ ತಿರುಗಿದ ಗೌಡರು, ರಂಗಭೂಮಿಗೆ ಸಲ್ಲಿಸಿದ ಸೇವೆ ಅದ್ವಿತೀಯವಾದುದು. ಬಳ್ಳಾರಿ ರಾಘವರ ಜೊತೆಯಲ್ಲಿದ್ದು ರಂಗಭೂಮಿಯ ಬೆಳವಣಿಗೆಯ ಹೊಳಹುಹಾಕಿದವರು ಗೌಡರು. ಅವರಿಂದು ರಂಗಭೂಮಿಯ 'ಇತಿಹಾಸ'ದಂತೆ ಬದುಕಿದ್ದಾರೆ. ಸಮಾಜ ಗೌಡರ ಸೇವೆಯನ್ನು ಅನುಲಕ್ಷಿಸಿ, ಅವರನ್ನು ಗೌರವಿಸಿ ಸತ್ಕರಿಸಿದೆ. "ಗಮಕ ಕಲಾನಿಧಿ"ಯೆಂಬ ಬಿರುದುಹೊತ್ತ ಗೌಡರ ಮನೆ ಬಾಗಿಲಿಗೆ ಅನೇಕ ಪದವಿ ಪುರಸ್ಕಾರಗಳು ಸಾಲುಗಟ್ಟಿ ನಿಂತವು. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಗುಲ್ಬರ್ಗಾ ವಿಶ್ವವಿದ್ಯಾಲಯದ 'ಗೌರವ ಡಾಕ್ಟರೇಟ್' ಪದವಿಗಳು, ಅವುಗಳಲ್ಲಿ ಸೇರಿವೆ. ಈ ಪದವಿಗಳಷ್ಟೇ ಅಲ್ಲ, ಹಿರಿಯರಿಂದ ನಡೆದುಕೊಂಡು ಬಂದ ಗೌಡರ ಮನೆತನದ ಘನತೆ-ಪ್ರತಿಷ್ಠೆಗಳಾವುವೂ ಗೌಡರ ಸರಳ ಜೀವನಕ್ಕೆ ಅಡ್ಡಿಯಾಗಿಲ್ಲ. ಅವುಗಳ ಮೋಹ ಲೆಕ್ಕಿಸದೆ ಸಕಲ 'ಸಿರಿ ಸಂಪತ್ತಿ'ನಿಂದ ಕೂಡಿದ ಕಂಟುಂಬದ ಭಾರವನ್ನು ಕಳಚಿಕೊಂಡು, ಯೋಗಿಯಂತೆ ಜೀವನ ನಡೆಸುತ್ತಿದ್ದಾರೆ. ಅಷ್ಟೇ ಅಲ್ಲ ಒಂದರ್ಥದಲ್ಲಿ ಗೌಡರು, ಕಾವಿಧರಿಸದ ಸನ್ಯಾಸಿಗಳಾಗಿದ್ದಾರೆ.

ಶ್ರೀ ದೊಡ್ಡನಗೌಡರರದು ಬಹುಮುಖ ಪ್ರತಿಭೆಯಿಂದ ಕೂಡಿದ ವ್ಯಕ್ತಿತ್ವ. 'ಕವಿ, ಗಮಕಿ, ಗಾಯಕ, ನಟ, ನಿರ್ದೇಶಕ' ಮುಂತಾಗಿ ಹೆಸರು ಮಾಡಿದ ಗೌಡರು, ಅನೇಕ ಕೃತಿಗಳನ್ನೂ ರಚಿಸಿ ಖ್ಯಾತರಾಗಿದ್ದಾರೆ. ವಿಶೇಷವಾಗಿ, "ಕಾವ್ಯ-ನಾಟಕ," "ಜೀವನಚರಿತ್ರೆ-ಆತ್ಮಚರಿತ್ರೆ", 'ವಿಮರ್ಶೆ' ಮುಂತಾದ ಮಾಧ್ಯಮಗಳಲ್ಲಿ ಕೃಷಿಗೈದಿದ್ದಾರೆ. ಈ ಪ್ರಾಕಾರಗಳಲ್ಲಿ 'ಜೀವನಚರಿತ್ರೆ'ಯ ಪ್ರಕಾರ ಈಗ ಹುಲುಸಾಗಿ ಬೆಳೆಯತೊಡಗಿದೆ. ಹಲವು ಉತ್ತಮ ಜೀವನ ಚರಿತ್ರಾ ಕೃತಿಗಳಲ್ಲಿ, ಗೌಡರು ರಚಿಸಿರುವ 'ನಾಟ್ಯಕಳಾಪ್ರಪೂರ್ಣ ಟಿ. ರಾಘವರು' ಮತ್ತು 'ನಾಟ್ಯಯೋಗಿ ಬಳ್ಳಾರಿ ರಾಘವ' ಹೆಸರಿಸಬಹುದಾದ ಉತ್ತಮ ಕೃತಿಗಳು.

ಜೀವನ ಚರಿತ್ರೆಯನ್ನು ಬರೆಯುವಾಗ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಲೇಬೇಕಾಗುತ್ತದೆ. ಬದುಕಿದ ಇತರರಿಗಿಂತ 'ಈತ' ಹೇಗೆ ಭಿನ್ನವಾಗುತ್ತಾನೆಂಬುದನ್ನು ಎತ್ತಿತೋರಿಸಬೇಕಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ಕೇವಲ ಪ್ರಶಂಸೆಗೆ ತೊಡಗುವ ಅಪಾಯವೇ ಹೆಚ್ಚಾಗಿರುತ್ತದೆ. ಲೋಪದೋಷಗಳನ್ನು ತೇಲಿಸಿಬಿಡುವುದು ಸಾಮಾನ್ಯವಾಗಿ ಕಂಡುಬರುತ್ತವೆ. ಇಂತಹ ಕಡೆಗಳಲ್ಲಿ ಬಿಚ್ಚು ಮನಸ್ಸಿನ ಬರಹವನ್ನು ನಿರೀಕ್ಷಿಸುವುದು ತುಂಬಾಅಪರೂಪ. ಈ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಂಡು ಗೌಡರ ಈ ಎರಡು ಕೃತಿಗಳನ್ನು ಪರಿಶೀಲಿಸಬಹುದು.

ಈ ಎರಡು ಕೃತಿಗಳು ರಾಘವರ ಕೇವಲ ಜೀವನ ಚರಿತ್ರೆಗಳಾಗಿ ಮೂಡಿ ಬಂದಿಲ್ಲ. ರಾಘವರ ಬದುಕಿನುದ್ದಕ್ಕೂ ಬಾಳಸಂಗಾತಿಯಾಗಿ ಬಂದ ಕಲಾಜೀವನದ ಪರಿಚಯವೂ ಇವುಗಳಲ್ಲಿ ಹಾಸುಹೊಕ್ಕಾಗಿ ಚಿತ್ರಣಗೊಂಡಿದೆ. ಬಳ್ಳಾರಿಯ ಶಾಲೆ

ಯೊಂದರಲ್ಲಿ ಶಿಕ್ಷಕರಾಗಿದ್ದ (ತೆಲುಗು) ಶ್ರೀ ನರಸಿಂಹಾಚಾರ್ ಅವರ ಮಗನಾಗಿ ಹುಟ್ಟಿದ ರಾಘವರು, ಬಾಲ್ಯದಿಂದಲೇ ಕಲಾಸಕ್ತಿಯನ್ನು ಹೊಂದಿದವರು. ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿಯೇ ಬಿ.ಎ. ಪದವಿ ಪಡೆದವರು. ತಂದೆಯ ಇಚ್ಛೆಯಂತೆ, ಮದ್ರಾಸ್ ವಿಶ್ವವಿದ್ಯಾಲಯದಿಂದ 'ಬಿ. ಎಲ್' ಪದವಿ ಪಡೆದು, ೧೯೦೬ರಲ್ಲಿಯೇ ವಕೀಲಿವೃತ್ತಿ ಪ್ರಾರಂಭಿಸಿದರು. ಮದ್ರಾಸಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ, ಅಲ್ಲಿನ ನೂತನ ಮಾದರಿಯ ನಾಟಕಗಳನ್ನು ನೋಡಿ, ಅವುಗಳಿಂದ ತುಂಬಾ ಆಕರ್ಷಿತರಾಗಿದ್ದರು. ಆ ಪ್ರಯೋಗವನ್ನು ಕನ್ನಡ ರಂಗ ಭೂಮಿಯ ಮೇಲೆ ತರುವ ಯೋಜನೆ ಆಗಲೇ ಮೂಡತೊಡಗಿತ್ತು. ವಕೀಲಿವೃತ್ತಿ ಆರಂಭಿಸಿದರೇನೊ ನಿಜ, ಆದರೆ ಅವರಿಗೆ 'ರಂಗಭೂಮಿ'ಯ ಚಟುವಟಿಕೆಗಳಿಂದ ದೂರಾಗಿರಲು ಸಾಧ್ಯವಾಗಲೇ ಇಲ್ಲ. ಅದಕ್ಕೆ ಸಹಕಾರಿಯೆಂಬಂತೆ, ಅವರ ಸೋದರ ಮಾವಂದಿರಾದ, ಧರ್ಮವರಂ ಕೃಷ್ಣಮಾಚಾರ್ಯರು 'ಸರಸವಿನೋದಿನಿ ಸಭಾ' ಎಂಬ ನಾಟಕ ಕಂಪನಿ ಕಟ್ಟಿಕೊಂಡು, ರಂಗಭೂಮಿಯ ಸೇವೆಗೆ ತೊಡಗಿದ್ದರು. ಅದೇ ಕಾಲಕ್ಕೆ ಕೋಲಾಚಲಂ ಶ್ರೀನಿವಾಸರಾಯರ 'ಸುಮನೋರಮ ಸಭೆ' ಕೂಡಾ ನಾಡಿನ ತುಂಬಾ ರಂಗಭೂಮಿಯ ಸೇವೆಗಾಗಿ ತಿರುಗಾಡುತ್ತಿತ್ತು. ಈ ಎರಡು ಸಭೆಗಳ ಯಜಮಾನರುಗಳಿಗೆ ರಾಘವರ ಕಲಾಸಕ್ತಿ ಮತ್ತು ಕಲಾಚಾತುರ್ಯದ ಬಗೆಗೆ ತುಂಬಾ ಪರಿಚಯವಿತ್ತು. ಅಲ್ಲದೆ ರಾಘವರಿಗೆ ರಂಗಭೂಮಿಯ ಮೇಲೆ ನಟರಾಗಿ ಮಿಂಚುವ ಬಯಕೆಯಿತ್ತು. ಅಂತೆಯೆ ಎರಡು ಕಂಪನಿಗಳವರು ರಾಘವರನ್ನು ಸಮರ್ಥವಾಗಿ ಬಳಸಿಕೊಂಡರು. ಹೀಗೆ ಯೋಗಾನುಯೋಗದೊಂದಿಗೆ, ಕನ್ನಡ ರಂಗಭೂಮಿಯ ಪುಣ್ಯವೆಂಬಂತೆ, ರಾಘವರು ಒಬ್ಬ ಅಮೋಘ ನಟರಾಗಿ ರಂಗಭೂಮಿಯ ಪ್ರವೇಶ ಮಾಡಿದರು.

ಆಗ ವಿಶೇಷವಾಗಿ 'ಪೌರಾಣಿಕ' ನಾಟಕಗಳಿಗೆ ಮಹತ್ವವಿತ್ತು. ರಾಘವರು 'ಪೌರಾಣಿಕ' ನಾಟಕಗಳಲ್ಲಿ ಅಭಿನಯಿಸಿದರಾದರೂ, ನೇರವಾಗಿಯೇ ಪೌರಾಣಿಕ ನಾಟಕಗಳನ್ನು ಖಂಡಿಸಿದರು. ಸಾಮಾಜಿಕ ವಿಕಾಸದತ್ತ ಬೆಳಕು ಚೆಲ್ಲುವ ಕೃತಿಗಳು ರಚನೆಯಾಗಬೇಕು, ಅಂತಹ ಕೃತಿಗಳೇ ರಂಗವನ್ನೇರಬೇಕೆಂದು ಪ್ರತಿಪಾದಿಸಿದರು. ಪ್ರಯೋಗವೆಂಬಂತೆ, ಸ್ನೇಹಿತರ ಸಹಕಾರದಿಂದ, ಬಳ್ಳಾರಿಯಲ್ಲಿ 'ಷೇಕ್ಸ್‌ಪಿಯರ್ ಕ್ಲಬ್' ಸ್ಥಾಪಿಸಿ, 'ಷೇಕ್ಸ್‌ಪಿಯರ್' ನಾಟಕಗಳನ್ನು ಆಡಿದರು. ಜೊತೆಗೆ 'ಸುನಂದಿನೀ ಪರಿಣಯ' 'ಸಮಯ ಪ್ರಜ್ಞೆ' 'ಚಿತ್ರನಳೀಯ' 'ಓಥೆಲೊ' 'ವಿಜಯನಗರ ಪತನ' 'ಶಿಲಾದಿತ್ಯ' 'ರಾಮದಾಸ' 'ಪಠಾಣ ರುಸ್ತುಂ' ಮುಂತಾದ ಪ್ರಮುಖ ನಾಟಕಗಳಲ್ಲಿ ನೀಡಿದ ಸಮರ್ಥ ಅಭಿನಯದಿಂದಾಗಿ ಅಪಾರ ಜನಮೆಚ್ಚುಗೆ ಗಳಿಸಿದರು. ತಮ್ಮ ಯೋಜನೆಗೆ ಸಮರ್ಥವಾಗಿ ಹೊಂದಿಕೊಳ್ಳಲೆಂದು, ತಾವೇ 'ವಸ್ತು' ನಿರ್ದೇಶನ ಮಾಡಿ, ನಾಟಕ ಬರೆಯಿಸಿ ನಿರ್ದೇಶನದ ಭಾರದ ಜೊತೆಗೆ ಪ್ರಮುಖ ಪಾತ್ರವನ್ನೂ ವಹಿಸುತ್ತಿದ್ದರು. ಅವರ ರಂಗಭೂಮಿಯ ಸೇವೆ ಕೇವಲ ಕರ್ನಾಟಕಕ್ಕೆ ಸೀಮಿತ

ವಾಗದೆ, ಆಂಧ್ರ ಮತ್ತು ತಮಿಳುನಾಡು ಪ್ರದೇಶಗಳಿಗೂ ವಿಸ್ತಾರಗೊಂಡಿತ್ತು. ರಂಗಭೂಮಿಯ ನವೀನ ತಂತ್ರಗಾರಿಕೆಯ ಅಧ್ಯಯನಕ್ಕಾಗಿ ಇಂಗ್ಲೆಂಡ್ ಪ್ರವಾಸವನ್ನು ಕೈಕೊಂಡರು. ಅದರ ಪರಿಣಾಮವಾಗಿ ಕನ್ನಡ ರಂಗಭೂಮಿ ಅನೇಕ ಬದಲಾವಣೆಗಳನ್ನು ಕಾಣುವಂತಾಯಿತು.

ರಂಗಭೂಮಿಯ ಸೇವೆಯ ಜೊತೆಗೆ ವಕೀಲಿವೃತ್ತಿಯೂ ಚೆನ್ನಾಗಿಯೆ ಸಾಗಿತ್ತು. ಅವರು ಅಂದಿನ ಹೆಸರಾಂತ ವಕೀಲರಾಗಿದ್ದರೂ ಕೂಡ, ಸರಳ ಸ್ವಭಾವ ಮತ್ತು ಸೌಜನ್ಯಶೀಲತೆಗಳೆಂದೂ ಅವರಿಂದ ದೂರವಾಗಿರಲಿಲ್ಲ. ಕಾಲಕಳೆದಂತೆ "ಸಿನೆಮಾ" ಆಕರ್ಷಣೆ ರಾಘವರನ್ನು ಕಾಡದಿರಲಿಲ್ಲ. ಅಂದಿನ 'ಸಿನೆಮಾ'ಗಳಲ್ಲಿ ರಾಘವರು ನಟಿಸಿದರಾದರು ಯಶಸ್ವಿಗಳಾಗಲಿಲ್ಲ. ವಕೀಲರಾಗಿ, ರಂಗಭೂಮಿಯ ಧೀಮಂತ ನಟ-ನಿರ್ದೇಶಕರಾಗಿ, ಕ್ರಾಂತಿಯನ್ನೇ ಗೈದ ರಾಘವರು, ರಂಗಭೂಮಿಯ ಸೇವೆಯಲ್ಲಿರುವಾಗಲೆ ಕಣ್ಮರೆಯಾದರು.

ಇದಿಷ್ಟು 'ನಾಟ್ಯಕಳಾಪ್ರಪೂರ್ಣ ಟಿ. ರಾಘವರು' ಮತ್ತು 'ನಾಟ್ಯಯೋಗಿ ಬಳ್ಳಾರಿ ರಾಘವ' ಎಂಬೆರಡು ಕೃತಿಗಳ 'ವಸ್ತು'ವಾಗಿದೆ. ಮೊದಲ ಕೃತಿಯನ್ನು ೧೯೭೨ರಲ್ಲಿ 'ಮೈಸೂರು' (ಕರ್ನಾಟಕ) ರಾಜ್ಯ ಸಂಗೀತ ಅಕಾಡೆಮಿಯವರು ಪ್ರಕಟಪಡಿಸಿದ್ದಾರೆ. ರಾಘವರ ಜೀವನ ಚರಿತ್ರೆಯನ್ನು ಒಳಗೊಂಡಿರುವ, 133 ಪುಟಗಳ ಗದ್ಯಕೃತಿಯಿದು. ರಾಘವರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಾಗಿನ ಕೆಲವು ಭಾವಚಿತ್ರಗಳನ್ನೂ ಈ ಪುಸ್ತಕದಲ್ಲಿ ಸೇರಿಸಲಾಗಿದೆ. ಕೊನೆಯಲ್ಲಿ ರಾಘವರನ್ನು ಕುರಿತು ಬರೆದ ಕವನಗಳೂ ಇವೆ. ಇನ್ನು, ಎರಡನೆಯ ಪುಸ್ತಕವನ್ನು 1975ರಲ್ಲಿ ಬೆಂಗಳೂರಿನ ಐ.ಬಿ.ಹೆಚ್.ನವರು ಪ್ರಕಟಪಡಿಸಿದ್ದಾರೆ. ರಾಘವರ ಜೀವನ ಚರಿತ್ರೆ ಚಿಕ್ಕಮಕ್ಕಳಿಗೂ ತಿಳಿಯಲೆಂಬ ಕಾರಣಕ್ಕಾಗಿ ಸರಳಶೈಲಿಯಲ್ಲಿ ಸಂಕ್ಷಿಪ್ತಗೊಳಿಸಿ ಬರೆಯಲಾದ 44 ಪುಟಗಳ ಚಿಕ್ಕಗದ್ಯಕೃತಿಯಿದು. ರಾಘವರ ಕಲಾಜೀವನವನ್ನು ಕನ್ನಡ ಜನತೆಗೆ ಪರಿಚಯಿಸುವುದೇ ಈ ಎರಡು ಕೃತಿಗಳ ಉದ್ದೇಶ. ಪರಿಚಯಿಸುವವರು ರಾಘವರ ಶಿಷ್ಯರೂ ಉತ್ತರಾಧಿಕಾರಿಗಳೂ ಆಗಿರುವುದು ವಿಶೇಷ.

ಶ್ರೀ ದೊಡ್ಡನಗೌಡರ ನಿರೂಪಣಾ ವಿಧಾನ ಸಹಜ ಮತ್ತು ಅಷ್ಟೇ ಸರಳವಾದುದು. ಅವರ ಮನೋಹರವಾದ ವರ್ಣನೆಗಳು, ವಾಚಕರನ್ನು ಆಕರ್ಷಿಸಿ, ಕಣ್ಣೆದುರಿಗೆ ಸ್ಪಷ್ಟ ಚಿತ್ರಗಳನ್ನೇ ನಿರ್ಮಿಸಿಬಿಡುತ್ತವೆ. ಹಿತಮಿತವಾದ ಪದಗಳ ಬಳಕೆಯಿಂದಾಗಿ, ತಮಗಾದ ಅನುಭವದ ಸಮರ್ಥ ಅಭಿವ್ಯಕ್ತಿಯನ್ನು ನೀಡುತ್ತಾರೆ. ಉದಾಹರಣೆಗೆ ಇದನ್ನು ನೋಡಬಹುದು—

"ಉತ್ತಮ ನಟನಿಗೆ ಇರಬೇಕಾದ ಕಲ್ಪನಾಶಕ್ತಿಯು ಸಮಯೋಚಿತ ಧೋರಣೆಯು ರಾಘವರ ಸೊತ್ತು. ರಂಗಭೂಮಿಯಲ್ಲಿ ಕಾಲಿಟ್ಟರೆಂದರೆ ಹೆಚ್ಚು ಅಲ್ಲದ ಕಡಿಮೆಯುಲ್ಲದ ಅವರ ನಿಲುವಿಕೆ, ಸುಂದರ ಸೋಗೆಯ ಮುಖ, ವಿಶಾಲವಾದ

ಹಣೆ, ಎಳ್ಳುಹೂವಿನಂತೆ ಒಪ್ಪುವ ಮುದ್ದಾದ ಮೂಗು, ಎಲ್ಲಕ್ಕೂ ಹಿರಿಯ ಸೌಂದರ್ಯ ಕಳೆಯೆಂದರೆ, ವಿಶಾಲವಾದ ಕಣ್ಣುಗಳು, ಸಹಜ ಸೌಂದರ್ಯವು, ಮೊಟ್ಟಮೊದಲೆ ಪ್ರೇಕ್ಷಕರ ಸ್ವಾತಂತ್ರ್ಯವನ್ನು ಕಸಿಯುವುದು........ಆಚಾರ್ಯರು ಸೇವಕನಿಂದ ಸಾಮ್ರಾಟನವರೆಗೂ ಯಾವ ಪಾತ್ರವನ್ನಾದರೂ ಅಭಿನಯಿಸಿ ಪಾತ್ರೌಚಿತ್ಯಕ್ಕೆ ಕಲಾಕಿರೀಟವನ್ನಿಡಬಲ್ಲ ನಟರೆಂದು ಹೆಸರಾದರು."[1]

ರಾಘವರು ನಾಟಕದ ತಮ್ಮ ಪಾತ್ರವೆಂದರೆ ತಮ್ಮನ್ನೇ ತಾವು ಮರೆತುಬಿಡು ತ್ತಿದ್ದರು. ರಂಗದಮೇಲೆ ರಾತ್ರಿ ಅಭಿನಯಿಸಬೇಕಾದ ಪಾತ್ರದ ತಯಾರಿ, ಅಂದು ಬೆಳಗಿನಿಂದಲೇ ನಡೆದಿರುತ್ತಿತ್ತು. ತಮ್ಮ ಸಂಭಾಷಣೆಯ ಸುಂದರ ಅಭಿವ್ಯಕ್ತಿ ಹಾವ ಭಾವಗಳೊಂದಿಗೆ ಹಾಡುಗಾರಿಕೆ–ಹೀಗೆ ಸಾಗಿರುತ್ತಿತ್ತು. ವೇಷ–ಭೂಷಣಗಳ ಬಗೆ ಗಂತೂ ತುಂಬಾ ರಸಿಕರು. ಈ ಪ್ರಸಂಗವನ್ನು ಗೌಡರು ಮಾರ್ಮಿಕವಾಗಿ ಚಿತ್ರಿಸಿ ದ್ದಾರೆ. ಆ ವಿವರವನ್ನು ಗೌಡರು ನೀಡುವುದು ಹೀಗೆ :

"ರಾಘವರು ತುಂಬಾ ರಸಿಕರು, ನಾಟಕದ ದಿನ ಅವರ ಅಲಂಕಾರ ನೋಡ ತಕ್ಕದ್ದು. ಕಿವಿಯಲ್ಲಿ ಕಡಕು, ಕೈಗಳಲ್ಲಿ ಕಡಗ, ತೋಡೆಗಳು, ಮಣಕಾಲುಮುರುವಿನ ರೇಷ್ಮೆಯವಸ್ತ್ರ, ಮಲ್ಲಿಗೆಯ ಹೂವಿನಿಂದ ಸುತ್ತಲ್ಪಟ್ಟ ಮೊಟ್ಟೆಕಾಯಿಯಂತ ತುರುಬು, ಜರತಾರಿ ಧೋತರ, ಈ ರೀತಿ ಅಲಂಕೃತರಾಗಿ ಬೆಳಗಿನಿಂದ ಊರಲ್ಲಿ ಅಡ್ಡಾಡುವುದು ಇವರ ಮೋಜಿನ ಕಾರ್ಯಕ್ರಮ ; ಒಂದು ರೀತಿಯಲ್ಲಿ ಅವರ ಅಂದಿನ ರಾತ್ರಿ ನಾಟಕದ ವೇಷ ಬೆಳಗಿನಿಂದಲೇ ಪ್ರಾರಂಭವಾಗುತ್ತಿತ್ತೆಂದು ಹೇಳಬಹುದು."[2]

ರಾಘವರ ಕಲಾಸೇವೆ ಕರ್ನಾಟಕಕ್ಕಷ್ಟೇ ಸೀಮಿತವಾಗಿರಲಿಲ್ಲವೆಂದು ಈ ಹಿಂದೆಯೇ ನೋಡಿದ್ದೇವೆ. ಅವರು ಅನೇಕ ತೆಲುಗು ನಾಟಕಗಳ ಪ್ರದರ್ಶನ ಗಳನ್ನೂ ನೀಡಿದರು. ರಾಘವರ ಮಾತೃಭಾಷೆ ತೆಲುಗು, ಜೊತೆಗೆ ಬಳ್ಳಾರಿಯಲ್ಲಿ ತೆಲುಗು ಭಾಷೆಯ ಪ್ರಭಾವವಿದ್ದುದು ರಾಘವರಿಗೆ ಸಹಕಾರಿಯಾಗಿತ್ತು. ಅವರ ಅಭಿನಯ ಚಾತುರ್ಯ ಅಮೋಘವಾದುದು. ಅಲ್ಲದೆ ಅವಶ್ಯವಾಗಿ ಬೇಕಾದ 'ಸಮಯ ಸ್ಫೂರ್ತಿ' ಸಹಜವಾಗಿ ಮೈಗೂಡಿದಂತಿತ್ತು. ಅಕಸ್ಮಾತ್ತಾಗಿ ನಾಟಕ ನಡೆದಾಗಲೆ, ಪಾತ್ರಧಾರಿ ಅನಿವಾರ್ಯ ಕಾರಣದಿಂದಾಗಿ ಹೊರಟುಹೋದುದು, ಕಂಪನಿ ಮಾಲೀಕರ ಅಸಹಾಯಕತೆಯನ್ನು ಅರಿತು, ಅವರ ವಿನಂತಿಯ ಮೇರೆಗೆ ಆ ಕ್ಷಣವೆ ರಾಘವರು ರಂಗ ಪ್ರವೇಶ ಮಾಡಿ ಅಮೋಘ ಅಭಿನಯ ನೀಡಿ, ಕಂಪನಿಗೊದಗಿದ ಸಂಕಟ ದಿಂದ ಪಾರುಮಾಡಿದ–ಪ್ರಸಂಗ ಮತ್ತು ರಂಗದ ಮೇಲೆ ಬದಲಾವಣೆ ತರಲೆಂದು ಹೊಸ ಪ್ರಯೋಗವೆಂದು ನಾಟಕವಾಡುವಾಗ ಪ್ರೇಕ್ಷಕರು ಬಾರದೇ ಹೋದುದು,

1. ನಾಟ್ಯಕಲಾ ಪ್ರಪೂರ್ಣ ಟಿ. ರಾಘವರು : ಜೋಳದರಾಶಿ ಕೆ. ದೊಡ್ಡನಗೌಡ ಪು: ೧೧
2. ಅದೇ ಪು : ೧೪.

ವ್ಯವಸ್ಥಾಪಕರು ವಿಮಂಚಿತರಾಗಿ, ಹೊರಗೆ ಮನೆಬಾಗಿಲಿಗೆ ಮಲಗಿದ ಮಾರ್ವಾಡಿ ಗಳನ್ನು ಎಬ್ಬಿಸಿ ನಾಟಕಕ್ಕೆ ಕರೆತಂದುದು, ಅವರಾರೂ ನಾಟಕದಲ್ಲಿ ಆಸಕ್ತಿ ತೋರದೆ ಹೋದುದು, ಅಂತಹ ಪ್ರಸಂಗದಲ್ಲೂ ರಾಘವರು 'ತಾವೇ ನಟರು ತಾವೇ ಪ್ರೇಕ್ಷಕ ರೆಂದು ತಿಳಿದು ಸಮರ್ಥ ಅಭಿನಯ ನೀಡಿದುದು ಹೀಗೆ ಕೆಲವು ಮಾರ್ಮಿಕ ಘಟನೆ ಗಳನ್ನು ಗೌಡರು ಕಣ್ಣು ಮುಂದೆ ಕಟ್ಟುವಂತೆ ನಿರೂಪಿಸಿದ್ದಾರೆ. ಇಲ್ಲಿ ರಾಘವರಲ್ಲಿ ಅಡಗಿದ ನಿಜವಾದ ಕಲಾವಿದನ ಪರಿಚಯ ಮಾಡಿಸಿದ್ದಾರೆ. ಇದಕ್ಕೆ ನಿದರ್ಶನ ವೆಂಬಂತೆ, 22 ವರುಷದ ರಾಘವರು 'ಸುನಂದಿನಿ' ಎಂಬ ತೆಲುಗು ನಾಟಕದಲ್ಲಿ '70' ವರುಷದ ಮುದುಕನಾಗಿ ನೀಡಿದ ಅಭಿನಯದ ಉದಾಹರಣೆ ನೀಡಿದ್ದಾರೆ ಗೌಡರು. ರಾಘವರನ್ನು ಹಿಂದಿನರಾತ್ರಿ ರಂಗದ ಮೇಲೆ '70' ವರುಷದ ಮುದುಕನ ವೇಷದಲ್ಲಿ ಕಂಡ ಪ್ರೇಕ್ಷಕ/ಕಕ್ಷಿದಾರನಾಗಿ, ಮರುದಿನ ರಾಘವರನ್ನೇ ಕಂಡು, 'ರಾಘವರೆಲ್ಲಿ'? ಎಂದು ಕೇಳಿದನಂತೆ. ತಾವೇ ರಾಘವರೆಂದು ಎಷ್ಟು ತಿಳಿಹೇಳಿದರು ಆತ ಒಪ್ಪಲಿಲ್ಲ ವಂತೆ. ಈ ಪ್ರಸಂಗವನ್ನು 'ರಾಘವ ಮತ್ತು ಕಕ್ಷಿದಾರ'ರ ಮಧ್ಯೆ ನಡೆದ ಸಂಭಾಷಣೆ ರೀತಿಯಲ್ಲಿ ಗೌಡರು ಸೊಗಸಾಗಿ ನಿರೂಪಿಸಿದ್ದಾರೆ.

ಕನ್ನಡ ರಂಗಭೂಮಿಯಲ್ಲಿ ಕೋಲಾಹಲವೆಬ್ಬಿಸಿದ ರಾಘವರ 'ಪಠಾನ ರುಸ್ತುಂ' ವಿವಾದಕ್ಕೊಳಗಾದ ನಾಟಕ. ಆದರೆ ಪಠಾನ ರುಸ್ತುಂನಾಗಿ ರಾಘವರು ನೀಡಿದ ಅಭಿನಯದಿಂದಾಗಿ, ಅವರಿಗೆ ಅಪಾರ ಕೀರ್ತಿ ಲಭಿಸಿತು. ಮದ್ರಾಸಿನಲ್ಲಿಯೂ ಈ ಪ್ರಯೋಗ ನಡೆದು ವಿವಾದವುಂಟಾಯಿತು. ಆದರೆ ಎಲ್ಲರ ಬಾಯಿಯಲ್ಲೂ ರಾಘವರ ಉತ್ಕೃಷ್ಟ ಅಭಿನಯದ ಮಾತೇವಾತು. ಇಂತಹ ಪ್ರಸಂಗದಲ್ಲಿ ಜುಜುಬಿ ನಟನೊಬ್ಬ ಬಂದು ರಾಘವರನ್ನು ಕಾಣುತ್ತಾನೆ. 'ಪಠಾನ ರುಸ್ತುಂ'ನಾಗಿ ಅಭಿನಯಿಸುವುದು ಕಷ್ಟವೇನಲ್ಲ, ಒಮ್ಮೆ ನೀವು ಅಭಿನಯಿಸಿ ತೋರಿಸಿರಿ, ನಿಮ್ಮ ಹಾಗೆ ನಾನು ಅಭಿನಯಿಸಿ ತೋರಿಸುತ್ತೇನೆ' ಎಂದು ಸವಾಲು ಹಾಕುತ್ತಾನೆ. ರಾಘವರು ಸೌಜನ್ಯ ದಿಂದ ತಿಳಿಹೇಳಿದ ಮಾತು ಆತನಿಗೆ ಹಿಡಿಸಲಿಲ್ಲ. ಕೊನೆಗೆ ರಾಘವರು 'ಪಠಾನರುಸ್ತುಂ'ನ ಅಭಿನಯ ಮಾಡಿ ತೋರಿಸಬೇಕಾಗುತ್ತದೆ. ಆ 'ಜುಜುಬಿ', ಒಮ್ಮೆ-ಇನ್ನೊಮ್ಮೆ ಎಂದು ಆರುಸಾರಿ ರಾಘವರು ಅಭಿನಯಿಸಿ ತೋರಿಸುವಂತೆ ಕೇಳಿದನಂತೆ. ರಾಘವರ ಅಭಿನಯ ಒಂದೊಂದು ಬಾರಿಗೂ ಒಂದೊಂದು ತೆರನಾಗಿತ್ತಂತೆ. ಬಂದವನು ತಪ್ಪೊಪ್ಪಿಕೊಂಡು ತಣ್ಣಗೆ ತಿರುಗಿ ಹೋದನಂತೆ. ಅಭಿನಯ ಅನುಕರಣೆಯಿಂದ ಬರುವಂತಹದಲ್ಲ ಎಂಬ ಮಾತಿಗೆ ನಿದರ್ಶನವೆಂಬಂತೆ ಗೌಡರು ಈ ಪ್ರಸಂಗವನ್ನು ಚಿತ್ರಿಸಿದ್ದಾರೆ.[1] ರಾಘವರ ಕಲಾಕೌಶಲ್ಯದ ಮೇಲೆ ಗೌಡರು ಬೆಳಕು ಚೆಲ್ಲಿದ್ದಾರೆ.

---

1. ನಾಟ್ಯಕಲಾ ಪ್ರಪೂರ್ಣ ಟಿ. ರಾಘವರು : ಜೋ. ದೊಡ್ಡನಗೌಡರು : ಪು : 29

ರಾಘವರ ಗುಣಗಳನ್ನು ಪರಿಚಯಿಸಿರುವಂತೆ, ಅವರ ಕೆಲವು ದೌರ್ಬಲ್ಯಗಳನ್ನೂ ಎತ್ತಿ ತೋರಿಸಿದ್ದಾರೆ. ಇಂತಹ ಕಡೆಗಳಲ್ಲಿ ಗೌಡರ ಬಿಚ್ಚು ಮನಸ್ಸು, ನಿಷ್ಪಕ್ಷಪಾತ ದೃಷ್ಟಿಯನ್ನು ಗಮನಿಸಬಹುದು. ಉದಾಹರಣೆಗಾಗಿ ಇದನ್ನು ನೋಡಬಹುದು : "………ದೊಡ್ಡದೊಡ್ಡ ಖಟ್ಲೆಗಳಲ್ಲಿ ದಿನದಿನಕ್ಕೂ ಜಯಪಡೆಯುತ್ತಾ ಮುಂದೆ ಸಾಗುತ್ತಿದ್ದಂತೆ ಕಕ್ಷಿದಾರರು ಹೆಚ್ಚಿದರು. ವರಮಾನ ಹೆಚ್ಚಿತು. ವೈಯಕ್ತಿಕ ಜೀವನದಲ್ಲಿ ಪಾಶ್ಚಾತ್ಯರೀತಿಯ ವೈಭವ ವಿಲಾಸಗಳು ದಿನದಿನಕ್ಕೆ ಹೆಚ್ಚುತ್ತ ಬಂದವು……."[1]

ರಾಘವರಿಗೆ 'ನಾಟಕ ಮತ್ತು ಅಭಿನಯ' ಶೀರದ ಬಯಕೆಗಳಂತೆಯೇ ಉಳಿದ ಕೊಂಡು ಬಂದವು. ತಮ್ಮ ಬಾಳಸಂಜೆಯಲ್ಲೂ ಅಭಿನಯಕ್ಕಿಳಿಸಿ 'ಶೀರದ ಸಮಸ್ಯೆ' ಎಂಬ ನಾಟಕದಲ್ಲಿ ಅತ್ಯುತ್ತಮ ಅಭಿನಯ ನೀಡಿದರು. ಆದರೆ ರಾಘವರ ಈ ಕಲಾ ಸೇವೆ ಕನ್ನಡ ಜನತೆಗೆ ಆ ಮುಂದೆ ದೊರೆಯಲಿಲ್ಲ. ರಾಘವರು ಕಾಯಿಲೆಯಿಂದಾಗಿ ಬಳಲತೊಡಗಿದರು. ಈ ಪ್ರಸಂಗವನ್ನು ಗೌಡರು ಮನಮಿಡಿಯುವಂತೆ ಬರೆಯು ತ್ತಾರೆ :

"ನಾಟಕಾಭಿನಯದ ತರುವಾಯ ೧೫ ದಿನಗಳಲ್ಲಿ ರಾಘವರಿಗಾದ ಖಾಹಿಲೆ ವಿಪರೀತಕ್ಕಿಟ್ಟುಕೊಂಡಿತು. ಹೋಗಿ ನೋಡಿದವರಿಗೆ ಉಳಿಯಲಾರರೆಂಬ ಅನು ಮಾನವಾಯಿತು. ಬಿಕ್ಕುಗಳು ಬಂದಿದ್ದವು, ಆಗಾಗ ಎಚ್ಚರ ತಪ್ಪುತ್ತಿತ್ತು. ಅಂತಹ ಸ್ಥಿತಿಯಲ್ಲೂ ಅವರು ತಮ್ಮ ಸಂಗಡಿಗರಲ್ಲಿ ನಾಟಕದ ವಿಷಯವಾಗಿ ಮಾತನಾಡು ತ್ತಿದ್ದರು. ಆ ಸ್ಥಿತಿಯು ಏಪ್ರಿಲ್ 16ರ ವರೆಗಿದ್ದು ಅಂದು ರಾತ್ರಿ, ಸಂಪೂರ್ಣ ಹುಣ್ಣಿಮೆ ಅದು, ಮಂಗಲಕರವಾದ ಶ್ರೀ ಹಂಪೆಯ ವಿರೂಪಾಕ್ಷನ ರಥೋತ್ಸವದ ಹುಣ್ಣಿಮೆ, 11 ಗಂಟೆ 5 ನಿಮಿಷಕ್ಕೆ ಈ ಲೋಕದ ನಾಟಕರಂಗಭೂಮಿಯಿಂದ ಮರೆಯಾದರು".[2]

ಒಟ್ಟಿನಲ್ಲಿ ಗೌಡರು, ಈ ಎರಡು ಕೃತಿಗಳಲ್ಲಿ ಬಳ್ಳಾರಿ ರಾಘವರ ಕಲಾಜೀವನದ ಸಫಲತೆಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಈ ವಾಸ್ತವ ಚಿತ್ರಣದಲ್ಲಿ ಗೌಡರ ಸಹಜ ಭಾಷೆ ಮತ್ತು ಸುಲಲಿತ ಶೈಲಿಗಳು ಸಹಕಾರಿಯಾಗಿವೆ. ರಂಗಭೂಮಿಯ ಇತಿಹಾಸದಲ್ಲಿ ಕ್ರಾಂತಿಯನ್ನೇ ಗೈದ, ತಮ್ಮ ಗುರು ರಾಘವರ ಕಿಂಚಿತ್ತು ಋಣದ ಭಾರವನ್ನು ಕಡಿಮೆ ಮಾಡಿಕೊಳ್ಳುವ ಕಾರ್ಯವನ್ನು ಗೌಡರು ಇಲ್ಲಿ ಕೈಕೊಂಡಂತಿದೆ. ಹೀಗೆ ಗೌಡರು ಹೊತ್ತ ಈ ಮಣಿಹ ಸಾರ್ಥಕವಾಗಿದೆ.

—★—

1. ಅದೇ, ಪು : 7
2. ಅದೇ, ಪು : 133

ನಂದೇ ನಾನೋದಿದೆ

ನಿರಂಜನ

ಎಂಬತ್ತರ ಕಲಾನಿಧಿ ಜೋಳದರಾಶಿ ದೊಡ್ಡನಗೌಡರ ಅದ್ಭುತ ಆತ್ಮಕಥನ, 'ನಂದೇ ನಾನೋದಿದೆ'. ಐದುನೂರು ಪುಟಗಳ ಈ ಕೃತಿಯಲ್ಲಿ ಅವರ ಬಾಲ್ಯ, ಯೌವನ ಮತ್ತು ವೃದ್ಧಾಪ್ಯ–ಜೀವನದ ಈ ಮೂರು ಅಂಕಗಳು ಮೇಳೈಸಿ, ಅಪೂರ್ವವಾದೊಂದು ಹಾಡುಗಾರಿಕೆಗೆ ಶ್ರುತಿ ಹಿಡಿದಿವೆ. ಕರ್ನಾಟಕಾಂಧ್ರಗಳಲ್ಲಿ ರಾಜವೈಭವದಿಂದ ಮೆರೆದ ನಾಟ್ಯವಿಲಾಸಿ, ಈ ಮಹಾನುಭಾವ.

ಎಳೆಯ ಜೋಳದರಾಶಿಯವರು ತಮ್ಮ ಎಳೆ ಹರೆಯದಲ್ಲಿ–ಆಗ ಅವರಿಗೆ ವಯಸ್ಸು ಆರೋ ಏಳೋ–ನಾಟಕರಂಗಕ್ಕೆ ಪದಾರ್ಪಣ ಮಾಡಿದರು. ಆ ಬದುಕಿನ ಮೊದಲ ಹಾಡು : "ಪಾಲಿಸ್ಯೆ ಪಾವನಾಂಗ ಪಲಮ ಗುಲುವಲ." ಏನು ಮಾಡಿದರೂ ಕಿರಿಯನ ನಾಲಗೆ 'ರ' ವನ್ನು ಉಚ್ಚರಿಸುತ್ತಿರಲಿಲ್ಲ. ಓರಗೆಯವರೆಲ್ಲ ಅವನನ್ನು "ಗುಲುವಲ" ಎಂದೇ ಕರೆಯುತ್ತಿದ್ದರು. 'ಲ' ಕ್ರಮೇಣ 'ರ' ವಾಯಿತು. ಪುಟಾಣಿ ಜಯಿಸಿದ.

ನೂರ ಎಂಬತ್ತು ಮನೆಗಳ ಹಳ್ಳಿ ಜೋಳದರಾಶಿ. ಅಲ್ಲಿ ಏಳೆಂಟುನೂರು ಜನ ವಾಸವಾಗಿದ್ದರು. ಯಾರಿಗಾದರೂ ಆಟ ಕಟ್ಟಬೇಕು ಎನಿಸಿದರೆ, ಗ್ರಾಮದ ಯಜಮಾನರ ಅನುಮತಿ ಪಡೆಯಬೇಕು.

ಜೋಳದರಾಶಿ ದೊಡ್ಡನಗೌಡರ ಚಿಕ್ಕತಾತ ಮತ್ತು ದೊಡ್ಡತಾತ ಬಯಲಾಟದಲ್ಲಿ ಜನಜಂಗುಳಿಯ ಹೊಗಳಿಕೆಗೆ ಪಾತ್ರರು. ಹೆಣ್ಣುವೇಷದಲ್ಲಿ ದೊಡ್ಡಹೊನ್ನನಗೌಡರೂ ಗಂಡುವೇಷದಲ್ಲಿ ಸಣ್ಣ ಹೊನ್ನನಗೌಡರೂ ಪ್ರಸಿದ್ಧರು. ಗೆಜ್ಜೆ ಕಟ್ಟಿಸಿಕೊಂಡ ಗಾಡಿಗಳಲ್ಲಿಹಲವು ಹಳ್ಳಿಗಳ ಜನರು ನಾಟಕ ನೋಡಲು ಬರುತ್ತಿದ್ದರು.

ಹನುಮಂತಗೌಡರು ಜೋಳದರಾಶಿ ಹಳ್ಳಿಯ ಹಿರಿಯ. ದೊಂಬರು, ಹಗಲುವೇಷಗಾರರು, ಕಿಳ್ಳೇಕೇತರು, ರಾತ್ರಿನಾಟಕದವರು–ಯಾರೇ ಬಂದರೂ ಅವರ ಪ್ರದರ್ಶನ ಹನುಮಂತಗೌಡರ ಹಿರಿತನದಲ್ಲಿ ನಡೆಯುತ್ತಿತ್ತು.

ಹನುಮಂತ ದೇವರ ಗುಡಿಯೇ ಹಳ್ಳಿಯ ಶಾಲೆ. ಮಠಪತಿ ರುದ್ರಯ್ಯನವರು ತಮ್ಮ ಶಿಷ್ಯ ಜೋಳದರಾಶಿ ದೊಡ್ಡನಗೌಡನ ಹೆಬ್ಬೆರಳನ್ನು ಹಿಡಿದು ಉಸುಕಿನ ಮೇಲೆ ಶ್ರೀಕಾರ ತಿದ್ದಿಸುತ್ತಿದ್ದರು. ನಾಲ್ಕನೇ ತರಗತಿಗೆ ಈ ಹುಡುಗನ ಓದಿನ ಮುಕ್ತಾಯ. ಚೂಟಿಯಾದ 'ದೊಡ್ಡಿ' (ಇದು ತಾತ ಕಿರಿಯನಿಗೆ ಇಟ್ಟ ಹೆಸರು) ಕವಿತೆಗಳನ್ನು ಬರೆಯತೊಡಗಿದ. ನಾಟಕಗಳನ್ನು ಬರೆಯಲು ಆರಂಭಿಸಿದ. ದೊಡ್ಡವನಾದಂತೆ ನಾಟ್ಯ ವಿಲಾಸಿಯಾದ. ಕನ್ನಡದ ಒಡನಾಡಿಯಾಗಿತ್ತು ತೆಲುಗು. ಕನ್ನಡ ನಟ ದೊಡ್ಡನಗೌಡ ತೆಲುಗು 'ರಾಮದಾಸ' ನಾಟಕದಲ್ಲಿ ಕಬೀರನಾದ ; 'ಕ್ರಾಂತಿಪುರುಷ' ನಾಟಕದಲ್ಲಿ ಬಸವಣ್ಣನವರ ಪಾತ್ರ ವಹಿಸಿದ ; 'ಭಕ್ತಕನಕದಾಸ'ದಲ್ಲಿ ಕನಕನಾಗಿ ಅಭಿನಯಿಸಿದ.

ಜೋಳದರಾಶಿ ದೊಡ್ಡನಗೌಡರ ಕೀರ್ತಿ ಹತ್ತೂರುಗಳಿಗೆ ಹಬ್ಬಿತು. ಬಳ್ಳಾರಿ ಪ್ರದೇಶದಲ್ಲೂ ಅದರಾಚೆಗೆ ಆಂಧ್ರದಲ್ಲೂ ಅವರ ನಾಟಕತಂಡ ಲಾಭ-ನಷ್ಟಗಳ ಗಣನೆಗೆ ಹೋಗದೆ ಪತಾಕೆ ಹಾರಿಸಿತು. ವಿಜಯ ದುಂದುಭಿಯನ್ನು ಮೊಳಗಿಸಿದ್ದೇ ಹೆಚ್ಚು. ಹಳೆಯ ಕನ್ನಡ ನಾಡಿನಲ್ಲೂ ಆಧುನಿಕ ಏಕೀಕೃತ ಮನೆಗಳಲ್ಲಿ ಮಠಗಳಲ್ಲಿ ಜೋಳದರಾಶಿ ದೊಡ್ಡನಗೌಡರು ಸುಪ್ರಸಿದ್ಧರಾದರು.

ತಾತಂದಿರ ಬಳಿಕ ಜೋಳದರಾಶಿ ದೊಡ್ಡನ ಗೌಡರೇ ತಮ್ಮ ಊರಿಗೆ ಹಿರಿಯರಾದರು. ಅವರೇ ಆ ವ್ಯಾಪಕ ಕುಟುಂಬದ ಪಾಲಕ, ರಕ್ಷಕ. ಸಂಪಾದನೆ ಎಷ್ಟೇ ಇರಲಿ, ನಂಬಿದ ಬಳಗದವರಿಗೆ ತುತ್ತು ತಪ್ಪುತ್ತಿರಲಿಲ್ಲ.

ದೊಡ್ಡನಗೌಡರ ಸುತ್ತಲೂ ರೂಪುಗೊಂಡ ಸ್ನೇಹದ ಬೀಡು ಬಲು ದೊಡ್ಡದು. ಹಲವು ಮಠಗಳ ಮಹಂತರು, ಶಿ. ಶಿ. ಬಸವನಾಳರು, ಕೈಲಾಸಂ, ಅ.ನ.ಕೃ., ಡಿ. ವಿ. ಜಿ. ವೈ., ನಾಗೇಶಶಾಸ್ತ್ರಿ, ಬಳ್ಳಾರಿ ನಾಟ್ಯ ಕಳಾ ಪ್ರಪೂರ್ಣ ಟಿ. ರಾಘವಾಚಾರ್ಯ, ಬೆಜವಾಡ ಗೋಪಾಲರೆಡ್ಡಿ–ಹೀಗೆ ಹತ್ತು ಹಲವು ಜನ.

೨

'ನಂದೇ ನಾನೋದಿದೆ' ಸಿದ್ಧವಾದದ್ದು ೧೯೭೯ರಲ್ಲಿ, ಜೋಳದರಾಶಿ ದೊಡ್ಡನ ಗೌಡರ ಅರುವತ್ತೊಂಭತ್ತನೆಯ ವಯಸ್ಸಿನಲ್ಲಿ. ಅವರು ಹುಟ್ಟಿದ್ದು ೧೯೧೦ರಲ್ಲಿ. ೧೯೯೦ರಲ್ಲಿ ಅವರು ಎಂಬತ್ತರ ಗಡಿ ತಲುಪುತ್ತಾರೆ. ಅವರು ಮತ್ತೂ ಇಪ್ಪತ್ತು ವರ್ಷ ಮಾನವ ಚೇಷ್ಟೆಗಳನ್ನು ಕಾಣಬಲ್ಲರು.

ನಾಟ್ಯವಿಲಾಸಿ ಜೋಳದರಾಶಿಯವರ ಆತ್ಮಕಥನ ಅದ್ಭುತ ಸಾಹಿತ್ಯ ಕೃತಿ. ಪೂರ್ವಭಾಗ–ಉತ್ತರಭಾಗಗಳೆರಡೂ ರಸ ಮಡುವುಗಳು. ವಯಸ್ಸಿನ ವ್ಯವಸ್ಥೆ ಯಾವುದೇ ಇರಲಿ ಜೋಳದರಾಶಿಯವರ ನಾಟಕವನ್ನು ಇಷ್ಟಪಟ್ಟ ಪ್ರೇಕ್ಷಕರು ಇನ್ನೊಂದು ಸಾರಿ' 'ಮತ್ತೊಂದು ಸಾರಿ' 'ಒನ್ಸ್ ಮೋರ್' ಎಂದು ಕೂಗಾಡು ತ್ತಿದ್ದರು.

ಸ್ವತಃ ದೊಡ್ಡನಗೌಡರು ನಾಟಕಗಳನ್ನು ಬರಹರೂಪಕ್ಕಿಳಿಸುತ್ತಿದ್ದರು. ಮಿತ್ರರು ಬರೆದುದನ್ನು ಸ್ವಾಗತಿಸಿ, ಅದಕ್ಕೆ ಒಪ್ಪವಿಡುತ್ತಿದ್ದರು.

ಗಾನಕಲೆಯಲ್ಲಿ ಜೋಳದರಾಶಿಯವರು ಅಪ್ರತಿಮರಾದರು. ಶರಣ ಸಾಹಿತ್ಯ ದಲ್ಲಿ ಅವರು ಪಾರಂಗತರಾದರು. ಗಮಕ ವಿಶಾರದರಾದರು.

೩

ಒಂದು ದಿನ ಜೋಳದರಾಶಿಯವರೂ ಅವರ ಬಳಗದವರೂ ಇಳಿದಿದ್ದಲ್ಲಿಗೆ ಒಬ್ಬಾತ ಬಂದ. ಆ ದಿನ ನಾಟಕವೇನೂ ಇರಲಿಲ್ಲ.

"ನೀವು ಯಾರು ? ಎಂದು ದೊಡ್ಡನಗೌಡರು ಕೇಳಿದರು.

"ಕೃಷ್ಣನ ವೇಷ ಹಾಕಿದ್ದನಲ್ರಿ ? ಆತನನ್ನು ನೋಡಲು ಬಂದೆ."

"ಆತನಿಲ್ಲಪ್ಪಾ, ಹೊರಗೆ ಹೋಗಿದ್ದಾನೆ."

ಅವನು ಒಳಗೆ ಬಂದು ಕುಳಿತ,

"ನಾಟಕದಾಗ ನೀವು ವೇಷ ಹಾಕ್ತೀರಾ" ಎಂದು ನನ್ನನ್ನು ಆತನು ಕೇಳಿದ.

"ಇಲ್ಲಪ್ಪಾ ಆ ನಾಟಕದಾಗ ಪರದೆ ಎಳೆಯೋನು ನಾನು" ಅವನೆಂದ :

"ಆತ ಎಂಗ್ಹಾಡ್ತಾನಪ್ಪಾ ? ಹಾಡಿದ್ರೆ ರೈಲು ಕೂಗಿದ್ಹಂಗಾಗ್ತೈತ್ರೀ".

ಆತ ಹೋದಮೇಲೆ, ನಾನು ಮತ್ತು ನಾಟಕದ ಪಾರ್ವತಮ್ಮ ಹೊಟ್ಟೆ ಹುಣ್ಣಾಗುವಂತೆ ನಕ್ಕೆವು.

[ಮೇಲಿನದು 'ಆತ್ಮಕಥನ'ದ ಒಂದು ಪುಟದ ಸಂಕ್ಷಿಪ್ತರೂಪ. ಕೆಳಗಿನದು ಚುಟುಕು ರೂಪವಲ್ಲ. 'ಆತ್ಮಕಥನ' ಈ ಪುಟ ಯಥಾವತ್ತಾಗಿ ರೂಪುತಳೆದಿದೆ.]

ಳ

ಒಮ್ಮೆ ಜೋಳದರಾಶಿಯವರನ್ನು ಅಸ್ವಾಸ್ಥ್ಯ ಕಾಡಿತು. ಆ ಸಂದರ್ಭದಲ್ಲಿ ಬಳ್ಳಾರಿಗೆ ಬಂದ ಶ್ರೀ ಮ॥ ನಿ॥ ಪ್ರ॥ ಮಹಾಂತಸ್ವಾಮಿಗಳು ಬಳ್ಳಾರಿಗೆ ಬಂದಿದ್ದು, ಜೋಳದರಾಶಿಯವರ ಅನಾರೋಗ್ಯದ ಬಗೆಗೆ ತಿಳಿದು ನಾಗೇಶಶಾಸ್ತ್ರಿಗಳೊಂದಿಗೆ ದೊಡ್ಡನಗೌಡರ ಮನೆಗೆ ದರ್ಶನವಿತ್ತು, ಗೌಡರಿಗೆ ಆಶೀರ್ವಾದವಿತ್ತು, "ಬೇಗನೆ ಗುಣವಾಗುತ್ತೆ, ಯೋಚನೆ ಮಾಡಬೇಡಿ" ಎಂದು ಅಭಯವನ್ನಿತ್ತರು. ನಾನು ನನ್ನ ಈ ಜೀವನವನ್ನು ಸಿಂಹಾವಲೋಕನಕ್ಕೆ ಗುರಿಮಾಡಿಕೊಂಡಾಗ, ನನಗೆ ನಾನೇ ಸಮಾಧಾನ ಹೇಳಿಕೊಳ್ಳುವ ರಚನೆಯೊಂದು ತೆಲುಗು ಕವಿತೆಯಾಗಿಬಂತು.

ಕವಿಶೇಖರುಡು ರಾಗ-ಮೋಹನ

ನಾಕೇಮಿ ಕೊರತ ರವಿಶೇಖರುಡನೇಮಿ ॥ಪ॥
ನಾ ದಿವ್ಯ ಸೌಂದರ್ಯ ಕಾವ್ಯ ಸುಂದರಿಯುಂಡ ॥ಅ॥

ಊಹಾ ಪ್ರಪಂಚಮುನ ಪೂಲವುಯ್ಯಾಲಲೋ
ಭೂ ಗಗನ ಮುಲ ತಾಕನೇನೂ ಗುಲಾಟೆದ
ನಾ ಕವನ ಸುಂದರೀ ಪಾದ ಮಂಜೀರ ಮುಲು
ಘಲ್ಲು ಘಲ್ಲನಿಮ್ರೋಯ ಚಿರುನವ್ವು ತೊಲುಕಾಡ ॥೧॥

ನವನವೋನ್ಮೇಷ ಪದವಾಗ್ಜಾಲ ಬಂಧಮುಲ
ನವರಸಾಲಂಕಾರ ನವ್ಯ ಕಾವ್ಯಮುಲ
ಮನ ಮಲರಮತಿ ಚದುರ ಸಂವಿಧಾನಮುಲ
ಲೀಲಗಾರಚೆಯಿಂತು ನಾ ಕಾಂತ ತೋಡ ॥೨॥

ನಾ ಕವನ ಸಾಮ್ರಾಜ್ಯ ಲಕ್ಷ್ಮೀನಿವಾಸಮುಲು
ನಿರ್ಭಯ ವಿಲಾಸಮುಲು ಸುರತಸಲ್ಲಾಪಮುಲು
ನಿತ್ಯ ಯೌವನ ರಸಿಕ ರಸಗಂಧವಾಹಿನಿಲು
ಮೃತ್ಯು ಮೇಲೋನಿ ನಾ ಕಾವ್ಯಾಮೃತಮುಲುಂಡ ॥೩॥

(ಕುಲಶೇಖರ ನಾನು, ನನಗೇನು ಕೊರತೆ ? ನನ್ನ ದಿವ್ಯ ಸೌಂದರ್ಯ ಕಾವ್ಯ ಕಾಂತೆಯಿರಲು) "ಊಹಾ ಪ್ರಪಂಚದಲ್ಲಿ ಹೂವಿನ ತೊಟ್ಟಿಲಲ್ಲಿ, ಭೂಮಿ ಆಕಾಶ ಗಳನ್ನು ತಾಕುವಂತೆ ನಾನು ಆಡುವೆ. ನನ್ನ ಕವನ ಸುಂದರಿಯ ಪಾದಗಳ ತೋಡೆಗಳು ಘಲ್ಲೆಂದು ನಿನದಿಸಲು ಕಿರುನಗೆಗಳು ತುಳುಕಾಡಲು. ನೂತನ ಪದ ವಾಕ್ಯಗಳ, ಜಾಲಬಂಧಗಳ, ನವರಸಾಲಂಕಾರ ನವ್ಯಕಾವ್ಯಗಳ, ಮನವರಳಿ

ಅತಿ ಕೌಶಲ್ಯ ಸಂವಿಧಾನಗಳನ್ನು ಲೀಲೆಯಿಂದ ರಚಿಸುವೆ, ನನ್ನ ಕಾಂತೆಯೊಂದಿಗೆ" ನನ್ನ ಕವಿತೆ ಎಂಬ ಸಾಮ್ರಾಜ್ಯ ಲಕ್ಷ್ಮೀನಿವಾಸದಲ್ಲಿ ನಿರ್ಭಯ ವಿಲಾಸಗಳು, ಸುರತ ಸೌಖ್ಯಗಳು, ಸಲ್ಲಾಪಗಳು ಹಾಗೂ ನಿತ್ಯಯೌವನದ ರಸಿಕ ಸುಗಂಧ ವಾಹಿನಿಗಳು ಮೃತ್ಯುವೇ ಇಲ್ಲದ ನನ್ನ ಕಾವ್ಯಾಮೃತಗಳಿರಲಾಗಿ॥)

ತೆಲುಗಿನಲ್ಲಿಯೇ ಮೊದಲ ವಿದ್ಯಾಭ್ಯಾಸವಾಗಿದ್ದರೂ ಅದರಲ್ಲಿ ಕವನಗಳು ತಡವಾಗಿ ಬಂದವು. ಅಚ್ಚಾದಾಗ ಜೋಳದರಾಶಿಯವರು ತನ್ನದನ್ನು ತಾನೋದಿದರು; ಕಾವ್ಯಪ್ರಿಯ ಓದುಗರು ಮೆಚ್ಚಿದರು; 'ಕಾವ್ಯರ್ಷಿಯೇ ಶರಣು' ಎಂದರು.

—★—

ಕಾಯವಿಡಿದ ರೋಗಕ್ಕೆ ಮದ್ದು ಮೆಲ್ಲುತ್ತಿರೆ
ಮನದ ರೋಗಕ್ಕೆ ಮದ್ದಿಕ್ಕಿ ಎನ್ನ ನಿರೋಗಿಯಾಗಿಸಿದನಯ್ಯಾ.

★

ನಿನ್ನ ಭವದಾಟ ಎನ್ನ ಪ್ರಾಣಸಂಕಟ!
ನಿನ್ನ ಲೀಲಾವಿನೋದ ಎನ್ನ ಜೀವಪ್ರಮಾದ!

★

ಶ್ರೀಗುರು ನಿರ್ಣಯಿಸಿ ನೀಡಿದ ಲಿಂಗವ ನಿಷ್ಠೆಯಿಂ ಪೂಜಿಸಬೇಕಲ್ಲದೆ
ಕಷ್ಟವೆಂದಾ ಲಿಂಗದೇವನ ದೂರವಿರಿಸಲುಂಟೆ?

ನಮ್ಮ ಹಂಪೆ

ಶಾಂತರಸ

ಮದರಾಸಿನಲ್ಲಿ ಕೈಲಾಸಂ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಅನೇಕ ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣವಾಗಿತ್ತು. ರಾಯಚೂರಿನಿಂದ ನಾನು, ಗೆಳೆಯರಾದ ಚನ್ನಬಸವಪ್ಪ ವಕೀಲ ಬೆಟ್ಟದೂರು ಮತ್ತು ನೀರಮಾನವಿ ವೀರಣ್ಣ ಗೌಡರು ಆ ಸಮ್ಮೇಳನಕ್ಕೆ ಹೋಗಿದ್ದೆವು. ಆಗ ನಾವಿನ್ನೂ ತರುಣರು ; ಹೊಸದನ್ನೂ ಒಳ್ಳೆಯದನ್ನೂ ಇಂಪಾದುದನ್ನೂ ಎದೆಗಿಳಿಸಿಕೊಂಡು 'ಹಾ ಹೋ' ಎಂದು ಕೇಕೆ ಹಾಕಿ ಸಂತೋಷಪಡುವುದಷ್ಟೇ ಅಲ್ಲದೆ ಅನುಭವವನ್ನೂ ವಿಚಾರಗಳನ್ನೂ ವಿಸ್ತಾರ ಗೊಳಿಸಿಕೊಳ್ಳಲು ಕಾತರದ ಸ್ವಭಾವದವರಾಗಿದ್ದೆವು. ಮದರಾಸಿನ ಸಾಹಿತ್ಯ ಸಮ್ಮೇಳನ ನಮಗೆ ಅದ್ವಿತೀಯ ಆನಂದವನ್ನಿತ್ತಿತು. ಕೆಲವು ಘಟನೆಗಳಂತೂ ನಿನ್ನೆ ಮೊನ್ನೆ ನಡೆದಿವೆ ಎನ್ನುವಷ್ಟರಮಟ್ಟಿಗೆ ನಮ್ಮ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ನಿಂತಿವೆ. ತಮ್ಮದೇ ಆದ 'ಬಂಡ್ವಾಳ್ವಿಲ್ಲದ ಬಡಾಯಿ' ನಾಟಕದಲ್ಲಿ ಕೈಲಾಸಂ ಅವರು ಪಾತ್ರಮಾಡಿದ್ದು ; ಜೋಳದರಾಶಿಯವರ ಗಮಕ, ಹಾಡು ; ಜಯಂತಿ ಎಂಬ ಹದಿಹರೆಯದ ಹುಡುಗಿಯ ಇಂಪಾದ ಹಾಡುಗಳು ಮತ್ತು ಮಾಸ್ತಿಯವರು ನಮ್ಮ ನೀರಮಾನ್ವಿ ವೀರಣ್ಣಗೌಡ ರನ್ನು ಮಲ್ಲಾಬಾದಿ ವೀರಭದ್ರಪ್ಪನವರೆಂದು ಭಾವಿಸಿ, "ಯಾವಾಗ ಬಂದ್ರಿ

ಮಲ್ಲಾಬಾದಿಯವರೇ?" ಎಂದು ಕೇಳಿದಾಗ ವೀರಣ್ಣ ಗೌಡರು ಕಕ್ಕಾ ಬಿಕ್ಕಿಯಾದದ್ದು. ಮಲ್ಲಾಬಾದಿ ಮತ್ತು ನೀರವಾನ್ನಿ ವೀರಣ್ಣಗೌಡರು ಒಂದೇ ರೀತಿಯಾಗಿ ಕಾಣುತ್ತಿದ್ದರು. ಆಗ ಮಲ್ಲಾಬಾದಿಯವರು ಹರಿಹರನ ರಗಳೆಗಳ ದೀರ್ಘ ಅಭ್ಯಾಸದಿಂದ ರಗಳೆಯ ಮಲ್ಲಾಬಾದಿಯವರೆಂದೇ ಹೆಸರಾಗಿದ್ದರು. ಅವರ ಪರಿಚಯ ನಮಗಿರಲಿಲ್ಲ. ೧೯೫೩ರಿಂದ ಪರಿಚಯವಾಗಿ ಮಲ್ಲಾಬಾದಿಯವರು ನಮ್ಮವರೇ ಆಗಿಬಿಟ್ಟರು. ರಾಯಚೂರು ಜಿಲ್ಲೆ ಅವರಿಗೆ ತವರುಮನೆಯಂತಾಯಿತು.

ಮದರಾಸು ಸಾಹಿತ್ಯ ಸಮ್ಮೇಳನದಲ್ಲಿ ದೊಡ್ಡನಗೌಡರು ನಿಜಗುಣರ 'ಶಿವಮಹಾದೇವ' ಎಂಬ ಪದ್ಯವನ್ನು, ತಮ್ಮ "ನಮ್ಮ ಹಂಪೆ"ಯನ್ನು ಮತ್ತು ಇತರ ಗೀತೆಗಳನ್ನು ಹಾಡಿದರು. ಭಾವತುಂಬಿದ ಆ ಕಂಚಿನ ಕಂಠದಿಂದ ಹೊರಬಂದ ಒಂದೊಂದು ಶಬ್ದವೂ ಕೇಳುಗರ ಎದೆಯನ್ನು ಝಗ್ಗನೆ ಬೆಳಗಿಸಿ, ಅರ್ಥದೈಸಿರಿಯನ್ನು ಹರಡುತ್ತಿತ್ತು. ಭಾಷಣಗಳು ಬೇಸರಗೊಳಿಸಿದಾಗ, ಸಭೆಯಲ್ಲಿ ಗುಜುಗುಜು ನಡೆದಾಗ ದೊಡ್ಡನಗೌಡರು ಸ್ಟೇಜಿನ ಮೇಲೆ ಹಾಜರು. ಅವರ ಹಾಡಿಗೆ ಸಭೆಗೆ ಸಭೆಯೇ ಮಂತ್ರಮುಗ್ಧ. ಕಟ್ಟಡಕ್ಕೂ ಸೂಸುವ ಗಾಳಿಗೂ ಮಾಧುರ್ಯದಿಂದ ಜೊಂಪು, ಮತ್ತೆ ಕಾರ್ಯಕ್ರಮಗಳಿಗೆ ಹೊಸಚೇತನ, ಭಾಷಣಗಳು ಪ್ರಾರಂಭ.

ಅಂದು ಗೌಡರ ಕಂಠದಿಂದ ಕೇಳಿದ 'ನಮ್ಮ ಹಂಪೆ' ಇಂದಿಗೂ ನನ್ನ ಕಿವಿಯಲ್ಲಿ ಗುಣುಗುಣಿಸುತ್ತಿದೆ ; ಅಂತರಂಗದಲ್ಲಿ ಕಿಣಿಕಿಣಿಸುತ್ತಿದೆ. ಈಗ ಇದನ್ನು ಕುರಿತು ನನ್ನ ಅನಿಸಿಕೆಗಳನ್ನು ಬರೆಯುವ ಸಂದರ್ಭ ಒದಗಿ ಬಂದುದು ಅತ್ಯಂತ ಆನಂದದಾಯಕ.

೨

'ನಮ್ಮ ಹಂಪೆ' ಮೂವತ್ತೆರಡು ಭಾಮಿನೀ ಷಟ್ಪದಿಗಳ ಒಂದು ವಿನೂತನ ಕವನ. ಇದನ್ನು ಕುರಿತು ಮುನ್ನುಡಿಯಲ್ಲಿ ಶಿ. ಶಿ. ಬಸವನಾಳರು ಹೇಳಿರುವ ಮಾತುಗಳು ಇದರ ವೈಶಿಷ್ಟ್ಯವನ್ನೂ ಅರ್ಥವಂತಿಕೆಯನ್ನೂ ಸಾರಿ ಹೇಳುತ್ತವೆ. "ಅದರಲ್ಲಿ ಹುದುಗಿರುವ ಭಾವಪ್ರಪಂಚ ಬಹು ವಿಶಾಲವಾದುದು. ಶೋಕ, ತಾಪ, ಕೋಪ ; ಪಂಪಾಪುರದಧಿದೈವವಾದ ಶ್ರೀ ವಿರೂಪಾಕ್ಷನಲ್ಲಿ ಮೊರೆ, ಮುನಿಸು, ಭೋಗ, ರಾಗ, ವ್ಯಾಮೋಹರಹಿತವಾದ ವಿರೂಪಾಕ್ಷನಿಗೆ ಆರಾಧಕರೂ ವಿರೋಧಕರೂ ಒಂದೇ ಎಂಬ ಉದಾಸೀನತೆ, ಜಗದ ತಾಯಿಯಾದ ಪಂಪಾಂಬಿಕೆಯಲ್ಲಿ ಮೊರೆ, ತಾಯಿ ಮಕ್ಕಳನ್ನು ಕೈಬಿಡಲಾರಳೆಂಬ ನಂಬಿಗೆ, ಕರ್ನಾಟಕದ ಸಿರಿ–ಸೌಭಾಗ್ಯಗಳನ್ನು ಅದೆಷ್ಟೋ ಸಾರಿ ಅವಳು ರಕ್ಷಿಸಿರುವಳೆಂಬ ನೆನಪು, ಕನ್ನಡಿಗರಾದ ನಾವೇ ಆ ಸಿರಿ–ಸೌಭಾಗ್ಯಕ್ಕೆ ಅರ್ಹರಾಗಿಲ್ಲವೆಂಬ ಆತ್ಮಜ್ಞಾನದೊಡನೆ ಹುಟ್ಟಿದ ಶಾಂತಿ, ಜಗದ ಮಾತೆ–ಪಿತರಾದ ಅದೇ ಪಂಪಾಂಬಿಕೆ ವಿರೂಪಾಕ್ಷ ಇವರಲ್ಲಿಯೇ ಕೊನೆಯ ಶರಣು;

ಹೀಗೆ ಹಲವು ವಿಧವಾದ ಭಾವಗಳನ್ನು ಈ ಕವನ ಬಿತ್ತರಿಸುತ್ತಿದ್ದರೂ ಎಲ್ಲವೂ ಕರುಣಾರಸ ಪೋಷಕವೇ ಆಗಿವೆ."

ಕರುಣಾರಸ ಇಲ್ಲಿ ತುಂಬಿ ಹರಿದಿದ್ದರೂ ಶೋಕ, ತಾಪ, ಮುನಿಸುಗಳ ಬಸಿರಿನಿಂದ ಎದ್ದು ಬರುವ ದೈವಬಲಕ್ಕಿಂತ ಪುರುಷ ಪ್ರಯತ್ನ ಹೆಚ್ಚಿನದು ಎಂಬ ಮಾತು ಸೂಕ್ಷ್ಮವಾಗಿ ಅರಿಯಬಹುದಾಗಿದೆ. ದೈವದಲ್ಲಿ ಕವಿ ಎಷ್ಟು ಮೊರೆಯಿಟ್ಟರೂ, ದೈವವು ಎಲ್ಲಕ್ಕಿಂತ ಮಿಗಿಲಾದುದು ಮತ್ತು ಅದರ ಕರುಣೆಯಿಲ್ಲದೆ ಏನೊಂದೂ ಆಗದು ಎಂದು ಕವಿ ಹೇಳುತ್ತಿದ್ದರೂ ಆತನಿಗೆ ಅರಿಯದಂತೆ ಪುರುಷ ಪೌರುಷ ಇಲ್ಲದಿದ್ದರೆ ಏನನ್ನೂ ಸಾಧಿಸಲಾಗದೆಂಬುದನ್ನೂ ಪುರುಷ ಪೌರುಷವೇ ದೈವಶಕ್ತಿಗಿಂತ ಹೆಚ್ಚೆಂಬುದೂ ಕವನದ ತುಂಬ ಪ್ರತಿಪಾದಿತವಾಗಿದೆ.

೩

ಹಾಳಾದ ಹಂಪೆಯನ್ನು ನೋಡಿ ಕವಿಯ ಭಾವಲೋಕದಲ್ಲಿ ಹಿಂದಿನ ಅದರ ವೈಭವವು ಮೂಡಿ ನಿಲ್ಲುತ್ತದೆ. ಆ ವೈಭವ ಇಂದು ಯಾಕೆ ಕಾಣಲೊಲ್ಲದು? "ಪಂಪಾಧಿನಾಯಕ ಏನಿದಚ್ಚರಿ" ಎಂದು ಕವಿ ಮರುಗುತ್ತಾನೆ. ಯಾವ ಮಾನವ ರಕ್ಕಸರು ಇದನ್ನು ಹಾಳುಗೆಡವಿದರೆಂದು ಸಿಡಿದೇಳುತ್ತಾರೆ. ತನ್ನ ಅಧಿದೈವವಾದ ಮತ್ತು ವಿಜಯನಗರ ಸಾಮ್ರಾಜ್ಯದ ಕುಲದೈವವಾದ ಪಂಪಾಪತಿಯ ಮೇಲೆ ತನ್ನ ಸಿಟ್ಟನ್ನು ಕಾರುತ್ತಾನೆ. "ಈ ಹಂಪೆ-ಲಕುಮಿಯ ಮುಂದಲೆಯನ್ನು ದುರುಳರು ಹಿಡಿದು ಠೊಂಕಿ ಭಂಗಿಸಿ ಜಡಿಯುವ ಸಮಯದಲ್ಲಿ ಪಂಪಾಪತಿಯೇ ನೀನಿದನ್ನು ನೋಡಿ ಹೇಗೆ ಸುಮ್ಮನಿದ್ದೆ? ಭೈರವ ನೃತ್ಯಗೈದು ಹಂತಕರನ್ನು ಏಕೆ ಹತ ಗೈಯಲಿಲ್ಲ? ಕಾಮನನ್ನು ಸುಟ್ಟ ನಿನ್ನ ಉರಿಯುವ ಹಣೆಗಣ್ಣಿಗೆ ತಂಪಡರಿತ್ತೇನು? ಯಮನನ್ನು ಇರಿದ ತ್ರಿಶೂಲದ ಮೊನೆಯು ಮುರಿದಿತ್ತೇನು? ತ್ರಿಪುರಾಸುರರ ಶಿರಗಳನ್ನು ತರಿದ ನಿನ್ನ ಶಸ್ತ್ರಕ್ಕೆ ಕಿಲುಬು ಸೋಂಕಿತ್ತೇನು? ನಿನಗೆ ಏನಾಗಿತ್ತು, ಹೇಳೋ ಬೋಳೆ ಶಂಕರಾ? ನೀನು ಸುಮ್ಮನೇಕಿದ್ದೆ?" ಎಂಬ ಮಾತುಗಳಿಂದ ಕವಿ ತಿವಿಯುತ್ತಾನೆ. ತನ್ನ ಕೋಪದಲುಗಿನಿಂದ ಇರಿಯುತ್ತಾನೆ.

ಈ ಸಿರಿಸಂಪತ್ತಿಗೆ ನೆಲದ ಋಣ ತೀರಿತೆಂದು, ಅದಕ್ಕೆ ಯಾಕೆ ಬಳಲಬೇಕೆಂದು ಬಗೆದೆಯಾ? ಈ ಧರೆಯ ಭೋಗವನ್ನು ಒಲ್ಲದೆ ಕೈಲಾಸಕ್ಕೆ ಹೋದೆಯಾ? ಈ ಹಂಪೆಯನ್ನು ನಾಶಗೈದ ಖಳರೇ ನಿನ್ನ ಮಕ್ಕಳೆಂದು ಛಲದಿಂದ ನಮ್ಮೊಳು ಕೋಪ ತಾಳಿದಿಯಾ ಎಂಬ ವ್ಯಂಗ್ಯದ ಈಟಿಯಿಂದ ಕವಿ ವಿರೂಪಾಕ್ಷನ ಮರ್ಮಕ್ಕೆ ಚುಚ್ಚುತ್ತಾನೆ.

"ನಿನ್ನನ್ನು ಸೇವಿಸಲು ಭಾರತದ ವೀರರು ಕನ್ನಡ ಕಲಿಗಳು ತಮ್ಮ ರಕ್ತದಿಂದ ಧರಣಿಯನ್ನು ಕೆಸರಾಗಿಸಿದರು; ಕಾಲನ ಬಾಯೊಳಗೆ ಹೊಕ್ಕರು. ಇಂಥ ಸ್ಥಿತಿಯಲ್ಲಿ

ನೀನು ಚಿಂತೆಯಿಲ್ಲದೆ, ರಾಗವಿಲ್ಲದೆ ಗುಡಿಯೊಳಗೆ ಅಡಗಿ ಕುಳಿತೆಯಾ ? ನಾವು ಪ್ರಾಣ ತೆತ್ತು ನಿನಗಿತ್ತ ಸಂಪದವನ್ನು ಪರರಿಗೆ ಧಾರೆಯೆರೆದು ಕೊಟ್ಟೆಯಾ" ಎಂದು ಕವಿ ಕಿಡಿಕಿಡಿಯಾಗುತ್ತಾನೆ.

"ನಿನ್ನನ್ನು ಏನು ಕೇಳಿದರೆ ಏನಿದೆ ? ಪಂಪಾಪತಿಯೇ ಹೇಳಲಿಕ್ಕೆ ಏನುಂಟು ? ನಾವು ಮಾತ್ರ ಮೋಸದ ಬಲೆಗೆ ಸಿಲುಕಿದೆವು. ಭಾಳಲೋಚನನೇ ನಾವು ನಿನ್ನನ್ನು ಅರಿಯದೆ ನಮ್ಮ ಅಜ್ಞಾನಕ್ಕೆ ಬಲಿಯಾಗಿ ನಾವೇ ಕೆಟ್ಟೆವೆಂದು" ಕವಿ ತನ್ನ ಅಂತರಂಗ ವನ್ನು ಶೋಧಿಸಿಕೊಳ್ಳತೊಡಗುತ್ತಾನೆ.

'ದೈವ ನಾವು ಮಾಡಿದ್ದು; ನಮಗೆ ಬೇಕಾದುದೆಲ್ಲವನ್ನೂ ಅದಕ್ಕೆ ಆರೋಪಿ ಸಿದೆವು' ಎನ್ನುವ ವಿಚಾರಮಂಥನದಿಂದ ಕವಿ ಹೇಳುವ ಮಾತುಗಳು ಸಾರ್ವಕಾಲಿಕವೂ ಅರ್ಥಪೂರ್ಣವೂ ಆಗಿವೆ. ರಾಗವಿಲ್ಲದ ನಿನಗೆ ರಾಗ ಬಳಿದೆವು ; ಭೋಗವಳಿದ ನಿನಗೆ ಭೋಗದಲ್ಲಿ ಮುಳುಗಿಸಿದೆವು ; ವ್ಯಾಮೋಹರಹಿತನಾದ ನಿನಗೆ ಮೋಹಿಯನ್ನಾಗಿ ಮಾಡಿದೆವು ; ಭಾಗ್ಯ, ಶೋಕ, ಮುನಿಸು, ಯಾವುದೂ ಇಲ್ಲದ ನಿನಗೆ ಆ ನಮ್ಮ ಎಲ್ಲ ಗುಣಗಳನ್ನು ತೊಡಿಸಿದೆವು. ನೀನೂ ನಮ್ಮಂತೆಯೇ ಎಂದು ಭಾವಿಸಿ, ಮಹಾತ್ಯಾಗ ಮಾಡಿ ಸಂಪತ್ತನ್ನೆಲ್ಲ ನಿನಗೆ ಇತ್ತೆವೆಂದು ಆದ್ಯತೆಯಿಂದ ಕುಣಿದಾಡಿದೆವು. ಈ ಸಂಪತ್ತನ್ನು ನಿನಗೆ ಅರ್ಜಿಸಲು ಪ್ರಾಣಗಳನ್ನು ಪಣಕ್ಕಿಟ್ಟು ಹೋರಾಡಿದೆವು ಎಂದು ಅಹಂಕಾರದಿಂದ ಜಿಗಿದಾಡಿದೆವು. ಆದರೆ ಎಲ್ಲವೂ ನಿನ್ನದು, ಎಲ್ಲವನ್ನು ಕೊಡುವವನು ನೀನೆ ಎಂಬುದನ್ನು ಮರೆತು ಅಜ್ಞಾನದಿಂದ ಎಲ್ಲವನ್ನೂ ಕಳೆದುಕೊಂಡೆವು.

ನೀನು ಮಹಾತ್ಯಾಗಿ. ಯಾರೂ ಒಲ್ಲದ ವಿಷವನ್ನು ನುಂಗಿದೆ. ನೀನುಟ್ಟ ಅಂಬರವನ್ನು ಪ್ರೀತಿಯಿಂದ ವಿಷ್ಣುವಿಗೆ ಕೊಟ್ಟು ಆನೆಯ ತೊಗಲನ್ನು ಟೊಂಕಕ್ಕೆ ಸುತ್ತಿಕೊಂಡೆ.

ನಿನ್ನ ಈ ಮಹಾತ್ಯಾಗ ನಮಗೇನು ಒಳ್ಳೆಯದು ಮಾಡಲಿಲ್ಲವೆಂದು ಕವಿ ಮತ್ತೆ ಕೋಪಿಸಿಕೊಳ್ಳುತ್ತಾನೆ. ಆತನ ಕೋಪದಲ್ಲಿ ಅರ್ಥವಡಗಿದೆ. "ನಾಡನೊಪ್ಪಿಸಿ ಕುಳಿತೆ ಪರರಿಗೆ ಕಾಡುವರು ಬೇಡುವರು ಸಮಯೆನಗೆಂದು ಸಾರಿದೆಲಾ" ಎಂಬ ಒಂದು ಬಗೆಯ ಸಾಂತ್ವನದ ಮಾತನ್ನು ಕವಿ ತನಗೆ ತಾನೇ ಹೇಳಿಕೊಂಡರೂ ಪಂಪಾಪತಿ ಮಾಡಿದ್ದು ಸರಿಯಲ್ಲ ಎಂಬ ಸಿಟ್ಟು ಮತ್ತೆ ಭುಗಿಲೆಂದು ಏಳುತ್ತಿದೆ. "ಪಂಪಾಪತಿಯೇ ನಾವು ಮೂಢ ಭಕ್ತರು, ಸೌಂದರ್ಯದ ಆರಾಧಕರು, ಯಾವಾಗಲೂ ನಿನ್ನನ್ನು ನೆನೆಯು ವವರು, ನಿನ್ನನ್ನೇ ನಂಬಿದವರು. ನೀನು ಪರಮವಿರಾಗಿಯಾದರೂ ನಿನ್ನ ಮಕ್ಕಳ ಸಂತೋಷಕ್ಕಾದರೂ ಈ ಸಕಲ ಐಸಿರಿಯನ್ನು ಉಳಿಸಬೇಕಿತ್ತು ! ದೀನರಕ್ಷಕನೆಂಬ ನಿನ್ನ ಬಿರುದನ್ನು ಏನು ಮಾಡಿದೆ ? ಯಾರಿಗೆ ಕೊಟ್ಟೆ ?"

ಕವಿ ಇಲ್ಲಿ ಅಂತರ್ಮುಖಿಯಾಗುತ್ತಾನೆ. ಆತನ ಅಂತರಾಳದಲ್ಲಿ ವಿಚಾರದ ಮಂಥನ ನಡೆಯುತ್ತದೆ. ಆ ಮಂಥನದಲ್ಲಿ ಆತ ನಿಜವಾದ ಕಾರಣವನ್ನು ಕಂಡುಕೊಳ್ಳು

ತ್ತಾನೆ : ಈ ಸಿರಿಸಂಪತ್ತು ಹಾಳಾದುದು ನಮ್ಮಿಂದಲೇ. ನಾವು ನಮ್ಮ ಪೌರುಷವನ್ನು ಮಾರಿಕೊಂಡೆವು : ಅನ್ಯರಿಗೆಆಳಾದೆವು. ಕರುಣವಿದೂರ ಕಲ್ಲಾಗಿರುವ ಪಂಪಾಪತಿಯೇ ನಿನ್ನನ್ನು ದೂರಿ ಫಲವೇನು ?

ಕವಿಗೆ ಪಂಪಾಂಬಿಕೆಯು ನೆನಪಾಗುತ್ತದೆ. "ತಾಯೆ, ಶಿವನು ಎಂತಾದರಾಗಲಿ ನಿನಗೆ ಏಕೆ ದಯೆ ಬರಲಿಲ್ಲ ? ಹಂಪೆ ಹಾಳಾಗುವುದನ್ನು ನೀನೂ ನೋಡಿ ಸುಮ್ಮನೆ ಕುಳಿತೆಯಾ ? ತಂದೆ ಮಕ್ಕಳನ್ನು ದೂರ ಮಾಡಿದರೆ ಬದುಕಬಹುದು. ಆದರೆ ತಾಯಿ ಮುನಿದು ದೂರ ಮಾಡಿದರೆ ಮಕ್ಕಳು ಬದುಕುವುದು ಹೇಗೆ ? ನೀನು ನಿಜವಾದ ತಾಯಿ. ಇಲ್ಲದ ದೋಷಗಳನ್ನು ನಾವೇ ನಿನ್ನಲ್ಲಿ ಕಲ್ಪಿಸಿದ್ದೇವೆ. ತಪ್ಪು ನಮ್ಮದೇ" ಎಂದು ಕವಿ ಹಂಪೆಯ ಎಲ್ಲ ಸಂಪತ್ತನ್ನೂ ಪಂಪಾಂಬಿಕೆ ಎಲ್ಲಿಯೊ ಕಾಯ್ದಿರಿಸಿದ್ದಾಳೆ ಎಂಬ ನಂಬುಗೆಯನ್ನು ತಾಳುತ್ತಾನೆ.

ಆ ಸಂಪತ್ತು ಎಲ್ಲಿಯೇ ಅಡಗಿರಲಿ, ಆದರೆ ಅದನ್ನು ಮರಳಿ ಪಡೆಯಲು ಪ್ರಯತ್ನ ನಮ್ಮದೆ ಆಗಬೇಕಲ್ಲ. ಇದರ ಅರಿವು ಕವಿಗೆ ಸಂಪೂರ್ಣವಿದೆ. "ಹಂದಿಯಂತೆ ಪಾರತಂತ್ರ್ಯದ ಕಂದಕದ ಕೆಸರೊಳಗೆ ಉರುಳುವ ಹೇಡಿಗಳು ನಾವಾಗಿ ಇರುವವರೆಗೆ ಆ ಸಂಪತ್ತನ್ನು ಮರಳಿ ಪಡೆಯಲು ಹೇಗೆ ಸಾಧ್ಯ" ಎಂದುಕೊಳ್ಳುತ್ತ ಕವಿ ಸಾರ್ವಕಾಲಿಕ ಸತ್ಯಕ್ಕೆ ಬಂದು ಮುಟ್ಟುತ್ತಾನೆ. ಪೌರುಷವೇ, ವೀರಸಂಕಲ್ಪಗಳೇ ಮತ್ತು ಸಿಡಿಲು ಕಾರುವ ಹೋರಾಟವೇ ಸ್ವಾತಂತ್ರ್ಯವನ್ನೂ ಸಕಲ ಸಂಪತ್ತನ್ನೂ ಸಾಮ್ರಾಜ್ಯವನ್ನೂ ತಂದುಕೊಡುವವಲ್ಲದೆ ದೈವದ ಕರುಣೆಯನ್ನೂ ಒದಗಿಸುತ್ತವೆ, ಎಂದು ಕವಿ ಪರಮಸತ್ಯವನ್ನು ಸಾರುತ್ತಾನೆ. ಕೇವಲ ಮಾತಿನಲ್ಲಿ ವೀರತನ ಮೆರೆಯುತ್ತಿರುವುದನ್ನೂ ಮತ್ತು ಬದುಕಿನಿಂದ ವಿಮುಖಗೊಳಿಸುವ ವೇದಾಂತವನ್ನೂ ಬಿಟ್ಟು ನಾವು ತ್ಯಾಗ, ವೀರ, ಧೈರ್ಯಗಳಿಂದ ಮುಂದುವರಿದಾಗ ಮಾತ್ರ ಗೆಲುವು ನಮ್ಮದೇ. ಆಗ ನಾವು ಕಾಲಿಟ್ಟಲ್ಲಿ ಸಿರಿಸಂಪತ್ತು ಚಿಮ್ಮುವವು ; ಕೈಯಿಟ್ಟಲ್ಲಿ ವೈಭವ ಅರಳಿ ನಿಲ್ಲುವುದು. ಮತ್ತೆ ಹಂಪೆ ತನ್ನ ವಿಶ್ವವನ್ನಾಕರ್ಷಿಸಿದ ಸಿರಿಸಂಪತ್ತುಗಳಿಂದ ಮೈತುಂಬಿಕೊಂಡು ಸ್ವಾತಂತ್ರ್ಯದ ಸಂದೇಶವನ್ನು ಸಾರುವುದು.

ಈ ಭಾಗ್ಯ ನಮಗೆ ಬೇಕು, ಮೋಕ್ಷ ಬೇಕಾಗಿಲ್ಲ, ಎಂದು ಕವಿ ಪಂಪಾಪತಿ–ಪಂಪಾಂಬಿಕೆಯರಲ್ಲಿ ನಿವೇದಿಸಿಕೊಳ್ಳುತ್ತಾನೆ.

೪

'ನಮ್ಮ ಹಂಪೆ'ಯಲ್ಲಿರುವ ಮೂವತ್ತೆರಡು ಭಾಮಿನೀ ಷಟ್ಪದಿಗಳು ಸುಲಲಿತ ವಾಗಿವೆ. ಇಂಪಿನಿಂದ ಕೂಡಿವೆ. ಹಾಡಲಿಕ್ಕೆ ತುಂಬ ಅನುಕೂಲವಾಗಿವೆ. ಸ್ವತಃ ಗಮಕಿಗಳಾದ ದೊಡ್ಡನಗೌಡರು ಗೇಯತೆಯ ಎಲ್ಲ ಗುಣಗಳನ್ನೂ ಮಾರ್ದವ

ಮಾಧುರ್ಯವನ್ನೂ ಈ ಪದ್ಯಗಳಲ್ಲಿ ತುಂಬಿದ್ದಾರೆ. ಅತ್ಯಂತ ಮೃದುವಾದ ಪದ ಶಯ್ಯೆಯಿಂದ ಮತ್ತು ಮಾರ್ದವತೆಯಿಂದ ಕೂಡಿದ ಈ ಷಟ್ಪದಿಗಳು ಸಿಡಿಲಿನಂತಹ ಕೋಪವನ್ನು ತಾಪವನ್ನು ಪೌರುಷವನ್ನು ಮತ್ತು ಕರುಣರಸದಲ್ಲಿ ಮಿಂದಿದ್ದರೂ ಶೌರ್ಯವನ್ನು ಕೆದರುವ ವೀರವನ್ನು ಸ್ಫುಟವಾಗಿ ಬಿಂಬಿಸಿವೆ. ವಿನೂತನ ಸತ್ವ ; ವಿಶಿಷ್ಟ ಶೈಲಿಯಿಂದ ಕೂಡಿವೆ,

ದೊಡ್ಡನಗೌಡರು ಹುಟ್ಟು ಕವಿಗಳು, ಅದರಂತೆ ಹುಟ್ಟು ಗಮಕಿಗಳು. "ಆಳ ವಾದ ಸಾಹಿತ್ಯ ಪರಿಚಯದ ಉಚ್ಚಸಂಸ್ಕಾರ ಎದ್ದು ಕಾಣುತ್ತಿದೆ ಅವರ ಕೃತಿಗಳಲ್ಲಿ ಕೋಮಲ ಕವಿಹೃದಯದ ಸೂಕ್ಷ್ಮ ಮಿಡಿತ ಒಲಿದು ತೋರುತ್ತಿದೆ ಅವರ ಕವನ ಗಳಲ್ಲಿ" ಎಂದು ಮುನ್ನುಡಿಯಲ್ಲಿ ಶಿ. ಶಿ. ಬಸವನಾಳರು ನುಡಿದಿರುವ ಈ ಮಾತುಗಳು ಅವರ ಕಾವ್ಯ ಜೀವನಕ್ಕೆ ಸಾಕ್ಷಿಯಾಗಿವೆ.

ಈ ಕವನದಲ್ಲಿ ಉಪಮೆ ಮುಂತಾದ ಅಲಂಕಾರಗಳು ಉಪಯೋಗವಾಗಿದ್ದರೂ ಅವು ಸಹಜವಾಗಿ ಮೂಡಿಬಂದಿವೆ ; ಜೀವನಕ್ಕೆ ಹತ್ತಿರವಾಗಿವೆ. ಅಲಂಕಾರಕ್ಕಾಗಿ ಕವಿ ಪೂರ್ವಯೋಜಿತವಾಗಿ ನುಡಿದದ್ದು ಈ ಕವನದಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ. ನಿರಾಡಂಬರದಿಂದ ಕೂಡಿದ ಈ ಕಾವ್ಯ ತನ್ನ ಸಹಜ ಕಾವ್ಯಗುಣದಿಂದ ಓದುಗರ ಮನಸ್ಸನ್ನು ಗೆಲ್ಲುತ್ತದೆ. ಹಿಂದಿನ ಮತ್ತು ಇಂದಿನ ನಮ್ಮ ಬದುಕಿಗೆ ಈ ಚಿಕ್ಕ ಕಾವ್ಯ ಒಂದು ಅರ್ಥ ಪೂರ್ಣವಾದ ರೂಪಕವಾಗಿ ನಿಲ್ಲುತ್ತದೆ. ಅಲ್ಲಲ್ಲಿ ಬರುವ ಕೆಲವು ಮಾತುಗಳು ಕಾವ್ಯಕ್ಕೆನವೀನ ಅರ್ಥವನ್ನು ತಂದುಕೊಟ್ಟು ಅದರ ಸೌಂದರ್ಯವನ್ನು ಹೆಚ್ಚಿಸುತ್ತವೆ : "ಗಗನಾಂತರವ ಚುಂಬಿಸಿ ಸುರರ ಸಿರಿಯುಂ ಜರೆದ ಘನಗೋಪುರ ಗಳಯ್ಯೋಧರಣಿಯಾಲಿಂಗನದೊಳೊರಗಿಹವು" "ಕಲೆಯ ರಚನಾಕೌಶಲದಿ ಕಳಕಳಿಪ ಮೇಲುಪ್ಪರಿಗೆಗಳು ಕುಸಿದಳಿದಿಹವು ಹಾಳಾದ ಗೋಡೆಗಳೆದ್ದು ನಿಂದಿಹವು" ಈಗ ಹಂಪೆಯಲ್ಲಿ ತಿರುಗಾಡಿ ನೋಡುವವರಿಗೆ ಈ ಹಾಳುಗೋಡೆಗಳು ಎದ್ದು ಬಡಿಯುತ್ತವೆ. "ಘನತರದ ಈ ರಾಜಬೀದಿಯೊಳೆನಿತು ನೆಗ್ಗಿಲು ಬೆಳೆದುವಯ್ಯೋ." ಶೌರ್ಯವನ್ನು ಕಳೆದುಕೊಂಡು ಹಾಳಾದ ಹಂಪೆಯ ರಾಜಬೀದಿಗಳನ್ನು ಇದಕ್ಕಿಂತಲೂ ಜೀವಂತವಾಗಿ ವರ್ಣಿಸುವದು ಸಾಧ್ಯವಿಲ್ಲ. "ಎಂತು ಸಹಿಸಲಿ ಮನದೊಳೇಳುವನಂತದಳಲಂ ಕಿರಿಯ ಹೃದಯದೊಳೆಂತು ಅಡಗಿಸಲಿ ?" ಅಡಗಿಸಿಕೊಳ್ಳಲಾರದ ಆ ಕಿರಿ ಹೃದಯದ ಅಳಲೇ ಈ ಕಾವ್ಯವಾಗಿ ಮೂಡಿಬಂದಿದೆಯೆನಿಸುವದಿಲ್ಲವೆ ?

"ಹಣೆಗಣ್ಣುರಿಗೆ ತಂಪಡರಿತ್ತೆ, ತ್ರಿಶೂಲದ ಮೊನೆಯು ಮುರಿದಿತ್ತೆ, ಶಸ್ತ್ರಕೆ ಕಿಲುಬು ಸೋಂಕಿತ್ತೆ" ಎನ್ನುವ ಮಾತುಗಳಲ್ಲಿ ದೈವದ ಅಸಹಾಯಕತೆ ಮತ್ತು ಕವಿಯ ಸಿಟ್ಟು ತುಂಬ ವ್ಯಂಜಕವಾಗಿ ಬಂದಿದೆಯಲ್ಲವೆ ? "ಪೇಳಲೆ ಬೋಳೆ ಶಂಕರನೇ". ಇಲ್ಲಿ ಬಳಸಿದ 'ಬೋಳೆ' ಸಿಟ್ಟಿನ, ದುಃಖದ ಸನ್ನಿವೇಶದಲ್ಲಿಯೂ ಶಂಕರನನ್ನು

ಲೇವಡಿಗೆ ಒಳಪಡಿಸಿದ್ದು ರಂಜಕವೆನಿಸುತ್ತದೆ. ಹಾಗೆಯೇ ಸನ್ನಿವೇಶಕ್ಕೆ ಸೂಕ್ಷ್ಮ ಅರ್ಥವನ್ನು ಒದಗಿಸುತ್ತದೆ.

"ಹಂಪೆಯು ನಾಶಗೈದ ಖಳರೇ ಎನ್ನಯ ಮಕ್ಕಳೆಂದೆಯೊ." ಈ ನುಡಿಯಲ್ಲಿ ಅಡಗಿರುವ ಕೊಂಕು ಶಿವನ ಎದೆಯನ್ನು ಇರಿಯುವದೊಂದೆ ಅಲ್ಲ ಎಲ್ಲರಲ್ಲಿಯೂ ಒಂದು ಬಗೆಯ ಪೌರುಷವನ್ನು ಕೆದಕುತ್ತದೆ. "ಕಾಡುವರು ಬೇಡುವರು ಸಮಯೆನ ಗೆಂದು ಸಾರಿದೆಲಾ" ಎಂಬ ಮಾತಿನಲ್ಲಿ ದೇವರಿಗೆ ಎಲ್ಲರೂ ಸಮಾನರು ಎಂಬುದು ಸರಿ ಯೆನಿಸಿದರೂ ಪೌರುಷಹೀನರಿಗೆ ಯಾವಾಗಲೂ ದುರ್ಗತಿಯೇ ಎಂಬ ಅಂತರಾರ್ಥ ಪದ್ಯದ ಈ ಸಂದರ್ಭದಲ್ಲಿ ಕವಿ ಅಡಗಿಸಿಟ್ಟಿದ್ದು ಓದುಗರಿಗೆ ತಿಳಿಯದೆ ಹೋಗುವುದಿಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಬರೆದ ಈ ಕಾವ್ಯ ಕವಿಗೆ ಸ್ವಾತಂತ್ರ್ಯದಲ್ಲಿರುವ ಪ್ರೀತಿ ಸ್ವಾತಂತ್ರ್ಯ ಹೇಗೆ ಎಂಥವರಿಂದ ದೊರಕುತ್ತದೆ ಮತ್ತು ಪಾರತಂತ್ರ್ಯವು ಎಷ್ಟು ಹೀನ ವಾದುದು ಎಂಬುದನ್ನು ಚೆನ್ನಾಗಿ ಹೇಳುತ್ತದೆ ; (ಕೆಳಗಿನ ಮಾತುಗಳಿಂದ ಕಂಡುಕೊಳ್ಳ ಬಹುದಾಗಿದೆ) ಈ ಮಾತುಗಳು ಇಂದಿಗೂ ಎಂದಿಗೂ ಪ್ರಸ್ತುತವೇ.

"ಹಂದಿಯಂತೀ ಪಾರತಂತ್ರ್ಯದ
ಕಂದಕದ ಕೆಸರೊಳಗೆ ಉರುಳುವ
ಮಂದಭಾಗ್ಯರು ಹೇಡಿಗಳು ನಾವಾದೆವಿಂದಿನಲಿ"
....

ಎಂದಿಗಾ ಸ್ವಾತಂತ್ರ್ಯ ದೊರೆವುದು
ಅಂದಿನಾಭೂಲೋಕ ಸ್ವರ್ಗದ ವಿಭವಕಾಂಬುವುದು

ಧೀರತ್ಯಾಗವದಿಲ್ಲದವರನು
ಸೇರದಾ ಪರದೈವ ದೈವವಿ
ದೂರರಿಗೆ ತಾ ಒಲಿಯಲಾರದು ರಾಜ್ಯದೈಸಿರಿಯು
ಘೊರಕದನದಿ ಶತ್ರುಸಿರಗಳ
ತೂರಿವೀರ ವಿಹಾರವೆಸಗುವ
ಶೂರರಿಗೆ ಉಂಟಲ್ಲದೀ ಸಿರಿ ಹೇಡಿಗಳಿಗಳವೆ ?

—★—

ಜೋಳದರಾಶಿಯವರ ಎರಡು ಕಾವ್ಯ ಸಂಗ್ರಹಗಳು

ಚೆನ್ನವೀರ ಕಣವಿ

ಶ್ರೀ ಜೋಳದರಾಶಿ ದೊಡ್ಡನಗೌಡರು ನಮ್ಮ ನಾಡಿನ ಶ್ರೇಷ್ಠ ಗಮಕಿ ಹಾಗೂ ನಟರಾಗಿರುವಂತೆಯೇ ಸ್ವತಃ ನಾಟಕಕಾರ ಹಾಗೂ ಕವಿಯೂಗಿರುವದು ಅವರ ವ್ಯಕ್ತಿತ್ವಕ್ಕೆ ಹೆಚ್ಚಿನ ಕಳೆಯನ್ನು ತಂದುಕೊಟ್ಟಿವೆ. ೧೯೫೩ರಲ್ಲಿ ಪ್ರಕಟವಾದ ಅವರ 'ರಸವರ್ಷ', ೧೯೭೭ರಲ್ಲಿ ಪ್ರಕಟವಾದ 'ಗೌಡತಿ ಬರಲಿಲ್ಲ'-ಈ ಎರಡು ಕಾವ್ಯಗಳ ಅವಲೋಕನ ಈ ಲೇಖನದ ಉದ್ದೇಶವಾಗಿದೆ.

'ರಸವರ್ಷ' ನೂರೊಂದು ಗೀತೆಗಳ ಗುಚ್ಛ. 'ಯಾವುದೋ ಮಧುರ ವೇದನೆಯು ಹೃದಯದಲ್ಲಿ ಸುಳಿದು ಮೇಲೆದ್ದಾಗ ರಾಗದಿಂದ ಗುನುಗುಟ್ಟಿ ಹಾಡಿಕೊಂಡ ಭಾವಗೀತೆಗಳು' ಎಂಬುದಾಗಿ 'ನಿವೇದನೆ'ಯಲ್ಲಿ ಕವಿ ಅವುಗಳ ರಚನಾವಿಧಾನವನ್ನು ಸರಿಯಾಗಿ ಗುರುತಿಸಿದ್ದಾರೆ. ಇಷ್ಟೇ ಅಲ್ಲದೆ, 'ಹಾಡಿದಾಗಲೇ ಈ ಗೀತೆಗಳು ಜೀವಂತವಾಗಬಲ್ಲವು' ಎಂಬ ಹೇಳಿಕೆಯಲ್ಲಿ ಕವಿಗಿಂತಲೂ ಗಾಯಕನ ಸಮರ್ಥನೆ ಎದ್ದು ಕಾಣುತ್ತದೆ. ಆದರೆ ಹಾಡಿಕೊಳ್ಳದೆ ಹಾಗೇ ಅವುಗಳ ಧಾಟಿಯಲ್ಲಿ ಓದಿಕೊಂಡಾಗಲೂ ಭಾವದ ಸೊಗಸನ್ನು ಸೂಸುವ ಪದ್ಯಗಳು ಇಲ್ಲಿ ಇರದೆ ಇಲ್ಲ. ಅಂಥವುಗಳನ್ನು ನಾನಿಲ್ಲಿ ಹೆಚ್ಚು ಆಸ್ಥೆಯಿಂದ ಗಮನಿಸಿದ್ದೇನೆ.

ಮುನ್ನುಡಿಯಲ್ಲಿ ಅ. ನ. ಕೃ. ಈ ಪದ್ಯಗಳನ್ನು ಭಕ್ತಿಗೀತೆಗಳು, ನಾಡಗೀತೆಗಳು, ಪ್ರಕೃತಿಗೀತೆಗಳು, ಜೀವನ ವಿಮರ್ಶೆ–ಎಂದು ನಾಲ್ವರಿಯಾಗಿ ವಿಂಗಡಿಸಿ ನಿರೂಪಿಸಿದ್ದಾರೆ. ಜೊತೆಗೆ ಕೆಲವು ವ್ಯಕ್ತಿಗಳ ಗುಣಗೌರವವನ್ನು ಕೀರ್ತಿಸುವ ಪದ್ಯಗಳೂ ದುಃಖಗೀತೆಗಳೂ ಈ ಸಂಗ್ರಹದಲ್ಲಿರುವುದನ್ನು ಅವರು ಎತ್ತಿ ಹೇಳಿದ್ದಾರೆ. ಈ ಎಲ್ಲ ಬಗೆಯ ಪದ್ಯಗಳಲ್ಲಿ ಕೆಲವೊಂದು ಭಕ್ತಿಗೀತೆಗಳು ಹಾಗೂ ಜೀವನವಿಮರ್ಶೆಯ ಪದ್ಯಗಳು ತಮ್ಮ ಕಾವ್ಯಗುಣದಿಂದ ನಮ್ಮ ಗಮನವನ್ನು ವಿಶೇಷವಾಗಿ ಸೆಳೆದುಕೊಳ್ಳುತ್ತವೆ. ವಚನ ಸಾಹಿತ್ಯ. ಶರಣರ ಅನುಭಾವ ಗೀತೆಗಳು ಹಾಗೂ ದಾಸರ ಪದಗಳ ಪ್ರಭಾವವನ್ನು ಕವಿ ಚೆನ್ನಾಗಿ ಅರಗಿಸಿಕೊಂಡಿದ್ದಾರೆ. ಕವಿಯ ಉದಾರವಾದ ಮನೋಧರ್ಮದಲ್ಲಿ, ಹೃದಯ ವೈಶಾಲ್ಯದಲ್ಲಿ ಇದು ಕಂಡುಬರುತ್ತದಲ್ಲದೆ, ಕೆಲವು ಸಲ ಹಿಂದಿನವರ ಉದಾತ್ತ ಭಾವವನ್ನು ತಮ್ಮ ದನಿಯಲ್ಲಿ ಮತ್ತೆ ನುಡಿಸಿ ತೋರಿಸುತ್ತಿದ್ದಾರೆಂದು ಅನಿಸಿದರೆ ಆಶ್ಚರ್ಯವಿಲ್ಲ. 'ಪರಶಿವೆ' 'ಶಿವ ನಿನ್ನ ಪಾದ' 'ಹರಲೀಲೆ' 'ರಘುರಾಮ' 'ಎಂತು ಬಣ್ಣಿಪೆ', 'ಮನದ ಮಂಗ' 'ಗೋಪಾಲ' 'ಹೇಯ-ಶ್ರೇಯ' –ಹೀಗೆ ಹಲವಾರು ಗೀತೆಗಳನ್ನು ಇಲ್ಲಿ ಹೆಸರಿಸುತ್ತ ಹೋಗಬಹುದು. ಈ ಬಗೆಯ ಸಾಧನೆಮಾಡುತ್ತಲೇ ಕವಿ ಅಲ್ಲಲ್ಲಿ ಸ್ವಂತಿಕೆಯನ್ನು ಮೆರೆಸಿರುವುದೂ ಉಂಟು. ಅಂಥ ಪದ್ಯಗಳೂ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವುದು ಗಮನಾರ್ಹವಾಗಿದೆ.

'ನಾನರಿಯೆ' ಪದ್ಯದ ಪಲ್ಲವಿ ರೂಢಿಯಂತಿದ್ದರೂ ಮುಂದಿನ ಮೂರು ನುಡಿಗಳಲ್ಲಿ ಆತ್ಮವಿಮರ್ಶೆ ಚೆನ್ನಾಗಿ ಅಭಿವ್ಯಕ್ತಗೊಂಡಿದೆ. ಹೊರಗಿರುವ ವೈರಿಗಳನ್ನು ಮರ್ದಿಸಿ ತನಗಿನ್ನು ಹಗೆಯಿಲ್ಲವೆಂದು ಗರ್ವದಿಂದ ನೆಗೆದಾಡುತ್ತಿರುವಾಗ, 'ಅರಿಯದಾದೆನುಯೆನ್ನೊಳಗಿರುವ ವೈರಿಗಳ' ಎಂಬುದು ಹೊಳೆಯುತ್ತದೆ, ಎಲ್ಲ ಶಾಸ್ತ್ರಗಳನ್ನೋದಿ ಪಂಡಿತನಾಗಿ, ಐಶ್ವರ್ಯದ ಶಿಖರದಲ್ಲಿ ಕುಳಿತು ಜಗತ್ತಿನಲ್ಲಿ ನಡೆಯುವ ಆಟಗಳನ್ನು ಕಂಡರೂ 'ಒಳಗಾಗೊ ಆಟಗಳ ನಾನೋಡದಾದೆ' ಎಂದು ಅನಿಸುತ್ತದೆ. ಅದಕ್ಕಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸುವ ಕೊನೆಯ ನುಡಿಯಲ್ಲಿಯ ಭಾವದ ತೀವ್ರತೆ ಮನಸ್ಸಿಗೆ ನಾಟುವಂತಿದೆ :

ಇಂತಾದೆ ಅಂತಾದೆನೆಂದೆಷ್ಟು ನುಡಿಯಲಿ
ಎಂತಾಪರಾಯಿತು ಅಪರಾಧಿಯಾದೆ
ಅಂತರಂಗದಿ ನೋಡುವಾ ದಿವ್ಯತತ್ವವನು
ಸಂತಸದಿ ಬೋಧಿಸುತ ಮನ್ನಿಸೊ ರಾಮೇಶ.

ದುಡಿದು ಉಪವಾಸದಿಂದ ಬಳಲುವ ಬಡವರಿಗೆ ಮರುಗದ ತನ್ನ ಸ್ವಾರ್ಥವನ್ನು ಹಳಿದು ಕೊಳ್ಳುತ್ತ,

ಗಿಡಬಳ್ಳಿಗಿಂತ ಕಡೆಯಾದೆನಲ್ಲ
ಒಡಲಾಸೆಗಾಗಿ ಪರರ ವಂಚಿಸಿ ನಾನು

ಎಂಬ 'ಒಡಲಾಸೆ'ಯಲ್ಲಿ ಆ ಭಾವ, ಗಿಡ-ಬಳ್ಳಿ-ಹೂಗಳ ಪ್ರತಿಮೆಯಲ್ಲಿ ಪರಿಪಾಕಗೊಳ್ಳುತ್ತದೆ. ದೇವರನ್ನು ಕಂಡೆವು, ನುಡಿಸಿದೆವು ಎಂದು ಹೇಳುವ ಜೋಳದ ನುಡಿ ನಿಜವೆ ? ಎಂಬಜಿಜ್ಞಾಸೆ 'ಎಲ್ಲಿರುವೆ ?' ಪದ್ಯದಲ್ಲಿ ಪರಿಣಾಮಕಾರಿಯಾಗಿ ಮೂಡಿದೆ :

ರಾಮ ರಾಮಾ ಎನಲು
ರಾಮಾಯಣದಾ ಮಾನವ
ರಾಮನೆದುರಾದನಲ್ಲದೆ
ನಾಮ ರೂಪರಹಿತ ಸ್ವಾಮಿ ನೀ ಕಾಣಲಿಲ್ಲ.

ಶಿವ ಶಿವ ಶಿವಾ ಎನಲು
ಶವಭಸ್ಮಧರನಾಗಿ
ಶಿವಕಂಡನಲ್ಲದೆ
ಸರ್ವಾಂತರ್ಯಾಮಿಯಾದ ದೇವ ನಿನ್ನ ನೋಡಲಿಲ್ಲ.

ಕೃಷ್ಣ ಕೃಷ್ಣಾ ಎನಲು
ವೇಣು ಗೋಪಿಯರೊಡನೆ
ಕೃಷ್ಣ ಮುಂದೆ ಬಂದು ನಿಂತ
ಘನ ಮಾಯಾತೀತ ನೀನೇನು ಬರಲಿಲ್ಲ.

ಗುಣರೂಪನ ಕಂಡು ನೀನೆಂಬ ಭ್ರಾಂತಿಯೊ ? ಗುಣರಹಿತನ ನೋಡಿ ಧನ್ಯರಾದೆವು ಎಂಬರೊ ? ಎಂಬ ಕೊನೆಯ ಪ್ರಶ್ನೆಯಲ್ಲಿ ದೇವರ ನಿಜವಾದ ಸ್ವರೂಪದ ಬಗ್ಗೆ ಉತ್ತರವೂ ದೊರೆಯುವಂತಿದೆ.

ಎಲ್ಲವು ಶಿವನೆಂದು 'ನಂಬಿದ ಮೇಲೆ' ಬೇರೆಲ್ಲಿಯೂ ಹೋಗಿ ಅವನನ್ನು ಅರಸುವ ಅಗತ್ಯವಿಲ್ಲ.

ನರಲೋಕದಿ ಶಿವ ನೆಲಸಿದ್ದ ಮೇಲೆ
ಸ್ವರ್ಗದ ಸುಖದಾಸೆಯೇಕಯ್ಯ ಮನುಜ

ಎಂದು ಕವಿ ಪ್ರಶ್ನಿಸುತ್ತಾನೆ. ಮನಸ್ಸಿನಲ್ಲಿ ನಿರಂತರ ಶಿವಧ್ಯಾನವಿದ್ದರೆ ಮುಕ್ತಿ ಪದವಿ ಎನ್ನುವದು ಪ್ರತ್ಯೇಕ ಇಲ್ಲವೆಂಬ ಕವಿಯ ನಿಲುವು ಶರಣರ ನಿಲುವನ್ನೇ ಸಮರ್ಥಿಸುತ್ತದೆ.

ಜೀವನ ವಿಮರ್ಶೆಯನ್ನೊಳಗೊಂಡ ಪದ್ಯಗಳು ಬದುಕಿಗೆ ಹತ್ತಿರವಾಗಿ ಜೀವನದ ಬಗ್ಗೆ ಪ್ರೀತಿಯನ್ನು ಹುಟ್ಟಿಸುತ್ತವೆ. 'ಜೀವನದ ಸವಿ' ಆನಂದವೆಂಬುದನ್ನು ನಿರೂಪಿಸುವ ಪದ್ಯ ತಕ್ಕ ದೃಷ್ಟಾಂತಗಳಿಂದ 'ಕಗ್ಗ'ದ ಪದ್ಯಗಳಂತೆ ಜೀವನ ವಿವೇಕ

ವನ್ನು ಸೊಗಸಾಗಿ ನಿರೂಪಿಸುತ್ತವೆ. ಮೀನ-ಮೇಷಗಳೆಣಿಸದೆ ಭಯವಳಿದು ಬದುಕಲು, ತಾನೂ ನಗುತ್ತ ಜಗವನ್ನೂ ನಗಿಸುತ್ತ, ಬಾಳಲು ಪ್ರೇರೇಪಿಸುತ್ತವೆ. ಆಗುವದು ನೀಗುವದು ಪ್ರಕೃತಿಯ ಧರ್ಮ. ಅದರ ಗೊಡವೆ ಬೇಡವೆನ್ನುತ್ತಾನೆ ಕವಿ :

ಕೋಗಿಲೆಯ ಕೊರಳಲ್ಲಿ ಕುಸುಮವಂ ಅರಳಿಪೆಯ ?
ಆ ಕುಸುಮ ಸೌರಭದಿ ಸವಿದನಿಯ ನುಡಿಸುವೆಯಂ ?
ಬಾಗದೀ ಪ್ರಕೃತಿಯಂ ವಿಕೃತಿಯಿಂ ಸಾಧಿಪೆಯ ?
ಆಗದೀ ಗೊಡವೇಕೆ ? ಸಂತಸದಿ ನಡೆಮುಂದೆ.

ಆತ್ಮೋಲ್ಲಾಸದಂತೆಯೇ ಆತ್ಮವಿಶ್ವಾಸವನ್ನು ಕುದುರಿಸುವ ಪದ್ಯಗಳೂ ಇಲ್ಲಿವೆ. 'ಯಾರ ಹಂಗೇಕೆ ?' ಭಾವ-ಭಾಷೆ-ಛಂದ ಮುಪ್ಪುರಿಗೊಂಡ ಅಂಥ ಒಂದು ಯಶಸ್ವಿ ಪ್ರಯತ್ನ : ಒಂದು ನುಡಿಯನ್ನು ಉದಾಹರಿಸಬಹುದು :

ದೃಷ್ಟವೇನದೃಷ್ಟವೇನೊ ಸೃಷ್ಟಿಯಿಟ್ಟ ಗುಟ್ಟದೇನೊ
ನಿಷ್ಠೆಯಿಂದಲಾತ್ಮವಾಣಿ ಎತ್ತಿ ಪಾಡುವೆ–ನಾ
ನಿತ್ಯ ಕುಣಿಯುವೆ.

ಮಾಯಾಮೋಹವನೊಡ್ಡಿ ಕಾಡಿ ಓಡುವ ದೇವನ ಗೊಡವೆಗೆ ಹೋಗದೆ ತನ್ನ ಪಾಡನ್ನು ತಾನು ನೋಡಿಕೊಳ್ಳುವೆನೆಂಬ 'ನಾ ಕರೆಯಲಾರೆ' ಪದ್ಯದಲ್ಲಿಯೂ ಇದೇ ಭಾವದ ಕಸುವನ್ನು ಕಾಣಬಹುದು. 'ತಿಳಕೊಂಡೆ' ಪದ್ಯ ಶರೀಫರ ಹಾಡಿನ ಧಾಟಿಯನ್ನು ನೆನಪಿಗೆ ತರುತ್ತದೆ. 'ರಾಮೇಶ ಯಾತ್ರೆ'ಯಲ್ಲಿ ಕೊನೆಯಿಲ್ಲದ ಜೀವಯಾತ್ರೆಯನ್ನು ಸಮುಚಿತ ರೂಪಕದಲ್ಲಿ ಸೆರೆಹಿಡಿಯಲಾಗಿದೆ. 'ಬಾರೆ ಗೆಳತಿ ಪಯಣವಾಗು ಪೋಗಿ ಬರುವ ಯಾತ್ರೆಗೆ' ಎಂಬ ಪಲ್ಲವಿಯಿಂದ ಪ್ರಾರಂಭವಾಗುವ ಕವಿತೆಯ ನಡಿಗೆಯಲ್ಲಿಯೂ ಭಾವಾಭಿನಯ ವ್ಯಕ್ತಗೊಳ್ಳುವದನ್ನು ನೋಡಬಹುದು :

ತಮ್ಮ ತಮ್ಮ ಬಾಳುಬುತ್ತಿ
ತಲೆಯ ಮೇಲೆ ಪೊತ್ತು ಪೊತ್ತು
ತಿರುವು ಮುರುವು ದಾರಿಸುತ್ತಿ
ತೆರಳುತಿಹರು ಯಾತ್ರೆಗಾಗಿ.

'ಕೋಗಿಲೆ' 'ಯುಗಾದಿ' ನಿಸರ್ಗದ ಅನುಸಂಧಾನದೊಂದಿಗೆ ಜೀವನೋತ್ಸಾಹವನ್ನು ಪ್ರತಿಬಿಂಬಿಸುವ ಪದ್ಯಗಳು. 'ಮಾಯಾಪವನನುದ್ಧಟ'ತನಕ್ಕೆ ಸಂಕೇತವಾಗಿ 'ಬಿರುಗಾಳಿ' ತನ್ನ ಸಮಸ್ತ ಚೇತನದೊಂದಿಗೆ ರೂಪುಗೊಂಡಿದೆ. 'ನನ್ನ ಸಾವು'ದಲ್ಲಿಯ ವ್ಯಂಗ್ಯ 'ಮಾಯಾಕಾರ'ದ ಸಾಂಕೇತಿಕತೆ ಮೆಚ್ಚುವಂತಿವೆ. ಪೂಜಾರಿ ಕೈಯಲ್ಲಿ ಸಿಕ್ಕ ದೇವನ ಸ್ಥಿತಿಯನ್ನು 'ದೇವರ ಫಜೀತಿ' ಚೆನ್ನಾಗಿ ವಿಡಂಬಿಸುತ್ತದೆ—

ಅಂದಿನಿಂದಲಿ ನಿನ್ನ ಧ್ಯಾನಿಪ ಭಕ್ತರು
ಇಂದಾರ ಮೊರೆಹೊಕ್ಕು ಬಾಳಲುಬೇಕು
ಬಂಧಿಯಾದವನನ್ನೊ ? ಬಂಧಿಸಿದವನನ್ನೊ !
ಸಂದೇಹವಾಯ್ತೆಲೆ ನೀ ಸುಮ್ಮನಿರಲು.

ದೇಶವೇ ಸೆರೆಮನೆಯಾಗಿ ಬಂಧನದಲ್ಲಿದ್ದ ನಮಗೆ ಕೊನೆಗೂ ಸ್ವಾತಂತ್ರ್ಯ ಸಿಕ್ಕಿತು. ಆದರೆ ಪೂಜಾರಿಯ ಬಂಧನದಿಂದ ನಿನಗೆ ಬಿಡುಗಡೆ ದೊರೆಯುವದು ಸಾಧ್ಯವಿಲ್ಲ ಎಂಬ ಕವಿಯ ನುಡಿ ದೇವರ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ವಿಡಂಬಿಸಿ ಚಿತ್ರಿಸಿದೆ. ಸಾಮಾಜಿಕ ಲೋಪದೋಷಗಳ ಚಿಂತನ 'ಲೇಸು' ಪದ್ಯದಲ್ಲಿ ಹೇಳಿಕೆ ಗಳುತಿದ್ದರೂ ನೈತಿಕವಾಗಿ ಪರಿಣಾಮಕಾರಿಯಾಗಿವೆ :—

ಅಳುವವರ ನೋಡಿ ತಾ ಲೊಚಗುಟ್ಟಿ ಉಸ್ಸೆಂದು
ಅಯ್ಯಯ್ಯೊ ಪಾಪ ಇಂತಾಯಿತೇಕೆಂದು
ಅನುತಾಪ ನಟನೆಯ ಗೈದು ಪೋಪುದಕ್ಕಿಂತ
ಅವರಳಲಿಗನುವಾಗಿ ನೆರವಾಗುವುದು ಲೇಸು.

ಭಾಷಣಗಳಿಂದ ಬಡವನ ಕಿವಿತುಂಬಿಸಿದರೆ ಬಂತೇನು ? ಅವನ ಹೊಟ್ಟೆ ತುಂಬಿಸ ಬೇಕಲ್ಲವೆ ?

ಬಡವರುದ್ಧಾರದಾ ಉದ್ದುದ್ದ ಮಾತಾಡಿ
ಕಡುಹಸಿದ ಬಡವರಾ ಕಿವಿ ತುಂಬುವುದಕಿಂತ
ಕಡೆಗೊಂದು ದಿನ ಒಮ್ಮೆ ತಾನುಣ್ಣುವುದರಲ್ಲೆ
ಬಡವನೊಬ್ಬನಿಗೆ ತುತ್ತನ್ನವಿಡುವುದು ಲೇಸು.

ಮಳೆಯಿಲ್ಲದೆ ಇಳೆಯ ಸಂತಸವೆಲ್ಲ ಕಳೆದು ಕಳವಳಗೊಂಡ ಜನತೆಯ ಸ್ಥಿತಿ 'ಮಳೆರಾಯ'ದ ಆರ್ತತೆಯಲ್ಲಿ ಮೂರ್ತಿಗೊಂಡಿದೆ : 'ಮಳೆರಾಜ' ಎಂಬ ಜಾನಪದ ಗೀತದಷ್ಟೇ ಈ ಕವಿತೆಯೂ ಪ್ರಭಾವಶಾಲಿಯಾಗಿದೆ :

ಒಕ್ಕಲಿಗರು ನಿನ್ನ ಮಕ್ಕಳಲ್ಲವೇನೊ ?
ಮಕ್ಕಳ ಮೊರೆಕೇಳಿ ಬಾರದಿರುವರೇನೊ ?
ಕಕ್ಕಸವೇತಕೆ ಅಕ್ಕರದಲ್ಲಿ ಬಂದು
ದುಃಖವ ಬಿಡಿಸಯ್ಯ ಓ ಮಳೆರಾಯ.

ಬಾಯೆಂದು ಬೇಡುವ ಬಯಕೆಯು ನಮ್ಮದು
ಬಂದು ನೀಡುವ ದೊಡ್ಡತನ ನಿನ್ನದಯ್ಯ
ಬಲವಂತನು ನೀನು ಬಲಹೀನರು ನಾವು
ಬೇಗನೆ ಬಾರಯ್ಯ ಓ ಮಳೆರಾಯ.

'ಜೋಳದ ರೊಟ್ಟಿ' ಬೆಳುವಲದ ಭಾಗ್ಯವನ್ನು ತೆರೆದಿಟ್ಟಂತಿದೆ. ನುಡಿಯಿಂದ ನುಡಿಗೆ ಸಡಗರಗೊಳ್ಳುವ ಪದ್ಯದ ರೀತಿ ತುಂಬ ಚೇತೋಹಾರಿಯಾಗಿದೆ :

ಯಾರಿಗು ಅಂಜದೆ ನೆಟ್ಟಗೆ ನಿಂತಿ
ಮೋರೆಯ ಮ್ಯಾಕೆತ್ತಿ ತೂಗುತಲಿದ್ದಿ
ಹಾರುದ್ದ ಕೈಗಳ ಬೀಸುತಲಿದ್ದಿ
ಬೀರನ ತೆರನಂತೆ ಮೆರೆಯುತಲಿದ್ದಿ

ಹೀಗೆ 'ಜಗಜಗಿಸುವ ಜೋಳ ರಾಜ್ಯದ ಭೂಪ' ಎನ್ನುವಲ್ಲಿ ಸಾಮಾನ್ಯಜನರ ಭಾವನೆಯಲ್ಲಿ ಕವಿ ಒಂದಾಗಿರುವುದನ್ನು ಕಾಣುತ್ತೇವೆ. ಬಡವರನ್ನು ನಿರ್ಲಕ್ಷಿಸುವ ಜನರ ರೀತಿ ಎಷ್ಟು ಕ್ರೂರವಾದದ್ದೆಂಬುದನ್ನು 'ಬಡವರ ಗೋಳು' ಸರಳವಾದ ಮಾತಿನಲ್ಲಿ ಆದರೆ ಅಷ್ಟೇ ಹರಿತವಾಗಿ ಚಿತ್ರಿಸುತ್ತದೆ.

'ಅಮೃತವಚನಗಳು' ಅಣ್ಣನವಚನಗಳ ನೀತಿಯನ್ನು ಎತ್ತಿಹಿಡಿದಿದೆ.

ಕಲ್ಯಾಣದಿಂ ಲೋಕ ಕಲ್ಯಾಣಮಂ ನೆನೆದು
ಕಾಲೋಚಿತವನರಿದು ವಿಶ್ವಗರ್ಭವ ಬಗೆದು
ಸದ್ಭಕ್ತಿ ರಸವೆರೆದು ತತ್ತ್ವಮಂ ಮೃದು ಗೈದ
ಸಿದ್ಧಿಯಾ ಸೂಕ್ತಿಗಳು........

ಕಂದ, ಷಟ್ಪದಿಗಳ ಪ್ರಯೋಗದಲ್ಲಿಯೂ ಕವಿಯ ಕೈ ಪಳಗಿರುವುದಕ್ಕೆ 'ಕಾವ್ಯಕನ್ನಿಕೆ' ಹಾಗೂ 'ಉಪಕಾರಿ' ಉತ್ತಮ ಉದಾಹರಣೆಗಳಾಗಿವೆ. ನಾಡು–ನುಡಿಯನ್ನು ಕುರಿತ ಅಭಿಮಾನದ ಹಾಡುಗಳು, ವ್ಯಕ್ತಿಗಳನ್ನು ಕುರಿತ ಗೌರವದ ಗೀತಗಳೂ ಸ್ವಲ್ಪ ವಾಚ್ಯವೆನಿಸಿದರೂ ಸಂಗ್ರಹದ ವೈವಿಧ್ಯವನ್ನು ಹೆಚ್ಚಿಸಿವೆ.

'ಈ ಹೊತ್ತಿಗೆಯಲ್ಲಿಯ ಗೀತೆಗಳೆಲ್ಲ ಬರೆದು ಹಾಡಿದವುಗಳಲ್ಲ. ಹಾಡಿಕೊಳ್ಳುತ್ತ ಬರೆದವುಗಳು' ಎಂಬುದು ಕವಿಯ ಹೇಳಿಕೆ ಪ್ರಾಮಾಣಿಕವಾದದ್ದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಈ ಪದ್ಯಗಳ ಅರ್ಥಸೊಗಸು ಹಾಡುಗಾರಿಕೆಯಲ್ಲಿ ಹೊಮ್ಮುವಂಥದು. ಹಾಡಿಗೆ ಹೊರತಾಗಿಯೂ ಕೆಲವು ಪದ್ಯಗಳು ಉತ್ತಮ ಭಾವಗೀತೆಗಳಾಗಿರುವುದನ್ನು ಮೇಲೆ ವಿವೇಚಿಸಲಾಗಿದೆ. ಕನ್ನಡ ಕಾವ್ಯಪರಂಪರೆ ಹಾಗೂ ಭಾಷೆಯ ಸತ್ವವನ್ನು ಈ ಕವಿ ಚೆನ್ನಾಗಿ ಮೈಗೂಡಿಸಿಕೊಂಡಿರುವುದಲ್ಲದೆ ಜಾನಪದ ಸಂಸ್ಕಾರದಿಂದಲೂ ಅದು ವಿಶೇಷ ಕಳೆಗೊಂಡಿರುವುದನ್ನು ಕಾಣಬಹುದು. ಈ ಪದ್ಯಗಳಲ್ಲಿ ವ್ಯಕ್ತವಾಗಿರುವ ಭಕ್ತಿಭಾವ ವಿನಯ ಸಂಪನ್ನವಾಗಿದ್ದರೂ ದೈನ್ಯತೆಗಿಳಿದಿಲ್ಲ. ಅದು 'ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿಪ್ಪ' ರೀತಿಯದು; ಆತ್ಮವಿಮರ್ಶೆಯಿಂದ ಬದುಕಿನ ಮೌಲ್ಯಗಳನ್ನು ಕಂಡುಕೊಳ್ಳುವಂತಹದು. 'ಯಾವುದೇ

ನಿದ್ದುದರಲ್ಲೇ ಗೆಲಬೇಕು' ಎಂಬ ಛಲ, 'ಅಕಲಂಕ ಸತ್ಯ ಸಂಜೀವ ಮಾನವಧರ್ಮ' ದಲ್ಲಿ ನಂಬಿಕೆ ಹೇಯ-ಶ್ರೇಯಗಳ ಸರಿಯಾದ ತಿಳಿವಳಿಕೆ ಈ ಪದ್ಯಗಳ ಧಾಟಿ-ಧೋರಣೆ ಯಲ್ಲಿ ನಿಚ್ಚಳವಾಗಿವೆ. ತನ್ನ ಬೌದ್ಧಿಕ ಹಿರಿಮೆಯನ್ನು ಮರೆಯದೆ ಸಾಮಾನ್ಯ ಜನ ಜೀವನದಲ್ಲಿ ಸಮರಸಗೊಂಡು ಹಾಡುತ್ತಿರುವದು ಈ ಕಾವ್ಯದ ವಿಶೇಷ. ಹಾಗೆಯೇ ಸಾಮಾಜಿಕ ಎಚ್ಚರ ಕಾವ್ಯದ ಉದ್ದಕ್ಕೂ ಕಂಡುಬರುತ್ತದೆ. 'ನನ್ನ ಗೀತೆಗಳಲ್ಲಿ ಅಪ್ಪಿ ತಪ್ಪಿ ಏನಾದರೂ ಲೇಸು ಕಂಡಲ್ಲಿ ಅದು ಮಾನ್ಯ ಜನರಿತ್ತ ಗೌರವದ ಉತ್ಸಾಹದ ಫಲವೆಂದೆನಿಸಿದರೆ ಸಾಕು' ಎಂಬಲ್ಲಿ ಕವಿಯ ಧನ್ಯತೆ ಒಡೆದು ಕಾಣುತ್ತದೆ.

ಜೋಳದ ರಾಶಿಯವರಂಥ ಶ್ರೇಷ್ಠ ಗಮಕಿಯ ಹೃದಯದಲ್ಲಿ ಅಡಗಿರುವ ಕವಿಯ ಹಿರಿಮೆಯನ್ನು ನವೋದಯ ಕಾವ್ಯದ ವಿಮರ್ಶಕರು ಗುರುತಿಸದೆ ಹೋದದ್ದು ಆಶ್ಚರ್ಯದ ಸಂಗತಿ. ಗಮಕಿಯಾಗಿಯೇ ಇವರು ಹೆಚ್ಚು ಪ್ರಸಿದ್ಧಿಗೆ ಬಂದದ್ದೂ ಇದಕ್ಕೆ ಕೆಲಮಟ್ಟಿಗೆ ಕಾರಣವಾಗಿರಬಹುದೆಂದು ತೋರುತ್ತದೆ. ಅದೇನೇ ಇದ್ದರೂ 'ರಸವರ್ಷ' ಜೋಳದ ರಾಶಿಯವರ, ಒಂದು ವಿಶಿಷ್ಟ ಕೊಡುಗೆಯೆಂದರೆ ತಪ್ಪಾಗದು.

೨

'ರಸವರ್ಷ' ಪ್ರಕಟವಾದ ಸುಮಾರು ಕಾಲುಶತಮಾನದ ನಂತರ ದೊಡ್ಡನ ಗೌಡರು ನೀಡಿದ ಪುಟ್ಟ ಕಾವ್ಯ 'ಗೌಡತಿ ಬರಲಿಲ್ಲ'. ಸೌಭಾಗ್ಯ ಲಕ್ಷ್ಮಿಯ ಸೊಗಸಿನ ಕಳೆಯಿಂದ ನಾಲ್ವತ್ತು ವರ್ಷ ಮನೆ ಬೆಳಗಿದ ಧರ್ಮಪತ್ನಿಯ ಅಕಾಲ ಮರಣ ಇದಕ್ಕೆ ಮುಖ್ಯ ಪ್ರೇರಣೆ. ಅಗಲಿಕೆಯ ಅನುತಾಪದಲ್ಲಿ ಜೊತೆಬಾಳಿನ ನೆನಪುಗಳೆಲ್ಲ ಒಂದೇದಾಗಿ ಮೂಡಿ, ೫೨ ತ್ರಿಪದಿಗಳಲ್ಲಿ ಒಂದೊಂದೂ ಕಂಬನಿಯ ಮುತ್ತಾಗಿ ಮಾರ್ಪೊಳೆದಿವೆ. ಕವಿಯ ದುಃಖದ ಪಾಡು ಹಾಡಾಗಿ ಹರಿದು ಓದುಗನನ್ನು ತನ್ನಲ್ಲಿ ಒಂದಾಗಿಸುತ್ತದೆ.

ಈ ಅಗಲಿಕೆ ಎಷ್ಟೊಂದು ಅನಿರೀಕ್ಷಿತವಾಗಿದೆಯೆಂದರೆ ಆಕೆ ಕಣ್ಮರೆ ಯಾಗಿರುವುದನ್ನು ನಂಬುವಂತೆಯೇ ಇಲ್ಲ. ಕಾವ್ಯ ಪ್ರಾರಂಭದಿಂದಲೇ ವಾಸ್ತವ ಹಾಗೂ ಕಲ್ಪನೆಯ ನಡುವಿನ ಗೆರೆಯನ್ನೇ ಅಳಿಸಿ ಆತ್ಮೀಯವಾಗಿ ಬಿಡುತ್ತದೆ :

ಹೊಲಕೋದ ಗೌಡತಿ ಮನೆಗಿನ್ನು ಬರಲಿಲ್ಲ
ಬಿಸಿಲೇರಿ ಬಂತು ಹಸಿವಾಯ್ತು-ಗೌಡನ
ಮರೆತು ಕೂತಾಳೆ ಹೊಲದಾಗೆ.

ಹೊಲದ ಹಸುರಿನಲ್ಲಿ ಹಸುರಾಗಿ ಬೆರೆತು 'ಗೌಡನ ಹಸಿವೆಗೆ ತೆನೆಯಾಗಿ ಬೆಳೆದಾಳು'. ಆಕೆಯ ದುಡಿಮೆಯ ಫಲ. ಜೊತೆಗೆ ಆ ಹೊಲದ ಮಣ್ಣಿನಲ್ಲಿಯೇ ಈಗ ಮಣ್ಣಾಗಿ ಹೋದ ರೀತಿ ಎರಡನ್ನೂ ಈ ಸಾಲು ಧ್ವನಿಪೂರ್ಣವಾಗಿ ಚಿತ್ರಿಸುತ್ತದೆ. ಸಿಂಗಾರ

ಸಡಗರದಿಂದ ಮುತ್ತೈದೆ ಹೋಗುವಾಗ ಕೊನೆಗೊಂದು ಮಾತನ್ನು ಹೇಳದೆ ಏಕಾ ಏಕಿ ಮುಪ್ಪಿನ ಗೌಡನನ್ನು ಬಿಟ್ಟು ಹೋದದ್ದು ಅತ್ಯಂತ ಕರುಣಾಜನಕವಾದದ್ದು. ಆಕೆಯ ಚಿತ್ರ ಕಣ್ಣಮುಂದೆಯೇ ಕಟ್ಟಿದಂತಿದೆ :

ತಲೆತುಂಬ ಸೆರಗು ಒಳಗೆ ಹೂವಿನ ಮುಡಿಯು
ಹಣೆಯಲ್ಲಿ ವಿಭೂತಿ ಕುಂಕುಮ–ಮೂಗಿನ
ಮುತ್ತು ಬಲುಚೆಂದ ಗೌಡತಿಯು.

ಆಕೆಯ ಸ್ಮಶಾನಯಾತ್ರೆ ತೌರಿಗೆ ಕಳಿಸಲು ಹೊರಟ ಸಂಭ್ರಮದಂತೆ ಕಂಡಿತು :

ಹುವ್ವಿನ ಪಲ್ಲಕ್ಕಿ ಹತ್ತಿಸಿ ನೆನೆಯುತ
ಬಂದಾರೆ ಶರಣ ಶರಣೆಯರು–ತಾಯಿಯ
ತೌರಿಗೆ ಕಳಿಸಲು ಬಹುದೂರ.

ಆದರೆ ಅದು ತಿರುಗಿಬಾರದ ತವರು ಎಂಬುದನ್ನು ನೆನೆದಾಗ ಬರಿಬಾಳು–ಬವಣೆಯ ಉರಿಬಿಸಿಲಾಗಿ ಸುಡುತ್ತದೆ. ಮಕ್ಕಳಿಲ್ಲದ ಚಿಂತೆಯಿದ್ದರೂ ಬಳಿಬಂದ ಮಕ್ಕಳನ್ನೆಲ್ಲ ತನ್ನ ಮಕ್ಕಳೆಂದು ನೋಡಿಕೊಂಡ ಅನ್ಯೋನ್ಯ ದಾಂಪತ್ಯ ಇವರದು. ಎಲ್ಲದಕ್ಕೂ ಪತಿಯನ್ನೇ ಮುಂದೆಮಾಡಿ ತಾನು ಹಿಂದೆ ಶಕ್ತಿಯಾಗಿ ನಿಂತವಳು. ಆದರೆ ಈಗ ಎಲ್ಲ ತಿರುವು–ಮುರುವು.

ಬಾಳಿನುದ್ದಕೆಯುನ್ನ ಮುಂದಿಟ್ಟು ನಡೆಸಿದೆ
ಸಾವಿಗಿಂದೇಕೆ ಮುಂದಾದೆ–ಮುತ್ತೈದೆ
ಲೋಭದಿ ಗಂಡನ ಹಿಂದಿಟ್ಟೆ (ಬಿಟ್ಹೋದೆ).

ಇದೀಗ ಜೀವನದ ವ್ಯಂಗ್ಯ. ಸತಿಯು ಚಿಂತೆ ಸಾಯುವ ಪತಿಗಿರಬಾರದೆಂದು ಈಗ ಹೀಗೆ ಮುಂದಾದೆಯ ಎಂದು ಪತಿಯು ಕಂಬನಿ ಮಿಡಿತ. ಉಳಿದವರೆಷ್ಟೇ ಉಪಚರಿಸಿದರೂ ತನ್ನನ್ನು ಅರ್ಥಮಾಡಿಕೊಂಡ ಮಡದಿಯ ಆರೈಕೆ ಮುಪ್ಪಿಗೂ ಹರಯವನ್ನು ತರಬಲ್ಲುದು :

ಯಾರುಪಚಾರದಿ ತಣಿಯದುಯಿಾ ಮುಪ್ಪು
ಮನವರಿತ ಮಡದಿ ಮಾಡಿದರೆ–ಈ ಮುಪ್ಪು
ಯೌವನ ಮದವೇರಿ ನಲಿಯುವುದು.

ಸತಿಪತಿಯೊಂದಾದ ಸಮರಸವೇ ಪ್ರೇಮ. ಅಲ್ಲಿ ಕಾಯ–ಮಾಯೆಗಳ ಜಂಜಡವಿಲ್ಲ. ಕವಿಗೆ ಮತ್ತೆ ನೆನಪಾಗುತ್ತದೆ–ಸತಿಯಿಂದ ಓಲೆಯೇ ಬಂದಿಲ್ಲ.

ಎಲ್ಲಿದ್ದುದಲ್ಲೇ ಬಿಟ್ಟೆದ್ದು ಹೋದೆ
ಎಲ್ಲರು ಗಾಬರಿಗೊಂಡವರೆ–ಹೋದುದು
ಎಲ್ಲಿಗೆಂಬುದು ಓಲೆಬರಿಸ್ಯಾಕು.

ನಡುನಡುವೆ ವ್ಯಕ್ತಗೊಳ್ಳುವ ಈ ಮುಗ್ಧತೆ ಶೋಕಗೀತೆಯ ಸಹಜತೆಯನ್ನು, ತೀವ್ರತೆಯನ್ನು ಹೆಚ್ಚಿಸುತ್ತದೆ. ಹಾಗೆಯೇ ತಾತ್ವಿಕ ಚಿಂತನೆ ತಿಳಿಯಾಗಿ ತೆರೆಹೊಡೆದಾಗ ಅದು ಆಳವಾಗುತ್ತದೆ :

ಸ್ಥೂಲವ ನೆಲಕಿಕ್ಕಿ ಸೂಕ್ಷ್ಮಗಾಳಿಗೆಯೊಡ್ಡಿ
ಎಲ್ಲೆಲ್ಲಿ ಸುಳಿಯುವೆ ಮನದನ್ನೆ–ಎನ್ನೊಮ್ಮೆ
ಸೋಂಕಿ ಗುಟ್ಟೇನೊ ತಿಳಿಹೇಳು.

*　　*　　*

ಜ್ಞಾನವೇ ಪತಿಯಾಗಿ ಕ್ರಿಯೆಯೆ ಸತಿಯಾಗಿ
ಕೂಡಿಬಾಳುವುದೇ ಅನುಭಾವ–ಅಗಲಿದ
ಮೇಲೆಲ್ಲಿ ಹೆಳವನಂತಾಭಾವ

'ನನ್ನೆಲ್ಲ ಸಾಹಿತ್ಯ ಸಂಗೀತ ಕಲೆಗಳು ನಿನ್ನನ್ನು ನೆನೆನೆನೆದು ಅಳುತಾವೆ' ಎಂದಾಗ ಮತ್ತೆ ವಾಸ್ತವದ ಸ್ಪರ್ಶದಿಂದ ದುಃಖ ಮರುಕಳಿಸಿ ಜೀವಂತವಾಗುತ್ತದೆ. ಶರಣ ಮಾರ್ಗದಲ್ಲಿ ಸಾಗಿದ ಕವಿಗೆ ಅದರ ತಿರುಳೇ ಇಲ್ಲಿಯ ತ್ರಿಪದಿಗಳ ತಿರುಳೂ ಆಗುತ್ತದೆ.

ಇಷ್ಟಪ್ರಾಣ ಭಾವ ತ್ರಿಪದಿಗಳಿವು ಶರಣೆ
ತ್ರಿವಿಧ ದಾಸೋಹಕ್ಕೆ ಸಂದಿದವು–ಶರಣರ
ಮರಣವೆ ಮಹಾನೌಮಿ ಎನಿಸಿದವು

ನಾನತ್ತ ಕಣ್ಣೀರು ನೀನತ್ತ ಕಣ್ಣೀರು
ಭಕ್ತಿಮುಕ್ತಿಯ ಜೀವ ರಸಧಾರೆ–ಸಂಸಾರ
ಸಾರ ಲಿಂಗಾರ್ಚನೆಯಭಿಷೇಕ.

ನಾಯಕಿಯಿಲ್ಲದ ನಾಯಕ ವೇಷಕ್ಕೆ ನಲವೆಲ್ಲಿ ? ಸೊಬಗೆಲ್ಲಿ ? ಸ್ವತಃ ನಟನಾಗಿರುವ ಕವಿ ಕೊನೆಯ ನುಡಿಯಲ್ಲಿ ಕೊಡುವ ಪ್ರತಿಮೆ ಈ ಚರಮಗೀತೆಯ ಮುಕ್ತಾಯವನ್ನು ಕಲಾತ್ಮಕವಾಗಿ ಧ್ವನಿಪೂರ್ಣವಾಗಿಸಿದೆ:

ಒಂದಿಷ್ಟು ಉಳಿದಿದೆ ಕೊನೆ ನೋಟದಭಿನಯ
ಮುಗಿಸಿ ಬರುವೆ ಬಣ್ಣವರಸಿ–ರಾಮೇಶಗೆ
ವೇಷವೊಪ್ಪಿಸಿ ನಿನ್ನಬಳಿ ಬರುವೆ.

ಹೀಗೆ ತನ್ನ ದುಃಖವನ್ನು ಹಾಡಿನರೂಪದಲ್ಲಿ ತೋಡಿಕೊಂಡು ಹೃದಯವನ್ನು ಹಗುರಾಗಿಸಿಕೊಂಡ ಕವಿ, ತನ್ನವಳಿಗೆ ಅರ್ಪಿಸಿದ ಈ ಕಂಬನಿ ಕೊಡುಗೆ ಕನ್ನಡದ ಉತ್ತಮ ಶೋಕಗೀತೆಗಳಲ್ಲಿ ಒಂದಾಗಿದೆ.

ಈ ಸಂಗ್ರಹದ ಇನ್ನೊಂದು ಕವಿತೆ 'ಭಕ್ತಿ ಭಿಕ್ಷೆಯಲ್ಲಿ ಬಯಲಾದಳು' ೧೮ ತ್ರಿಪದಿಗಳ ಈ ಚಿಕ್ಕ ಕಾವ್ಯ, ಕವಿಯ ಕಲ್ಪನೆಗೆ ಕೋಡು ಮೂಡಿಸಿದಂತಿದೆ. ಧಾರವಾಡ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳಲ್ಲಿ ದಂಪತಿಗಳಿಗೆ ಅನನ್ಯವಾದ ಭಕ್ತಿ. ಗೌಡತಿ ತೀರಿಕೊಂಡಾಗ ಸ್ವಾಮಿಗಳು ಲಿಂಗೈಕ್ಯರಾಗಿ ಆಗಲೇ ಹನ್ನೆರಡು ವರ್ಷ ಸಂದಿದ್ದವು. ಪತ್ನಿಯ ಸಾವನ್ನು ಪರಿಭಾವಿಸುತ್ತಿರುವಂತೆ ಸ್ವಾಮಿಯ ಪರಮ ಭಕ್ತನಾದ ಕವಿಗೆ ಹೊಳೆದ ಬೇರೊಂದು ಭಾವ ಈ ಕವಿತೆಯನ್ನು ನಡೆಸಿಕೊಟ್ಟಿದೆ. ಜಂಗಮ ರೂಪದಲ್ಲಿ ಬಂದು ಸ್ವಾಮಿಗಳು ಭಕ್ತಿಭಿಕ್ಷೆ ಬೇಡಿದಾಗ ತನ್ನನ್ನೇ ನೀಡಿಕೊಂಡು ಮುಕ್ತಳಾದಳೆಂಬ ಭಾವನೆಯೇ ಇದಕ್ಕೆ ಪ್ರೇರಣೆ. ನಡೆದ ಘಟನೆಯನ್ನು ಗೌಡತಿಯೇ ನಿರೂಪಿಸಿದಂತೆ ಕವಿತೆಯ ರಚನೆಯಿದೆ.

ನಾನೆದ್ದು ಕದ ತೆಗೆದು ಅಂಗಳಕೆ ಬಂದಾಗ
ನಿಂತಾನೆ ಶಿವನಂತೆ ಜಂಗಮನು-ನನ್ನಯ
ಭಾಗ್ಯದ ರವಿ ಮೂಡಿ ಬಂದಂತೆ

ಪಾದಕ್ಕೆರಗಿದಾಗ ಹರಸಿ ಭಿಕ್ಷೆ ಕೇಳಿದ. ಧನ, ಧಾನ್ಯ, ವಸ್ತ್ರ, ಒಡವೆ ಏನು ತಂದು ಕೊಟ್ಟರೂ ನಿರಾಕರಿಸಿದ, ಊಟಕ್ಕೆ ಕರೆದರೆ ಹಸಿವೆಯಿಲ್ಲವೆಂದ. ಭಕ್ತಿಯ ಭಿಕ್ಷೆ ಕಾಯಕ ನೀಡು ಎಂದ.

ಐಯ್ಯವ್ವಯಿದು ಎಂತ ಭಿಕ್ಷೆಯೊ ನಾನರಿಯೆ
ಯಾರು ಕೇಳಿದರಿಲ್ಲವೀತನಕ-ನೀಡಿದ
ಮಡದಿಯರಾರುಂಟು ಲೋಕದಲ್ಲಿ.

ಎಂದು ಗೌಡತಿಗೆ ಅಚ್ಚರಿ, ಭಕ್ತಿಯಿಲ್ಲದ ಬಡವ ನಾನವ್ವ, ಭಕ್ತಿ ಭಿಕ್ಷೆನೀಡಿದ ಭಕ್ತರ ತನುವಾಗಿ ನಾನು ಬಾಳುತ್ತೇನೆ' ಎಂದರು ಶಿವಯೋಗಿ. ಆದರೂ ತಿಳಿಯಲಿಲ್ಲ 'ನಾನು ಮತಿಗೇಡಿ, ತಿಳಿವಿತ್ತು ತೆಗೆದುಕೊ ಭಿಕ್ಷವನು' ಎಂದು ಬಿನ್ನವಿಸಿದಳು. ಯಾವೂರೊ ಹೆಸರು-ದೆಸೆಗೊತ್ತಿಲ್ಲವೆಂದಾಗ 'ಮುರುಘಾಮಠದ ಮೃತ್ಯುಂಜಯ ನಾನವ್ವ- ಎನಗೀವ ಭಕ್ತಳು ನೀನೆಂದು ಬಂದೆ' ಎಂದರು ಜಂಗಮ. ಮೃತ್ಯುಂಜಯನ ಹೆಸರು ಕಿವಿಗೆ ಬಿದ್ದೊಡನೆಯೇ ಹರ್ಷಿತಳಾಗಿ ಗುರುವಿಗೆ ನುಡಿದಳು:

ಕಂಡಕಣ್ಣಿಗೆ ತಂಪು ಕೇಳಿದ ಕಿವಿಗಿಂಪು
ಮನಸ್ಸಿಗೆ ಬಲುಸೊಂಪು ಮೃತ್ಯುಂಜಯ-ನಿನ್ನ
ಸೇವೆಗೆ ಸಲುವ ತೊತ್ತಾದೆ.

'ನಿನಗೆ ದೂರಾಗಿ ಇರಲಾರೆ' ಎಂದು ಪಾದಕ್ಕೆ ಬಿದ್ದು ನೈವೇದ್ಯವಾದಾಗ ಕರುಣಾಳು ಮೃತ್ಯುಂಜಯ ತನ್ನ ಜೋಳಿಗೆಗಿಟ್ಟು ತುಂಬಿದನು.

ಏಸು ಜನ್ಮದ ಪುಣ್ಯ ನನ್ನ ಮೃತ್ಯುಂಜಯ
ಜಂಗಮ ಬಂದಿಂತು ಭಕ್ತಿಯ ಬೇಡುತ
ಮುಕ್ತಿಯ ನೀಡಿದ ನೆನ್ನಯ್ಯ.

ಭಕ್ತಿಯನ್ನು ನೀಡಿ ಮುಕ್ತಿಯನ್ನು ಪಡೆದಳೆಂಬ ಭಾವ ಕವಿಯ ಮನಸ್ಸಿನಲ್ಲಿ ನೆಲೆಯೂರಿದಾಗ ಈ ಕವಿತೆ ಹೊರಹೊಮ್ಮಿದೆ.

'ಗೌಡತಿಬರಲಿಲ್ಲ' ಲೌಕಿಕವಸ್ತುವಾದರೂ ಕಾವ್ಯವಾಗಿ ಅಲೌಕಿಕತ್ವವನ್ನು ಪಡೆದಿದ್ದರೆ 'ಭಕ್ತಿ ಭಿಕ್ಷೆಯಲ್ಲಿ ಬಯಲಾದಳು' ಪೂರ್ತಿ ಅಲೌಕಿಕವೆನಿಸುತ್ತದೆ. ಎರಡನೆಯ ಕಾವ್ಯದ ಊಹೆ, ಕಲ್ಪನೆ ಕಿವಿಗೆ ಕೆಲಮಟ್ಟಿಗೆ ತೃಪ್ತಿ ನೀಡಿರಬಹುದಾದರೂ ಮೊದಲನೆಯ ಕಾವ್ಯ ನಮ್ಮ ಬದುಕಿಗೆ ಸಮೀಪವಾಗಿರುವುದರಿಂದ ಶೋಕ ಶ್ಲೋಕವಾಗಿ, ಪಾಡು ಹಾಡಾಗಿ ಮನುಷ್ಯಲೋಕದ ಮಂದಾರವಾಗಿ ತನ್ನ ಪರಿಮಳ ವನ್ನು ಸೂಸುತ್ತದೆ.

‘ಕನ್ನಡ ಯಾತ್ರಿಕ’— ವಿಮರ್ಶೆಯ ಸಂಗ್ರಹ

ಎಸ್.ವಿ. ಚೆನ್ನಬಸವೇಶ್ವರ, ಬಳ್ಳಾರಿ

‘ಕನ್ನಡ ಯಾತ್ರಿಕ’ ‘ಯಾತ್ರಿಕುಡು’ ಎನ್ನುವ ತೆಲುಗು ಕಾವ್ಯದ ಭಾವಾನುವಾದ. ‘ಮಕ್ಷಿಕಾ ಮಕ್ಷಿ’ಯಾಗಿ ಮಾಡಿದ ಭಾಷಾಂತರವಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಭಾಷಾಂತರವಲ್ಲವೇ ಅಲ್ಲ. ‘ಯಾತ್ರಿಕುಡು’ ವೊದಗಿಸಿಕೊಟ್ಟ ಭಾವದ ಬೀಜವನ್ನು ಚಿತ್ತಭಿತ್ತಿಯಲ್ಲಿ ಬಿತ್ತಿಕೊಂಡು ಸ್ವಪ್ರತಿಭೆಯ ಗೊಬ್ಬರ ನೀರುಗಳಿಟ್ಟು ಬೆಳೆಸಿಕೊಂಡು ಶ್ರೀ ಗೌಡರು ಪಡೆದ ಫಲಿತವೀ ‘ಯಾತ್ರಿಕ’. ಭಾವದ ಬೀಜವೊಂದೇಯಾದರೂ ಅದು ಮೊಳೆತುದೂ, ಬೆಳೆದುದೂ ಬೇರೆ ಬೇರೆ ಭೂಮಿಗಳಲ್ಲಿ. ಭೂಗುಣಾನುಸಾರವಾಗಿ. ಫಲಿಸಿದ ಫಲಗಳು—ಗಾತ್ರದಲ್ಲಿಯೂ, ರಸದಲ್ಲಿಯೂ, ರುಚಿಯಲ್ಲಿಯೂ ಬೇರೆ ಬೇರೆಯಾಗಿ ಕಾಣುವುದು ಪ್ರಕೃತಿ ಸಹಜ.

ಶ್ರೀ ಗೌಡರನ್ನು ‘ಕನ್ನಡ ಯಾತ್ರಿಕ’ನೆಂದೂ, ಶ್ರೀ ಪಂಡಿತರನ್ನು ‘ತೆಲುಗು ಯಾತ್ರಿಕ’ನೆಂದೂ ಕರೆಯುವುದು ಬಳ್ಳಾರಿಯ ಸಾಹಿತಿಗಳ ವಾಡಿಕೆ. ಪ್ರಫುಲ್ಲ ಪುಂಡರೀಕ ಪ್ರತಿಷ್ಠಿತ ಕಾವ್ಯಾಂಗನೆಯ ಚೆಂದುಟಿಯ ಕೆಂಜೇನನ್ನು ಸವಿಯಲು ಭಾವನಾ ವಿಹಂಗಮದ ಬೆನ್ನೇರಿ ಇಬ್ಬರೂ ಬಾನಿನಲ್ಲಿ ಸಂಚರಿಸುವವರೇ! ಕೀರ್ತಿ ಸುಧಾಕಲಶವನ್ನು ಹಿಡಿದು ಪೊರಮಡುವ ಕಾವ್ಯಲಕ್ಷ್ಮಿಗಾಗಿ ಹೃದಯ ವಾರಿಧಿಯನ್ನು ಎಡೆಬಿಡದೆ ಕಡೆಯುತಿಹ ಸಾಹಸಿಗಳೇ ಇಬ್ಬರೂ! ಇಬ್ಬರೂ ಬಳ್ಳಾರಿಯ ಭವ್ಯವಾದ ಭೂಷಣಗಳೇ! ಒಬ್ಬರು ಮುಡಿಯ ಮಾಣಿಕ್ಯ! ಇನ್ನೊಬ್ಬರು ಕೊರಳ ಕಂಠಿ!

ಯಾತ್ರಿಕ

"ವಿಶ್ರಾಂತಿಯೊಂದು ದಿನ ;
ಕರ್ಮಕಾಲದಂತ್ಯದವರೆಗೆ ! ಒಂದು ದಿನ
ಜಾತ್ರೆ ; ಅದಕ್ಕಾಗಿ ಯುಗಯುಗದ ಯಾತ್ರೆ ! "

—ಶ್ರೀ ಕೆ. ವಿ. ಪುಟ್ಟಪ್ಪನವರ ಜಲಗಾರ

ಯಾತ್ರಿಕನನ್ನು ಓದಲು ಪ್ರಾರಂಭಿಸಿದಾಗ ನಮಗೆ ಥಟ್ಟನೆ ಹೊಳೆಯುವುದು ಕಾವ್ಯಾರಂಭದ ನವೀನ ಪದ್ಧತಿ. ಪ್ರಾರ್ಥನಾ ಪದ್ಯವಿಲ್ಲ, ಗುರುಸ್ತುತಿಯಿಲ್ಲ, ಬಿರುದು ಬಿನ್ನಾಣಗಳನ್ನು ಹಾಕಿಕೊಂಡು ಸ್ವಪ್ರಶಂಸೆ, ಸ್ವಕಾವ್ಯ ಪ್ರಶಂಸೆ, ಸ್ವಗೋತ್ರ ವರ್ಣನೆಗಳಿಗಾಗಿ ಹೊಸೆದ ಪದ್ಯವಿಲ್ಲ. "ತಾರೆಗಳು ಬಾಗಿದವು ....", ಎಂದು ಮುಖ್ಯವಾಗಿ ಹೇಳಬೇಕಾದುದನ್ನು ಹೇಳಲು ಪ್ರಾರಂಭಿಸಿಬಿಡುತ್ತಾನೆ ಕವಿ. ನಮ್ಮ ಜೋಲು ಗಣ್ಣುಗಳನ್ನು ಮೇಲೆತ್ತಿಸಿ, ಸುಂದರ ಸುಪ್ರಭಾತವನ್ನು ನಮಗೆ ತೋರುತ್ತಾರೆ. ಎಂತಹ ರಮ್ಯ ರಮಣೀಯ ಮಂಗಲ ಪ್ರಭಾತ ! ನಕ್ಷತ್ರಗಳು ತೇಜೋವಿಹೀನವಾಗುತ್ತಿವೆ; ಚಂದ್ರನ ಸ್ನಿಗ್ಧ ಶೀತಲ ಶುಭ್ರಜ್ಯೋತ್ಸ್ನೆಯು ಪ್ರಚಂಡ ಮಾರ್ತಾಂಡನ ಕಿರಣ ಪ್ರಕಾಶದೆದುರು ನಿಲ್ಲಲಾರದೆ ಕಾಂತಿಗುಂದುತ್ತಿದೆ. ಹಗಲೆಲ್ಲಾ ದಾರಿನಡೆದು, ಉರಿಬಿಸಿಲಿನ ಉಪಟಳಕ್ಕೆ ಬೇಸತ್ತು ತಳಮಳಗೊಂಡು ರಾತ್ರಿಯಲ್ಲಿ ತಣ್ಗದಿರನ ತನಿವೆಳಗಿನಲ್ಲಿ ಮೈಮರೆತು ಮಲಗಿ ವಿಶ್ರಾಂತಿ ಪಡೆಯುತ್ತಿದ್ದ ಯಾತ್ರಿಕರು ಸೂರ್ಯೋದಯವನ್ನು ಸೂಚಿಸುವ ಮೂಡಣ ದೆಸೆಯ ಮುಂಬೆಳಗಿನಲ್ಲಿ ಒಬ್ಬರ ಹಿಂದೊಬ್ಬರು ಪಯಣಬೆಳೆಸಿದ್ದಾರೆ. ಕಿಸುವೊಂಗಿರಣಗಳ ಕೈಯೂರಿ ಭಾನು ಉದಯ ಪರ್ವತವನ್ನು ಏರುತ್ತಿದ್ದಾನೆ,—ನುಡಿಗದ್ದುಗೆಯನ್ನೇರುವ ವಾಗ್ಮಿಯಂತೆ ಮಹೋತ್ತುಂಗ ಉದಯಾಚಲೋತ್ತಮಾಂಗದಲ್ಲಿ ನಿಂತು ಸ್ಥಿರ ಗಂಭೀರವಾದ ಆಜ್ಞಾದಾಯಕ ಅಮರವಾಣಿಯಲ್ಲಿ, "ಮೂರು ದಿನಕಿಂತಿಲ್ಲಿ ನಿಲ್ಲಲುಬಾರದು" ಎಂದು ಸಾರುತ್ತಿದ್ದಾನೆ. ಅಲ್ಪಾಯುಗಳಾದ ನಮ್ಮ ನೂರು ವರುಷ ಅಮರನಾದ ಆತನ ಕಣ್ಣಿನಲ್ಲಿ ನಿಜವಾಗಿಯೂ ಮೂರು ದಿನವೇ ! ಆ ವಾಣಿಯು ನಮಗೆ ಅರ್ಥವಾಗದ್ದು ; ಆ ಮಾತುಗಳು ನಮಗೆ ಕೇಳಿಸದಂಥವು. ಅದು ಕೇಳಿಸುವುದು ಕವಿಯ ಕಿವಿಗಳಿಗೆ ಮಾತ್ರ ; ಅದು ತಿಳಿಯುವುದು ಆತನ ಅಮೃತಾತ್ಮಕ್ಕೆ ಮಾತ್ರ ಕಿವಿವೆತ್ತೂ ಕಿವುಡರಾದ ನಮ್ಮ ಪಾಲಿಗೆ ಸೂರ್ಯನು ಮೂಕನೇ. ಆ ಅಮರವಾಣಿಯನ್ನು ಕೇಳಿ ತಿಳಿದುಕೊಂಡು ನಮಗೆ ಅರ್ಥವಾಗುವಂತೆ ನಮ್ಮ ಮಾತಿನಲ್ಲಿ ನೀಡುತ್ತಾನೆ ಕವಿ. ಆತನ ಕಣ್ಣಿಗೆ ಕಾಣದ್ದೇನಿದೆ ! ಕಿವಿಗೆ ಕೇಳದ್ದೇನಿದೆ !

'ತಾರೆಗಳು ಬಾಗಿದವು' ಎಂದು ಹೇಳುವುದಕ್ಕೆ ಬದಲು 'ತಾರೆಗಳು ಬಾಡಿದವು' ಎಂದು ಹೇಳಿದ್ದರೆ ಚೆನ್ನಾಗಿರುತ್ತಿರಲಿಲ್ಲವೇ ಎಂದು ಅನಿಸುತ್ತದೆ. 'ಬಾಗಿದವು' ಎಂಬ ಪದಕ್ಕೆ ಬದಲು 'ಬಾಡಿದವು' ಎಂಬ ಪದವಿಟ್ಟರೆ ಛಂದಸ್ಸಿನದೇನೂ ಅಡ್ಡಿಯಿಲ್ಲ.

ಆದರೆ, 'ಬಾಡು' ಎಂಬ ಕ್ರಿಯಾಪದ ರಸವುಳ್ಳ ಪದಾರ್ಥಗಳಿಗೆ ಮಾತ್ರ ಪ್ರಯೋಗ ಯುಕ್ತವಾದದ್ದು. "ಹೂ ಬಾಡುತ್ತದೆ, ಮುಖ ಬಾಡಿದೆ" ಎಂದು ಹೇಳಬಹುದು. ತಾರೆಗಳು ರಸ ಪೂರ್ಣವಾದುದಲ್ಲ; ನೀರಸಕಾಂತಿ ಪೂರ್ಣವಾದುದು. ಕಾಂತಿ ಪೂರ್ಣವಾದವು ಕಾಂತಿಹೀನವಾಗಬೇಕಲ್ಲವೇ ಹೊರತು 'ಬಾಡಲರಿಯವು' 'ತಾರೆಗಳು ಬಾಗಿದವು' ಎಂದರೆ 'ಮಿತ್ರತೇಜದೆದುರು ಕಾಂತಿ ವಿಹೀನವಾದವು' ಎಂದರ್ಥ. ಬಾಡಿದ್ದು ಮರಳಿ ಮೂಡಲರಿಯದು. ಬಾಗಿದುದು ನೀಗಬಹುದು. ಬಾಗಿದವು ಯೆಂಬ ಮಾತು ಆರಿಸಿಟ್ಟ ಮಾತು; ಮುತ್ತಿನಂತಹ ಮಾತು!

ಜೀವನವು ಒಂದು ಸಮಸ್ಯಾಪೂರ್ಣವಾದ ಮಹಾಯಾತ್ರೆ. ಒಂದು ಜನ್ಮ ದಲ್ಲಿಯೇ ಮುಗಿಯುವ, ಅಥವಾ ಒಂದು ಜನ್ಮದಲ್ಲಿಯೇ ಮುಗಿಸಬೇಕೆಂದು ಕೈಗೊಂಡ ಯಾತ್ರೆಯಲ್ಲ. ಯುಗ ಯುಗದ ಯಾತ್ರೆಯಿದು. ಈ ಯಾತ್ರೆ ಮುಗಿಯುವದೆಂದಿಗೆ? ಎಲ್ಲಿಂದ ಪ್ರಾರಂಭಿಸಿದ್ದೇವೆ ಈ ಯಾತ್ರೆಯನ್ನು? ಎಲ್ಲಿ, ಯಾವ ಕ್ಷೇತ್ರಕ್ಕೆ ಹೋಗಿ ಮುಟ್ಟುತ್ತೇವೆ ಕಡೆಗೆ?—ಈ ಪ್ರಶ್ನೆಗಳು ಸ್ವಲ್ಪ ತಲೆಗೆದರಿ ಕೊಳ್ಳಬೇಕಾದ ಪ್ರಶ್ನೆಗಳೇ. ಏಕನಾದದ ಶ್ರುತಿಯೊಂದಿಗೆ ದನಿಗೂಡಿಸಿ ಬೀದಿಯ ಲ್ಲಿಯ ಜೋಗಿಗಳೂ:

'ತಿಳಿದು ನೋಡಮ್ಮ ತಂಗಿ! ತಿಳಿದು ನೋಡು!
ನೀ ಬಂದುದೆಲ್ಲಿ ಮತ್ತೆ ಹೋಗೋದೆಲ್ಲಿ?'

ಎಂದು ಹಾಡುವದನ್ನು ಕೇಳಿದ್ದೇವೆ. ಎಲ್ಲರೂ ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೆಣಗಿದ್ದಾರೆ. ಪ್ರಸಿದ್ಧ ಪಾರಸೀಕ ಕವಿ ಉಮರನು, "I came like Water, and like Wind I go" ಎಂದು ಸಮಾಧಾನ ಹೇಳುತ್ತಾನೆ. ಹನಿಯಾಗಿ ಸುರಿ ಯುವುದೂ, ಹವೆಯಾಗಿ ಪರಿಯುವುದೂ ಹವೆಯು ಮರಳಿ ಹನಿಯಾಗುವುದೂ, ಹನಿಯು ಹವೆಯಾಗುವುದೂ—ಇದೇ ಯಾತ್ರೆ. ನಮ್ಮ ಯಾತ್ರೆ ಗರಗರ ತಿರುಗುವ ವಿದ್ಯುತ್‌ವ್ಯಜನಿಕೆಯಂತೆ ಯಾಂತ್ರಿಕವಾಗಿಲ್ಲ. ಶುಷ್ಕವಾದ ಯಾಂತ್ರಿಕ ಕ್ರಿಯೆಯಲ್ಲ ಯಾತ್ರೆ; ಆನಂದಮಯವಾದದ್ದು, ರಸಪೂರ್ಣವಾದದ್ದು. ಯಾತ್ರಾಂತ್ಯದಲ್ಲಿ ಕ್ಷೇತ್ರವನ್ನು ಸೇರಿ ಪಡೆಯುವ ಶೂನ್ಯ ಶಾಂತಿಗಿಂತಲೂ ಯಾತ್ರೆಯಲ್ಲಿ ಹುಟ್ಟಿ ಹೊಮ್ಮುವ ಕೆಚ್ಚು, ನೆಚ್ಚುಮೆಚ್ಚುಗಳ ಆನಂದವೇ ಮಿಗಿಲಾದದ್ದು.

"ನಾವು ಯಾತ್ರೆಗಾಗಿ ಬಂದವರು. ನಮ್ಮ ಗುರಿ ಬಹು ದೂರವಿದೆ. ಇನ್ನೂ ನಡೆಯಬೇಕಾದ ದಾರಿ ಬಹಳವಿದೆ. ಈ ವಾರ ಧರ್ಮಶಾಲೆಯಲ್ಲಿ ನಾವು ಇರುವ ಅವಧಿ 'ಮೂರು ದಿನಗಳು' ಮಾತ್ರ. ಮೂರು ದಿನಗಳಲ್ಲಿಯೇ ಕಲಿಯಬೇಕಾದ ದ್ದನ್ನು ಕಲಿಯೋಣ" ಎಂದು ಆಲೋಚಿಸದೆ ಹುಚ್ಚು ಯಾತ್ರಿಕರು ಕೆಲವರು ಕೋಟೆ ಗಳನ್ನು ಕಟ್ಟಿಸುತ್ತಾರೆ. ವಿಜಯ ಧ್ವಜಗಳನ್ನು ನಿಲ್ಲಿಸುತ್ತಾರೆ, ಆಳತೆಯಿಲ್ಲದ ಕೋಶ

ಗಳನ್ನು ನೆಲೆಗೊಳಿಸುತ್ತಾರೆ. ಕಡೆಗೆ 'ಘನ ಮೃತ್ಯುದೇವಿಯ ಸೆಳೆತದಾಲಿಂಗನದ ಳೊರಗುತ ನಾಮರೂಪದ ಕುರುಹು' ಕೂಡಾ ಕಾಣದಂತೆ ಅಳಿಯುತ್ತಾರೆ.

ಜೀವನ ಯಾತ್ರೆ ಬಹು ದೊಡ್ಡದಾದ್ದರಿಂದ, ಒಬ್ಬರೇ ನಡೆದರೆ ಬೇಸರವಾಗ ಬಹುದೆಂದು ದಾರಿ ಸಾಗದಿರಬಹುದೆಂದು ರಸಿಕನಾದ ಈಶ್ವರನು ಇಬ್ಬರನ್ನು ಇಳಿಸಿ ದ್ದಾನೆ ಯಾತ್ರೆಗೆ. ಸ್ಥೂಲ ದೃಷ್ಟಿಯಿಂದ ಹೇಳುವುದಾದರೆ—ಹೆಣ್ಣು, ಗಂಡು; ಸೂಕ್ಷ್ಮದೃಷ್ಟಿಯಿಂದ ಹೇಳುವುದಾದರೆ—ಜೀವ, ಆತ್ಮ. ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಒದಗುವ ಸುಖವನ್ನು ಹಂಚಿಕೊಂಡು, ದುಃಖದ ಹೊರೆಯನ್ನು ಹೊತ್ತು ತನ್ನೊಡನೆ ತನ್ನವಳಾಗಿ ಎಂದೆಂದಿಗೂ ನಿಲ್ಲುವ ಜೊತೆಗಾರ್ತಿಯೊಬ್ಬಳನ್ನು ಬಯಸುತ್ತಾನೆ. ಹಾಗೆಯೇ ಪ್ರತಿಯೊಬ್ಬಳೂ ಒಬ್ಬ ಜೊತೆಗಾರನನ್ನು ಬಯಸು ತ್ತಾಳೆ. ಈ ಬಯಕೆ ಕೃತ್ರಿಮವಾದುದಲ್ಲ. ನಿಸರ್ಗ ಸಂಸಿದ್ಧವಾದುದು. ನಾವಾ ಗಿಯೇ ಹೊತ್ತ ಹೊರೆಯಲ್ಲ, ದೇವರು ತಾನಾಗಿಯೇ ತೊಡಿಸಿದ ನಲ್ದೊಡವು.

ಸತಿಪತಿಗಳಾದ ಜೀವಾತ್ಮರ ಸಂಬಂಧವನ್ನು ೧೨ನೆಯ ಪದ್ಯವು ಸೊಗಸಾಗಿ ಹೇಳುತ್ತದೆ. ಖುಷೀಗಾಗಿ ಕಲೆತುಕೊಂಡ ಸಂಬಂಧವಲ್ಲ ಸತಿಪತಿಗಳದು, ಜೀವಾತ್ಮ ರದು. ಹಾಸು ಹೊಕ್ಕಾಗಿ ಹೆಣೆದುಕೊಂಡ ಸಂಬಂಧವದು. ನಲ್ಲನಾದ ಆತ್ಮ ತನ್ನ ನಲ್ಮೆಯ ನಲ್ಲೆಯಾದ ಜೀವಗಳಿಗೆ ಹೇಳುತ್ತಾನೆ :

> "ಕ್ಷಣಿಕವಹ ಕುಹನಾಪ್ರಪಂಚದಿ ।
> ವನಜಮುಖಿ ಪಾಲ್ಪಂಚಿಕೊಂಡೆವು ।
> ಕೊನೆಯ ಕಾಣದ ದುಃಖಶರಧಿಯೊಳ್ಸೌಖ್ಯ ಬಿಂದುವನು ॥"

ಕೊನೆಯ ಕಾಣದ ದುಃಖಶರಧಿ ! ಇಂಥ ಅಪಾರವಾದ ದುಃಖಾಂಬುಧಿಯಲ್ಲಿಯೂ ಸೌಖ್ಯದ ಅಮೃತಬಿಂದುವಿದೆಯೆಂದು ಕವಿಯು ಹೇಳುತ್ತಾನೆ. ನಿಜವಾದ ಮಾತು. ಆ ಒಂದು ತೊಟ್ಟಾದರೂ ಸೌಖ್ಯಾಮೃತವಿರದಿದ್ದರೆ ಬಾಳು ಗೋಳಿನ ಬೀಳಾಗುತ್ತಿತ್ತು. ಅಂಥ 'ನಾಯಿಬಾಳು' ಯಾರಿಗೆ ರುಚಿಸುತ್ತದೆ? ದುಃಖದ ವಿಷಜ್ವಾಲೆಗೆ ಸೃಷ್ಟಿ ಎಲ್ಲಾ ಸುಟ್ಟು ಬೂದಿಯಾಗುತ್ತಿತ್ತು. ಶುಷ್ಕವಾಗುತ್ತಿತ್ತು. ನೀರಸವಾಗುತ್ತಿತ್ತು. ಮಹಾರಸಿಕನಾದ ಈಶ್ವರನಿಗೆ ಇದು ಹೇಗೆ ಸರಿದೋರಿತು! ವಿಶ್ವವನ್ನು ಶುಷ್ಕತಾ ಶೂನ್ಯಕ್ಕೆ ಬಿಡದೆ ಪೊರೆಯುವ ಸುಖಾನಂದಗಳ ರಸಬಿಂದುವೊಂದನ್ನು ದುಃಖಸಾಗರ ದಲ್ಲಿ ಹೊಂದಿಸಿದ್ದಾನೆ ಬಹು ಜಾಣ್ಮೆಯಿಂದ—ಕೆಸರಿನ ಕೊಳದಲ್ಲಿ ಅರಳಿದ ಬೆಳ್ದಾವರೆ ಯಂತೆ. ಪ್ರೇಮ-ಸೌಂದರ್ಯಗಳು ಆ ಸುಖವು ತಳೆದು ಸುಳಿಯುವ ವಿವಿಧ ರೂಪುಗಳು. ಕೊನೆಯ ಕಾಣದ ದುಃಖ ಶರಧಿಯಲ್ಲಿ ಕಾಣುವ ಸೌಖ್ಯಬಿಂದು ಮರು ಭೂಮಿಯಲ್ಲಿಯ ಮರುವನದಂತೆ. ಅದು ಸುಮ್ಮನೇ ಸಿಗಲಾರದು. ಅದನ್ನು ಪಡೆಯಲು ಕಡಲನ್ನು ಕಡೆಯಬೇಕು. ಕಡೆಗೆ ಅದನ್ನು ಪಡೆದು ಸತಿಪತಿಗಳಿಬ್ಬರೂ ಕುಡಿಯಬೇಕು. ಇದನ್ನೇ ಕವಿಗಳೂ, ತಾಂತ್ರಿಕರೂ, ಉಪನಿಷದೃಷಿಗಳೂ ಮಧುವೆಂದು ಕರೆದಿರುವುದು.

ಸತಿಯ ಮೇಲೆ ಎಷ್ಟು ನಿಡುನಲ್ಮೆ ಪತಿಗೆ! ಸತಿಯ ಸೌಂದರ್ಯವನ್ನು ನೋಡಿ ನೋಡಿ ತಣಿಯುದವರು ಯಾರಿದ್ದಾರೆ. (ಅತಿಮಾನುಷರೋ, ಅಮಾನುಷರೋ ಯಾರಾದರೂ ಇದ್ದರೆ ಅವರ ಗೊಡವೆ ನಮಗೆ ಬೇಡ.) ವಿಶ್ವಸೌಂದರ್ಯವನ್ನು ಒಂದೆಡೆ ಕೂಡಿಸಿ ಮಾಡಿದ ಸ್ವರೂಪ ಹೆಣ್ಣು. ಬಿದಿಯ ಬಯಕೆಯ ಮೊದಲ ಕಿಡಿ ಯಾಕೆ. ಜೀವನದ ರಸಮಾಕೆ. ನಲ್ಲೆಯ ಬಟ್ಟಬಾಳದೊಡೆಯ ಮೇಲೆ ತಲೆಯಿಟ್ಟು ಮಲಗಿ ಆಕೆಯ ಮೊಗವನ್ನು ನೊಡುವುದರಲ್ಲಿ ಯಾರಿಗೆ ಬೇಸರ? ಎಲ್ಲ ಬೇಸರ ಗಳನ್ನೂ ಕಳೆಯುವ ಆಕೆಯ ದಿವ್ಯ ಸನ್ನಿಧಿಯಲ್ಲಿ ಬೇಸರವೇ! ಚೆಂದುಟಿಗಳ, ಕೆಂಗೆನ್ನೆ ಗಳ ನಲ್ಬೇನನ್ನು ಉಂಟಿದ ಮೇಲೆ ಇನ್ನೆಲ್ಲಿಯ ಹಸಿವು, ಇನ್ನೆಲ್ಲಿಯ ತೃಷೆ! ಸೊಬಗಿನ ಸೋಗೆಗಣ್ಗಳ ಕಟಾಕ್ಷದ ಬೆಳುದಿಂಗಳ ಬೆಳಕಿಗಿಂತ ಬೆಳಕಿನ್ನೆಲ್ಲಿ! ಆ ಬೆಳಕಿನಲ್ಲಿ ನನಹಂ ತಿದ್ದುತ್ತಾ ಆಕೆಯ ಸೌಂದರ್ಯ ಸುಧಾಸ್ವರೂಪವನ್ನು ಹೃತ್ಪಟಲದ ಮೇಲೆ ಚಿತ್ರಿಸಿ ಕೊಳ್ಳುತ್ತಾನೆ–ಹೊರಗಣ್ಣು ಮುಚ್ಚಿದರೂ ಒಳಗಣ್ಣಿಗೂ ಅದು ಕಾಣುತ್ತಿರಲೀ ಎಂದು ಚಿತ್ರಿಸಿಕೊಳ್ಳಲು ಮಾಸುವ ಮಸಿಯನ್ನು ಉಪಯೋಗಿಸುವುದಿಲ್ಲ. ಒಮ್ಮೆ ಬಳಿದರೆ ಎಂದೆಂದಿಗೂ ಅಳಿಸದೆ ಚಿರಂತನವಾಗಿ, ಚಿರನೂತನವಾಗಿರುವ ತನ್ನೆದೆಯ ಕೆನ್ನೀರಿನಲ್ಲಿಯೇ ತನ್ನ ಕಲ್ಪನಾಕುಂಚುಕವನ್ನು ಅದ್ದುತ್ತಾನೆ. (೧೦ನೆಯ ಪದ್ಯ)

ಕೆಲಸಮಾಡಿ ದಣಿದ ಮೈಮನಸಗಳಿಗೆ ಉಲ್ಲಾಸ, ಉತ್ಸಾಹಗಳ ಉತ್ಪಾದನೆ ಗಾಗಿ ಆಟ ಬೇಕು. ಮನದನ್ನನ ದಣಿವು ಕಂಡು ಒಂದು ಸಾರೆ ತನ್ನ ಮಿಂಚುವ ಚಂಚಲಾಕ್ಷಗಳನ್ನು ಅವನತ್ತ ತಿರುವಿ ಕಣ್‌ಮಿಂಟಿ ಆಟಕ್ಕೆ ಕರೆಯುತ್ತಾಳೆ. ಆಯಿತು! ಆಕೆಯ ಕಣ್‌ಮೀಟುವಿಕೆಗೆ ಬೇಸರವೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಸರಿ, ಇನ್ನು ಪ್ರಾರಂಭ ಬೇಸರಕ್ಕೆ ಭೇಷಜಪ್ರಾಯವಾದ ಕಣ್‌ಮುಚ್ಚಾಟ. ಕಣ್‌ಮೀಟು ವುದರ ಜೊತೆಗೆ ಸೆರಗನ್ನು ಸರಿ ಮಾಡುತ್ತಾಳಂತೆ. ನಾಣ್ಮೆಸಲಾರದಿಹ, ಸೌಂದರ್ಯ ಸೌಷ್ಠವವಾದ. ವನಜ ಕುಟ್ಮಲಗಳಂತೆ ಪೊಣ್ಮಿದ ಬಿಣ್ಮೊಲೆಗಳ ಮೇಲೆ ಜಾರಿದ ಮುಂಜರಗನ್ನು, ಅದು ಸರಿಯಾಗಿದ್ದರೂ ಇನ್ನಿಷ್ಟು ಸರಿಮಾಡಿಕೊಳ್ಳುತ್ತಾ, (ಸೆರಗು ಸರಿಪಡಿಸಿಕೊಳ್ಳುವುದೊಂದು ಬೇಟದ ಕಲೆ), ಅದೆಲ್ಲಿಗೋ ಕರೆದೊಯ್ಯುತ್ತಾಳೆಂದು ಹೇಳುತ್ತಾನೆ ಕವಿ. ಇಷ್ಟೆಲ್ಲಾ ನೋಡುತ್ತಿದ್ದರೂ ಪಾಪ ಹೊಳೆದಿಲ್ಲ ಅದೆಲ್ಲಿಗೆ ಆಕೆ ಕರೆದೊಯ್ಯುವುದೆಂದು! 'ಅದೆಲ್ಲಿಗೋ ಕರೆದೊಯ್ವೆ' ಎಂದು ಹೇಳುವ ಮಾತಿನಲ್ಲಿ ನಿರನುಭವಿಯ ಮುಗ್ಧತನವಿಲ್ಲ. ರಸಾನುಭವಿಯ ರಸಿಕತನವಿದೆ. ನಲ್ಲೆಯ ಕಡೆ ಗಣ್ನೋಟದ ಪ್ರಭಾವವೆಂಥದೆಂದು ಹೇಳುತ್ತಾನೆ ನೋಡಿರಿ—ಕವಿಯು ೧೧ನೆಯ ಪದ್ಯದಲ್ಲಿ:

ಮುಂದೆ ೧೩ನೆಯ ಪದ್ಯದಲ್ಲಿ :

"ತಿರುಗಿಸಿದ ಓಲೆಯನು ತಿರುಗಿಸಿ।
ಮರಳಿ ನೋಡುತ, ಮುಂದಿನೋಲೆಯೊ-।
ಳಿರುವ ವಿಷಯಗಳರ್ಥವನು ಸರಿತಿದ್ದಿಕೋ ಜವದಿ ॥"

ಎಂದು ಎಚ್ಚರಗೊಡುತ್ತಾನೆ. ಜೀವನವು ಒಂದು ಗ್ರಂಥ! ಒಂದೊಂದು ಜನ್ಮ ಸವೆದಂತೆ ಒಂದೊಂದು ಓಲೆ ಉರುಳುತ್ತದೆ. ಹಿಂದಿನ ಜನ್ಮಗಳಲ್ಲಿ ಸಾಧಿಸಿದ ಸಾಧನವೇನು? ಮುಂದೆ ನಾನು ಯಾವ ಜನ್ಮವೆತ್ತಿ ಏನು ಸಾಧಿಸಬೇಕಾಗಿದೆ—ಇದನ್ನು ತಿಳಿದುಕೋ ಎಂದು ಕವಿಯು ಹೇಳುತ್ತಾನೆ. ಆತ್ಮನಿಂದ ಜೀವಕ್ಕೆ ಹೇಳಿಸುತ್ತಾನೆ.

ಆತ್ಮನು 'ಕಾಲಧೂಳನು ಕೊಡಹಿ' ಎಲ್ಲಿಗೋ ಮಾಯವಾದ ಬಳಿಕ, ಕಾಲಧೂಳು ನೆಲದ ಧೂಳಿನೊಂದಿಗೆ ಸೇರಿಹೋಗುತ್ತದೆ. ಪಂಚತತ್ತ್ವಗಳಿಂದ ಆದ ತನುವು ಪಂಚತತ್ವವನ್ನು ಹೊಂದುತ್ತದೆ. ಭಿನ್ನವಾದ ಜೀರ್ಣ ಕುಂಭಗಳಿಗೆ ಜೀವ ಹೋದ ದೇಹಗಳನ್ನು ಹೋಲಿಸಿರುವ ಹೋಲಿಕೆ ಬಹು ಚೆನ್ನಾಗಿದೆ. ಒಡೆದ ಮಡಿಕೆಯ ನಿರ್ಮಾಣಕ್ಕೆ ಹೊಸ ಮಣ್ಣನ್ನು ಒದಗಿಸಿಕೊಡುತ್ತದೆ ಈ ಧರಣಿ! ಕುಂಬಾರನು ಮಣ್ಣಿನಿಂದ ತೆರತೆರನಾದ ಮಡಿಕೆಗಳನ್ನು ತಯಾರಿಸುತ್ತಾನೆ. ಮಣ್ಣೆಲ್ಲಾ ಒಂದೇ. ಮಡಿಕೆಗಳು ಮಾತ್ರ ನಾನಾ ವಿಧ.

೧೮, ೧೯ನೆಯ ಪದ್ಯಗಳು ನಲ್ಲ ನಲ್ಲೆಯರ ಏಕಾಂತವನ್ನು ಸ್ಥೂಲವಾಗಿ, ಶಿವ ಜೀವರ ಐಕ್ಯವನ್ನು ಸೂಕ್ಷ್ಮವಾಗಿ ವರ್ಣಿಸುತ್ತವೆ. ಸೆಜ್ಜೆವನೆಯಲ್ಲಿ ಹೆಣ್ಣು ಗಂಡೂ ಕೂಡಿ ಆಡುವ ಸರಸ ಶೃಂಗಾರವನ್ನು ಏನೆಂದು ವರ್ಣಿಸುವುದು—ಎಂದು ಅನುಮಾನಿಸುತ್ತಲೇ ಎಲ್ಲವನ್ನೂ ಕವಿಯು ವರ್ಣಿಸಿಯೇ ಬಿಡುತ್ತಾನೆ. ಇದು ಕವಿ ಚಮತ್ಕಾರ.

> "ನಿಲದೆ ದ್ವಾರಗಳೆಲ್ಲ ಬಂಧಿಸಿ।
> ಒಳಗಿನಾಸೊಡರೆತ್ತಿ ನೂಕುತ।
> ನಳನಳಿಸಿ ಈ ಎಲ್ಲ ಜಗವನು ಮರೆದು ಕ್ರೀಡಿಸುವ ॥"

ಈ ಮೂರು ಸಾಲು ಸ್ವಾರಸ್ಯವಾದವು. ದಂಪತಿಗಳು ಶಯ್ಯಾಗೃಹವನ್ನು ಪ್ರವೇಶಿಸಿದ ಕೊಡಲೇ ದ್ವಾರಗಳನ್ನೆಲ್ಲಾ ಮುಚ್ಚಿಬಿಡುತ್ತಾರಂತೆ—ಇದೆಲ್ಲಾ ನನಗಿನ್ನೂ ತಿಳಿಯದ ವಿಷಯವಾದ್ದರಿಂದ ಹೆಚ್ಚಿಗೆ ಹೇಳಲು ಅರಿಯೆನು—ಕರುಬುವರ ಕಣ್ಣು ಒಳಗೆ ಪ್ರವೇಶಿಸಬಾರದೆಂದೋ ಅಥವಾ ಒಳಗೆ ನಡೆಯುವ ಕಾರ್ಯಗಳೆಲ್ಲಾ ಕವಿಯು ಹೇಳುವಂತೆ, ನಾಚಿಕೆಯ ಕಾರ್ಯಗಳಾದ್ದರಿಂದಲೋ. 'ಒಳಗಿನಾ ಸೊಡರೆತ್ತಿನೂಕುತ' ಎಂಬ ಮಾತು ತಾಂತ್ರಿಕ ಕುಂಡಲಿನೀ ಯೋಗವನ್ನು ಪ್ರತಿಪಾದಿಸುತ್ತದೆ. †"ಕುಂಡಲಿನಿಯು ವಿಶ್ವವ್ಯಾಪಕವೂ, ವಿಶ್ವಾಧಾರವೂ, ಸರ್ವಾಂತರ್ಯಾಮಿಯೂ ಆದ ವಿಶ್ವಶಕ್ತಿಯು. ಗುಧಸ್ಥಾನಕ್ಕೆ ೨ ಅಂಗುಲ ಮೇಲ್ಭಾಗದಲ್ಲಿ, ಪುರುಷನ ಜನನೇಂದ್ರಿಯಕ್ಕೆ ೨ ಅಂಗುಲ ಕೆಳಗೆ ಒಂದು ಸ್ಥಾನವಿದೆ; ಇದೇ ಮೂಲಾಧಾರ ಚಕ್ರವು. ಗುಧಸ್ಥಾನಕ್ಕೂ ಜನನೇಂದ್ರಿಯಕ್ಕೂ ಮಧ್ಯೆ ಯೋನಿಯಿದೆ. ಇದು ಬೆನ್‌ಮೊಗವಾಗಿದೆ. ಈ ಸ್ಥಾನವೇ ಕುಂಡಲಿನಿಯ ಸ್ಥಾನ. ದೇಹದ ನಾಡಿಗಳೆಲ್ಲಾ ಕುಂಡಲಿನಿಯನ್ನು

† ನನ್ನ 'ತಂತ್ರ ಪ್ರಸಂಗ' ಎಂಬ ಲೇಖನದಿಂದ ಆರಿಸಿದ ಮಾತುಗಳು. ಈ ಲೇಖನವಿನ್ನೂ ಪ್ರಕಟಿತವಾಗಿಲ್ಲ.

ಆವರಿಸಿರುತ್ತವೆ. ಕುಂಡಲಿನಿಯು ಮೂರು ಸುತ್ತು ಸುತ್ತಿಕೊಂಡು ತನ್ನ ಬಾಯಿಯಲ್ಲಿ ತನ್ನ ಬಾಲವನ್ನು ಕಚ್ಚಿಕೊಂಡು ಸರ್ಪದಂತೆ ಸುಷುಮ್ನಾ ರಂಧ್ರದಲ್ಲಿ ಮಲಗಿರುತ್ತದೆ. ಸ್ವಯಂ ಪ್ರಕಾಶ ಪೂರ್ಣವಾಗಿ, ಕೋಟಿ ರವಿ ಪ್ರಭೆಯಿಂದಲೂ ಕೋಟ್ಯನು ಕೋಟಿ ಶರಶ್ಚಂದ್ರರ ಶುಭ್ರಜ್ಯೋತ್ಸ್ನಾ ಸ್ನಿಗ್ಧ ಶೀತಲ ಪ್ರಸನ್ನತೆಯಿಂದಲೂ ಕುಂಡಲಿನೀ ತೇಜಃಪುಂಜವಾಗಿ ಪ್ರಕಾಶಿಸುತ್ತದೆ. ತಪ್ತ ಕಾಂಚನದಂತೆ ಹೊಳೆಯುತ್ತಿರುತ್ತದೆ. ಹದಿನಾರು ಬಣ್ಣದ ಅಪರಂಜಿಯಂತೆ ಮಿನುಗುತ್ತಿರುತ್ತದೆ." ಈ ಕುಂಡಲಿನೀ ಶಕ್ತಿಯನ್ನೇ ಕವಿಯು ಇಲ್ಲಿ 'ಸೊಡರು' ಎಂದು ಕರೆದಿರುವುದು. 'ಮೇಲೆತ್ತಿ ನೂಕುತ' ಎಂಬ ಮಾತು ಕುಂಡಲಿನಿಯನ್ನು ಎಚ್ಚರಿಸಿ ಊರ್ಧ್ವ ಮುಖಿಯನ್ನಾಗಿ ಮಾಡಿ ಷಟ್ಚಕ್ರಗಳನ್ನು ಕ್ರಮವಾಗಿ ತಾಕುತ್ತಾ ಸಹಸ್ರಾರಕ್ಕೆ ಎತ್ತುವುದನ್ನು ಸೂಚಿಸುತ್ತದೆ. ಕುಂಡಲಿನಿಯು ಸಹಸ್ರಾರ ಕಮಲದಲ್ಲಿಯ ಶಿವನೊಡನೆ ಒಂದಾದಾಗ ಬಹಿರ್ಲೋಕದ ಎಚ್ಚರ ತಪ್ಪಿಹೋಗುತ್ತದೆ. ಇದೇ ಸಮಾಧಿ ಸ್ಥಿತಿ!

ಮಧುವು ಜೀವರಸವಾಹಿನಿ. ಜೀವನಕ್ಕೆ ಅದು ಮುಖ್ಯವಾದದ್ದು. ಶಾಕ್ತೇಯ ತಾಂತ್ರಿಕ ಸಿದ್ಧಾಂತಗಳ ಪಂಚ ಮಕಾರಗಳಲ್ಲಿ 'ಮಧುವಿಗೆ' ಪ್ರಥಮ ಸ್ಥಾನವಿದೆ. ಮಧುಚಷಕವನ್ನೂ ಸ್ತ್ರೀಯನ್ನೂ ಶಿವ-ಶಕ್ತಿಗಳೆಂದು ಕಾಣಬೇಕೆಂದು ತಂತ್ರ ಶಾಸ್ತ್ರವು ಶಾಸಿಸುತ್ತದೆ. ಮಧುಪಾನಕ್ಕೆ ಮೂರು ಬಗೆಯಾಗಿ ಅರ್ಥವಿದೆ. ಮಧುವನ್ನು ಎತ್ತಿಕುಡಿಯುವುದೆಂದು ಸ್ಥೂಲಾರ್ಥವು; ಕುಂಡಲಿನೀ ಶಕ್ತಿಯು ಸಹಸ್ರಾರದಲ್ಲಿ ಸೇರಿದಾಗ ಸಹಸ್ರಾರ ಕಮಲದಿಂದ ಸುರಿಯುವ ಅಮೃತ ಸ್ವಾದನೆ ಮಾಡುವುದೆಂದು ಸೂಕ್ಷ್ಮಾರ್ಥವು; ಶಿವಶಕ್ತಿಗಳ ಸಾಕ್ಷಾತ್ಕಾರದಿಂದೊದಗುವ ಆನಂದಾಮೃತವನ್ನು ಸೇವಿಸುವುದೆಂದು ಕಾರಣಾರ್ಥವು. ಕುಂಡಲಿನೀ ಶಕ್ತಿಯು ಸಹಸ್ರಾರ ಕಮಲದಲ್ಲಿಯ ಶಿವನೊಡನೆ ಸಂಯೋಜನೆಗೊಂಡಾಗ ಅಮೃತ ಸುರಿಯುವುದೆಂದೂ ಆ ಅಮೃತವನ್ನು ಕುಡಿಯುವುದೇ ಮಧುಪಾನವೆಂದೂ ಕುಲಾರ್ಣವ ತಂತ್ರವು ಹೇಳುತ್ತಿದೆ. ಮಧುಪಾನದಿಂದ ಮೃತ್ಯುವನ್ನೂ ಉತ್ತರಿಸಬಹುದು.

ಮಧುಬೇಕು, ಮಧುಬೇಕು ಎಂದು ಮನಸ್ಸು ದಡದಡನೆ ಮಿಡಿಯುವಾಗ, ಆ ಮಿಡಿತವನ್ನು ಹಿಡಿಯುವವರಾರು? ಅಂಜಿಕೆ, ಅಳುಕಿನ ಹಿಡಿತಕ್ಕೆ ಅದು ಸಿಕ್ಕೀತೆ? ಮಧುವಿನ ಬಯಕೆಯೇ ಉಂಟಾಗದಾಗ ಮಧು ಚಷಕವನ್ನು ತುಟಿಗೆ ಹಿಡಿದರೂ ಅದನ್ನು ಕುಡಿದು ರುಚಿ ನೋಡಲಾದೀತೇ? ಒಳಗಿನಿಂದ ಪ್ರಾರಂಭವಾಗಬೇಕು ಆ ಬಯಕೆ; ಮಧುವಿನ ಮಹಾಬಯಕೆ ಒಂದಿಲ್ಲೊಂದು ದಿನ ಉಂಟಾಗಲೇಬೇಕು; ಉಂಟಾಗುತ್ತದೆ; ಅದು ನೈಜವಾದದ್ದು. ಹಾಗೆ ಬಯಕೆ ಮಾಡಿದಾಗ ಮಧು ಮಧುವೆಂದು ಮುಖ ತಿರುಹಿ ಹುಡುಕಿದರೆ ಅದು ಹೊರಗೆಲ್ಲಿಯೂ ಸಿಗಲಾರದು. ಮನದ ಬಯಕೆಯ ಮಂದ್ಮಾದ ಮಧುವು ಹೊರಗೆಲ್ಲಿ ದೊರೆಯುತ್ತದೆ. ದೊರೆಯುಲಿಲ್ಲವಲ್ಲಾ ಎಂದು ಮೊಗಬಾಡಿ ಒಳಗೆ ಉಕ್ಕುವ ಬಯಕೆಯನ್ನು ಒತ್ತಿ ಹಿಡಿದು ನಿಂತಿರುವವನಿಗೆ ಕವಿಯು ಮಧುವು ದೊರೆಯುವ 'ಮಾರ್ಕೆಟ್' ತೋರುತ್ತಾನೆ:

"ಚೆಲುವ ಚೆಂದುಟಿ ತುಟಿಯು ಕೂಡಿಸಿ ।
ನಿಲದಲೊಯ್ಯನೆ ನಿನ್ನಳಿಪು ವಿಂಗೆ ।
ಒಲಿದು ಅಮೃತವನೀಂಟಿ ಮರೆಯಲಿ ಸಕಲ ಲೋಕಗಳ"

ಮಾತಿನಲ್ಲಿ ಮಧುವಿಲ್ಲ. ಅದು ದೊರೆಯುವದು ಮೌನದಲ್ಲಿ.

*"ಮೌನದಲ್ಲಿ ಮಧುವುಂಟು,
ಮಾತಿನಲಿ ಮತಿಯುಂಟು ;"

ಮಧುರಸೋಪಾಸಕನು ಮೌನಿಯಾಗಬೇಕೆಂಬ ಮಹಾ ತತ್ತ್ವವನ್ನು ಇಲ್ಲಿ ನಿರೂಪಿಸಿದ್ದಾನೆ ಕವಿ. 'ಅದರೋಳ್ಬೆರೆತೆಯಾದಡೆ–ನಿನ್ನನೀ ಮರೆಯುವಿ ಪರಮ ನಿಶ್ಚಯವು' ಎಂದು ಮೈಕವನ್ನು–ಮಧುಪಾನದಿಂದಾಗುವ ಮೈಕವನ್ನು–ವರ್ಣಿಸುತ್ತಾನೆ.

ಕಡೆಯ ಇಳಿನೆಯ ಪದ್ಯಕ್ಕೆ ಇನ್ನೊಂದು ಬಗೆಯಾದ ಅರ್ಥವಿದೆ. ಮಧುಪದ ಗುರಿ ಕಮಲಕ್ಕೆ ಹೋಗಿ ಅವರ ಹೊಂಗಳಿಸಿದ ಮಧುವನ್ನು ಸೇವಿಸುವುದು. ಹಾಗೆಯೇ ಯಾತ್ರಿಕರ ಗುರಿ ಊರು ಸೇರುವುದು. ಅದುವೇ ಮುಕ್ತಿ. ಸ್ವರ್ಗದಲ್ಲಿ 'ಸೀಟು' ಸಂಪಾದಿಸುವುದೇ ಯಾತ್ರೆಯ ಗುರಿಯಲ್ಲ. ಯಾವ ಅನಂತಾನಂತ ಅಮರ ಜ್ಯೋತಿಯಿಂದ ಸಿಡಿದೊಗೆದ ಕಿಡಿಗಳಿಂದ ನಾವು ಮರಳಿ ಆ ಅಖಂಡ ಜ್ಯೋತಿಯಲ್ಲಿ ಐಕ್ಯವಾಗುವುದೇ ನಮ್ಮ ಯಾತ್ರೆಯ ಗುರಿ. ಜೀವನು ಶಿವನೊಡನೆ ಒಂದಾದಾಗ ಅಲ್ಲಿ ಏನೂ ಇಲ್ಲ. ಯಾತ್ರೆಯಿಲ್ಲ ; ಯಾತ್ರಿಕರೂ ಇಲ್ಲ. ಈ ಅದ್ವೈತಾನಂದವನ್ನು ಇಳಿನೆಯ ಪದ್ಯ ಸೂಕ್ಷ್ಮವಾಗಿ ತೋರಿಸುತ್ತದೆ.

ಕವಿ, ಓದುಗರಲ್ಲಿ ಸಹೃದಯಬೇಕು. ಸಹೃದಯವೆಂದರೆ ಸಮಾನಹೃದಯವೆಂದರ್ಥ. ಕವಿಯ ಹೃದಯದೊಡಿಗೆ ಒಂದಾಗಿ ಬೆರೆಯುವವನು ಮಾತ್ರ ಅವನ ಕಾವ್ಯದ ಒಳತಿರುಳನ್ನು ಮುಟ್ಟಬಲ್ಲ. ಇತರರಿಗೆ ಅದು ದುಸ್ಸಾಧ್ಯವಾದದ್ದು. ಯಾತ್ರಿಕನ ಕವನಗಳು ಕಬ್ಬಿಣ ಪೆಟ್ಟಿಗೆಯಲ್ಲಿ ನವರತ್ನ ಭೂಷಿತ ಭೂಷಣಗಳನ್ನಿಟ್ಟು ಬೀಗಹಾಕಿದಂತೆ ಇದ್ದಾವೆ. ಪೆಟ್ಟಿಗೆಯನ್ನು ತೆರೆಯುವ ಬೀಗದ ಕೈ ಉಳ್ಳವರಿಗೆ ಮಾತ್ರ ಒಳಗಿನ ಬೆಲೆ ಬಾಳುವ ವಸ್ತುಗಳು ಸಿಗಬಹುದು !

ಇಂತಹ ಸಾವಿರ ವಿಮರ್ಶೆಗಳನ್ನು ಓದುವುದಕ್ಕಿಂತಲೂ ಶ್ರೀಮಾನ್ ಗೌಡರಿಂದ ಒಂದು ಸಲ ಯಾತ್ರಿಕನನ್ನು ಓದಿಸಿ ಕೇಳಿದರೆ ಸಾಕು. ಒಂದು ದೃಷ್ಟಿಯಿಂದ ಗಮಕಿಯೂ ಒಬ್ಬ ವಿಮರ್ಶಕನೇ ! ಶ್ರೀ ಗೌಡರು ಬರಿಯ ಗಮಕಿಗಳಲ್ಲ. ಗಮಕಿಗಳಾದವರು ನಮ್ಮ ನಾಡಿನಲ್ಲಿ ಅನೇಕರಿದ್ದಾರೆ. ಶ್ರೀ ಗೌಡರು ಗಮಕದ ಸಾಕ್ಷಾತ್ ಮೈದಳ ! 'ಕನ್ನಡ ಯಾತ್ರಿಕ'ನು ಕನ್ನಡದ ಕೀರ್ತಿ ಧ್ವಜವಾಗಿ ನಾಡನ್ನೆಲ್ಲಾ ಸುತ್ತಿ ಬರಲಿ ಎಂದು ಹಾರೈಸುತ್ತೇನೆ. ★

---

* ಪಾಂಡೇಶ್ವರ ಗಣಪತಿರಾಯರ 'ಚೆಂಗಲವೆ'ಯಿಂದ.

ನಂದೇ ನಾನೋದಿದೆ

ಡಾ॥ ಹಾ. ಮಾ. ನಾಯಕ

ಆತ್ಮಕಥೆಯ ಪ್ರಕಾರ ಕನ್ನಡದಲ್ಲಿ ಸಾಕಷ್ಟು ಬೆಳೆದಿಲ್ಲ. ಬರೆದಿರುವ ಅಥವಾ ಬರೆಸಿರ್ಯವ ಕೆಲವರಾದರೂ ಮುಖ್ಯವಾಗಿ ಲೇಖಕರು, ಕಲಾವಿದರು. ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರು ನಮ್ಮಲ್ಲಿ ಅನೇಕರು ಇದ್ದಾರೆ; ಆಗಿಹೋಗಿದ್ದಾರೆ. ಆದರೆ ಅವರಲ್ಲಿ ಬೆರಳೆಣಿಕೆಗೂ ನಿಲುಕದಷ್ಟು ಜನ ಮಾತ್ರ ತಮ್ಮ ಸ್ವಂತ ಜೀವನವನ್ನು ಕುರಿತು ಬರೆದಿದ್ದಾರೆ. ಜೀವನದ ನಾನಾ ಕ್ಷೇತ್ರಗಳ ಅನುಭವಗಳು ಬಂದಾಗಲೇ ಆತ್ಮಕಥೆಯ ಪ್ರಕಾರ ಶ್ರೀಮಂತವಾಗುತ್ತದೆ. ಈ ದೃಷ್ಟಿಯಲ್ಲಿ ಜೋಳದರಾಶಿ ದೊಡ್ಡನಗೌಡರ ಆತ್ಮಕಥೆ 'ನಂದೇ ನಾನೋದಿದೆ' ನಮ್ಮ ಗಮನ ಸೆಳೆಯುತ್ತದೆ. ತಮ್ಮ ಕಥೆಯನ್ನು ಹೇಳಿಕೊಳ್ಳಲು ಪ್ರತಿಯೊಂದು ಜೀವನಕ್ಕೂ ಅವಕಾಶವಿರುತ್ತದೆ. ಆದರೆ ಆ ಜೀವನದಲ್ಲಿ ಹೇಳಿಕೊಳ್ಳಬಹುದಾದ ಕಥೆ

ನಂದೇ ನಾನೋದಿದೆ; ಜೋಳದರಾಶಿ ದೊಡ್ಡನಗೌಡ; ಶ್ರೀ ರಾಮೇಶ ಪ್ರಕಾಶನ ಮಂದಿರ, ಜೋಳದರಾಶಿ, ಬಳ್ಳಾರಿ ಜಿಲ್ಲೆ; ೧೯೭೯. ಡೆಮಿ ೨೪+೩೧೨ ಪುಟಗಳು; ಚಿತ್ರಪುಟ ೩೨ ಬೆಲೆ ರೂ. ೨೫

ಇರಬೇಕು. ಇಲ್ಲದಿದ್ದರೆ ಇಲ್ಲದ ಕಥೆಯನ್ನು ಹೇಳಿಕೊಳ್ಳುವ ಚಾಕುಚಕ್ಯತೆಯಾದರೂ ಇರಬೇಕಾಗುತ್ತದೆ !

ಜೋಳದರಾಶಿಯವರ ಜೀವನ ಕಥೆಯನ್ನು ನಾನು ಅತ್ಯುತ್ತಮ ಕೊಡುಗೆಯೆಂದೇನೂ ಭಾವಿಸುವುದಿಲ್ಲ. ಆದರೆ ಕೆಲವಾದರೂ ಗಮನಾರ್ಹ ಅಂಶಗಳಿಂದ ಅದು ಕುತೂಹಲವನ್ನು ಸೆಳೆಯುತ್ತದೆ. ದೊಡ್ಡನಗೌಡರು ಹಳ್ಳಿಯ ಸಾಮಾನ್ಯ ರೈತ ಕುಟುಂಬಕ್ಕೆ ಸೇರಿದವರು; ಹಳ್ಳಿಯಲ್ಲಿಯೇ ಜೀವಮಾನವಿಡೀ ಉಳಿದು ತಮ್ಮ ಕಾಯಕದಲ್ಲಿ ತೃಪ್ತಿ ಪಡೆದವರು: ಶ್ರೀಮಂತಿಕೆಯನ್ನೂ ಬಡತನವನ್ನೂ ಸಮಸಮನಾಗಿ ಕಂಡು ಉಂಡವರು. ಅವರ ಕಲಾಕ್ಷೇತ್ರ ಗಮಕ; ತಮ್ಮ ವಾಚನದಿಂದ ಅವರು ಸಾವಿರಾರು ಕೇಳುಗರ ಆನಂದವನ್ನು ಉಕ್ಕಿಸಿದ್ದಾರೆ; ಸಾಹಿತ್ಯ ಕ್ಷೇತ್ರದಲ್ಲಿಯೂ ಕೈಯಾಡಿಸಿ ಕವಿತೆಗಳಲ್ಲೂ ವಚನಗಳಲ್ಲೂ ತಮ್ಮನ್ನು ತೋಡಿಕೊಂಡಿದ್ದಾರೆ; ಹಳ್ಳಿಯ ಸಾಮಾನ್ಯ ಜನರಂತೆಯೇ ಅವರಿಗೆ ಬಹು ಕ್ಷೇತ್ರಗಳ ದೊಡ್ಡ ದೊಡ್ಡ ಜನರ ಸಂಪರ್ಕವೂ ಲಭಿಸಿದೆ; ಅವರೊಬ್ಬ ನಟರೂ ಹೌದು; ರಂಗದ ಮೇಲಿನ ಅವರ ಅನುಭವಗಳೂ ಸಾಕಷ್ಟು ವ್ಯಾಪಕವಾದವು; ಬಳ್ಳಾರಿ ಜಿಲ್ಲೆಯವರಾದ ಅವರು ತೆಲುಗು ಜನರ ಪ್ರೀತ್ಯಾದರಗಳಿಗೂ ಪಾತ್ರರಾಗಿದ್ದಾರೆ–ಹೀಗೆ ದೊಡ್ಡನಗೌಡರ ಬದುಕಿನ ಹಾಸು ವಿಸ್ತಾರವಾದದ್ದು. ಅದರಲ್ಲಿ ಬಣ್ಣದ ಎಳೆಗಳೂ ಸೇರಿವೆ. 'ಸಂದೇ ನಾನೋದಿದೆ'–ಮುಗ್ಧ ಜೀವನದ ಮುಗ್ಧನಿರೂಪಣೆ. ಈ ಮುಗ್ಧತೆಯೇ ಕೃತಿಯ ಹೆಚ್ಚಿನ ಆಕರ್ಷಣೆ.

ಜೀವನವು ಲೋಕಾನುಭವಗಳ ಒಂದು ಸಂಪುಟ ಎನ್ನುವ ದೊಡ್ಡನಗೌಡರಿಗೆ "ತನ್ನನ್ನು ತಾನು ಕಂಡುಕೊಳ್ಳುವುದೇ" ಈ ಅನುಭವಗಳ ಅಂತಿಮ ಮಜಲು. ಯಾಕೆ ಹೀಗೆ ಬರೆಯಬೇಕಾಗಿತ್ತು. ?' ಇದರ ಪ್ರಯೋಜನವೇನು ? ಎಂಬ ಪ್ರಶ್ನೆಗಳನ್ನು ಇತರರು ಕೇಳುವುದಕ್ಕಿಂತ ಮುಂಚೆ ಅವರೇ ಕೇಳಿಕೊಂಡಿದ್ದಾರೆ. ಈ ಪ್ರಶ್ನೆಗಳಿಗೆ ಉತ್ತರ ಇದು:

"ಒಬ್ಬ ಚಿತ್ರಕಾರ, ಒಬ್ಬ ಶಿಲ್ಪಿ ತಮ್ಮಲ್ಲಿ ಮೂಡಿಸಿಕೊಂಡ ಚಿತ್ರಗಳು ಅಲ್ಲಿಯೇ ಇರುವಂತಾದರೆ ಅವರು ವೇದನೆಗೆ ಈಡಾಗಿ ಭ್ರಮಿಷ್ಟರಾಗುವರು. ಹಾಗು ತಮ್ಮ ನಿರ್ಮಾಣ ಚಿತ್ರಗಳು, ವಿವಿಧ ಭಾವ ಸ್ಪಂದನಗಳಿಗೆ ಸಿಕ್ಕು, ಯಾವ ನಿರ್ಣಯದ ಆಕಾರವಾಗಿಯು ಉಳಿಯುವುದಿಲ್ಲ. ಅವು ಹೊರಬಂದು ಮೂಡಿದಾಗಲೇ, ಆಕಾರಗಳಿಗೊಂದು ವಿಶಿಷ್ಟತೆಯುಟಾಗುವುದು; ಕವಿ ಸಾಹಿತಿ, ಗಾಯಕ. ನಟರಾದರೂ ಈ ಸಾಲಿಗೆ ಸೇರುವವರು. ಕೊನೆಗೆ ಆತ್ಮಜ್ಞಾನಿಯು, ತನ್ನ ಹೃದಯಾಂತರದ ಮಹಾ ತತ್ವವನ್ನು ಹೊರಗೆ ನೋಡಬೇಕೆಂಬ ಅಭಿಲಾಶೆಯಿಂದ ದೂರಾಗಲಾರ. ಲೋಕ ಪ್ರವೃತ್ತಿಯ ಜೀವನವೇ ಹೀಗಿರುವಾಗ, ತನ್ನದನ್ನು

ತಾನು ಬರೆದು ಓದಿಕೊಳ್ಳುವ ಲವಲವಿಕೆಯು, ಸಹಜವಾಗಿ ಮೂಡಿದರೆ, ಅದೇನೂ ಅವನ ತಪ್ಪಾಗುವುದಿಲ್ಲ."

"ಆತ್ಮ ಚರಿತ್ರೆಗಳಲ್ಲಿ ಅಂತರಂಗಿಕ ವಾಸ್ತವಾಂಶಗಳ ವಿಶ್ಲೇಷಣೆಗಳನ್ನು ಬರೆಯ ಬಲ್ಲರೆ ?" ಎಂಬ ಪ್ರಶ್ನೆಯನ್ನೂ ಗೌಡರು ಕೇಳುತ್ತಾರೆ. ಆತ್ಮಚರಿತ್ರೆಕಾರ ಎಷ್ಟರ ಮಟ್ಟಿಗೆ ಸತ್ಯದ ನಿರೂಪಣೆ ಮಾಡುತ್ತಾನೆ ಎನ್ನುವುದು ಇಲ್ಲಿನ ಸಂಶಯ. ಗಂಡು ಹೆಣ್ಣಿನ ಸಂಬಂಧಗಳನ್ನು ಕುರಿತಂತೆ, ಸೋಲು ಗೆಲುವುಗಳನ್ನು ಕುರಿತಂತೆ, ಮೇಲ್ಮೆ ಕೀಳ್ಮೆಗಳಿಗೆ ಸಂಬಂಧಿಸಿದಂತೆ ಆತ್ಮಕಥೆಗಳಲ್ಲಿ ಈ ಸಂಶಯ ಪ್ರಬಲವಾಗುತ್ತದೆ. ಇದನ್ನು ಗೌಡರು ಬಲ್ಲರು. "ಮನುಷ್ಯನ ರಹಸ್ಯ ಕಾರ್ಯಗಳು ತನಗೆ ಒಗ್ಗಿದಂತೆ ಅಂತವು ಗಳನ್ನೇ ಮಾಡುವ ಇನ್ನೊಬ್ಬನಿಗೆ ಬಹಿರಂಗದ ಸಹ್ಯವಾಗಿರಲಾರದು" ಎಂದು ಅವರು ಹೇಳುತ್ತಾರೆ. ಮುಖ್ಯವಾದ ಪ್ರಶ್ನೆ ಎಂದರೆ ಬೇರೆಯವರಿಗೆ ಸಹ್ಯವಾಗುತ್ತದೆಯೇ ಎಂಬುದಲ್ಲ; ಆತ್ಮಕಥನಕಾರನಿಗೆ ಅದನ್ನು ಬಹಿರಂಗ ಪಡಿಸುವ ಧೈರ್ಯ, ಪ್ರಾಮಾಣಿಕತೆ ಇರುತ್ತದೆಯೇ ಎನ್ನುವುದು. ಗೌಡರು ಹೇಳುತ್ತಾರೆ; "ಈ ಎಲ್ಲಾ ವಿಷಯಗಳ ಚರ್ಚೆ ಎಂತೇ ಇರಲಿ, ನನ್ನ ಅಂತರಿಕ ವಿಚಾರ ಪ್ರಸ್ತಾಪನೆಗೆ ಅಡ್ಡವಾಗಿ ನಿಲ್ಲುವ ಈ ತೆರೆಗಳನ್ನು ಕೊಂಚ ಓಸರಿಸಿ ಆಂತರಂಗಿಕ ದೃಶ್ಯಗಳನ್ನು ಸ್ಥೂಲವಾಗಿ ಸಹೃದಯ ವಾಚಕರ ಮುಂದೆ ತೋರಲು ಯತ್ನಿಸುವೆ."

ಗೌಡರ ಬರಹದ ರೀತಿಗೆ ಮಾದರಿ ಎನ್ನಿಸಬಹುದಾದ, ತಮ್ಮ ಜೀವನದ ನಿಜಚಿತ್ರವನ್ನು ಅವರು ಹೇಗೆ ಕೊಡಬಲ್ಲರೆಂಬುದನ್ನು ತೋರಿಸಬಹುದಾದ ಒಂದು ಪ್ರಸಂಗ ಇದು;

"ಆಗ ಯೌವ್ವನೋದಯ ದೈಹಿಕಾಕಾಂಕ್ಷೆಗಳ ಉದ್ವೇಗ, ವಿವೇಕ ಅನುಭವ ಗಳಿಲ್ಲದ ಬುದ್ಧಿ, ಹೆಣ್ಣಿನ ಸುಖಕ್ಕಾಗಿ ಹಂಬಲಿಸುವ ಚಾಂಚಲ್ಯಮನ, ನಾಟಕಕ್ಕೆ ಅವಶ್ಯಕವಾಗಿ ಬೇಕಾದ ಹೆಣ್ಣು ದೊರೆಯಿತು. ನಾಟಕದ ಶೃಂಗಾರಮಯ ಸನ್ನಿವೇಶವು ನನ್ನನ್ನು ಕೆಣಕಿತು–ಆ ಹೆಣ್ಣಿಗೂ ಅಂತೆಯಾಯಿತು–ಪರಸ್ಪರ ಆಕರ್ಷಣೆ ಯಲ್ಲಿ ಆ ವಾಸ್ತವಿಕ ನಾಟಕೀಯ ದೃಶ್ಯ ಶೃಂಗಾರಾಭಿನಯವು ವಾಸ್ತವಿಕತೆಯಲ್ಲಿ ಪರಿಣಾಮಗೊಂಡಿತು. ಕೆಲದಿನ ಅಂಜಿಕೆ ಅನುಮಾನಗಳೊಂದಿಗೆ ನಮ್ಮ ಪ್ರಣಯ ವ್ಯಾಪಾರವು ನಾಟಕ ಕಲಾ ವ್ಯಾಸಂಗದಲ್ಲಿ ಅನಿವಾರ್ಯವೆನಿಸಿ ಮುಂದುವರಿಯು ವಂತಾಯಿತು. ಇದರಿಂದ ನನ್ನ ದೈಹಿಕ ದಾಹ ತಣಿಯುತ್ತಿದ್ದರೂ ಮನೆಯ ಮೊದಲನೇ ಕುಟುಂಬದ ಕೊರಗು ಮನವನ್ನು ಕೊರೆಯುತ್ತಿತ್ತು. ಆದರೂ ಅದನ್ನು ಪ್ರಧಾನವೆಂದೆಣಿಸುವ ವಿವೇಕವಿರಲಿಲ್ಲ."

ದೊಡ್ಡನಗೌಡರು ಪಾಲು ಪಡೆದ ಕಲಾಕ್ಷೇತ್ರಗಳು ಹಲವು; ಸ್ನೇಹ ಬೆಳೆಸಿದ ವ್ಯಕ್ತಿಗಳು ಅನೇಕರು. ಇದೆಲ್ಲದರ ಉಲ್ಲೇಖ ಈ ಜೀವನ ಕಥೆಯಲ್ಲಿ ಬರುತ್ತದೆ. ಆದರೆ ಕಲಾವಿದರಾದ ಗೌಡರು ತಮ್ಮ ಸೃಷ್ಟಿಯ ಅನುಭವಗಳನ್ನು ಮಾತ್ರ ಎಲ್ಲೂ

ಪರಿಣಾಮಕಾರಿಯಾಗಿ ಹೇಳುವುದಿಲ್ಲ. ಅಂತರಂಗ ಬಹಿರಂಗಗಳ ವ್ಯತ್ಯಾಸಗಳನ್ನು ತುಂಬ ಚೆನ್ನಾಗಿ ಬಲ್ಲ ಅವರು ಈ ದೀರ್ಘಕತೆಯಲ್ಲಿ ಬಹಿರಂಗಕ್ಕೆ ಕೊಟ್ಟ ಮಹತ್ವವೇ ಹೆಚ್ಚು. ದೇವರ ಕೃಪೆಯಲ್ಲಿ ಅಚಲ ವಿಶ್ವಾಸವನ್ನು ಇಟ್ಟಿರುವ ಅವರಿಗೆ ತಮ್ಮ ಸಾಧನೆಯ ವೈಶಿಷ್ಟ್ಯಗಳು ಕಾಣಿಸುವುದೇ ಇಲ್ಲ. ಬಹುಮುಖದ ಬದುಕಿನ ಈ ಕಥೆಯಲ್ಲಿ ಇದು ಎದ್ದು ಕಾಣುವ ಕೊರತೆ.

ಜೋಳದರಾಶಿಯವರ ಬರವಣಿಗೆ ಅನೇಕ ಸ್ಖಾಲಿತ್ಯಗಳಿಂದ–ಮುದ್ರಣ ದೋಷಗಳೂ ಕೂಡಿದಂತೆ–ತುಂಬಿದ್ದು, ಅದರಲ್ಲಿ ಯಾವುದೇ ಕೃತಕ ಅಲಂಕಾರ ಕಾಣಿಸುವುದಿಲ್ಲ. ಹಳ್ಳಿಯ ರೈತನೊಬ್ಬ ತನ್ನ ಜೀವನವನ್ನು ಎಷ್ಟು ಸಹಜವಾಗಿ ಹೇಳಿಕೊಳ್ಳುವುದು ಸಾಧ್ಯವೋ ಅಷ್ಟೇ ಸಹಜತೆ ಇಲ್ಲಿದೆ. ಅವರು ಎಷ್ಟು ಸುಲಭವಾಗಿ ಪರಿಣಾಮಕಾರಿಯಾಗಿ ಬರೆಯಬಲ್ಲರೆಂಬುದಕ್ಕೆ ಪುಸ್ತಕದುದ್ದಕ್ಕೂ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ. ಪ್ರೊಫೆಸರ್ ಬಸವನಾಳರು ತೀರಿಹೋದುದನ್ನು ಕುರಿತು ಬರೆಯುವಾಗ ದೊಡ್ಡನಗೌಡರು ಹೀಗೆ ಹೇಳುತ್ತಾರೆ ; "ಯಾವುದೋ ಮಹತ್ತರ ಕಾರ್ಯ ಸಾಧನೆಗಾಗಿ ಬಂದು ಹೋಗುವ ಇಂತಹ ಶರಣರು ತಮ್ಮ ಕಾರ್ಯ ಮುಗಿದ ಕೂಡಲೆ ಯಾವ ಮೋಹಕ್ಕೂ ಒಳಗಾಗದೆ, ಯಾರಿಗೂ ಹೇಳದೆ ಎಲ್ಲಿಗೋ ಒಂದು ದಿನ ಮರೆಯಾಗಿ ಹೋಗುತ್ತಾರೆ." ತಮ್ಮ ಗೌಡತಿ ತೀರಿಹೋದ ಮರುದಿನವನ್ನು ಅವರು ವರ್ಣಿಸುವುದು ಹೀಗೆ; "ಮರುದಿನ ಉದಯ, ದಿನದಂತೆ ಉದಯ. ನನ್ನ ದುಃಖೋದಯದೊಂದಿಗೆ ಇಂದಿನುದಯ; ನನ್ನ ಭಾಗ್ಯದೈಸಿರಿಯನ್ನು ಮಣ್ಣಲ್ಲಿ ಮರೆಮಾಡುವ ಉದಯ." ಬಡತನಕ್ಕೆ ಪಕ್ಕಾದ ತಮ್ಮ ಜೀವನವನ್ನು ಒಂದು ಕಡೆ ಹೀಗೆ ವರ್ಣಿಸುತ್ತಾರೆ; "ತಾತನ ಕಾಲದಿಂದ, ತೂತಿನ ಗಡಿಗೆಯಲ್ಲಿ ನೀರು ತುಂಬುವ ಸಾಹಸ ನಡೆದು ಬಂದಿತ್ತು. ಅವರು ಜೀವಮಾನವೆಲ್ಲ ನೀರು ಹೊತ್ತು, ಬರಿದಾದ ಗಡಿಗೆಯನ್ನು ಇದ್ದವರಿಗೆ ಬಿಟ್ಟು ಹೋಗುತ್ತಿದ್ದರು. ಒಬ್ಬೊಬ್ಬರ ಕಾಲದಲ್ಲಿ ಒಂದೊಂದು ತೂತುಗಳಾಗಿ ನನ್ನ ಕಾಲಕ್ಕೆ ಬರೇ ತೂತಿನ ಗಡಿಗೆಯಾಗಿತ್ತು. ಈ ಗಡಿಗೆಯನ್ನು ತುಂಬುವ ಶಕ್ತಿ–ಸಾಮರ್ಥ್ಯಗಳು ನನ್ನಲ್ಲಿರಲಿಲ್ಲ. ನನ್ನ ದೈವವೇ ಸಾಕಷ್ಟು ನೀರುಹೊತ್ತಿತ್ತು. ಈಗ ಆ ದೈವವು ಬೇಸತ್ತು ಹೋಗಿತ್ತು." ಚುನಾವಣೆ–ರಾಜಕಾರಣದ ಬಗೆಗೆ ಗೌಡರು ಹೇಳುವುದು; "ಇಂದಿನ ಯಾವುದೇ ಉದ್ಯಮದಲ್ಲಿ ತನ್ನ ಬಂಡವಾಳವನ್ನು ತೊಡಗಿಸುವಲ್ಲಿ ಸಾಕಷ್ಟು ವಿಚಾರ ಮಾಡಬೇಕಾಗುತ್ತದೆ. ಆದರೆ ಚುನಾವಣೆಗೆ ತೊಡುಗುವವರು....ಲಾಭದಾಯಕ ಉದ್ಯಮವೆಂದೇ ಬಗೆಯುವ ರೂಢಿಯು ನಮ್ಮ ದೇಶದಲ್ಲಿ ಬಲಗೊಂಡಿದೆ. ಇತರ ಉದ್ಯಮಗಳಿಗೆ ಸಾಕಷ್ಟು ಓದು ಬರಹಗಳು, ಆಯಾ ಉದ್ಯಮಗಳಿಗೆ ತಕ್ಕಷ್ಟು ಕುಶಲತೆಗಳು ಅವಶ್ಯವಾಗಿ ಬೇಕಾಗುವಂತೆ, ಈ ಚುನಾವಣೆಯ ರಾಜಕೀಯೋದ್ಯಮಕ್ಕೆ, ಇವಾವು ಗಣ್ಯವೆನಿಸದೆ ಹಣದ ಬಲವೊಂದಿದ್ದರೆ ಸಾಕು."

ಕನ್ನಡ ರಂಗಭೂಮಿಯ ಮಹಾ ಹೆಸರುಗಳಲ್ಲಿ ಒಬ್ಬರಾದ ಬಳ್ಳಾರಿ ರಾಘವರ ಜೊತೆಯವರಾಗಿದ್ದ ದೊಡ್ಡನಗೌಡರು ಆ ಕಾಲದ ರಂಗಭೂಮಿಯ ಚಿತ್ರವನ್ನು, ಪುಸ್ತಕದ ಮೊದಲ ಭಾಗದಲ್ಲಿ, ಸಾಕಷ್ಟು ವಿವರವಾಗಿ ಕೊಟ್ಟಿದ್ದಾರೆ. ನಾಟಕ ಕಲೆಯ ಪುನರುದ್ಧಾರಕ್ಕೆ ತಾವು ಕೈಗೊಂಡ ಪ್ರಯತ್ನಗಳನ್ನು ನಿರೂಪಿಸಿದ್ದಾರೆ. ತಮ್ಮ ನಾಟಕ ಪರಿಷತ್ತಿನ ಚಟುವಟಿಕೆಗಳನ್ನೂ ಅವುಗಳ ಪ್ರಭಾವವನ್ನೂ ಉಲ್ಲೇಖಿಸಿದ್ದಾರೆ. ಆತ್ಮಕಥೆಯ ಈ ಭಾಗ ನಮ್ಮ ರಂಗಭೂಮಿಯ ಇತಿಹಾಸದಲ್ಲಿ ಆಸಕ್ತರಾದವರಿಗೆಲ್ಲ ಒಂದು ಆಕರವಾಗುತ್ತದೆ. ತಕ್ಕಷ್ಟು ದೀರ್ಘಕಾಲ ಗೌಡರು ನಾಟಕ ಚಳವಳಿಯನ್ನೇ ನಡಸಿದವರಾದುದರಿಂದ ಅವರ ಪ್ರಯೋಗ–ಪ್ರಯತ್ನಗಳಿಗೆ ಮಹತ್ವ ವಿದೆ. ನಾಟಕ ಸಿನಿಮಾ ಆಗಿ ಮಾರ್ಪಡುವುದನ್ನು ಕಣ್ಣಾರೆ ಕಂಡ ಅವರು ಆ ಸ್ಥಿತ್ಯಂತರದ ಚಿತ್ರವನ್ನು ಆಕರ್ಷಕವಾಗಿ ನೀಡಿದ್ದಾರೆ.

'ನಂದೇ ನಾನೋದಿದೆ'–ದೊಡ್ಡನಗೌಡರ ಕಲಾಜೀವನ ಎಂದು ವರ್ಣಿತವಾಗಿದ್ದರೂ ಈ ಕಲೆಯ ಜೀವನದ ಬೆನ್ನಿನಲ್ಲೇ ಅನೇಕ ಅನ್ಯ ವಿಷಯಗಳೂ ತುಂಬಿಕೊಂಡಿವೆ, ಗ್ರಾಮ ಜೀವನದ ಸಮಸ್ಯೆಗಳು, ಸರ್ಕಾರದ ಧೋರಣೆಗಳು, ಬಡತನದ ದುಃಖ ಕುಟುಂಬ ಜೀವನದ ಸುಖ ಸಂತೋಷಗಳು, ಮುಗ್ಧ ಜನತೆಯ ಬದುಕನ್ನು ಕಲಕಿದ ರಾಜಕಾರಣ, ಋತುವಿನಂತೆ ಬಂದು ಹೋಗುವ ಚುನಾವಣೆಗಳು–ಒಂದೆ, ಎರಡೆ? ಸಮಕಾಲೀನ ವಿಚಾರಗಳು ಹಲವಾರು ಇಲ್ಲಿ ನಿರೂಪಿತವಾಗಿವೆ; ಚರ್ಚೆಗೊಂಡಿವೆ. ಹಳ್ಳಿಯವರೇ ಆದ ದೊಡ್ಡನಗೌಡರು ಹಳ್ಳಿಯ ಜೀವನದ ಹಲವು ಮುಖಗಳನ್ನು ಇಲ್ಲಿ ತೋರಿಸುತ್ತಾರೆ. ದುಡಿಮೆಯ ಶ್ರಮ ಸುಖ ಎರಡನ್ನೂ ಬಲ್ಲ ಅವರಿಗೆ ತಮ್ಮ ನೆರೆಯವರ ಬದುಕಿನ ನಿಟ್ಟುಸಿರನ್ನು ಗಮನಿಸುವ ತಾಳ್ಮೆ, ಸಹಾನುಭೂತಿಗಳಿವೆ,

ತಮ್ಮ ಲೌಕಿಕ ಜೀವನದ ಗತಿಯನ್ನು ಗೌಡರು ಹೀಗೆ ವರ್ಣಿಸಿಕೊಂಡಿದ್ದಾರೆ :

"ನನ್ನ ತಂದೆ ಅಭಿವೃದ್ಧಿಗೊಳಿಸಿ ಉಳಿಸಿ ಹೋದ ನಾಲ್ಕು ನೂರು ಎಕರೆ ಕಾಲನ ಆಘಾತಕ್ಕೊಳಗಾಗಿ, ನನ್ನವರಿಗೆ ನಾನು ಕೊಟ್ಟದ್ದು. ಸರಕಾರದ ಕಾಯಿದೆ ಕೊಡಿಸಿದ್ದು ಹೋಗಲಿಕ್ಕಾಗಿ ಉಳಿದ ಈ ನಲವತ್ತೈದು ಎಕರೆಯಲ್ಲಿಯೇ ಬಾಳನ್ನು ಸಾಗಿಸುವ ಬವಣೆ ಬಂತು. ಜಮೀನಿನ ಮೇಲೆ ಕಟ್ಟಿಕೊಂಡು ಬಂದ ದೌಲತ್ತು, ಗೌಡಾಳಿಕೆ. ಗೌರವದ ಹಿರಿತನ, ದಾನಧರ್ಮ, ಪರೋಪಕಾರ, ಯಜಮಾನರ ಸಂಪ್ರದಾಯ, ಇವು ಉಳಿಯುವುದು ಹೇಗೆ? ಇದುವರೆವಿಗೂ ದೊಡ್ಡ ಜಮೀನಿನ ಆದಾಯದಿಂದ ನಡೆಯಿಸಿಕೊಂಡು ಬರುತ್ತಿತ್ತು. ಈಗ ಬರುವ ಕೊಂಚ ಆದಾಯದಲ್ಲಿ ನಾವು ಬದುಕುವುದೇ ಕಷ್ಟವಾದಾಗ ಇನ್ನು ಗೌಡಾಳಿಕೆಯ ಬಡಿವಾರವೆಂತು ಸಾಗುತ್ತೆ ?"

ಭಕ್ತಿ ಅವರ ಜೀವನದ ಸ್ಥಾಯಿ, ಆ ಕುರಿತು ಹೇಳುತ್ತಾರೆ ;

"ಬಸವ ಪುರಾಣಾನಂತರ ಒದಗಿಬಂದ ಈ ಪರಿಸ್ಥಿತಿಯೋ ಪುಣ್ಯ ಕಥನದ ಫಲ ವೇನೋ. ಬಸವ ಪುರಾಣದಲ್ಲಿ ಎಲ್ಲಿಯೂ ಜಮೀನುದಾರರ ಶ್ರೀಮಂತರ ಕಥೆಗಳು ಬರುವುದಿಲ್ಲ. ಶಿವಭಕ್ತಿಯೇ ಬಂಡವಾಳವಾಗಿಯುಳ್ಳ ಎಲ್ಲಾ ಭಕ್ತರ ಕಥೆಗಳು ಜೀವನಕ್ಕೆ ಬೇಕಾದುದು ಜಮೀನೋ ? ಭಕ್ತಿಯೋ ? ಇದರಲ್ಲಿ ಹೆಚ್ಚಾಗಿ ಜೀವನದ ಚರಿತಾರ್ಥಕ್ಕೆ ಬೇಕಾದುದು ಭಕ್ತಿಯೇ. ಉದರ ಪೋಷಣೆಗಾಗುವಷ್ಟು ದುಡಿ ದುಣ್ಣುವ ಕಾಯಕಕ್ಕೆ ಕೊಂಡ ಜಮೀನು. ಇದೇ ಅರ್ಥದಲ್ಲಿ ಬಸವಪುರಾಣದ ಫಲಪ್ರಾಪ್ತಿ ನನಗಾಯಿತು."

ನಾಟಕದ ಕಥೆ ಏನು ಎಂಬುದನ್ನು ತಿಳಿಯುವ ಶಕ್ತಿಯೂ ಇಲ್ಲದ ಆರೇಳು ವರ್ಷದ ಬಾಲಕನಾಗಿ ರಂಗಪ್ರವೇಶ ಮಾಡಿ ಅಕಾಡೆಮಿಯ ಪ್ರಶಸ್ತಿ ಪಡೆಯುವ ಸಾಧನೆ ನಡೆಸಿದ್ದು ದೊಡ್ಡನಗೌಡರ ಕಲಾಜೀವನದ ಹೆಚ್ಚಳ. ಈ ಸಾಧನೆ ವೈಯಕ್ತಿಕ ವಾದದ್ದು ಎಂದು ಅವರು ಭಾವಿಸುವುದಿಲ್ಲ. ಆದ್ದರಿಂದಲೇ ತಮ್ಮ ಓದುಗರಲ್ಲಿ ಅವರು ಬಿನ್ನಹ ಮಾಡಿಕೊಂಡಿದ್ದಾರೆ; "ಇದರಲ್ಲಿ ನನ್ನನ್ನು ಓದುಗರು ನೆನೆಪಿಟ್ಟರೂ ಸರಿ, ಮರೆತರು ಸರಿ, ಆದರೆ ನನ್ನೊಂದಿಗೆ ಬಂದ ಬಾಳನ್ನು ಬೆಳಗಿದ ಮಹನೀಯರನ್ನು ಮರೆಯಬಾರದಾಗಿ ಪ್ರಾರ್ಥಿಸುವೆ.''

ಬರವಣಿಗೆಯ ಚಿಹ್ನೆಗಳಲ್ಲಿ ಪೂರ್ಣವಿರಾಮಕ್ಕೂ ಅರ್ಧವಿರಾಮಕ್ಕೂ ವ್ಯತ್ಯಾಸ ಮಾಡದೆ, ಅವನ್ನು ಧಾರಾಳವಾಗಿ ಎಲ್ಲೆಂದರಲ್ಲಿ ಬಳಸಿರುವುದು ಈ ಪುಸ್ತಕದ ಓದನ್ನು ಕಷ್ಟವಾಗಿಸಿದೆ.

"ಪ್ರಜಾವಾಣಿ" ಕೃಪೆ. ಡಿಸೆಂಬರ್, ೧೯೭೯

ಕವನ ಕುಸುಮಾಂಜಲಿ

ಗಮಕ ಕಲಾ ಕಿಂಪುರುಷ

— ಎನ್. ಎಂ. ಕೆ. ಸೋಗಿ

ರಸ ಋಷಿಯ ದಿವ್ಯತೆಯ ಭವ್ಯತೆಯ ಮೈ ಮಾಟ,
ತಲೆಗೆ ಭೂಷಣವಾದ ಬೆಳ್ಳಿಕೂದಲ ಮುಕುಟ,
ರಾಜ ತೇಜದ ಮುಖದಿ ಅರಳ್ದ ಕಣ್ಗಳ ನೋಟ,
ಕವಿ ಹೃದಯ, ಸವಿಮನಸು, ಶರಣ ತತ್ತ್ವದ ಆತ್ಮ.

ಸಿಂಹನಾದದ ಕಂಠಶ್ರೀಯ ಮಂಜುಳ ಮಿಳಿತ,
ಗಾನವೋ ! ಭಕ್ತಿಯಿಂ ಭೋರ್ಗರೆವ ಜಲಪಾತ !
ಕೋಗಿಲೆಯ ಕಂಠದಲಿ ಮಧುರಗಾನದ ಅಮೃತ,
ಭಾವ ಪರವಶತೆಯುಲಿ ಆನಂದ ರಸಭರಿತ,
ಕೇಳುಗರ ಹೃದಯುಗಳ ಮೀಟುವಂತಹ ಮೊರೆತ ;

ಭಾವವನೆ ಬಿಚ್ಚಿಡುವ ಶರಣ ಶೈಲಿಯ ಕವಿತ ;
ಶರಣರನುಭಾವ ಸಾಹಿತ್ಯ ಸಂಪದ್ಭರಿತ ;
ಭಕ್ತಿರಸಪೂರ್ಣ ಸಂಗೀತದಲಿ ಸಂಭ್ರಮಿತ ;
ಶರಣ ವಚನೋದ್ಧಾರ ಕಾಯಕದಿ ಸಂಪ್ರೀತ ;
ನಾಡಿನುದ್ದಗಲಕೂ ವಿಖ್ಯಾತ; ಗೌರವಿತ ;
ಇವರ ಬದುಕೇ ಶರಣ-ಸಂಸ್ಕೃತಿಯ ಸಂಕೇತ.

ವಯಸು ಮುದಿಯಾದರೂ ಯೌವನದ ಉತ್ಸಾಹ,
ರಸಾನುಭಾವದಲಿಸೆರೆಹಿಡಿವ ಸಂಮೋಹ,
ನಿತ್ಯವೂ ಹೊಸಹೊಸತು ಕಲಿವ ತಿಳಿವಿನ ದಾಹ.

ನಡೆಯಲ್ಲಿ ಶಿವ ಶರಣ, ನುಡಿಯು ಭಾವಾಭರಣ,
ಹಾಡು ಭಕ್ತಿಯಸ್ಫುರಣ, ಗಮಕಕಲೆ ರವಿಕಿರಣ ;
ಮಾತಿನಲಿ, ಕೃತಿಯಲ್ಲಿ ತುಂಬಿದಂತಃಕರಣ.

ನಟನಾಗಿ, ಪ್ರವಚನ ಪಟುವಾಗಿ, ಕವಿಯಾಗಿ,
ಹಿರಿಯತನದಲಿ ಮೆರೆವ ಅಪ್ರತಿಮ ಪ್ರಾವೀಣ್ಯ
ಕಲೆಯು ಕರಗತವಾದ ನಿಸ್ಸೀಮ ನೈಪುಣ್ಯ
ಇಂಥವರು ಇರುವುದೇ ನಮ್ಮ ನಾಡಿನ ಪುಣ್ಯ.

'ಜೋಳದರಾಶಿ' ಹಳ್ಳಿಯಲಿ ಜನಿಸಿದ ಪುತ್ರ
ಕನ್ನಡದ ಸಂಸ್ಕೃತಿಯ ಧೀಮಂತ ವರಪುತ್ರ
ಗಮಕ ಕಲೆಯಲಿ ನಮ್ಮ ನಾಡ ಉಜ್ವಲ ರತ್ನ
'ಗಮಕ ಕಲಾನಿಧಿ', ಸಂಗೀತರಸ ತಪನಿಧಿ,
ದೊಡ್ಡತನ, ದೊಡ್ಡಮನ ಪಡೆದ ದೊಡ್ಡನಗೌಡರ್ರು.

ಬಾಳಲೀ ಬಹುಕಾಲ, ಹರುಷದಲಿ, ಶತವರುಷ ;
ನಡೆಪರುಷ, ನುಡಿಪರುಷ, ಆದರ್ಶ ಸತ್ಪುರುಷ
ಗಂಧರ್ವ ಲೋಕದಿಂ ಕನ್ನಡದ ನೆಲಕಿಳಿದ
ಗಮಕ ಕಿನ್ನರಕಲೆಯ ಸಿದ್ಧ, ಕಿಂಪುರುಷ.

ಚತುರ್ಮುಖ

ಪಂಡಿತ ಕೆ. ಪಿ. ಶಿವಲಿಂಗಯ್ಯ

'ಜೋಳದರಾಶಿ'ಯೆಂದರೆ ಸಾಕು ಎಲ್ಲರಿಗು ಥಟ್ಟನೆ ಹೊಳೆಯುವುದು
ಬಾಳಿದರೆ ದೊಡ್ಡನಗೌಡರ ಹಾಗೆ ಬಾಳಬೇಕೆಂದು !
ಜೀವನದ ಸಾಕ್ಷಾತ್ ಪ್ರತಿಬಿಂಬವಾದ ನಾಟಕಗಳವೆಷ್ಟೋ ಆಡಿದರು
ಜೀವನ–ನಾಟಕದಲ್ಲೇನು ಹಿಂದೆ ಬೀಳಲಿಲ್ಲ, ಶ್ರೇಷ್ಠ ಪಾತ್ರ ಮಾಡಿದರು !

ಗಮಕ ಕಲೆಗಿನ್ನೊಂದು ಹೆಸರೇ ಜೋಳದರಾಶಿ....ಗೌಡರೆಂಬುದು ಸರ್ವವಿದಿತ
ಗಮಕಿಯಾಗಿ ಅವರು ವಾಚಿಸಿದರೆ ಅರ್ಥವಿವರಣೆಯೇ ಬೇಕಿಲ್ಲ !
ವ್ಯಾಖ್ಯಾನಿಸಿದರೆ ಶ್ರೀ ಸಾಮಾನ್ಯನ ಹೃದಯವೂ ಒಡನೆ ಸ್ಪಂದಿಸುವುದು
ಆಖ್ಯಾನಗಳೆಲ್ಲ ಕರುವಿಟ್ಟಂತೆ ಸುಳಿದು ಮಂತ್ರ ಮುಗ್ಧರಂತಾಗಿಸುವುದು !

'ಕವಿಗಳು ಕ್ರಾಂತದರ್ಶಿಗಳು' ಎಂಬುದರ ಪ್ರತಿನಿಧಿ ನಮ್ಮ ಈ ದೊಡ್ಡಣ್ಣ !
ಕಿವಿಗೊಟ್ಟು ಕೇಳಿದಿರಾ 'ಕಲ್ಯಾಣ–ಬಸವಣ್ಣ'ನ ಕುರಿತಾದ ಕವಿತೆಯನ್ನ ?
'ಲೋಕದುದ್ಧಾರಕ್ಕೆ ಅಣ್ಣ ವರಿಸಿದ್ದು ನೀಲಾಂಬಿಕೆಯನ್ನ'
ಲೋಕ ಬದುಕ ಬೇಕೆಂದೇ ಗೌಡರು ಹೇಳಿದ್ದು ಇಂತಪ್ಪ ಕಥನವನ್ನ !

ಕೇಳಬೇಕು ಗೌಡರ ಮುಖದಿಂದ ಶೂನ್ಯ ಸಂಪಾದನೆಯ ಪ್ರವಚನ
ಕಾಳಕಪ್ಪನೆಲ್ಲ ಕಳೆದು ಶುದ್ಧರಾಗಬೇಕೆನಿಸುವುದು ಕೇಳುಗರೆಲ್ಲರಿಗು !
ಸಾವಿರಾರು ಜನಮನದಿ ನಲಿದಾಡುತಿದೆ ಶರಣಸಂದೇಶ
ಸಾವಿಲ್ಲದಂತೆ ಮಾಡಬಲ್ಲುದು ಅರಿದಾಚರಿಸೆ ಗೌಡರ ವಾಗ್ವಿಲಾಸ !

ಕವಿಗಮಕಿವಾದಿ ವಾಗ್ಮಿಗಳೆಲ್ಲರ ಈ ಚತುರ್ಮುಖ
ಅವಿನಾಶಿಯಾಗುಳಿವ ಯಶೋಜೀವಿತ ಸನ್ಮುಖ !

—★—

ನಿನಗೆ ನೂರು ನಮನ

"ಸಂಗೀತ ರತ್ನ" — ಬಿ. ಎಸ್. ಚಂದ್ರಕಲಾ

ಶರಣು ಶರಣೆಂಬೆವು ಶ್ರೀ ದೊಡ್ಡನ ಗೌಡ
ಶರಣ ವೃದ್ಧ, ನಿಜ ಜ್ಞಾನ ಸಂವೃದ್ಧ
'ಗಮಕಕಲಾನಿಧಿ' ಎಂ ಬಿರುದಾಂಕಿತ
ಬುಧಜನ ವಂದಿತ ಪೂಜಿತ ಮಾನ್ಯs

ಬಳ್ಳಾರಿ ಜಿಲ್ಲೆಯಾ ಪವಿತ್ರ ಮಣ್ಣಿನ
'ಜೋಳದರಾಶಿ' ಎಂ ಗ್ರಾಮದಿ ಉದಿಸುತ
ವ್ಯವಸಾಯ ವೃತ್ತಿಯು ಕಾಯಕವಾಡಿ
ಪ್ರವೃತ್ತಿಯು ಬೆಳಸಿದೆ ಕಲೋಪಾಸನೆಲಿ

ತಾತ—ಬೈಲಾಟದಿ ಪ್ರಸಿದ್ಧರಾಗಿರೆ
ಸಾವಿರದೊಂಭೈ ನೂರ ಆ ಹತ್ತನೆ
ಇಸವಿ–ಜುಲೈಮಾಸ ದಿಪ್ಪತ್ತೇಳನೆ
ತೇದಿಯುಲಾಯಿತುಂ ಹೇ, ನಿನ್ನಯು ಜನನ

ಜನ್ಮಜನಕರಾದರು ಕೆ. ಪಂಪನ ಗೌಡ
ತಾಯಿಎನಿಸಿದಳಾ ಪುನೀತೆ ರುದ್ರಮ್ಮ
ಬಳ್ಳಾರಿ ನಾಟ್ಯಕಲಾ ಪ್ರಪೂರ್ಣ
ರಾಘವಾಚಾರ್ಯರಾದರು 'ಗುರುಜನ'

ಕನ್ನಡ ಆಂಧ್ರು ನಾಟಕ ಮಂಡಳಿಯು
ವಿಜಯು ಪತ್ರುವಂ ಪಡೆದು ವಿಜೇತನಾಗಿ
ಕರುನಾಡಾಂದ್ರು ಸಾಹಿತ್ಯ ರಂಗದ
ವೇದಿಕೆ ಏರುತ ವಚನಗಳ್ ರಚಿಸುತ

ಸಿರಿಗಮಕಿ–ಶರಣಕವಿ ಕಳಾಪ್ರವೀಣ
ಎಂ, ಬಿರುದು ಬಾವಲಿಯು ಮಾಲೆಯು ಧರಿಸಿ
ಶೂನ್ಯ ಸಂಪಾದನೆಯು ಆಗುವಾಡಿ
ಸಮಾಜ–ರಾಜಕೀಯು ರಂಗದಲಾಡಿ

ನಾಟಕ ರಚಿಸುತ ಪ್ರವಚನವಾಡಿ
ವ್ಯಾಖ್ಯಾನ ಪಟು, ಬಲು ಪ್ರತಿಭೆಯು ಬೀರಿ
ಕಳೆದೈದಂ ದಶಕದಿಂ ಮೆರೆಯುತ ಬಂದೆ
ಸಾರಸ್ವತ ಲೋಕದಿ ಜ್ಯೋತಿಯಾದೆ

ಡಾಕ್ಟರೇಟನೀ ಪಡೆದವನಾಗಿಹೆ
ಕನ್ನಡ ನಾಡಿಗೇ ಕಣ್ಮಣಿಯಾಗಿಹೆ
ಇಂತಪ್ಪಪುರುಷ ಹೇ ಜೋಳದರಾಶಿ
ದೊಡ್ಡನ ಗೌಡನೆ ನಿನಗೆ ನೂರು ನಮನ.

ನೀ ವಿಹರಿಸಿರುವ ಸಾಹಿತ್ಯವ ಕಾಣು

"ಲಾವಣಿ"ಯಲಿ ಹಾಡಿ "ಹಂಪೆ"ಲಿ ತಿರುಗಿ
"ರಸವರ್ಷ"ದಿ ಮಿಂದಾಡಿ "ಬಯಲಗಳಿಕೆ"
ಯ, ಕೂಡಿ, "ಕಲಾಜೀವನ"ದಿ ಜಾರಾಡಿ
"ಕನಕದಾಸ" ರಡಿಯಾಳಾಗಿ "ಶಿವಮಯ-
ಜೀವನಚರಿತ್ರೆ" ಯಲಿ ನಡೆಯುತ "ತಾತನ-
ಗೀತಾಂಜಲಿ" ಯಲಿ ತೇಲಾಡಿ ಸಾಗಿ
"ರಾಮೇಶವಚನ" ಗಳನೋದಿ "ನಾಟ್ಯ-
ಕಳಾಪ್ರಪೂರ್ಣರಾಘವ" ವನು ಬರೆದು
"ಗೇಯಗುಂಚಾರವ" ದೊಳು ನಲಿದುಲಿದಲೆದು
"ನೀವೇನಂತೀರೆಂದು" ಕೇಳಿ ತಿಳಿದು
"ಗೌಡತಿ ಬರಲಿಲ್ಲ"ವೆಂದು ಹಲುಬಿ ಕೊರಗಿ
"ಭಕ್ತಿಸಂಜೀವಿನಿಯು" ಸೇವಿಸಿ ಕುಡಿದು
"ನಾಟ್ಯ ಯೋಗಿಯು ಬಳ್ಳಾರಿರಾಘವ"
"ಮೃತ್ಯುಂಜಯು" ಎಂದು ಹೇಳಿ "ಭಕ್ತಿಯ-
ಗೀತೆಗಳ" ಹಾಡಿ "ವಚನಾಮೃತ"ವನು
ಸವಿದು ರುಚಿನೋಡುಣ ಬಡಿಸಿರುವೆ ಜನಕೆ

ನವರತ್ನ ಕುಸುಮಮಾಲಾ

—ಎಸ್. ಸಣ್ಣ ಸುಂಕಪ್ಪ

ಪೀಠಿಕೆ

ಭಾ॥ ಷಟ್ಪದಿ

ಶ್ರೀಶ ಸದ್ಗುರುವೆರ್ರಿನಾಥನ । ತೋಷವಶಾಂತಾ ಕೃಪೆಯ ಬಲದಿಂ ।
ದಾ ಶಿವನು ಸಕ್ರೇಶನಿತ್ತಾ ಮಂತ್ರ ಮಹತಿಯಲಿ ॥
ರಾಶಿ ಜೋಳದ ಗ್ರಾಮ ವಾಸಿಯು । ಭೂಷಣದ ಡಾ॥ ಶ್ರೀ ಕೆ. ದೊಡ್ಡನ ।
ಶ್ರೇಷ್ಠಗೌಡರ ಚರಿತ ದರ್ಶನ ಗೈವೆ; ಲಂಕಾರ್ಯ ॥

॥ ಚರಿತಾ ದರ್ಶನಸಾರ ॥

ಕನ್ನಡದ ಸಿರಿನಾಡ ವರ ಶ್ರೀ । ಯನ್ನು ಗಳಿಸ್ಯಾ ಶಾರದಮ್ಮನ ।
ರನ್ನಗುವರಿಯು ಗಾನಸುಂದರಿಯನ್ನು ಕರಪಿಡಿದ ॥
ಮಾನ್ಯ ಶ್ರೀ-ದೊಡ್ಡಣ್ಣಗೌಡರು । ಜನ್ಮ ಜನ್ಮಾಂತರದ ಸೌಚಿರ ।
ದಣ್ಣಗಳು ನಾನೆಂದು ನಂಬುತ ಲೊರೆವೆ ತವ ಚರಿತಂ ॥೧॥

ಬಂಧುರದ ಬಳ್ಳಾರಿ ಜಿಲ್ಲೆಗೆ । ಸಂದ ಜೋಳದರಾಶಿ ಗ್ರಾಮದ ।
ಚಂದ್ರ ಧರ ವಂಶಾಬ್ಧಿ ಜಾತರು ಗೌಡ ಮನೆತನವು ॥
ತಂದೆ ಪಂಪನ ಗೌಡರವರಾ । ನಂದ ಚಂದ್ರಿಕೆ ರುದ್ರಮಾಂಬೆಯು ।
ಕಂದ ಸುಂದರನಾಗಿ ಜನಿಸಿದೆಯವರ ವ್ರತದಿಂದ ॥೨॥

ನಿನ್ನ ಜನನವು ತಾಯಿ, ತಂದೆಗೆ । ನಿನ್ನ ಜನನವು ಬಂಧು ಬಳಗಕೆ ।
ನಿನ್ನ ಜನನವು ನಿಮ್ಮ ಗ್ರಾಮದ ಸಕಲ ಸಂದಣಿಗೆ ॥
ನಿನ್ನ ಜನನವು ಕನ್ನಡಾಂಬೆಗೆ । ನಿನ್ನ ಜನನವು ಭಾರತಾಂಬೆಗೆ ।
ನಿನ್ನ ಜನನವು ವಿಶ್ವವೆಲ್ಲಕ್ಕಾಯ್ತು ಹಿಂದೆಂದು ॥೩॥

ಹಿರಿದು ಪದವನೆ ದೊಡ್ಡದೆನ್ನುತ । ಕರೆದರೀ ಕನ್ನಾಡ ವಿಬುಧರು ।
ಕರೆದರೀತೆರ ನಿನ್ನ ನಾಮವ ಮುದ್ದು ದೊಡ್ಡಣ್ಣ ॥
ಭರದಿ ಬಾರೈ ಕಂದ ! ನೆನ್ನುತ । ಸಿರಿಯ ನುಡಿಯಲಿ ತಂದೆ, ತಾಯ್ಗಳು ।
ಸ್ಮರಿಸುತಹ, ನಿಜ ಪ್ರೀತಿಯಿಂದಲಿ ನಲಿಸಿ, ಬೆಳೆಸಿಹರು ॥೪॥

ಓದು ವಕ್ಕಾಲಿನ್ನು ನಿನ್ನಯು । ಬುದ್ಧಿ ಮುಕ್ಕಾಲೆಂಬ ತಾತರ ।
ಮೋದ ವಾಕ್ಯದ ತೆರದಿಗಳಿಸಿದೆಯ್ಯೆದುಯಿಯಿಯತ್ತೆ ॥
ಆದರೇನಂತದುವೆ ವ್ಯಥ ಮಹ । ದಾದಿ ಪಂಚಾಕ್ಷರಿಯು ಮಂತ್ರವ ।
ಹಾದಿಯಾಯಿತು ನಿನ್ನ ಜೀವನ ಯಾತ್ರೆ ; ಕಾವ್ಯಕ್ಕೆ ॥೫॥

ಯಾತ್ರೆ : ಜೀವನ ದುದ್ದ ಕದನೆಂ । ಪಾತ್ರವಾಗಿಯೆ ಬಳಸಿ ನಾಟಕ ।
ಪಾತ್ರ ರತ್ನರೆಯಾಗಿ ಬೆಳಗಿದೆ ಗವಕ ಗಿರಿಯೆನಿಸಿ ॥
ಯಾತ್ರಿಕನೆ ! ನಿನ್ನಿಂದ ಸುಕಲಾ । ಜಾತ್ರೆಯಾಯಿತು ; ಕನ್ನಡಾಂಧ್ರದ ।
ಪಾತ್ರೆಯವ್ಯತವ ತಣಿದಂ, ದಣಿದರುಪಾಸಕಶ್ರೇಣಿ ॥೬॥

ನಿನ್ನ ಕೋಟಿಯುಜನ್ಮಪುಣ್ಯದ । ಲಿನ್ನು ಕಲೆಗಂ ರಾಘವಾರ್ಯರು ।
ಚೆನ್ನ ಕೈಲಾಸಂ, ರು. ವೈ. ನಾಗೇಶ ಶಾಸ್ತ್ರಿಗಳು ॥
ತನ್ನ ಜೀವೈಕ್ಯವನುಗೊಳಿಸುವ । ಶೂನ್ಯಸಂಪಾದನೆಯು ಪಥಕಂ ।
ಮಾನ್ಯ ಮೃತ್ಯುಂಜಯರು ; ನಾಲ್ವರು ಶ್ರೇಷ್ಠ ಗುರುವೈಸೆ ॥೭॥

ಏಸು ಜನ್ಮದ ಪುಣ್ಯ ಫಲವೋ ! । ಏಸು ಜನ್ಮದ ತಪಸಿನೊಲವೋ !! ।
ಏಸು ಜನ್ಮದ ಗುರು, ಹಿರಿಯರಭಯಹಸ್ತ ಬಲವೈಸೆ !!! ॥
ಏಸು ಸನ್ಮಾನಗಳು ನಿನಗಂ ! । ಏಸು ಬಿರುದಾಂಕಿತವು ; ಪದಕಗ ।
ಳೇಸು !! ಸೌ. ಶ್ರೀ. ಬಿನ್ನವತ್ತಳೆಯುಗಣಿತದ ಶರಧಿ ॥೮॥

ಜನ್ಮ ಸಾರ್ಥಕವಾಯ್ತು ; ನನ್ನಯು ! ಮಾನ್ಯ ಹಿರಿಯಣ್ಣಯ್ಯ ! ಚಿನ್ನಿಧಿ !! ।
ಸನ್ನುತೋತ್ತಮ !!! ಶ್ರೀ. ಕೆ. ದೊಡ್ಡನ ಗೌಡರಡಿ ಶ್ರೀಗೆ ॥
ತನ್ನ ಮಸ್ತಕವಿಟ್ಟು ಮಣಿ, ಕುಣಿ । ದಿನ್ನುವರ್ಪಿಪೆನಿವರ ಚರಿತಾ ।
ರನ್ನ ದರ್ಶನ ಕುಸುಮ ಮಾಲೆಯು ಗುರು ಕೃಪಾ ಬಲದಿ ॥೯॥

ಕಂದ :—

ಶ್ರೀ ಗುರು ಕೃಪೆಯಿಂ ದೊಡ್ಡನ ! ಯೋಗಾನಂದಂಸು ಕಲಾ ಸುಂದರ ಗೌಡರೇ ! ॥
ತ್ಯಾಗದ ಜೀವನ ಯಾತ್ರೆಯು ! ಸಾಗಿಸಿದ್ಯೆಚಿರ ಕಿರ್ತ್ಯಾರೋಗ್ಯಂ ಲಭುಗುಂ ॥
ಮಂಗಲಂ ಗುರುವೆರ್ರಿನಾಥಗೆ ! ಮಂಗಲಂ ಗುರು ಸಕ್ಕರೇಶಗೆ ।

ಭಾ॥ ಷ॥ ಮಂಗಲ :—

ಮಂಗಲಂ ಶ್ರೀ ಸಾಧು, ಸಂತರು ; ಶರಣ ಸಂತತಿಗೆ ॥
ಮಂಗಲಂ ಚಾರಿತ್ರ್ಯ ಮೂರುತಿ ! ಯಂಗ, ಲಿಂಗಾನಂದ ದೊಡ್ಡನ ।
ಮಂಗಲಾತ್ಮಕ ಗೌಡ, ಮೊದಲಹ ಸರ್ವ ಸುಜನರಿಗೆ ॥

ಓಂ ಶಾಂತಂ, ಶಿವಂ, ಸುಂದರಂ ★

ಭಕ್ತಿ ಕುಸುಮಗಳು

— ಡಾ॥ ಅಂಗಡಿ ನಾಗಪ್ಪ

ಕಂದ :

ವರಗುರು ಚೀಳ್ಗುರಿಕೆಯಂ ಶ್ರೀ ।
ಎರಿತಾತರೆ ಧಾರವಾಡ ಮುರುಘಾ ಮಠದಾ ॥
ಚರವರ ಮೃತ್ಯುಂಜಯರೇ ।
ಪೊರೆಯಿರಿ ದೊಡ್ಡಣ್ಣ ಗೌಡ ತವ ಪೂಜತನಂ ॥ ॥೧॥

ಷಟ್ಪದಿ :

ಜಯವು ದೊಡ್ಡನ ಗೌಡ ಗವಂಕಿಗೆ ।
ಜಯವು ಜೋಳದರಾಶಿವಾಸಗೆ ॥
ಜಯವು ಸತತಂ ಶಿವ ಸುಕಲೆಯೊಳೊಳ್ಗಿ ಬೆಳಗುವಗೇ ।
ಜಯವು ರಸವರ್ಷವನು ಪಾಡಿದೆ ॥
ಜಯವು ನಾಟಕ, ಕಲೆಯು ನಟನೇ ।
ಜಯವನೀಯುಲಿ ಗುರುಚರರು ಶತವತ್ಸರದವರೆಗಂ ॥ ॥೨॥

ಬಯಲುಗಳಿಕೆಯು ಬೆಳಗಂ ಬರೆದಿಹ ।
ಬಯಲುಗಳಿಕೆಯು ದೊಡ್ಡಗೌಡರು ॥
ಬಯಲುಗಳಿಕೆಯು ಬಹಳಕಾಲದೊಳೊರೆದು ಮೆರೆದಿಹರೂ ।
ಬಯಲ ಮೂರ್ತಿಯು ಯೆರ್ರಿತಾತನು ॥
ಬಯಲ ಬಿತ್ತಿದ ಧಾರವಾಡದ ।
ಬಯಲನೇ ಸವಿದಿರುವ ಮೃತ್ಯುಂಜಯರ ಕೃಪೆ ದಿಟವೂ ॥೩॥

ಬಯಲಗಳಿಕೆಯಂ ಬೆಳಗು ದೊಡ್ಡದು ।
ಬಯಲ ಕೃಪೆಯಿಂ, ಬಹಳ ದುಡಿಯಂತೆ ॥
ಬಯಲ ನರಿಯುವ ವಚನಬೋಧೆಯು ರಚಿಸಿ ಮೆರೆದಿರುವಾ ।
ಬಯಲ ಪ್ರೇಮಿಯು ದೊಡ್ಡಗೌಡರ
ಬಯಲ ಗಳಿಕೆಯು ಬೆಳಗುಕೊಳ್ಳುತೆ ।
ಬಯಲ ನೋದುಂತೆ ತಿಳಿದು ಗುರು ಕೃಪೆ ಪಡೆದು ಬಾಳುವುದೂ ॥ ॥೪॥

ಕಂದ :

ಕಂದ ನಂದೇ ನಾ ನೋದಿದೆ ನೆಂ ।
ದಂದೇದಶವತ್ಸರಗಳ ಕೆಳಗೇ ಬರೆದೈ ॥
ಅಂದಿನ ದಿನದಿಂದಿನವರೆ ।
ಗಿಂದುಂ ಬರೆದೆಮಗೆ ನಿಮ್ಮ ಜೀವಿತ ತಿಳಂಪೈ ॥ ॥೫॥

ಇಂದುಂ ನೀಂ ತರುಣರವೋಲ್ ।
ಚಂದದಿ ಶಿವಕಲೆಯ ಸೇವೆ ಮಾಡುತ್ತಿರುವೇ ॥
ಇಂದುಂಧರಂ ಗುರುಚರರೂ ।
ಮುಂದುಂ ಬಹುಕಾಲ ನಿಮಗೆ ಶಕ್ತಿಯ ಕೊಡುಗೇ ॥ ॥೬॥

ವರಡಾಕ್ಟರ್ ಪದವಿಯನೂ ।
ಮೆರೆಯುಂವ ಗುಲಬರ್ಗ ವಿಶ್ವವಿದ್ಯಾಲಯವೂ ॥
ಹರಿಸದಿ ಗೌಡರಿಗೀಯುತೆ ।
ಪರತರಶೋಭೆಯನು ನಾಡಿಗಿತ್ತುದು ಮಾನ್ಯಂ ॥ ॥೭॥

ಇನ್ನುಮೆನಿತೋ ವಚನ ಸೇವೆಯು ।
ಮಾನ್ಯ ಗೌಡರು ನಡೆಸಿ ಕಾವ್ಯದ ॥
ಸನ್ನುತ ಕೃತಿರಚನೆ ಗೈಯುತೆ, ಪ್ರವಚನಾದಿಗಳ ।
ಉನ್ನತೋನ್ನತ ಗಮಕ ರೀತಿಯೊ ॥
ಳಿನ್ನು ನಡೆಸಲು ಸರ್ವಶಕ್ತಿಯು ।
ತನ್ನಿರೆಂದುಂ ಬೇಡುವೆನು ಗುರುಲಿಂಗ ಜಂಗಮರಾ ॥ ॥೮॥

ಭದ್ರಂ ಶುಭಂ ಮಂಗಲಂ.

ಸಂಕೀರ್ಣ

ಗಮಕ

ಜೋಳದರಾಶಿ ದೊಡ್ಡನಗೌಡರು

ಗಮಕ ಶಬ್ದವು ಸಂಸ್ಕೃತ ಶಬ್ದದಿಂದ ಬಂದದ್ದು. ಗತ್ಯರ್ಥವಾದ ಗಮ್ಲ್ (ಗಮತ್) ಧಾತುವಿನಿಂದ ಗಮಕ ಶಬ್ದವು ಉತ್ಪತ್ತಿಯಹಾಗಿದೆ ಎಂದು ಹೇಳಲ್ಪಡುವುದು. ಮನಃ ಪ್ರೇರಣೆಯಿಂದಾದ ನಾದದಿಂದ ವರ್ಣ-ವರ್ಣದಿಂದ, ಪದ-ಪದದಿಂದ ವಚನ-ಇವೆಲ್ಲವುಗಳನ್ನು ಸಮನ್ವಯಗೊಳಿಸಿ ರಾಗಬದ್ಧವಾಗಿ ಹಾಡುವುದೇ ಗಮಕ. ಈ ಗಮಕವನ್ನು ಸಂಗೀತ ಶಾಸ್ತ್ರದಲ್ಲಿ

ಆರೋಹಂ ಅವರೋಹಂಚ ಢಾಲು ಸ್ಫುರಿತ ಕಂಪಿತಾಃ
ಆಹತಃ ಪ್ರತ್ಯಾಹತಶ್ಚ ತ್ರಿಪುಚ್ಛಾಂದೋಳ ಮೂರ್ಛನಾಃ

ಎಂದು ದಶವಿಧವಾಗಿ ನಿರೂಪಿಸಲ್ಪಟ್ಟಿದೆ. ಈ ದಶವಿಧ ಗಮಕಿಗಳಿಗೆ ಮಂತ್ರ ಶಾಸ್ತ್ರದಲ್ಲಿ ದಶವಿಧ ಬಿಂದುಗಳೆಂಬ ಹೆಸರಿದೆಯಂತೆ.

ಆತ್ಮನಿಗೆ ಹೇಳಬೇಕೆಂಬ ಸಂಕಲ್ಪವಾಗಿ ಆ ಸಂಕಲ್ಪವು ಮನಸ್ಸಿಗೆ ಪ್ರೇರಣೆಯಹಾಗಿ ಆ ಮನಸ್ಸು ನಾಭಿಯಲ್ಲಿರುವ (ಬ್ರಹ್ಮಗ್ರಂಥಿ) ಅಗ್ನಿಯನ್ನು ಜ್ವಲನಗೊಳಿಸಿ ಎಂದು

ನಾದೋತ್ಪತ್ತಿಯಾಯಿತೋ ಅದರೊಂದಿಗೇನೇ ಗಮಕವು ಒಡಮೂಡಿತೆಂದು ಸ್ಪಷ್ಟ ವಾಗುವುದು. ಏಕೆಂದರೆ ಅಚಲವಾದ ಏಕನಾದದಲ್ಲಡಗಿದ ಅನೇಕತೆಯನ್ನು ವ್ಯಕ್ತ ಪಡಿಸುವುದಕ್ಕೆ ಚಲನೆಯನ್ನೀಯುವ ಅವಸ್ಥೆಯೇ ಗಮವೆಂದು ಕರೆಯಲ್ಪಟ್ಟಿತು.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಾಹಿತ್ಯದೇವಿಯ ಅಡಿದಾವರೆಯೇ ಗಮಕವೆಂದು ಹೇಳಬಹುದು. ಈ ಗಮಕದ ಕಾಲಿಲ್ಲದ್ದಿರೆ ಸಾಹಿತ್ಯದೇವಿಗೆ ಚಲನೆಯಿಲ್ಲ, ಗಮನವಿಲ್ಲ. ಆದ್ದರಿಂದ ವೇದ ಆಗಮ ಉಪನಿಷತ್ ಪುರಾಣಕಾವ್ಯಗಳಲ್ಲಿ ಗಮಕದ ಸ್ಥಾನವು ಅಸಮಾನವಾಗಿ ನೆಲೆಗೊಂಡಿದೆ. ಕವಿಯ ಹೃದಯಾಂತರಾಳದಿಂದೆದ್ದ ಕಾವ್ಯವು ಅದೆಷ್ಟು ಉತ್ತಮವಾಗಿದ್ದರೂ ಜೀವವಿಲ್ಲದ ದೇಹದಂತೆ. ಗಮಕ ಸಂಜೀವಿನಿಯ ಸ್ಪರ್ಶವಾದಾಗಲೇ ಆ ಕಾವ್ಯದ ಭಾವ–ರಸ ಲಹರಿಗಳು ಜೀವಿತವಾಗಿ ಜಗತ್ತಿನ ಜನಾಂಗದ ಹೃದಯ ವೀಣೆಯನ್ನು ಮಿಡಿಸುವುದು. ರಾಘವಾಂಕನು ತನ್ನ ಹರಿಶ್ಚಂದ್ರ ಕಾವ್ಯದಲ್ಲಿ "ವಿಮಳಪದನ್ಯಾಸ ನಡೆ" ಎಂದು ಗಮಕದ ಸರಳವಾದ ಅರ್ಥವನ್ನು ವಿವರಿಸಿದ್ದಾನೆ.

ಮಹಾಪಂಡಿತರು ಸರಳಜೀವಿಗಳಾದ ಶ್ರೀ ಗುರುಭಾಸ್ಕರಾಚಾರ್ಯ ರಾಮ ಚಂದ್ರಸ್ವಾಮಿಗಳು, ಬಳ್ಳಾರಿ, ಇವರನ್ನು ಗಮಕ ಕಲೆಯ ವಿಷಯವಾಗಿ ಕೇಳಿದಾಗ ಅವರು :—

> "ಹೃದಯಂಗಮವಾದ ಶಬ್ದಮಯ ಕಥಾರ್ಥವನ್ನು ಶ್ರೋತೃಗಳ
> ಸ್ವಾಂತದಲ್ಲಿ ಬಿತ್ತಿ, ರಾಗ ಸುಧಾಸೇಚನೆಯಿಂದ ತೋಯಿಸಿ,
> ಆತ್ಮಕ್ಕೆ ಬೇಕಾದ ಸೃಷ್ಟಿಯಲ್ಲಿ ನಿತ್ಯವಾದ, ಜೀವನಿಗೆ ಅಮರತೆ
> ಯನ್ನು ನೀಡುವ, ಭಾವಪರಂಪರೆಗಳ ಸ್ಪಂದನೆಯನ್ನುಂಟು
> ಮಾಡುವ ಶಕ್ತಿಯೇ ಗಮಕದ ಕೀಲಕ."

ಎಂದು ಗಮಕ ಕಲಾಶಾಸ್ತ್ರದ ತಿರುಳೆಲ್ಲವನ್ನೂ ಇದರಲ್ಲಿ ಅಡಕಗೊಳಿಸಿ ಬಹು ಸುಂದರವಾಗಿ ಹೇಳಿದ ಈ ಅಮೋಘ ನುಡಿಯು ಗಮಕ ಕಲಾವಿದರ ಕೈದೀವಿಗೆ ಯಂತಿದೆ.

ಗಮಕದ ವೈಶಿಷ್ಟ್ಯ

ಸಂಗೀತವೇ ಬೇರೆ ಸಾಹಿತ್ಯವೇ ಬೇರೆ ಎಂದು ಆ ಸಂಗೀತಕ್ಕೂ ಸಾಹಿತ್ಯಕ್ಕೂ ಇರಬೇಕಾದ ಸ್ನೇಹಸಂಬಂಧಗಳಲ್ಲಿ ಕೆಲವರು ವಾದೋಪವಾದಗಳನ್ನು ಮಾಡುವು ದುಂಟು. ಸಾಹಿತ್ಯ ಪ್ರಧಾನತೆಯಿಂದ ಹಾಡುವುದಾದರೆ ಸಂಗೀತ ಶಾಸ್ತ್ರದ ಸೂತ್ರವನ್ನೇ ಧಿಕ್ಕರಿಸಿದಂತಾಗುವುದೆಂದು ಸಂಗೀತಗಾರರು, ಸಂಗೀತ ಪ್ರಧಾನತೆಯಿಂದ ಸಾಹಿತ್ಯವನ್ನು ಹಾಡುವುದರಿಂದ ಸಾಹಿತ್ಯ ಶಾಸ್ತ್ರವನ್ನೇ ಸಮಾಧಿಗಾಣಿಸಿದಂತಾಗುವು

ದೆಂದು ಸಾಹಿತಿಗಳು, ಒಬ್ಬರ ವಾದವನ್ನು ಮತ್ತೊಬ್ಬರು ಅಲ್ಲಗಳೆಯುತ್ತ ಮೂಗು ಮುರಿಯುವುದು ವಾಡಿಕೆಯಾಗಿದೆ.

ಈ ಕೊನೆಗಾಣದ ಎರಡು ವಾದಗಳ ಮಧ್ಯಸ್ತಿಕೆವಹಿಸಿ ತಕ್ಕ ಸಮಾಧಾನ ನೀಯಬಲ್ಲುದೆಂದರೆ ಒಂದೇ ಒಂದು-ಗಮಕಕಲೆ. ದ್ವೈತಾದ್ವೈತವಾದವನಿತೆಯರನ್ನು ಕಂಕುಳಲ್ಲಿರಿಸಿಕೊಂಡು ಮುಂದೆ ಸಾಗಿದ ಶಕ್ತಿ ವಿಶಿಷ್ಟಾದ್ವೈತದಂತೆ ಸಂಗೀತ–ಸಾಹಿತ್ಯ ಸುಂದರಿಯರನ್ನು ಒಲಿಸಿ ತನ್ನ ಮನಬಂದಂತೆ ಕುಣಿದಾಡಿಸಬಲ್ಲ ವೈಶಿಷ್ಟ್ಯವು ಗಮಕ ಕಲೆಗಿದೆ. ಸಂಗೀತದಲ್ಲಿ ಗಮಕವು ಎಷ್ಟು ಪ್ರಧಾನತೆಯನ್ನು ಪಡೆದಿದೆಯೋ, ಸಾಹಿತ್ಯ ದಲ್ಲಿಯೂ ಅಷ್ಟು ಪ್ರಧಾನ ಗೌರವಗಳಿಗೆ ಪಾತ್ರವಾಗಿದೆ. ಛಂದೋಬದ್ಧವಾದ ಸಾಹಿತ್ಯಕ್ಕಲ್ಲದೆ ವಚನ ಸಾಹಿತ್ಯಕ್ಕೆ ಗಮಕದ ಅವಶ್ಯಕತೆ ಏಕೆ? ಎಂದು ಕೆಲವರಿಗೆ ಸಹಜವಾಗಿಯೂ ಅನ್ನಿಸಬಹುದು. ಆದರೆ ವಚನಗಳನ್ನು ಕೂಡ ರಾಗತಾಳಗಳಿಂದ ಹಾಡಿಕೊಂಡು ಬಂದ ಸಂಪ್ರದಾಯವು ಹಿಂದಿನ ಕಾಲದಿಂದಲೂ ಇದೆ. ಈಗಲೂ ಹಳ್ಳಿಗಳಲ್ಲಿ ಕಥೆ ಕಾದಂಬರಿಗಳನ್ನು ರಾಗದಿಂದ ಓದುವವರನೇಕರಿದ್ದಾರೆ. ರಾಗರಹಿತ ವಚನವನ್ನು ಓದುವುದಕ್ಕಿಂತಲೂ ರಾಗವಚನವನ್ನು ಓದುವುದೇ ಇಂಪು–ಸೊಂಪು. ಅದು ಅನೇಕರನ್ನು ಹಿಡಿದು ಕೂಡಿಸಿ ಕೇಳಿಸುತ್ತದೆ. ಇಂದು ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಪ್ರಭುದೇವರ ವಚನಗಳನ್ನು ರಾಗ–ತಾಳಗಳಿಂದ ಹಾಡುವ ಪದ್ಧತಿಯು ಕರ್ಣಾಟಕದಲ್ಲಿ ದಿನೇ ದಿನೇ ಬೆಳೆಯುತ್ತಿದೆ. (ಈ ವಚನಗಳನ್ನು ಹಾಡುವ ಅನೇಕರು ಗಮಕದ ಕಡೆಗೆ ಸಾಕಷ್ಟು ಲಕ್ಷ್ಯತೋರ ದಿದ್ದುದರಿಂದ ಸಾಹಿತ್ಯ–ಸಂಗೀತಗಳ ಸಮಸ್ಯೆಯು ಮತ್ತಷ್ಟು ಕಾಲ್ತೊಡಕಾಗಿದೆ.)

ಗಮಕ ಕಲೆಯ ಸೂತ್ರದಲ್ಲಿ ಒಂದಾಗಿರಿಸಿದ ಸಾಹಿತ್ಯ–ಸಂಗೀತಗಳು ನಲ್ಲೆಯ ಕಂಠ ಮಾಲೆಯಲ್ಲೊಪ್ಪುವ ಮುತ್ತು–ಹವಳಗಳಂತೆ. ಇನಿಯನಲ್ಲಿ ಮುನಿದ ಇನಿಯಳು ತನ್ನ ಹಾರವನ್ನು ಹರಿದೊಗೆದಾಗ ಸೂತ್ರದಲ್ಲಿ ಒಂದಾಗಿದ್ದ ಮುತ್ತು–ಹವಳಗಳು ಹೇಗೆ ಬೇರೆಬೇರೆಯಾಗುವುವೋ ಹಾಗೆಯೇ ಗಮಕ ಕಲೆಯ ಸೂತ್ರ ದಿಂದಗಲಿದ ಸಂಗೀತ–ಸಾಹಿತ್ಯಗಳು ತಮ್ಮ ವೈಶಿಷ್ಟ್ಯಕ್ಕೆ ದೂರಾಗುವುವು. ಉದಾಹರಣೆಗಾಗಿ—ರಾಘವಾಂಕನ 'ಸಿದ್ಧರಾಮ' ಚಾರಿತ್ರದಲ್ಲಿ ಸೊನ್ನಲಾಪುರಕ್ಕೆ ರೇಣುಕಾಚಾರ್ಯರು ಪಲ್ಲಕ್ಕಿಯಲ್ಲಿ ಕುಳಿತು ಶಿಷ್ಯರೊಂದಿಗೆ ಬರುತ್ತಿರುವಾಗ ಸೊನ್ನಲಿಗೆಯ ಗಡಿಯು ಸಮೀಪಿಸಿದಾಗ ಪಲ್ಲಕ್ಕಿಯಿಂದಿಳಿದು ಮೈಯಿಕ್ಕಿ ನೆಲಕ್ಕೆ ಕಾಲೂರದೆ ನಡೆಯುತ್ತಿರಲು ಶಿಷ್ಯರು ಬೆರಗಾಗಿ ತಮ್ಮ ಗುರುವನ್ನು ಕಾರಣವಾವು ದೆಂದು ಕೇಳಿದಾಗ ಅವರು, "ಇಲ್ಲಿ ಮಹಾಪುರುಷ ಸಿದ್ಧರಾಮನು ಹುಟ್ಟುವವನಿದ್ದಾನೆ; ಆತನಿಂದ ಈ ನೆಲದಲ್ಲಿ ಲಿಂಗಬೀಡಾಗುವುದು ಎಂದು ಹೇಳುವರು. ಮುಂದೆ ಆ ಗುರುಶಿಷ್ಯರು ಈ ವಿಷಯವನ್ನು ಕುರಿತು ಮಾತನಾಡಿಕೊಳ್ಳುವ ಪದ್ಯವಿಂತಿದೆ.

ಎಂದುಂದಯವಾದಪ್ಪನಯ್ಯಯೆಂದೆನೆಪರುಷ
ದಿಂದೊಳಗದಾವೂರೊಳೀವೂರೊಳಾರಬಸಿ
ರಿಂದ ಮೊರಡಿಯ ಮುದ್ದಗೌಡನಂಗನೆಯ ಬಸಿರಿಂದವರ್ಗಳೀವೂ
ರೊಳು ॥

ಇಂದಿರ್ಪರೆಮಗೆ ತೋರ್ಪಿರೆ ತೋರ್ಪೆ
ವೆಂದಡಲ್ಲಿಗೆ ಪೋಗಬೇಕೆಂದ ನಿಜ ಶಿಷ್ಯ
ವೃಂದವೆರಸ್ಯೆ ತಂದು ಪೊಕ್ಕಂ ತ್ರಿಕಾಲೋಚಿತಜ್ಞಾನಿಯಾ ಪುರವನು ॥

ಈ ಪದ್ಯವನ್ನು ರಾಗ ಪ್ರಧಾನತೆಯಿಂದೋದಿದಾಗ ಏನೂ ಅರ್ಥವಾಗುವುವುದಿಲ್ಲ. ಹಾಗೆಂದು ರಾಗವನ್ನು ಬದಿಗಿರಿಸಿ ಓದಿದಾಗ ಗಳಿತಯೌವನದ ಮುಖದಂತೆ ನೀರಸವಾಗುವುದು. ಇಲ್ಲಿ ರಾಗವೂ ಬೇಕು. ಸಾಹಿತ್ಯವೂಬೇಕು. ಇವೆರಡರ ವೈಶಿಷ್ಟವು ಕೆಡದೆ ಸಮಾನ ರೀತಿಯಿಂದ ನಡೆದು ತನ್ನ ವೈಶಿಷ್ಟ್ಯವನ್ನು ಕಲಾವಿದರಲ್ಲಿ ಪ್ರಸ್ತಾಪಿಸಿ ಕೊನೆಗೆ ಸಾಮಾನ್ಯ ಜನರಿಗೂ ಸುಲಭವಾಗಿ ಕವಿಯ ಆಶಯವನ್ನು ಹೊರಗಿಡುವ ಗಮಕ ಕಲೆಯ ವೈಶಿಷ್ಟ್ಯವು ಉತ್ತಮೋತ್ತಮವಾದುದು.

ಗಮಕಿಯ ಲಕ್ಷಣ

ಒತ್ತಕ್ಷರ ದೀರ್ಘಸ್ವರ
ದುತ್ತಮದುಪಯೋಗ ಮಾಳ್ಪನುಸ್ವರದೆಡೆಯೊಳ್
ಗೊತ್ತಾದ ರಾಗಭಾವದಿ
ಚಿತ್ತಾಕರ್ಷಣೆಯ ಮಾಳ್ಪ ರಸಿಕನು ಗಮಕಿ ॥*

ಗಮಕಿಗಿರಬೇಕಾದ ಮುಖ್ಯ ಲಕ್ಷಣಗಳು ರಾಗ–ಸಾಹಿತ್ಯ–ಭಾವ. ಈ ಮೂರು ಕಲೆಗಳಲ್ಲಿಯೂ ಸಮಾನತೆಯನ್ನು ಸಾಧಿಸಿದವನೇ ಉತ್ತಮ ಗಮಕಿಯಾಗಬಲ್ಲನು. ಸಂಗೀತಜ್ಞಾನವಿದ್ದಲ್ಲಿ ಸಾಹಿತ್ಯ ಜ್ಞಾನದ ಕೊರತೆಯೂ, ಸಾಹಿತ್ಯ ಜ್ಞಾನವಿದ್ದಲ್ಲಿ ಸಂಗೀತ ಜ್ಞಾನದ ಕೊರತೆಯೂ, ಇವೆರಡೂ ಕೂಡಿದಲ್ಲಿ ಭಾವ ಶೂನ್ಯತೆಯೂ, ಆ ಮೂರೂ ಜೊತೆಯಾದಲ್ಲಿ ಸಾವಿರ ಒಡಕಾದ ಗೊಗ್ಗರ ಧ್ವನಿಯಿದ್ದು "ಕೊಡವಾಲ ಕೆಡಿಸುವಡಾವುಲ್ಲವೆನಿತಾಗಬೇಕು" ಎಂಬಂತೆ ಇದ್ದದ್ದು ಇಲ್ಲದಂತಾಗುತ್ತದೆ. ಹೀಗೆ ಲೋಕದಲ್ಲಿ ಪರಸ್ಪರ ವಿರುದ್ಧವಿರುವ ವಿಲಕ್ಷಣಕಳಾಶಕ್ತಿಗಳನ್ನು ಕೇಂದ್ರೀಕರಿಸುವುದಕ್ಕೆ ಅನೇಕ ವರುಷಗಳ ತಪಸ್ಸಿನ ಫಲವೆರೆಯಬೇಕು.

ಗಮಕಿಯು ನಿರಹಂಕಾರಿಯಾಗಿಯೂ ನಿರಾಡಂಬರಿಯಾಗಿಯೂ ನಿರ್ಮಲ ಹೃದಯವುಳ್ಳವನಾಗಿಯೂ ಇದ್ದು ನಿಶ್ಚಲ ಮನಸ್ಸಿನಿಂದ ಗಮಕ ಕಲಾದೇವಿಯ

---

* ಶ್ರೀ ಎಂ. ರಾಘವೇಂದ್ರರಾಯರ "ಗಮಕಿ" ಎಂಬ ಪುಸ್ತಕದಿಂದ.

ಸಾಕ್ಷಾತ್ಕಾರಕ್ಕಾಗಿ ಯತ್ನಿಸಬೇಕು. ಗಮಕಿಯ ಹೊಣೆಯು ನಾಡಿನಲ್ಲಿ ಬಹು ದೊಡ್ಡದು. ವೇದಕಾಲದಿಂದಲೂ ಗಮಕಿಯ ಪಾತ್ರವು ಸಾಹಿತ್ಯ ಸಾಮ್ರಾಜ್ಯ ದಿಂದ ಹೊರಬಿದ್ದ ಪುರಾಣ-ಕಾವ್ಯ ಇತಿಹಾಸಗಳನ್ನೂ ಹಾಡಿ ಹಾಡಿ ಎಲ್ಲರಿಗೂ ಸಾಹಿತ್ಯ ಸಂಗೀತ ಸುಧೆಯನ್ನುಣಿಸಿ ಕುಣಿದು ಕುಣಿದಾಡಿಸಿದೆ. ಇಂತಹ ದೊಡ್ಡದಾದ ಕಲೆಯನ್ನು ಸ್ವಾಧೀನಪಡಿಸಿಕೊಂಡ ಗಮಕಿಯು ನಿಜವಾಗಿಯೂ ಧನ್ಯನು.

ಗಮಕಿಯು ಕವಿಯಾದರೆ ಕಬ್ಬಿನಮೇಲೆ ಜೇನಿಟ್ಟಂತೆ. ಒಂದು ವೇಳೆ ಕವಿ ಯಾಗದಿದ್ದರೂ ಗಮಕಿಯು ಸಾಕಷ್ಟು ಕವಿತಾಲಕ್ಷಣಗಳನ್ನು ಅರಿತಿರಬೇಕು. ಅಲ್ಲದೆ ವಿಮರ್ಶಾದೃಷ್ಟಿಯೂ ಬೇಕು. ಯಾವ ಕಾವ್ಯ ? ಅದರ ಕಥಾನಕವೇನು ? ಕವಿಯು ಯಾವ ಭಾವನೆಯಿಂದ ಕಾವ್ಯದ ಪಾತ್ರಗಳನ್ನು ಸೃಷ್ಟಿಸಿದ್ದಾನೆ ? ಆಯಾ ಪಾತ್ರಗಳ ವೈಶಿಷ್ಟ್ಯವೇನು ? ಕಾವ್ಯದ ಶೈಲಿ ಎಂತಹುದು ? ಚಂಪು ಕಾವ್ಯವೆ ? ಷಟ್ಪದಿ ಕಾವ್ಯವೆ ?....ಇತ್ಯಾದಿ ಅನೇಕ ವಿಷಯಗಳನ್ನು ಗಮಕಿಯು ವಿಮರ್ಶಾ ದೃಷ್ಟಿಯಿಂದ ನೋಡಿ ಗಮಕಕ್ಕೆ ಯೋಗ್ಯವಾಗಿದ್ದು ಪಂಡಿತ ಪಾಮರರಿಗೂ ಮೆಚ್ಚಿಗೆಯಾಗು ವಂತಿದ್ದರೆ ಮೊದಲು ಅದನ್ನು ಚೆನ್ನಾಗಿ ಓದಿ ಆ ಕಾವ್ಯದ ಅರ್ಥ–ಭಾವ–ರಸಗಳನ್ನು ಜೀರ್ಣಿಸಿಕೊಂಡು ಆಯಾ ಸನ್ನಿವೇಶಗಳಿಗೆ ಆಯಾ ಪಾತ್ರಗಳಿಗೆ ಆಯಾ ರಸಭಾವಗಳಿಗೆ ತಕ್ಕ ರಾಗಗಳನ್ನೂ ಆರೋಹಣ-ಅವರೋಹಣದ ವಿಧಾನಗಳನ್ನೂ ಹಾಗೂ ರಾಗದ ಮುಖ್ಯ ಸ್ಥಾಯಿಗಳನ್ನೂ ಉಪಯೋಗಿಸಿ ಲಲಿತವಾಗಿಯೂ ಮಧುರವಾಗಿಯೂ ಹಾಡಿ ಕವಿಯನ್ನೂ ಇತರರನ್ನೂ ಮೆಚ್ಚಿಸಿ ತಲೆದೂಗಿಸುವ ಶಕ್ತಿಯೇ ಗಮಕಿಯ ಮುಖ್ಯ ಲಕ್ಷಣ.

ಕವಿಗೆ ಲಭ್ಯವಾಗದ ಸುಕೃತವು ಗಮಕಿಯದು. ಸಾಮಾನ್ಯರಿಗೆ ಅತ್ಯಂತ ಸಾಮಾನ್ಯವಾಗಿ ಕಾಣುವ ವಿಷಯಗಳನ್ನು ಕವಿಯು ಸುಂದರವಾಗಿ ಕಾವ್ಯವನ್ನು ಕಟ್ಟು ತ್ತಾನೆ. ಆದರೆ ಆ ಕಾವ್ಯವನ್ನು ಮಧುರವಾಗಿ ಹಾಡಲು ಅವನಿಗೆ ಸಾಧಿಸದು. ಅದನ್ನು ಸಹಜವಾಗಿ ಸುಂದರವಾಗಿ ಹಾಡಿ ನಾಡಿನಲ್ಲಿ ಆ ಕಾವ್ಯಕ್ಕೊಂದು ಉನ್ನತ ಸ್ಥಾನವನ್ನು ಕಟ್ಟುವ ಶಿಲ್ಪಿಯೇ ಗಮಕಿ.

ಹರಿಹರ-ರಾಘವಾಂಕ-ಚಾಮರಸ-ಕುಮಾರವ್ಯಾಸ-ವಾಲ್ಮೀಕಿ-ಲಕ್ಷ್ಮೀಶ ಇವರು ಮಹಾಕವಿಗಳೇ ಆಗಿದ್ದುದಲ್ಲದೆ ಉತ್ತಮ ಗಮಕಿಗಳಾಗಿದ್ದರೆಂಬುದು ಅವರ ಕಾವ್ಯ ಗಳಿಂದಲೇ ತಿಳಿಯುತ್ತದೆ. ಕುಮಾರವ್ಯಾಸನಂತೂ ತನ್ನ ಭಾರತದ ಕೆಲವು ಭಾಗಗಳಿಗೆ ರಾಗಗಳನ್ನೂ ಬರೆದಿದ್ದಾನೆ. ಇನ್ನು 'ಶರಣ ಲೀಲಾಮೃತ'ವನ್ನು ಬರೆದ ಕವಿಯು ಅನೇಕ ವಿಧ ಛಂದಸ್ಸುಗಳಲ್ಲಿ ಸಾಹಿತ್ಯವನ್ನು ಬಿಗಿದು ಅತ್ಯಂತ ಮಧುರವಾಗಿ ರಾಗತಾಳ ಗಳಿಂದ ನಡೆವ ಯಕ್ಷಗಾನವನ್ನು ಹಾಡಿದ್ದಾನೆ. ಹೀಗೆ ಹಿಂದಿನ ಅನೇಕ ಕವಿಗಳು

ಗಮಕಿಗಳಾಗಿದ್ದುದರಿಂದಲೇ ಅವರ ಕಾವ್ಯಗಳು ಜನತೆಯಲ್ಲಿ ಹೆಚ್ಚು ಪ್ರಚಾರಗೊಂಡವೆಂದು ಹೇಳಬಹುದು.

ಹಿಂದಿನ ದಿನಗಳಲ್ಲಿ ಒಬ್ಬರೋದುವುದು ಮತ್ತೊಬ್ಬರು ಅರ್ಥವನ್ನು ವಿವರಿಸುವುದು ಈ ಬಗೆಯ ಪುರಾಣ ಸಾಂಪ್ರದಾಯವು ಇಂದಿಗೂ ಬೆಳೆದುಕೊಂಡು ಬಂದಿದ್ದರೂ ಇತ್ತೀಚೆಗೆ ಅರ್ಥವಿವರಿಸುವರ ಸಹಾಯವಿಲ್ಲದೆ ಅರ್ಥ ಗ್ರಹಿಕೆಯಾಗುವಂತೆ ಓದುವುದೇ ಗಮಕಿಯ ಪ್ರಧಾನ ಲಕ್ಷಣವಾಗಿದೆ. ಆದ್ದರಿಂದ ತಲೆಕೆರೆದುಕೊಂಡರೂ ಅರ್ಥವಾಗದ ತೆಂಗಿನಕಾಯಿಯ ಕಾವ್ಯಗಳನ್ನು ಬದಿಗಿಟ್ಟು ಸಾಮಾನ್ಯ ಪಂಡಿತ ಪಾಮರರಿಗೆ ಸುಲಭವಾಗಿ ಅರ್ಥವಾಗುವ ಕಾವ್ಯಗಳನ್ನು ಆರಿಸಿಕೊಂಡು ಓದುವುದು ಉತ್ತಮ. ಅರ್ಥವಾಗದ ಕೆಲವೆಡೆಗಳಲ್ಲಿ ಬರುವ ಸಂಧಿಗಳನ್ನು ಬಿಡಿಸಿ ಹೇಳುವ ವಿಧಾನದಲ್ಲಿ ಭಾವವನ್ನು ಬೆರೆಸಿ ಹಾಡಿದಲ್ಲಿ ಎಲ್ಲರಿಗೂ ಅರ್ಥವಾಗುವುದು.

ಇನ್ನು ಗಮಕಿಯ ಹೆಚ್ಚುಳಿಕೆಯನ್ನು ಪದ್ಯದಲ್ಲಿ ಬಣ್ಣಿಸುವುದಾದರೆ

ಕವಿ ಗಮಕಿಯು ಗಮಕಿಯು ಕವಿ
ವಿವರಣೆಯಿದು ನಿರ್ವಿವಾದಮರಿಯಲು ನಿಜದಿ
ಕವಿಯೋಗ್ಯತೆಯೊರೆಹಚ್ಚುವ
ನವನೇ ಕವಿಗಿಂತಲಧಿಕ ಮಾನ್ಯನು ಗಮಕಿ ॥

ಎಂಬುದಾಗಿ ಗಮಕಿ ಶ್ರೀ ಎಂ. ರಾಘವೇಂದ್ರರಾಯರು ಬರೆದಿದ್ದಾರೆ. ಶ್ರೀ ಗುರು ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳನ್ನು ಗಮಕಿ ಯಾರು ? ಎಂದು ಕೇಳಿದಾಗ ಅವರು

"ಬೀಜ-ಶಕ್ತಿ-ಕೀಲಕಗಳ ಅಥವಾ ನಾದ ಬಿಂದು ಕಳೆಗಳ
ಇಲ್ಲವೇ ಶಿವ ಶಕ್ತಿ ಶಿವ-ಶಕ್ತಿ ಸಾಮರಸ್ಯತೆಗಳ
(ಹಾರ್ದಿತತಳಾ) ವಿನಿಯೋಗದಿಂದ ಚೇತನವನ್ನು ತಟ್ಟಿ
ಎಚ್ಚರಿಸುವವನೇ ಗಮಕಿ."

ಎಂದು ಹೇಳಿದ ಭೌತಿಕ-ಆಧ್ಯಾತ್ಮಿಕ ರಸಾಯನಿಕವಾದ ಸ್ವಾಮಿಗಳ ನುಡಿಯು ನಾಡಿನ ಗಮಕಿಗಳಿಗೆ ಅತ್ಯಮೋಘ ಸಂದೇಶವಾಗಿದೆ.

ಗಮಕದ ಗಾಡಿ

ಜಾತಿ ಕುದುರೆಯ ಹುಟ್ಟುತನದ ಗಂಭೀರ ನಡಿಗೆಯನ್ನು ನೋಡಿ ತಣಿಯ ಬೇಕಲ್ಲದೆ ಆಡಿ ಆನಂದಗೊಳ್ಳುವುದರಲ್ಲಿ ಕೊರತೆ ಎನಿಸುವುದು. ಹಾಗೆಯೇ ಹುಟ್ಟು ಗಮಕಿಯ ಪ್ರಯೋಗದಲ್ಲಿಯೇ ಗಮಕದ ಗಾಡಿಯು ವ್ಯಕ್ತವಾಗುವುದಲ್ಲದೆ ಮಾತಿನಿಂದಲ್ಲ.

ಗಮಕದಲ್ಲಿ ಗಜಗಮನ ಅಶ್ವಗಮನ-ಕುಕ್ಕುಟ ಗಮನ ಇತ್ಯಾದಿ ಅನೇಕ ಗಮನಗಳಿವೆ. ಈ ಗಮನಗಳು ಕಾವ್ಯದ ಆಯಾ ಸನ್ನಿವೇಶ-ಪಾತ್ರ-ಭಾವರಸ ಲಹರಿಗನುಗುಣವಾಗಿ ಗಮಕವನ್ನು ಪ್ರಯೋಗಿಸಿದಾಗ ವಿಲಕ್ಷಣವಾದ, ವಿನೂತನವಾದ ಅರ್ಥ-ಭಾವ-ಸೌಷ್ಠವದ ವಿಕಾಸವನ್ನುಂಟುಮಾಡುತ್ತದೆ. ಕವಿಯು ನುಡಿದೇವಿಗೆ ಅರ್ಪಿಸಲು ಪದಗಳ ವಿವಿಧ ಭಾವ ರತ್ನಗಳನ್ನೂ ಛಂದಸ್ಸಿನ ಕುಂದಣದಲ್ಲಿ ಕೂಡಿಸುತ್ತಾನೆ. ಆದರೆ ಅರ್ಪಿಸುವವನು ಮಾತ್ರ ಗಮಕಿ. ತನ್ನ ರಾಗಸುಧಾ ಗಮಕ ಸೂತ್ರದಿಂದ ಕವಿಯು ನವರಸಯುಕ್ತವಾದ ಭಾವರತ್ನಗಳನ್ನು ಬಂಧಿಸಿ ಸುಂದರವಾದ ಮಾಲೆಯನ್ನು ಕಟ್ಟುವ ಪ್ರತಿಭೆಯೇ ಗಮಕದ ಗಾಡಿ.

ವೀಣೆಯಲ್ಲಿ ವಿವಿಧ ರಾಗರಸಗಳು ತುಂಬಿಕೊಂಡಿದ್ದರೂ ವೈಣಿಕನ ಕರವಿನ್ಯಾಸದಿಂದಲ್ಲದೆ ಹೊರಬೀಳಲಾರವು. ಕವಿಯ ಕಾವ್ಯವು ಹೀಗೆಯೇ ಗಮಕಿಯ ಸ್ವರವಿನ್ಯಾಸದಿಂದಲ್ಲದೆ ಸ್ವತಃ ನುಡಿಯಲಾರವು. ಮುಖ್ಯವಾಗಿ ಗಮಕದ ಗಾಡಿಯ ವೈಖರಿಯು ದೈವಾನುಗ್ರಹಕ್ಕೆ ಪಾತ್ರನಾದ ಗಮಕಿಯಿಂದಲೇ ವಿಕಾಸಗೊಳ್ಳುವುದು.

ಹರಿಹರನ ರಗಳೆಗಳಲ್ಲಿಯೂ ಕುಮಾರವ್ಯಾಸನ ಯುದ್ಧ ಪಂಚಕದಲ್ಲಿಯೂ ರಾಘವಾಂಕನ ಹರಿಶ್ಚಂದ್ರನ ಬೇಟೆಯಲ್ಲಿಯೂ ಮಹಾಕವಿ ರನ್ನನ ಗದಾಯುದ್ಧದಲ್ಲಿಯೂ ಈ ಗಮಕದ ಗಾಡಿಯು ಎಷ್ಟು ವಿಸ್ತಾರಗೊಂಡಿದೆ ಎಂಬುದು ಕಾವ್ಯಾವಲೋಕಿಗಳಿಗೆ ತಿಳಿಯದ ಮಾತಲ್ಲ. ಇಲ್ಲಿ ಹರಿಶ್ಚಂದ್ರ ಕಾವ್ಯದ ಬೇಡರ ಬೇಟೆಯ ವರ್ಣನೆಯಲ್ಲಿ ಹಂದಿ ಬಂದ ವೈಖರಿಯನ್ನು ಈ ಪದ್ಯದಿಂದ ನೋಡಬಹುದು.

ಎಲೆಲೆಲೆಲೆಲೇ ಹಂದಿಯನುವಾದುದು ಬುಬುಬೆಂ
ದುಲಿದು ನಾಯ್ಗಳುವೆರಸಿ ಮುಕ್ಕುರಿಕ್ಕಲುಮೆಲ್ಲ
ನೊಲೆದುಬ್ಬಿ ಪುಟನೆಗೆದು ಗಜರಿ ಗರ್ಜಿಸಿ ಪುಳಿಂದರಮೇಲೆ ಬವರಿದಿರುಗಿ ॥
ಬಲವಂದು ಹೊಯ್ದು ಬೇಗಕ್ಕೆ ಬಿರುಮುಂದಿ ನಾ
ಳಲ ಹೊರೆಗಳಂ ಕೊಚ್ಚಿದಂತೆಲ್ಲರೊಡಲ ಕಳ
ವಳಿಗೈಯ್ದು ಬೀದಿವರಿದೊಕ್ಕಲಿಕ್ಕಿತ್ತು ರಕ್ಕಸಮಿಗಂ ಕಾಡೊಳೆಂದು ॥

ರನ್ನನು ಗದಾಯುದ್ಧದಲ್ಲಿ ಭೀಮ ದುರ್ಯೋಧನರ ಗದಾಯುದ್ಧವನ್ನು ನಮ್ಮ ಕಣ್ಣೆದುರಿಗೆ ನಮಗೆ ಕೇಳಿಸುವಂತೆಯೇ ಚಿತ್ರಿಸಿದ್ದಾನೆ.

ದಪ್ಪರಿ ದಟ್ಟುಂ ಪೊಟ್ಟನೆ
ದೊಪ್ಪ ಧೊಗಪ್ಪನೆ ದಿಧಿಲ್ಬುಧಿಲ್ಲನೆ ಗದೆಗಳ್
ಸೊಪ್ಪು ಸೊವಡಪ್ಪಿನಂ ಸೂ
ಳ್ತಪ್ಪದೆ ಕಡುಕೆಯ್ದು ಪೊಯ್ದರೊರ್ವರನೋರ್ವರ್ ॥

ಕುಮಾರವ್ಯಾಸನ ಭಾರತದ ಭೀಷ್ಮ ಪರ್ವ ನಾಲ್ಕನೇ ಸಂಧಿಯಲ್ಲಿ ಜೋಣಿ ಯುದ್ಧವನ್ನು ವರ್ಣಿಸುವಾಗ ಈ ಪದ್ಯವನ್ನು ಹೇಳಬಹುದು.

ಎಲೆಲೆ ಕವಿಕವಿ ಬೆರಸು ಬೆರಸಿ
ಟ್ಟಳಿಸು ತಿವಿ ತಿವಿ ಭಲರೆ ಭಲರತಿ
ಬಲರೆ ಹಂಚಿದಿರಿನ್ನು ಹೊಯ್ ಹೊಯ್ ಜೋಣಿಗರೆನುತ ।
ಬಲಜಲಧಿ ಮುಕ್ಕಳಿಸಿ ಮಿಗೆ ಹೆ
ಕ್ಕಳಿಸಿ ಕವಿದುದುಗಿರಿಯ ಬೈಸಿಕೆ
ಕಳಚಿತಹಿಪನ ಕೊರಳು ಕುಸಿದವು ಕಮಠನೆದೆಬಿರಿದ ॥

ಹೀಗೆಯೇ ಅನೇಕ ಕಾವ್ಯಗಳ ಉದಾಹರಣೆಗಳನ್ನು ಕೊಡಬಹುದು.

ಗಾರುಡಿಗ ಗಮಕಿ

ಕ್ರೂರ ಸರ್ಪಗಳನ್ನು ತನ್ನ ಪುಂಗಿಯ ನಾದದಿಂದ ಮುಗ್ಧಗೊಳಿಸಿ ಬುಟ್ಟಿಯಲ್ಲಿ ಸೇರಿಸುವ ಗಾರುಡಿಗನಂತೆ ಗಮಕಿಯು ಕಠಿಣತರವಾದ ಅನೇಕರ ಮನಸ್ಸನ್ನು ಸೆರೆ ಹಿಡಿದು-ಕರಗಿಸಿ-ರಂಜಿಸಿ ತನ್ನ ವಶಮಾಡಿಕೊಳ್ಳುವನು. ಅನೇಕರಿಗೆ ಅರ್ಥವಾಗದ ಕಠಿಣತರ ಕಾವ್ಯಗಳನ್ನು ಮೃದುಗೈದು ಲಲಿತವಾಗಿಯೂ, ಮಧುರವಾಗಿಯೂ ಸ್ವರಯುಕ್ತವಾಗಿ ಹಾಡಿದಾಗ ತಿಳಿಯದವರಾರು ? ಮುಗ್ಧರಾಗದವರಾರು ? ಕೇಳುವ ವರನ್ನು ತನ್ನ ಹೆಜ್ಜೆಯಲ್ಲಿಯೇ ನಡೆಸಿಕೊಂಡು ಆಯಾ ಸನ್ನಿವೇಶ ಕಾಸಾರಗಳಲ್ಲಿ ಅವರನ್ನು ಅದ್ದಿ ತೆಗೆಯುವ ಗಾರುಡಿಗ ಗಮಕಿಯ ಜಾಣ್ಮೆಯು ಶ್ಲಾಘನೀಯ ವಾದುದು.

ದೃಶ್ಯ ಕಾವ್ಯದ ನಾಟಕವನ್ನು ಕೆಲವು ನಟರಿಂದ ಪ್ರದರ್ಶಿಸಿದಾಗ ನಾಟಕದ ಕಥಾನಕವು ಅತ್ಯಂತ ಸ್ಪಷ್ಟವಾಗಿ ಪ್ರೇಕ್ಷಕರಿಗೆ ಕಣ್ಣಿಗೆ ಕಟ್ಟಿದಂತಾಗುತ್ತದೆ. ನಾಟಕ ವನ್ನು ಬರೆದ ಕವಿ ಎಲ್ಲಾ ಪಾತ್ರಗಳು ತಾನಾಗಿ ನಾಟಕವನ್ನು ಬರಯುತ್ತಾನೆ. ಆದರೆ ಎಲ್ಲಾ ಪಾತ್ರಗಳನ್ನು ತಾನಾಗಿ ಅಭಿನಯಿಸಲಾರ. ಗಮಕಿಗೆ ನಾಟಕದ ಆ ಯಾವ ಉಪಕರಣಗಳೂ ಇಲ್ಲ. ತನ್ನ ಹಿರಿದಾದ ಇನಿದಾದ ಧ್ವನಿಯ ವಿನ್ಯಾಸ ದಿಂದಲೇ ಎಲ್ಲ ಪಾತ್ರಗಳು ತಾನಾಗಿ ಆಯಾ ಪಾತ್ರಗಳ ರಸಪೋಷಣೆ ಗೈದು ಶ್ರೋತೃಗಳ ಮನೋನೇತ್ರಗಳ ಮುಂದೆ ಶ್ರಾವ್ಯಕಾವ್ಯವನ್ನು ದೃಶ್ಯಕಾವ್ಯವನ್ನಾಗಿ ಪರಿಣಾಮಗೊಳಿಸುತ್ತಾನೆ. ಆಯಾ ಪಾತ್ರಗಳ ಗುಣದೋಷಗಳನ್ನು ನಮ್ಮ ಮನೋ ಭೂಮಿಯ ಮೇಲೆ ಬಿಂಬಿಸುತ್ತಾನೆ. ಕೇಳುವ ಕಿವಿಯನ್ನೇ ನೋಡುವ ಕಣ್ಣಾಗಿ ಮಾರ್ಪಡಿಸುತ್ತಾನೆ.

ಗಮಕಿಯ ಗಾರುಡಿಗತನದ ಅಂತಸ್ತನ್ನು ಒಂದು ಮಾತಿನಲ್ಲಿ ಹೇಳುವುದಾದರೆ ರಾಷ್ಟ್ರದ ಜನಾಂಗದಲ್ಲಿ ನವಚೈತನ್ಯವನ್ನು ತುಂಬುವ ಅದ್ಭುತ ಅಸಮಾನ ಶಕ್ತಿಯೇ ಗಾರುಡಿಗ ಗಮಕಿ.

ಗಮಕಿಯ ಗಮ್ಯಸ್ಥಾನ

ಕಾವ್ಯದ ರಸಾನುಭವವನ್ನು ಹೃದಯದಿಂದೆಬ್ಬಿಸಿ ಧ್ವನಿ ಮಾಧುರ್ಯದ ಏರಿಳಿತ ಗಳಲ್ಲಿ ನುಣ್ಣನೆ ಜುಣುಗಿಸಿ ಜಿಹ್ವಾಗ್ರಗಳಲ್ಲಿ ನರ್ತಿಸಿ ಮುಖದಲ್ಲಿ ಮೂಡಿಸಿ ಶ್ರೋತೃ ಗಳ ಕರ್ಣದ್ವಾರದಿಂದ ಆ ರಸಾನುಭವವನ್ನು ಹೃದಯ ಸೀಮೆಗಿಳಿಸಿ ತನ್ನನ್ನೂ ಹಾಗೂ ಶ್ರೋತೃಗಳನ್ನೂ ಚರಮಸೀಮೆಗೆಳೆದುಕೊಂಡು ನಡೆವುದೇ ಗಮಕಿಯ ಗಮ್ಯ ಸ್ಥಾನ. ವೇದಾಂತಿಗಳು ಇಂತಹ ಗಮ್ಯಸ್ಥಾನಕ್ಕೆ ಮುಕ್ತಿಯೆಂದು ಕರೆಯುತ್ತಾರೆ. ಈ ಮುಕ್ತ ಸ್ಥಿತಿಯಲ್ಲಿ ಗಮಕಿಯೊಂದಿಗೆ ಕಲೆಯೂ ಲೀನವಾಗುತ್ತದೆ. ಆಗ ಕಲೆಯೂ ಇಲ್ಲ ಗಮಕಿಯೂ ಇಲ್ಲ. ಇಂತಹ ಮುಕ್ತಾವಸ್ಥೆಯು ಎಲ್ಲರ ಸೊತ್ತಾದರೂ ನುಂಗ ಲಾರದ ತುತ್ತು. ಆದರೆ ನುಂಗುವ ಸಾಹಸ ಮಾಡುವವರಿಗೆ ಮಾತ್ರ ಮುತ್ತು. ವಿಚಾರಗಳಿಂದ ಕೆಲವರಿಗೆ ಈಗಾಗಲೇ ತಲೆನೋವು ಬಂದಿರಲಿಕ್ಕೆ ಸಾಕು. ಇನ್ನು ಚರಮಸೀಮೆಯನ್ನಿಳಿದು ಗಮಕಿಯ ಕರ್ಮಸೀಮೆಯಲ್ಲಿ ಕಾವ್ಯವನಿತೆಯೊಂದಿಗೆ ಹೇಗೆ ಬಾಳಿ ಮುಂದೆ ಸಾಗಬೇಕೆಂಬುದಾದರೂ ತಿಳಿಯುವುದು ಮುಖ್ಯ. ಹಾಗೂ ಅವನ ಕರ್ಮಕೌಶಲ್ಯದ ಮಟ್ಟವಾದರೂ ಎಲ್ಲಿಗೆ ಮುಟ್ಟಬೇಕಾಗಿದೆ ಎಂಬುದು ಗ್ರಹಿಸ ಬೇಕಾಗಿದೆ.

ಜೈಮಿನಿ ಭಾರತ, ಮಹಾಭಾರತ, ಪ್ರಭುಲಿಂಗಲೀಲೆ ಇತ್ಯಾದಿ ಕಾವ್ಯಗಳಲ್ಲಿ ಸಂಚರಿಸುವ ಗಮಕಿಯ ಮಟ್ಟವಾವುದು ? ಗದಾಯುದ್ಧ-ಹರಿಶ್ಚಂದ್ರ ಕಾವ್ಯಗಳಲ್ಲಿ ನಡೆದಾಡುವ ಗಮಕಿಯ ಮಟ್ಟವಾವುದು ? ಗಮ್ಯಸ್ಥಾನವಾವುದೆಂಬುದನ್ನು ಉದಾ ಹರಣೆಯಿಂದ ನುಡಿದಾಗ ವ್ಯಕ್ತವಾಗದಿರದು. ಜೈಮಿನಿಭಾರತ-ಮಹಾಭಾರತ- ಪ್ರಭುಲಿಂಗ ಲೀಲೆಗಳಲ್ಲಿ ಗಮಕಿಯು ಸ್ಥೂಲ ಸ್ವರೂಪದಲ್ಲಿ ಉದ್ದುದ್ದ ಹೆಜ್ಜೆಗಳನ್ನಿಟ್ಟು ಕೊಂಡು ಸುನಾಯಾಸವಾಗಿ ಸಾಗಬಹುದು. ಏಕೆಂದರೆ ಆ ಕಾವ್ಯಗಳಲ್ಲಿ ನಾಟಕೀ ಯತೆಯ ಗತಿಯು ಮಂದವಾಗಿ ಪಾತ್ರಗಳ ಸಂಭಾಷಣೆಗಳು ಉದ್ದವಾಗಿದ್ದು ಪಾತ್ರಗಳ ಸಂಕ್ಷಿಪ್ತ ಸಂಭಾಷಣೆಯಿಂದ ಕಥೆಯನ್ನು ನಡೆಸದೆ ಕಥೆಯ ಹೆಚ್ಚು ಭಾಗವನ್ನೆಲ್ಲಾ ಕವಿಯೇ ಹೇಳುತ್ತಾನೆ. ಕೆಲವೆಡೆಗಳಲ್ಲಿ ಕೂಡಿಬಂದ ಪಾತ್ರಗಳ ಸಂಭಾಷಣೆ ಗಳಾದರೂ ಷಟ್ಪದಿಯ ಅರ್ಧವನ್ನೋ-ಸಂಪೂರ್ಣವನ್ನೋ ಒಂದೊಂದು ಪಾತ್ರಕ್ಕೆ ಉಪಯೋಗಿಸುತ್ತಾನೆ. ಕೊಂಚ ಜಾಗರೂಕತೆಯಿಂದ ನಡೆದ ಗಮಕಿಯು ಸುಲಭ ವಾಗಿ ಈ ಸನ್ನಿವೇಶಗಳನ್ನು ದಾಟಬಹುದು ಹಾಗೂ ಜನರ ಮೆಚ್ಚಿಕೆಯನ್ನು ಪಡೆಯಬಹುದು. ಈ ಮೆಚ್ಚಿಕೆಯನ್ನು ಗಳಿಸಿದ ಗಮಕಿಗಳು ಗದಾಯುದ್ಧ- ಹರಿಶ್ಚಂದ್ರ ಕಾವ್ಯಗಳಲ್ಲಿ ಕಾಲಿಟ್ಟಾಗ ಅಸ್ತವ್ಯಸ್ತರಾಗುವುದುಂಟು. ಹಳೆಗನ್ನಡದ

ಗದಾಯುದ್ಧದ ಎಣಿತವು ಬಿಗುವಾದುದು. ಈ ಬಿಗುವಿನಲ್ಲಿ ಹುದುಗಿಕೊಂಡು ಪದಗಳ ದಾರಗಳನ್ನು ಅತಿಸೂಕ್ಷ್ಮತರವಾದ ಗಮಕದ ಸೂಜಿಯ ಮೊನೆಯಿಂದ ನಾಜೋಕಾಗಿ ಬಿಂಗಡಿಸಿ ಎತ್ತಿತೋರಬೇಕಾಗುತ್ತದೆ. ಏಕಾಂಗಿಯಾದ ದುರ್ಯೋಧನನು (ಗದಾಯುದ್ಧ–ತೃತೀಯಾಶ್ವಾಸ, ೩೮ನೇ ಪದ್ಯ)ಪಾಂಡವರ ದೋಷಗಳನ್ನು ಒಂದೊಂದಾಗಿ ಎಣಿಸುತ್ತ—

ಪಸೆಯೊಳ್ಪಸುರ್ವಂದರೊಳ
ಗ್ನಿ ಸಾಕ್ಷಿಯೊಳ್ಕೂಡ ಪಾಂಡು ಪತಿಯರೆ ದೋಷಾ
ವಸಥರ್ಪಾದರದಿಂ ಜನಿ
ಯಿಸಿದರ್ಪಾಂಡವರೊಳಲ್ಲದೆವ್ಮೊಳುಂಟೆ ॥

ಈ ಪದ್ಯವನ್ನು ಓದುವ ಗಮಕಿಯು ದುರ್ಯೋಧನನನ್ನು ಚೆನ್ನಾಗಿ ಅರಿತಿರಬೇಕು. ಅವನಲ್ಲಿ ಒಡೆದು ಮೂಡುವ ಛಲ–ರೋಷ–ಅಸೂಯೆ–ಗಂಭೀರತೆ ಇತ್ಯಾದಿ ಭಾವಗಳಿಗೆ ತಕ್ಕ ರಾಗವನ್ನು–ಭಾವಕ್ಕೆ ತಕ್ಕ ಸ್ಥಾಯಿಗಳನ್ನು ಆರಿಸಿಕೊಂಡಾಗ ಮಾತ್ರ ದುರ್ಯೋಧನನು ನಮ್ಮ ಕಣ್ಣು ಮುಂದೆ ನಿಲ್ಲುವನು.

ಗಮಕಿಯು ಚಿನ್ನದ ಕಲೆಯನ್ನು ತಿಕ್ಕಿ ತಿಕ್ಕಿ ಅದರ ಬಣ್ಣವನ್ನು ಬಯಲಿಗಿಟ್ಟು ಪರೀಕ್ಷಿಸುವ ಒರೆಗಲ್ಲೆಂದರೆ ಹರಿಶ್ಚಂದ್ರ ಕಾವ್ಯ. ಈ ಪರೀಕ್ಷೆಯ ಗಂಡಾಂತರವನ್ನು ದಾಟಿದರೇನೇ ಮುಂದಿನ ಗಮಕ ಕರ್ಮ–ಕೌಶಲ್ಯದ ಸೀಮೆಯನ್ನು ಮುಟ್ಟುವುದು.

ಹರಿಶ್ಚಂದ್ರ ಕಾವ್ಯದ ಗಮನವು ತೀವ್ರಗತಿಯುಳ್ಳದ್ದು. ಶ್ರವ್ಯಕಾವ್ಯವಾದರೂ ದೃಶ್ಯಕಾವ್ಯಕ್ಕಿಂತಲೂ ಕೆಲವು ಕಡೆ ಸಂಭಾಷಣೆಗಳು ಸಂಕ್ಷಿಪ್ತವಾಗಿ ಛಂದೋಬದ್ಧವಾಗಿ ವೇಗದಿಂದ ನಡೆಯುತ್ತದೆ. ಹರಿಶ್ಚಂದ್ರನಿಂದ ಸರ್ವಸ್ವವನ್ನು ದಾನರೂಪವಾಗಿ ಸೆಳೆದುಕೊಂಡ ಕೌಶಿಕನು ಪಟ್ಟಣಕ್ಕೆ ಕರೆದುಕೊಂಡುಹೋಗಿ ಹೇಗಾದರೂ ಆ ರಾಜ ವೈಭವದ ಪ್ರಕಾಶದಲ್ಲಿ ಹರಿಶ್ಚಂದ್ರನಿಂದ ಸುಳ್ಳಾಡಿಸಬೇಕೆಂದು ಆಲೋಚಿಸಿ.

ನಡೆ ರಥವನೇರು ಕೊಳ್ಳೊಲ್ಲೆನೇಕೊಲ್ಲೆ ಪರ
ರೊಡವೆಯೆನಗಾಗದೇಕಾಗದಾನಿತ್ತೆ ನಿ
ತ್ತಡೆ ಕೊಳಲು ಬಾರದೇಂ ಕಾರಣಂ ಬಾರದೆಮಗಂ
ಪ್ರತಿಗ್ರಹಸಲ್ಲದು ।
ಕಡೆಗೆ ನಿನ್ನೊಡವೆಯಲ್ಲವೆ ಯಲ್ಲವೇಕಲ್ಲ
ಕೊಡದ ಮುನ್ನೆನ್ನೊಡವೆ ಕೊಟ್ಟ ಬಳಿಕೆನಗಲ್ಲಿ
ಯೊಡವೆಯೆಂದರರೆ ದಾನಿಗಳ ಬಲ್ಲಹನು ಮುನಿಯೊಡನೆ ಸೂಳ್
ನುಡಿಗೊಟ್ಟನು ॥

ಈ ಪದ್ಯದಲ್ಲಿ ಹರಿಶ್ಚಂದ್ರ–ವಿಶ್ವಾಮಿತ್ರರ ಸಂಭಾಷಣೆಯು ನಾಟಕದ ಗತಿಯನ್ನು ಮೀರಿಸಿದೆ. ಇಲ್ಲಿ ಗಮಕಿಯು ಹರಿಶ್ಚಂದ್ರ–ಕೌಶಿಕರ ಪಾತ್ರಗಳೇ ತಾನಾಗಿ ಮಾತನಾಡಬೇಕು. ಹರಿಶ್ಚಂದ್ರನ ಸತ್ಯಸಂಧತೆಗೆ ತಕ್ಕ ಗಂಭೀರ ಸೌಮ್ಯ ಸ್ವಭಾವಕ್ಕೆ ತಕ್ಕ ರಾಗವನ್ನು ಮುಖ್ಯವಾಗಿ ರಾಗದ ಛಾಯೆಯನ್ನು ವ್ಯಕ್ತಪಡಿಸುವ ಕೋಮಲ ಸ್ಥಾಯಿಗಳನ್ನು ಹಾಗೂ ಮುಖದ ಸೂಕ್ಷ್ಮಚಲನ ವಲನೆಯಿಂದ ಭಾವವನ್ನು ವ್ಯಕ್ತಪಡಿಸಬೇಕು. ಇದಕ್ಕೆ ವಿರುದ್ಧವಾದ ವಿಶ್ವಾಮಿತ್ರನ ದೌಷ್ಟ್ಯತನ ಅಹಂಕಾರಕ್ಕೆ ತಕ್ಕ ರಾಗ–ಸ್ಥಾಯಿಗಳನ್ನು ಆರಿಸಿಕೊಂಡು ಭಾವ ಪ್ರಕಟನೆ ಮಾಡಬೇಕು. ಇದೆಲ್ಲ ಮಿಂಚಿನ ವೇಗದಂತೆ ನಡೆಯಬೇಕು. ನಿಲ್ಲುವುದಕ್ಕಾಗಲಿ, ಉಸಿರಾಡುವುದಕ್ಕಾಗಲಿ, ಆಲೋಚಿಸುವುದಕ್ಕಾಗಲಿ, ನೋಡುವುದಕ್ಕಾಗಲಿ ಕೊಂಚವೂ ಅವಕಾಶವಿಲ್ಲ. ಶರವೇಗದಂತೆ ಗಮಕಿಯು ಹಿಂದು ಮುಂದು ನೋಡದೆ ನಡೆಯಬೇಕು. ರಾಗ–ಸಾಹಿತ್ಯ ಭಾವಗಳಲ್ಲಿ ಯಾವುದು ತಪ್ಪಿದರೂ ಸರಿಯೆ ಗಮಕಿಯು ಅಲ್ಲಿಯೇ ಕಾಲುಜಾರಿ ಮುಗ್ಗರಿಸಿ ಬೀಳುತ್ತಾನೆ. ಕ್ಷಣ–ಕ್ಷಣಕ್ಕೆ, ರಾಗ–ಭಾವ-ರಸಗಳು ವ್ಯತ್ಯಾಸಗೊಳ್ಳುವ ಇಂತಹ ಪದ್ಯಗಳನ್ನು ಓದುವುದೆಂದರೆ ಸಂಗೀತದಿಂದ ಮಾತನಾಡಿದಂತೆ. ಅದನ್ನು ಸಾಧಿಸಿದ ಗಮಕಿಯು ಭಾಷೆಯನ್ನರಿಯದವರ ಮೇಲೆಯೂ ತನ್ನ ಪ್ರತಿಭೆಯನ್ನು ಪ್ರಕಟಿಸಬಲ್ಲ. ಇದೇ ಆತನ ಕೌಶಲ್ಯದ ಗಮ್ಯಸ್ಥಾನ.*

---

* ೧೯೬೬ರಲ್ಲಿ ಸೊಲ್ಲಾಪುರದಲ್ಲಿ ನಡೆದ ಗಮಕ ಗೋಷ್ಠಿಯಲ್ಲಿ ಮಾಡಿದ ಭಾಷಣ.

ಕರ್ನಾಟಕ ಸಂಗೀತದಲ್ಲಿ ಧಾತು-ಮಾತು ಸಮನ್ವಯ

ಪ್ರೊ॥ ರಾ. ಸತ್ಯನಾರಾಯಣ

ಧಾತು ಎಂದರೆ ಹಾಡಿನಲ್ಲಿರುವ ರಾಗ, ತಾಳಗಳ ಅಂಶ. ಪಿಟೀಲು, ವೀಣೆ, ನಾಗಸ್ವರ, ಕೊಳಲು ಮುಂತಾದ ವಾದ್ಯಗಳಲ್ಲಿ ಒಂದು ಕೃತಿಯನ್ನೇ ಬೇರೆ ವಿಧದ ಹಾಡನ್ನೇ ನುಡಿಸಿದರೆ ಅದರಲ್ಲಿ ಕೇಳಿಸುವುದು ಧಾತು. ಮಾತು ಎಂದರೆ ಹಾಡಿನಲ್ಲಿ ಇರುವ ಮಾತುಗಳು. ಅದೇ ಕೃತಿಯನ್ನೇ ಬೇರೆ ಹಾಡನ್ನೇ ಹಾಡಿದರೆ ಅದರಲ್ಲಿ ಧಾತುಮಾತುಗಳೆರಡೂ ಕೇಳಿಸುತ್ತವೆ. ಮಾತುವು ಅದರ ಸಾಹಿತ್ಯ ಭಾಗ. ಹೀಗೆ ಹಾಡುಗಳಲ್ಲಿ ಸಂಗೀತ-ಸಾಹಿತ್ಯಗಳೆರಡೂ ಸೇರಿಕೊಂಡೇ ಇರುತ್ತವೆ.

ಇವುಗಳ ಪರಸ್ಪರ ಸಂಬಂಧವು ಹೇಗಿರಬೇಕು ?

ಹೇಗಿರಬೇಕು ಎಂದರೆ ಶಾಸ್ತ್ರವು ಈ ವಿಷಯದಲ್ಲಿ ಏನನ್ನು ವಿಧಿಸುತ್ತದೆ ಎಂದು ಕೇಳಿದಂತಾಯಿತು. ವಾಸ್ತವವಾಗಿ ಇದು ಒಂದು ಪ್ರಶ್ನೆಯಲ್ಲ. ಹಲವಾರು ಪ್ರಶ್ನೆಗಳ ಸಾಮಾನ್ಯರೂಪ, ಅಷ್ಟೆ. ಯಾವ ಸಂಗೀತ ಪದ್ಧತಿಯಲ್ಲಿ, ಯಾವ ಉದ್ದೇಶಕ್ಕೆ, ಎಂತಹ ರಚನೆಯಲ್ಲಿ ಎಂದು ಮುಂತಾದ ಪ್ರಶ್ನೆಗಳೆಲ್ಲ ಇದರಲ್ಲಿ ಅಡಕವಾಗಿವೆ. ಆದುದರಿಂದ ಇದಕ್ಕೆ ಒಂದೇ ಒಂದು ಉತ್ತರವು ದೊರೆಯಲಾರದು-ದೊರೆಯ

ಬಾರದು. ಉದಾಹರಣೆಗೆ, ಕೆಲವು ಹಾಡುಗಳಲ್ಲಿ ಧಾತುವು ನೆಪ ಮಾತ್ರಕ್ಕೆ, ವಾಹಕ ವಾಗಿ ಮಾತ್ರ ಇರುತ್ತದೆ. ಹೀಗಿದ್ದರೇ ಅಂತಹ ಹಾಡು ಪರಿಣಾಮಕಾರಿಯಾಗಿ ರುತ್ತದೆ. ಇನ್ನು ಕೆಲವು ಹಾಡುಗಳಲ್ಲಿ ಮಾತಿನ ಅಂಶ ಕೇವಲ ಸ್ವಲ್ಪ, ಧಾತುವನ್ನು ನೇತು ಹಾಕಲು ಒಂದು ಆಧಾರವಿದ್ದಂತೆ–ಚಿತ್ರಪಟವೊಂದನ್ನು ಗೋಡೆಗೆ ನೇತು ಹಾಕಲು ಒಂದು ಮೊಳೆ ಬೇಕಾದ ಹಾಗೆ; ಚಿತ್ರಪಟದಷ್ಟೆ ದೊಡ್ಡ ಮೊಳೆಯನ್ನು ಯಾರು ಹೊಡೆಯುತ್ತಾರೆ ! ಮತ್ತೆ ಕೆಲವು ಹಾಡುಗಳಲ್ಲಿ ಎರಡೂ ಮುಖ್ಯವಾಗಿ ರುತ್ತವೆ. ಬಲಗಣ್ಣು ಮುಖ್ಯವೋ ಎಡಗಣ್ಣು ಮುಖ್ಯವೋ ಎಂದು ಹೇಳಿದ ಹಾಗೆ !

ಪ್ರಶ್ನೆಗಳೇನೆ ಇರಲಿ, ಉತ್ತರಗಳೇನೆ ಇರಲಿ, ಒಂದು ವಿಷಯದಲ್ಲಂತೂ ವಾದ ವಿಲ್ಲ, ಸಂದೇಹವಿಲ್ಲ: ಯಾವುದೇ ಹಾಡಿರಲಿ, ಎರಡೂ ಸ್ಪಷ್ಟವಾಗಿರಬೇಕು, ಪರಿಣಾಮಕಾರಿಯಾಗಿರಬೇಕು. ಅವುಗಳನ್ನು ರಚಿಸಿದವರ ಉದ್ದೇಶವು ಸಾರ್ಥಕವಾಗ ಬೇಕು, ಕೇಳುವವರಲ್ಲಿ ರಸಾನುಭೂತಿಯ ತೃಪ್ತಿಯಿರಬೇಕು. ಇವೆಲ್ಲ ಆಗಬೇಕಾದರೆ ಧಾತು ಮಾತುಗಳು ಹೇಗಿರಬೇಕು ಎಂಬುದನ್ನು ಕುರಿತು ಶಾಸ್ತ್ರವು ಏನನ್ನು ಹೇಳು ತ್ತದೆ ? ಇಂತಹ ದೇಶ, ಇಂತಹ ಸಂಸ್ಕೃತಿ, ಇಂತಹ ಕಾಲ, ಇಂತಹ ಹಾಡು, ಇಂತಹ ವಾಗ್ಗೇಯಕಾರ, ಇಂತಹ ಗಾಯಕ–ವಾದಕ, ಇಂತಹ ಶ್ರೋತೃ ಎಂದು ವಿಶೇಷಿಸದೆ ಈ ಪ್ರಶ್ನೆಗಳನ್ನು ಸಾಧಾರಣವಾದ, ಸಾಮಾನ್ಯವಾದ ಭೂಮಿಕೆಯಲ್ಲಿ ವಿಶ್ಲೇಷಿಸಿ, ತರ್ಕ ಶುದ್ಧವಾಗಿ, ಅನುಭವಕ್ಕೆ ವಿರೋಧವಿಲ್ಲದಂತೆ, ಯುಕ್ತಿಯುಕ್ತವಾಗಿ ನಿರ್ಣಯ ಮಾಡುವುದೇ ಶಾಸ್ತ್ರದ ಕೆಲಸ. ಶಾಸ್ತ್ರ ಎಂದರೆ ಶಾಸ್ತ್ರಗ್ರಂಥ; ಆದರೆ ಯಾವ ಸಂಗೀತ ಶಾಸ್ತ್ರ ಗ್ರಂಥ ? ಯಾರು ಯಾವಾಗ ಬರೆದದ್ದು ? ಅದಕ್ಕೆ ಪ್ರಾಮಾಣ್ಯದ ಬಲ ಬೆಲೆ ಎಷ್ಟಿದೆ ? ಈ ಪ್ರಶ್ನೆಗಳು ಏಕೆ ಹುಟ್ಟುತ್ತವೆಂದರೆ, ಬೇರೆ ಬೇರೆ ಕಾಲ ಗಳಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಮಟ್ಟದ ಅಧಿಕಾರವುಳ್ಳವರು ಬರೆದ ಶಾಸ್ತ್ರಗ್ರಂಥಗಳಲ್ಲಿ ಎಲ್ಲದರಲ್ಲಿಯೂ ಎಲ್ಲ ವಿಷಯಗಳಲ್ಲಿಯೂ ಏಕಾಭಿಪ್ರಾಯವಿರು ವುದು ಅಸಾಧ್ಯ. ಸಂಗೀತದ ರೂಢಿ ರುಚಿ ಬದಲಾಯಿಸುತ್ತಲೇ ಇರುತ್ತದೆ, ಇದನ್ನು ಶಾಸ್ತ್ರವು ಅನುಸರಿಸುತ್ತಲೇ ಇರಬೇಕು, ಹೊಂದಿಕೊಳ್ಳುತ್ತ ಹೊಂದಿಸುತ್ತ ಇರಬೇಕು. ಹಾಗಿಲ್ಲದೆ ಎರಡೂ ಬೇರೆ ಬೇರೆಯಾಗಿಯೇ ಬಹುಕಾಲ ಉಳಿದುಬಿಟ್ಟರೆ ಕಲೆಯ ರೂಢಿಯಲ್ಲಿ ಕೊಳೆ ಕಸ ತುಂಬಿ ರೋಗ ಮೂಡುತ್ತದೆ, ಶಾಸ್ತ್ರದಲ್ಲಿ ಗಾಳಿ ಬೆಳಕು ಆಡದೆ ಮುಗ್ಗಿ ಹೋಗುತ್ತದೆ. ಎಂದೇ ಸಂಗೀತದಲ್ಲಿ ಶಾಸ್ತ್ರವನ್ನು ಪುನಃ ಪುನಃ ರಚಿಸುವುದು ಎಂದರೆ ಶಾಸ್ತ್ರ ಗ್ರಂಥಗಳನ್ನು ರಚಿಸುವುದು ಅಗತ್ಯವಾಯಿತು.

ಸುದೈವದಿಂದ, ಈಗ ಎತ್ತಿಕೊಂಡಿರುವ ಪ್ರಶ್ನೆ ವಿವಾದಾಸ್ಪದವಲ್ಲ, ಅದರ ಉತ್ತರ ಅಥವಾ ಉತ್ತರಗಳು ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ, ದೇಶದಿಂದ ದೇಶಕ್ಕೆ ಹೆಚ್ಚು ವ್ಯತ್ಯಾಸವಿರುವಂತಹದಲ್ಲ, ಆದರೆ ಶಾಸ್ತ್ರವು ಇದರ ಉತ್ತರವನ್ನು ನೇರವಾಗಿ ಕೊಡುವುದಿಲ್ಲ ; ಮಾತು–ಧಾತುಗಳನ್ನು, ಎಂದರೆ ವಾಕ್–ಗೇಯಗಳನ್ನು

ರಚಿಸುವ ವಾಗ್ಗೇಯಕಾರನ ಲಕ್ಷಣಗಳೇನು ಎಂದು ವಿವರಿಸುತ್ತದೆ. ಇದರಿಂದ ಹಾಡಿನಲ್ಲಿ ಇವೆರಡೂ ಹೇಗಿದ್ದರೆ ಒಳ್ಳೆಯದು, ಹೇಗಿರಬಾರದು ಎಂದು ಸ್ವಲ್ಪ ಮಟ್ಟಿಗೆ ತಿಳಿಯುತ್ತದೆ. ಸಂಗೀತ ರತ್ನಾಕರ ಎಂಬುದು ಸುಮಾರು ಏಳನೂರಐವತ್ತು ವರ್ಷಗಳ ಹಿಂದೆ ರಚಿತವಾದ ಶಾಸ್ತ್ರಗ್ರಂಥ, ಕನ್ನಡದೇಶದ ಶಾರ್ಙ್ಗದೇವನು ಬರೆದುದು. ತನ್ನ ಹಿಂದಿನ ಆಚಾರ್ಯರ 'ಮತಪಯೋನಿಧಿ'ಯನ್ನು ಕಡೆದು ಅದರ ಸಾರವನ್ನೆಲ್ಲ ಈ ಗ್ರಂಥದಲ್ಲಿ ತುಂಬಿದ್ದಾನೆ. ನಂತರದವರಿಗೆಲ್ಲ ಇದು ಮೇಲ್ಪಂಕ್ತಿಯಾಯಿತು, ಪ್ರಮಾಣವಾಯಿತು ; ಇಂದಿಗೂ ಅನೇಕ ವಿಷಯಗಳಲ್ಲಿ ಅದು ಪ್ರಮಾಣವೆ. ಧಾತು ಮಾತುಗಳನ್ನು ಕುರಿತು ಅದು ಪರೋಕ್ಷವಾಗಿ ಆಡುವ ಮಾತು ಇಂತಹದು. ಅಲ್ಲಿ ಹೇಳಿರುವ ಉತ್ತಮ ಗಾಯಕನ ಲಕ್ಷಣಗಳನ್ನು ಉತ್ತಮ ವಾಗ್ಗೇಯಕಾರನಿಗೂ ಅನ್ವಯಿಸಬೇಕು. ಕೇವಲ ಇನ್ನೂರು ಮುನ್ನೂರು ವರ್ಷಗಳ ಹಿಂದಿನವರೆಗೆ ಅನೇಕ ಸಂಗೀತ ಶಾಸ್ತ್ರಗ್ರಂಥಗಳಲ್ಲಿ ಗಾಯಕನೆಂದರೆ ವಾಗ್ಗೇಯಕಾರನೆಂದೇ ವ್ಯವಹರಿಸಿದೆ. ವಾಗ್ಗೇಯಕಾರನೆಂದೆ ಪ್ರತ್ಯೇಕವಾಗಿ ಲಕ್ಷಿಸಿರುವುದು ಅಪರೂಪ. ಅಂತಹ ವರ್ಣನೆಗಳಲ್ಲಿಯೂ ಗಾಯಕನಿಗೆಂದು ಇತರ ಶಾಸ್ತ್ರಗ್ರಂಥಗಳಲ್ಲಿ ಹೇಳುವುದನ್ನೇ ಹೇಳಿದೆ.

ಸಂಗೀತರತ್ನಾಕರದಲ್ಲಿ ಉತ್ತಮ ಗಾಯಕನು ಹೀಗಿರಬೇಕೆಂದು ಹೇಳಿದೆ : ಅವನು ವ್ಯಾಕರಣ, ನುಡಿಗಟ್ಟು, ಭಾಷಾ ಶಾಸ್ತ್ರ, ಛಂದ : ಶಾಸ್ತ್ರಗಳಲ್ಲಿ ಪಂಡಿತನಾಗಿರಬೇಕು ಶಬ್ದಾಲಂಕಾರ ನಾದಾಲಂಕಾರಗಳನ್ನು ತಿಳಿದಿರಬೇಕು, ವಿಸ್ತಾರವಾದ ಶಬ್ದಜ್ಞಾನವಿರಬೇಕು, ರಸಮೀಮಾಂಸೆಯಲ್ಲಿ ಗಟ್ಟಿಗನಾಗಿರಬೇಕು, ಆಯಾ ದೇಶದ ಸಂಪ್ರದಾಯ ಕಟ್ಟಲೆ, ಆಚಾರವ್ಯವಹಾರ ಮುಂತಾದವುಗಳಲ್ಲಿ ಗಾಢ ಪರಿಚಯವನ್ನು ಪಡೆದಿರಬೇಕು. ಗಾಯನ ವಾದನ ಮತ್ತು ನರ್ತನಗಳಲ್ಲಿ ಕೋವಿದನಾಗಿರಬೇಕು ; ಸ್ವತಃ ಗಾಯಕನಾಗಿ ಉತ್ತಮ ಶಾರೀರವನ್ನು ಪಡೆದಿದ್ದು ರಾಗ ತಾಳಗಳ ಪ್ರಾಣಗಳನ್ನು ಚೆನ್ನಾಗಿ ಬಲ್ಲವನಾಗಿರಬೇಕು, ನಾನಾ ವಿಧದ ರಾಗಗಳ, ತಾಳಗಳ ಪ್ರಯೋಗದಲ್ಲಿ ಅವನಿಗೆ ಪರಿಶ್ರಮವಿರಬೇಕು ; ಹಿಂದಿನ ಕಾಲದ ಮತ್ತು ತನ್ನ ಕಾಲದ ಹಾಡುಗಳ ರಚನೆಯನ್ನು ಅರ್ಥಮಾಡಿಕೊಂಡಿರಬೇಕು, ಬೇರೆ ಬೇರೆ ಬಗೆಯ ಆಲಾಪನಾ ವಿಧಗಳು ಗೊತ್ತಿರಬೇಕು, ಶುದ್ಧ ಮತ್ತು ಸಾಳಗ ಭೇದಗಳಲ್ಲಿ ರಾಗ ತಾಳ ಪ್ರಬಂಧಗಳನ್ನು ತಿಳಿದಿರಬೇಕು ; ಅನೇಕ ವಿಧದ ಧ್ವನಿ ಭೇದಗಳೂ ಅವುಗಳಿಂದ ಸಾಹಿತ್ಯ-ಭಾವ ಮತ್ತು ರಾಗಭಾವಗಳಲ್ಲಿ ಆಗುವ ಪರಿಣಾಮಗಳೂ ಅವನಿಗೆ ಗೊತ್ತಿರಬೇಕು. ಯಾವಾಗಲೂ ಸ್ಫೂರ್ತಿ, ಪ್ರತಿಭೆಗಳು ಅವನಲ್ಲಿ ಉಕ್ಕಿ ಬರುತ್ತಿರಬೇಕು ಶಿಷ್ಟರ ಪದ್ಧತಿಯೂ ಸಂಪ್ರದಾಯವೂ ಅವನಿಗೆ ಮೇಲ್ಪಂಕ್ತಿ ಆಗಿರಬೇಕು. ಅವನು ವಾಗ್ಮಿಯಾಗಿರಬೇಕು. ವೈಯುಕ್ತವಾದ ಕೋಪ, ದ್ವೇಷ, ಮತ್ಸರಗಳನ್ನು ಬಿಟ್ಟಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಕೃತಿಚೌರ್ಯದಲ್ಲಿ ತೊಡಗಬಾರದು, ಪರರ ಚಿತ್ತವನ್ನು ತಿಳಿದ ಇಂಗಿತಜ್ಞನಾಗಬೇಕು ; ಅವನ ಮುಖ್ಯ ಲಕ್ಷಣವೆಂದರೆ ಚರ್ವಿತಚರ್ವಣವಲ್ಲದ, ನಿಜವಾಗಿಯೂ ಹೊಸದಾದ ಧಾತು-ಮಾತುಗಳನ್ನು ನಿರ್ಮಿಸುವ ಶಕ್ತಿಯಿರಬೇಕು.

ಇವೆಲ್ಲ ಸಂಗೀತರತ್ನಾಕರವೊಂದರಲ್ಲಿಯೇ ಹೇಳಿದ ಲಕ್ಷಣಗಳಲ್ಲ; ಒಬ್ಬನೇ ವಾಗ್ಗೇಯಕಾರನಲ್ಲಿ ಈ ಎಲ್ಲ ಲಕ್ಷಣಗಳೂ ಇರುತ್ತವೆಂಬುದೂ ಅಸಂಭವವೆ; ಇದು ಶಾಸ್ತ್ರವು ನಿರ್ಮಿಸಿದ ಆದರ್ಶ ಲೋಕದಲ್ಲಿ ಬೇರೆ ಬೇರೆ ವಾಗ್ಗೇಯಕಾರರಲ್ಲಿ ಇರುವ ಒಂದೊಂದು ಉತ್ತಮ ಗುಣವನ್ನೂ ಸೇರಿಸಿ ರಾಶಿಗೊಳಿಸಿದ ಲಕ್ಷಣ. ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ಹವಿಶ್ಮಾರ, ಮೋಕ್ಷದೇವ ಶಾಸ್ತ್ರಕಾರರು ಈ ಲಕ್ಷಣ ಗಳಲ್ಲಿ ಹಲವನ್ನು ವಾಗ್ಗೇಯಕಾರನವೆಂದೇ ವರ್ಣಿಸುತ್ತಾರೆ.

ಇದೆಲ್ಲ ಹಿಂದಿನವರು ಹೇಳಿದ್ದು ; ನಾವೇ ಈ ವಿಷಯದಲ್ಲಿ ಜಿಜ್ಞಾಸೆಮಾಡಿ ಶಾಸ್ತ್ರವನ್ನು ಬರೆಯ ಹೊರಟರೆ ಇಂದಿನ ಸಂಗೀತ ರೂಢಿಯ ಪರಿಸರದಲ್ಲಿ ಏನನ್ನು ಹೇಳಬಹುದು ? ಹೇಳಬಹುದಾದುದನ್ನೆಲ್ಲ ಹಿಂದಿನವರು ಹೇಳಿ ಮುಗಿಸಿಬಿಟ್ಟಿದ್ದಾರೆ ಎಂದೇನೂ ಇಲ್ಲ. ಸ್ವತಃ ವಾಗ್ಗೇಯಕಾರರಿಗೆ, ಗಾಯಕರಿಗೆ, ವಾದಕರಿಗೆ, ಪಕ್ಕ ವಾದ್ಯದ ವಿದ್ವಾಂಸರಿಗೆ, ವಿಮರ್ಶಕರಿಗೆ : ಕೇಳುವವರಿಗೆ ಈ ವಿಷಯದಲ್ಲಿ ಏನೇನು ಎನ್ನಿಸಬಹುದು ? ನಾವು ಹೇಳಿದ್ದು ಹಿಂದಿನವರು ಹೇಳಿದಂತೆಯೆ ಇರಬೇಕು ಎಂದಾ ಗಲಿ, ಅವರು ಹೇಳಿದ್ದಕ್ಕಿಂತ ಬೇರೆಯಾಗಿ ನಾವು ಹೇಳಿಯೇ ತೀರಬೇಕೆಂದಾಗಲಿ ಏನೂ ಇಲ್ಲ. ಅಥವಾ ನಾವು ಹೇಳಬಹುದಾದುದೆ ಇದರಲ್ಲಿ ಕಟ್ಟಕಡೆಯ ಮಾತು ಎಂದಂತೂ ಖಂಡಿತ ಅಲ್ಲ. ಆದರೂ ಈ ವಿಷಯದಲ್ಲಿ ನಾವೆಲ್ಲ ಆಲೋಚಿಸಬೇಕು, ಒಂದು ಅಭಿಪ್ರಾಯವನ್ನು ಮಾಡಿಕೊಳ್ಳಬೇಕು. ಏಕೆಂದರೆ ಹೀಗೆ ಮಾಡುವುದರಿಂದ ನಾವೂ ಬೆಳೆಯುತ್ತೇವೆ, ನಮ್ಮ ಸಂಗೀತವೂ ಬೆಳೆಯುತ್ತದೆ.

"ಭಕ್ತಿ ಸಂಗೀತ"

ವಿದುಷಿ ಸರ್ವಮಂಗಳಾ ಶಂಕರ್

ಪೀಠಿಕೆ :

ಭಾರತೀಯರಾದ ನಾವು ಯುಗ ಯುಗಾಂತರಗಳಿಂದಲೂ ಧರ್ಮ ಮೋಕ್ಷ ಗಳಲ್ಲಿ ನಂಬಿಕೆಯನ್ನಿಟ್ಟು, ಸಂಗೀತ ಮಹಾಕಲೆಗೆ ಪ್ರಾಶಸ್ತ್ಯವನ್ನು ಕೊಡುತ್ತಾ ಬಂದಿದ್ದೇವೆ.

"ನಾಹಂವಸಾಮಿ ವೈಕುಂಠೇ ನಯೋಗಿ ಹೃದಯೇರವೌ
ಮದ್ಭಕ್ತಾಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದಾ"

ಎಂಬ ನಾರದರ ಮಾತಿನಂತೆ ವೈಕುಂಠದಲ್ಲಿಯಾಗಲೀ, ಯೋಗಿಗಳ ಹೃದಯ ದಲ್ಲಾಗಲೀ ನೆಲೆಸುವುದಕ್ಕಿಂತ, ಎಲ್ಲಿ ನನ್ನ ಭಕ್ತರು ಕುಳಿತು ಹಾಡುವರೋ ಅಲ್ಲಿ ನೆಲೆಸುತ್ತೇನೆ ಎಂದಿರುವುದು ಗಾಯನದ ಮಹತ್ವವನ್ನು ಸೂಚಿಸುತ್ತದೆ. ಮಾನವ ನಾದರೋ ತಾನು ಆರಾಧಿಸುವ ದೇವತೆಗಳ ಕೈಗೆ ಸಂಗೀತವಾದ್ಯಗಳನ್ನು ಕೊಟ್ಟು ಸಂಗೀತಕಲೆಯಲ್ಲಿ ತನಗಿರುವ ಪ್ರೀತಿ ಗೌರವಗಳನ್ನು ಸೂಚಿಸಿದ್ದಾನೆ. ಮುಖ್ಯವಾಗಿ ಹೇಳುವುದಾದರೆ, ನಮ್ಮ ದೇಶದಲ್ಲಿ ಧರ್ಮ ಮತ್ತು ಸಂಗೀತವು ನಿಕಟ ಸಂಬಂಧ

ವನ್ನು ಹೊಂದಿದ್ದು, ಭಗವಂತನನ್ನು ಸ್ತುತಿಸಿ ಭಜಿಸಿದಲ್ಲಿ ಮೋಕ್ಷಪ್ರಾಪ್ತಿಯಾಗುವು ದೆಂಬ ಸದೃಢ ನಂಬಿಕೆ ನಮ್ಮಲ್ಲಿ ಬಲವಾಗಿ ಬೇರೂರಿದೆ. ಭಕ್ತಶ್ರೇಷ್ಠರು ಭಗವತ್ ಭಕ್ತಿಯಿಂದ ಪ್ರೇರಿತರಾಗಿ, ತಮ್ಮ ಇಷ್ಟದೈವವನ್ನು ಕುರಿತು ರಚಿಸಿದ ಇಲ್ಲವೆ ಹೇಳಿದ ಕವನಗಳೇ ಭಕ್ತಿ–ಸಂಗೀತದ ಸಾಹಿತ್ಯ. ಆ ಕವನಗಳನ್ನು ಸಂಗೀತದ ಮೂಲಕ ಆರಾಧಿಸುವುದೇ ಭಕ್ತಿ ಸಂಗೀತ.

ಸಂಗೀತದ ಉಗಮ :

ಭಕ್ತಿ ಸಂಗೀತವನ್ನು ದೀರ್ಘವಾಗಿ ಅರಿಯುವ ಮೊದಲು, ಭಾರತೀಯ ಸಂಗೀತದ ಉಗಮದ ಬಗೆಗೆ ಗಮನ ಹರಿಸಿದಾಗ ಈ ಕೆಳಕಂಡ ವಿಷಯಗಳು ನಮಗೆ ವೇದ್ಯವಾಗುತ್ತವೆ. ಜಗತ್ತಿನಲ್ಲಿ ಮೊದಲಿಗೆ ನಾದವನ್ನು ಆತ್ಮ ಸಾಕ್ಷಾತ್ಕಾರದ ಮಹತ್ಸಾದನೆಗಾಗಿ ಬಳಸಿಕೊಂಡವರು ಭಾರತೀಯರೇ. ವೇದಗಳ ಕಾಲದಲ್ಲಿ ಮಾನವನು, ದೇವನಲ್ಲಿ ತನಗಿರುವ ಭಕ್ತಿ, ಪ್ರೀತಿಗಳನ್ನು ನಿವೇದಿಸಿಕೊಳ್ಳಲು ನಾದ ವನ್ನು ಬಳಸಿದನು. ನಾದದ ಮುಖ್ಯ–ಉದ್ದೇಶವಾದರೂ ಭಕ್ತಿಯ ಅಭಿವ್ಯಕ್ತಿ. ಭಕ್ತಿಯ ದ್ಯೋತಕವಾಗಿ ನಾದ ಉಗಮಗೊಂಡಿತು. ಈ ನಾದದಿಂದ ಸ್ವರ, ಸ್ವರ ಗಳಿಂದ ಆರೋಹ ಅವರೋಹಗಳು. ನಂತರ ರಾಗಗಳ ಉದ್ಭವ ಸಾಧ್ಯವಾಯಿತು. ನಾದದಿಂದ ಸ್ವರ ಮುಂದೆ ತಾಳಗಳು ಉದ್ಭವಗೊಂಡು, ಮುಂದೆ ಸ್ವರವಾದ್ಯಗಳು ತಾಳವಾದ್ಯಗಳು ಸೃಷ್ಟಿಗೊಂಡವು. ನಂತರ ಗಾಯನ, ವಾದನ, ನರ್ತನಗಳೂ ಬೆಳೆದವು. ಹೀಗೆ ಸಂಗೀತದಲ್ಲಿ ಭಕ್ತಿಯ ಸ್ಥಾನ ಬಹು ದೊಡ್ಡದು.

ಭಕ್ತಿ ಸಂಗೀತ :

ಭಕ್ತಿ ಸಂಗೀತವಾದರೋ ಲೌಕಿಕ ಸಂಗೀತಕ್ಕಿಂತ ಪ್ರಾಚೀನವಾದುದು. ಭಕ್ತಿ ಸಂಗೀತವನ್ನು ಪವಿತ್ರಸಂಗೀತ, ವೈದಿಕಸಂಗೀತ ಎಂದೆಲ್ಲಾ ಕರೆಯುತ್ತೇವೆ. ಇದರಲ್ಲಿ ದೇವನೊಬ್ಬನಿಗೇ ಹಿರಿಯ ಸ್ಥಾನ. ಭಕ್ತಿಯ ಭಾವೋದ್ವೇಗದಿಂದ ಅಂತರಂಗದಿಂದ ಉಕ್ಕಿಬಂದಂತಹ ವಾಕ್ಪ್ರವಾಹವೇ ಈ ಭಕ್ತಿಸಂಗೀತದ ಸಾಹಿತ್ಯ. ಮನಸ್ಫೂರ್ತಿ ಯಿಂದ ಮನಸ್ಸಾಕ್ಷಿಯಿಂದ ದೇವನನ್ನು ಹಾಡಿ ಕೊಂಡಾಡುವುದೇ ಇದರ ನಿಯಮ.

ಧರ್ಮದ ಪ್ರಭಾವವು ಸಂಗೀತದ ಮೇಲೆ ಅಪಾರವಾಗಿ ಉಂಟಾಗಿ, ಭಾರತದ ಹಲವು ಭಾಷೆಗಳಲ್ಲಿ ಭಕ್ತಿರಚನೆಗಳು ರಚಿತಗೊಂಡವು. ಭಕ್ತಿಮಾರ್ಗವು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸುಲಭಮಾರ್ಗವೆಂದರಿತ ಅನೇಕ ಮಹನೀಯರು ಭಕ್ತಿ ಸಾಹಿತ್ಯದ, ಭಕ್ತಿಸಂಗೀತದ ಪ್ರವಾಹವನ್ನೇ ಹರಿಸಿದರು. ತಮಿಳು ದೇಶದ ವೈಷ್ಣವ ಆಳ್ವಾರರೂ, ಮಹಾರಾಷ್ಟ್ರದ ಅನುಭಾವ–ಪಂಥದವರೂ, ಕರ್ನಾಟಕದ ಶಿವಶರಣರೂ, ಹರಿದಾಸರೂ, ಉತ್ತರದ ಸಂತರೂ ಭಕ್ತಿಮಾರ್ಗವನ್ನು ಹರಡಿದರು.

ಭಕ್ತಿಸಂಗೀತದ ಸಂಗೀತ ಮತ್ತು ನಡೆಗಳು ಬಲು ಸರಳವಾದುವು. ಇದರಲ್ಲಿ ಸಂಗೀತಕ್ಕಿಂತ ಸಾಹಿತ್ಯಕ್ಕೇ ಹೆಚ್ಚಿನ ಪ್ರಾಶಸ್ತ್ಯ. ನವವಿಧ ಭಕ್ತಿಗಳಿಂದ ಶ್ರವಣ, ಕೀರ್ತನ, ಸ್ಮರಣ, ಪಾದಸೇವನೆ, ಅರ್ಚನ, ವಂದನ, ದಾಸ್ಯ, ಸಖ್ಯ ಹಾಗೂ ಆತ್ಮನಿವೇದನ ಭಾವಗಳನ್ನೊಳಗೊಂಡ ಅಸಂಖ್ಯಾತ ರಚನೆಗಳು ಈ ಭಕ್ತಿಸಂಗೀತಕ್ಕೆ ಸದೃಢ ಪೋಷಣೆಯನ್ನು ನೀಡಿದವು. ದೇವನನಾಮ ಸ್ಮರಣೆಯೊಂದಿಗೆ ಜನತೆಗೆ ನೀತಿತತ್ತ್ವವನ್ನುಪದೇಶಿಸುವ, ಪುರಾಣ ಪ್ರಸಂಗಗಳನ್ನುಳ್ಳ, ದೇವತಾವರ್ಣನೆಯ ವಿಚಾರಾತ್ಮಕ, ವಿವೇಚನಾತ್ಮಕ ರಚನೆಗಳು ಈ ದಿಸೆಯಲ್ಲಿ ರಚಿತಗೊಂಡವು.

ತಮಿಳು ಭಾಷೆ :

ಸುಮಾರು 7 ರಿಂದ 9ನೇ ಶತಮಾನಗಳಲ್ಲಿ ತಮಿಳು ಭಾಷೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಭಕ್ತಿರಚನೆಗಳು ರಚಿತಗೊಂಡವು. ಇವುಗಳಲ್ಲಿ ತೇವಾರಂ, ತಿರುವಾಚಕಂ, ತಿರುಪ್ಪುಗಳ್, ಮುಖ್ಯವಾದುವು. ತಿರುಜ್ಞಾನ ಸಂಭಂದರ್ (7ನೇಶ) ಅಪ್ಪಾರ್ (7ನೇಶ) ಮತ್ತು ಸುಂದರಮೂರ್ತಿನಾಯನಾರ್ (9ನೇಶ) ಇವರುಗಳು ಪ್ರಮುಖ ತೇವಾರಂ ರಚನೆಕಾರರು. ತೇವಾರಂಗಳಲ್ಲಿನ ಉಸಿರೇ ಭಕ್ತಿ. ನವವಿಧ ಭಕ್ತಿಯ ನ್ನೊಳಗೊಂಡ ತೇವಾರಂಗಳನ್ನು ಹಿಂದೆ ಪನ್‌ಗಳಲ್ಲಿ ಎಂದರೆ ರಕ್ತಿರಾಗಗಳಲ್ಲಿ ಹಾಡುತ್ತಿದ್ದರು. ರಾಗಕ್ಕೆ ಹೆಚ್ಚು ಪ್ರಾಧಾನ್ಯವನ್ನು ನೀಡಿರುವ ಈ ತೇವಾರಂಗಳಲ್ಲಿ ತಾಳಗಳ ಬಗೆಗೆ ಏನೂ ತಿಳಿದು ಬರುವುದಿಲ್ಲ. ತೇವಾರಂಗಳಲ್ಲಿ ನಾದನಾಮಕ್ರಿಯ, ನವರೋಜ್, ನೀಲಾಂಬರಿ, ನಾಟ, ಭೂಪಾಳ, ಕೇದಾರಗೌಳ, ಸೌರಾಷ್ಟ್ರ, ಭೈರವಿ, ಇತ್ಯಾದಿ ಭಕ್ತಿ ಪ್ರಧಾನರಾಗಗಳು ಬಳಕೆಯಲ್ಲಿದ್ದುದು ತಿಳಿದುಬರುತ್ತದೆ. ತೇವಾರಂಗಳಲ್ಲಿ ಬಳಸುತ್ತಿದ್ದ ಪನ್‌ಗಳು ಇಂದಿನ ನಮ್ಮ ರಾಗಗಳನ್ನು ಹೋಲುತ್ತವೆ.

ನಮ್ಮ ಸಂಗೀತ, ರಾಗಗಳಿಗೆ ನಾನಾ ರಾಗ, ಭಾವಗಳನ್ನೂ, ರಾಗರಸವನ್ನೂ ಸೂಚಿಸಲಾಗಿದೆ.

ಅಂತೆಯೇ ತಮಿಳರು ಸಾಹಿತ್ಯದ ಅರ್ಥಭಾವಕ್ಕೆ ಹೊಂದುವಂತಹ ರಾಗಗಳನ್ನು ಸಮನ್ವಯವಾಗುವಂತೆ ಸೂಚಿಸಿದ್ದಾರೆ. ತೇವಾರಂಗಳು ದೇಶೀ ಸಂಗೀತಕ್ಕೆ ಮೊದಲಿನ ಮತ್ತು ಔಚಿತ್ಯಪೂರ್ಣ ಉದಾಹರಣೆಯಾಗಿ ನಿಲ್ಲುತ್ತವೆ. ಅರುಣಗಿರಿ ನಾಥರ್ ಅವರ ತಿರುಪ್ಪುಗಳ್, ಮಾಣಿಕ್ಯವಾಚಕರ್ ಅವರ ತಿರುವಾಚಕಂ, ತಾಯು ಮಾನವರ್ ವಿರಚಿತ ಸಿದ್ಧರ್‌ಪಾಡಲ್, ರಾಮಲಿಂಗಸ್ವಾಮಿ ಅವರ ಅರುಟ್ಪ ಇವುಗಳು ತಮಿಳು ಭಾಷೆಯ ಅತ್ಯುತ್ತಮ ಭಕ್ತಿ ರಚನೆಗಳಾಗಿವೆ.

ವಚನ ಸಾಹಿತ್ಯ :

12ನೇ ಶತಮಾನದಲ್ಲಿ ವೇದ ಆಗಮ ಉಪನಿಷತ್ತುಗಳ ಸಾರವನ್ನು ಸರಳ ಸುಂದರ ಕನ್ನಡ ಭಾಷೆಯಲ್ಲಿ, ವಚನಗಳ ವಚನಗೀತೆಗಳ ಮೂಲಕ ವಿವರಿಸಿ,

ಜನವಾಣಿಯನ್ನೇ ದೇವವಾಣಿಯ ಎತ್ತರಕ್ಕೆ ಎತ್ತಿ ಹಿಡಿದ ವಚನವಾಙ್ಮಯ ಅತ್ಯಮೂಲ್ಯವಾದುದು. ಭಕ್ತಿಭಂಡಾರಿ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮಣ್ಣ ಇತ್ಯಾದಿ ನೂರಾರು ಶಿವಶರಣರು ಶಿವಭಕ್ತಿಯನ್ನು ಸಾರುವ, ಲೋಕದ ಡೊಂಕನ್ನು ತಿದ್ದುವ ಅಸಂಖ್ಯಾತ ವಚನಗಳ ನಿರ್ಮಾಣ ಮಾಡಿದ್ದಾರೆ. ಈ ವಚನಗಳನ್ನು ಹಾಡುತ್ತಿದ್ದರೆಂಬುದಕ್ಕೆ ನಮಗೆ ಅನೇಕ ಉಲ್ಲೇಖಗಳಿವೆ. ಅನೇಕ ವಚನಗೀತೆಗಳಿಗೆ ತಾಳ ಹಾಗೂ ರಾಗಗಳು ಉಲ್ಲೇಖಗೊಂಡಿವೆ. ಬಸವೇಶ್ವರರು ಅನೇಕ ವಚನಗಳಲ್ಲಿ ಭಕ್ತಿಯ ಪ್ರಾಶಸ್ತ್ಯವನ್ನು ಸಾರಿದ್ದಾರೆ.

12ನೇ ಶತಮಾನದ ಈ ವಚನಕಾರರಿಗೆ 7 ರಿಂದ 9ನೇ ಶತಮಾನದಲ್ಲಿದ್ದ ತಮಿಳು ಭಕ್ತಿ ರಚನೆಗಳ ಪ್ರಭಾವ ಇದ್ದಿರಬೇಕು. ಹೀಗಾಗಿ ವಚನಗಳನ್ನು, ತೇವಾರಂಗಳಂತೆ ತಾಳವಿಲ್ಲದೆ ಭಕ್ತಿ ಭಾವದಿಂದ ರಾಗವಾಗಿ ಹಾಡುತ್ತಿದ್ದರು. ಹೀಗಾಗಿ ಗಾಯನದ, ವಾದನದ ಬಗೆಗೆ ನಮಗೆ ಹಲವಾರು ವಿಷಯಗಳು ದೊರೆಯುತ್ತವೆ. 'ತಾಳಮಾನ ಸರಿಸವನರಿಯೆ ಓಜೆ ಬಜಾವಣೆಯ ಲೆಕ್ಕವನರಿಯೆ ....ಆನು ಒಲಿದಂತೆ ಹಾಡುವೆ' ಎಂದು ಬಸವಣ್ಣನವರೇ ಹೇಳಿದ್ದಾರೆ. ಒಟ್ಟಿನಲ್ಲಿ ಯಾವ ಒಂದು ನಿಬಂಧನೆಗೂ ಒಳಪಡದ ಶುದ್ಧ ಭಕ್ತಿ ಸಂಗೀತ ವಚನಕಾರರ ಈ ಭಕ್ತಿ ಸಂಗೀತ. ಹಾಡುಗಬ್ಬಗಳನ್ನು, ಕೃತಿರೀತಿಯ ರಚನೆಗಳನ್ನು ರಚಿಸಿ, ಜನತೆಗೆ ಅರಿವು ಮೂಡಿಸಿರುವ ಶ್ರೀ ನಿಜಗುಣಶಿವಯೋಗಿ, ಮುಪ್ಪಿನಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾಮಹಂತ ಶಿವಯೋಗಿ, ಶಿಶುನಾಳ ಶರೀಫ್ ಇವರುಗಳು ತಮ್ಮ ರಚನೆಗಳಲ್ಲಿ ಭಕ್ತಿ ವೈರಾಗ್ಯಗಳನ್ನೂ, ಜೀವನದ ಫಲಾಫಲಗಳನ್ನು ತಿಳಿಸಿ, ತಿಳುವಳಿಕೆ ನೀಡಿದ್ದಾರೆ. ತಮ್ಮದೇ ಆದಂತಹ ಅಸದೃಶ ಕಾಣಿಕೆಯನ್ನು ನೀಡಿ, ಭಾರತೀಯ ಸಂಸ್ಕೃತಿ ಸಂವರ್ಧನೆಗೆ ಕಾರಣ ಪುರುಷರೆನಿಸಿದ್ದಾರೆ. ಸಾಹಿತ್ಯ ಸಂಗೀತಕ್ಷೇತ್ರವೆರಡನ್ನೂ ಶ್ರೀಮಂತವನ್ನಾಗಿಸಿದ್ದಾರೆ.

ದಾಸ ಸಾಹಿತ್ಯ :

16 ನೇ ಶತಮಾನವು ನಮ್ಮ ಭಾರತೀಯ ಭಕ್ತಿ ಸಂಗೀತದ ಮಹತ್ವದ ಕಾಲವೆಂದು ಹೇಳಬಹುದು. ಭಕ್ತಿಭಾವವನ್ನೊಳಗೊಂಡ ಸಾಹಿತ್ಯ ಅದಕ್ಕೆ ರಾಗತಾಳಗಳು ಸೇರಿ, ಸಂಗೀತ ರೂಪವನ್ನು ತಾಳಿ, ಕೀರ್ತನ ರೂಪದಿಂದ ಅಮೃತಪ್ರವಾಹವನ್ನೆರೆದವರು ಹರಿದಾಸರು. ಕನ್ನಡ ಸಾಹಿತ್ಯದ ನವನಿಧಿಗಳಲ್ಲಿ ದಾಸ ಸಾಹಿತ್ಯವೂ ಒಂದು. ಹಿಮಾಲಯದೆತ್ತರದಿಂದ ಹರಿದುಬಂದ ಗಂಗೆಯೇ, ಬಯಲಿನಲ್ಲಿ ಹರಿದು ನೆಲವನ್ನೆಲ್ಲಾ ಫಲಪ್ರದ ಮಾಡುವಂತೆ, ದಾಸ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ಚಿತ್ತದ ಎತ್ತರದಿಂದ ಹುಟ್ಟಿ, ಕೆಳಗಿನ ಎಲ್ಲಾ ಜನರವರೆಗೆ ಹಬ್ಬಿಕೊಂಡಿತು. ಜನತೆಯಲ್ಲಿ ಸಂಸ್ಕೃತಿಯನ್ನು ಬೆಳೆಸುವ ಪ್ರಭಾವಿಯಾದ ಸಾಧನವಾಯಿತು. ಓದದ ಕನ್ನಡ

ಜನಕ್ಕೆ ಪಂಪಾದಿ ಪ್ರೌಢ ಕವಿಗಳು ಗೊತ್ತಿರಲೀ ಬಿಡಲೀ, ದಾಸರ ಸೂಳ್‌ನುಡಿಗಳೂ ಸವಿಹಾಡುಗಳು ಗೊತ್ತಿಲ್ಲದವರು ಅಪರೂಪ. ಎಲ್ಲಾ ಮತಗಳನ್ನು ಮೀರಿದ ನೀತಿ, ಧರ್ಮ, ಉಚ್ಚವಾದ ಮಾನವ ಮೌಲ್ಯವನ್ನು ಪಡೆದಿದ್ದುದರಿಂದಲೇ, ದಾಸ ಸಾಹಿತ್ಯಕ್ಕೆ ಸರ್ವಮಾನ್ಯತೆ ದೊರೆಯಿತು. ಉಗಾಭೋಗ, ವೃತ್ತನಾಮ, ಸುಳಾದಿ, ದೇವರನಾಮ, ಕಂದ, ಸೀಸ, ತ್ರಿಪದಿ, ಚೌಪದಿ, ಷಟ್ಪದಿ, ತತ್ವಸುವ್ವಾಲಿ, ಸಾಂಗತ್ಯ ಇವು ಹರಿದಾಸರ ಅತ್ಯುತ್ತಮ ಕೊಡುಗೆಗಳಾಗಿವೆ. ಹರಿದಾಸರಲ್ಲಿ ಸಂಗೀತ ಪಿತಾಮಹ ಶ್ರೀ ಪುರಂದರದಾಸರು, ಕನಕದಾಸರು, ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ವಿಜಯದಾಸರು, ಜಗನ್ನಾಥದಾಸರು, ಗೋಪಾಲ ದಾಸರು ಇತ್ಯಾದಿ ದಾಸರು ಸಾಹಿತ್ಯ ಸಂಗೀತಗಳ ಮೂಲಕ ಜೀವನದ ಮೌಲ್ಯವನ್ನು ಜನತೆಗೆ ತಿಳಿಸಿ ನೀತಿ ಬೋಧನೆ ಮಾಡಿದ್ದಾರೆ. ಸಾಹಿತ್ಯಕ್ಕೆ ಹೊಂದುವ ರಾಗ ತಾಳ ಗಳನ್ನು ತಿಳಿಸಿರುವುದು ದಾಸಸಾಹಿತ್ಯದ ಒಂದು ಉತ್ತಮ ಸಾಧನೆ. ದೇವನನ್ನು ಸ್ವಾಮಿಯಂತೆ, ಗೆಳೆಯನಂತೆ, ಪೂಜ್ಯನಂತೆ ಭಾವಿಸಿ, ಒಮ್ಮೆ ಹೊಗಳುವ, ಒಮ್ಮೆ ನುತಿಸುವ, ಸಮರ್ಪಣಾ ಮನೋಭಾವಗಳ ಈ ಭಕ್ತಿ ರಚನೆಗಳು ಭಕ್ತನನ್ನು ಆನಂದ ಲೋಕದಲ್ಲಿರಿಸಿ, ಪರಮಸುಖವನ್ನು ನೀಡುತ್ತವೆ.

"ಆಡುಮುಟ್ಟದ ಸೊಪ್ಪಿಲ್ಲ" ಎನ್ನುವಂತೆ ಹರಿದಾಸರು ಹೇಳದ ವಿಷಯವಿಲ್ಲ. ಒಟ್ಟಿನಲ್ಲಿ ಭಕ್ತಿ ಸಂಗೀತಕ್ಕೆ ಹರಿದಾಸರ ಕೊಡುಗೆ ಅತ್ಯಂತ ಹಿರಿದಾದುದು.

ಸಂಸ್ಕೃತ ಭಾಷೆ :

ಸಂಸ್ಕೃತ ಭಾಷೆಯಲ್ಲಿ ಜಯದೇವನ ಗೀತಗೋವಿಂದ, ನಾರಾಯಣ ತೀರ್ಥರ ಕೃಷ್ಣಲೀಲಾತರಂಗಿಣಿ, ಅಯ್ಯವಾಳ್, ಸದಾಶಿವ ಬ್ರಹ್ಮೇಂದ್ರ ಇತ್ಯಾದಿ ರಚನೆಕಾರರ ರಚನೆಗಳು ಪ್ರಮುಖವಾದುವು.

ತೆಲುಗು ಭಾಷೆ :

ಸಂಗೀತಭಾಷೆ ಎಂದೇ ಹೆಸರು ಗಳಿಸಿರುವ ತೆಲುಗು ಭಾಷೆಯಲ್ಲಿ ರಚಿತ ಗೊಂಡಿರುವ ತಾಳ್ಳಪಾಕಂ ಅನ್ನಮಾಚಾರ್ಯರ ಸಂಕೀರ್ತನೆಗಳು, ತ್ಯಾಗರಾಜವಿರಚಿತ ದಿವ್ಯನಾಮ ಸಂಕೀರ್ತನೆಗಳು, ಉತ್ಸವ ಸಂಪ್ರದಾಯ ಕೃತಿಗಳು, ನಾಮಾವಳಿಗಳು ಇವು ಮನಮುಟ್ಟುವಂತಹ ರಚನೆಗಳು. ಈ ರಚನೆಗಳನ್ನು ಇಂದಿಗೂ ಭಜನೆ, ಉತ್ಸವ, ಊಂಛವೃತ್ತಿಗಳಲ್ಲಿ ಹಾಡಲಾಗುತ್ತಿದೆ.

ಕ್ಷೇತ್ರಜ್ಞನ ಪದಗಳು ಶೃಂಗಾರರಸ ಪ್ರಧಾನವಾಗಿದ್ದು, ಪ್ರೇಮದಶುದ್ಧ ಸ್ವರೂಪವಾದ ಭಕ್ತಿರಸದಿಂದ ಕೂಡಿವೆ. ಹಾಗೆಯೇ ಭದ್ರಾಚಲ ರಾಮದಾಸ,

ಗಿರಿರಾಜ ಕವಿ, ಮಾತೃಭೂತಯ್ಯ ಮುಂತಾದವರು ತೆಲುಗು ಭಾಷೆಯಲ್ಲಿ ಅನೇಕ ಭಕ್ತಿ ರಚನೆಗಳನ್ನು ಕಾಣಿಕೆಯಾಗಿ ನೀಡಿದ್ದಾರೆ.

ಭಜನ ಪದ್ಧತಿ :

ಸುಮಾರು 14-15 ನೇ ಶತಮಾನದಲ್ಲಿ ಭಾರತಾದ್ಯಂತ ಭಕ್ತಿ ಚಳುವಳಿ ಪ್ರಾರಂಭವಾಗಿ ಭಜನ ಪದ್ಧತಿಯು ರೂಢಿಗೆ ಬಂದಿತು. ಮೇಲುಕೀಳು, ಉಚ್ಚನೀಚ ಭಾವಗಳನ್ನಳಿದು, ದೇವನಲ್ಲಿ ಸಮರ್ಪಣ ಮನೋಭಾವವನ್ನು ಅರ್ಪಿಸಿ, ತಮ್ಮ ಮನ ಬಂದ ಪರಿಯಲ್ಲಿ ನೂರಾರು ಭಕ್ತರು ಹಾಡಿ, ಕುಣಿದು, ತಾಳಗೆಜ್ಜೆಗಳನ್ನು ಹಿಡಿದು, ಭಗವನ್ನಾಮ ಸಂಕೀರ್ತನೆಯಲ್ಲಿ ಪಾಲ್ಗೊಂಡರು. ಭಕ್ತಿ ರಚನೆಗಳನ್ನು ರಚಿಸಿದರು: ತಾಳ್ಳಪಾಕಂ ಚಿನ್ನಯ್ಯನವರು ಭಜನ ಪದ್ಧತಿಗೆ ಅಡಿಪಾಯ ಹಾಕಿ, ಮೂಲಪುರುಷ ರೆನಿಸಿಕೊಂಡರು. ಮುಂದೆ ಶ್ರೀ ತ್ಯಾಗರಾಜರೂ ಇದರಲ್ಲಿ ಪಾಲ್ಗೊಂಡರು. ಇದೇ ಮುಂದೆ ಗೋಷ್ಠಿಗಾನಕ್ಕೆ ಎಡೆ ಮಾಡಿಕೊಟ್ಟಿತು.

ಹಿಂದಿ, ಮರಾಠಿ ಹಾಗೂ ಮಲೆಯಾಳೀ ಭಾಷೆಯ ಭಕ್ತಿಗೀತೆಗಳು :

ಭಾರತದ ಭಜನ ಪದ್ಧತಿಯಲ್ಲಿ ಇಲ್ಲವೆ ಭಕ್ತಿ ರಚನೆಗಳ ರಚನೆಕಾರರಾಗಿ ಹಿಂದಿ, ಮರಾಠಿ ಹಾಗು ಮಲೆಯಾಳೀ ಭಾಷೆಗಳಲ್ಲಿ ಅನೇಕ ಮಹನೀಯರು ಸೇವೆ ಸಲ್ಲಿಸಿದ್ದಾರೆ. ಬಹುಶಃ ಸಾಹಿತ್ಯದಿಂದ ಉಂಟಾಗುವ ಪರಿಣಾಮಕ್ಕಿಂತ, ಸಂಗೀತದಿಂದ ಉಂಟಾಗುವ ಪರಿಣಾಮ ಹೆಚ್ಚು ಎಂಬುದು ಇವರೆಲ್ಲರಿಗೂ ತಿಳಿದಿದ್ದುದರಿಂದಲೇ, ಇವರೆಲ್ಲರೂ ಈ ಮಾಧ್ಯಮವನ್ನು ಇಚ್ಛಿಸಿದರು. ಅಂತೆಯೇ ಕಾರ್ಯ ಕೈಗೊಂಡರು. ಈ ನಿಟ್ಟಿನಲ್ಲಿ ಮೀರ, ಸೂರದಾಸ್, ತುಳಸೀದಾಸ್, ಸಂತಕಬೀರ್, ಜ್ಞಾನದೇವ್, ನಾಮದೇವ್, ಇತ್ಯಾದಿ ಸಂತರು ಅಮೂಲ್ಯವಾದ ರಚನೆಗಳನ್ನು (ಭಜನ್) ರಚಿಸಿ, ಹಾಡಿ ವೈದಿಕಗಾನದಲ್ಲಿ ಪಾಲ್ಗೊಂಡರು

ಮಹಾರಾಷ್ಟ್ರದಲ್ಲಿ ಅಭಂಗ್, ದೋಹ್ರಾ, ಓವಿ ಇತ್ಯಾದಿ ಭಕ್ತಿ ರಚನೆಗಳು ರಚಿತಗೊಂಡಿವೆ. ಮಲೆಯಾಳೀ ಭಾಷೆಯಲ್ಲಿನ ಸೋಪಾನಂ ಹಾಡುಗಳು ಹಾಗೂ ದೇವೀ ಪೂಜೆಗೆ ಸಂಬಂಧಿಸಿದ ಭಕ್ತಿ ಹಾಡುಗಳು ಪ್ರಸಿದ್ಧವಾಗಿವೆ.

ಈಗ ೨೦ ನೇ ಶತಮಾನದಲ್ಲಿ ಭಕ್ತಿ ಸಂಗೀತ ಮುಂದುವರೆದು ಬೆಳೆದಿದೆ. ಭಕ್ತಿ ಗೀತೆಗಳ ನೂರಾರು ಕ್ಯಾಸೆಟ್ಟುಗಳು ಹೊರಬಂದು ಜನಪ್ರಿಯತೆಗಳಿಸಿವೆ. ಶರಣರ, ಸಂತರ, ದಾಸರ, ಕೃತಿಕಾರರ ರಚನೆಗಳಲ್ಲದೆ, ಇಂದಿನ ರಚನೆಕಾರರಿಂದ ರಚಿಸಲ್ಪಟ್ಟ ಅನೇಕ ರಚನೆಗಳೂ ಪ್ರಸಿದ್ಧಿಗಳಿಸಿವೆ. ಸರಳ ಸಾಹಿತ್ಯವನ್ನು ಹೊಂದಿದ್ದು, ಸುಲಭ ಮಟ್ಟಿನಲ್ಲಿದ್ದು, ಕೇಳುಗರಿಗೆ ಶ್ರವಣ ಸುಖವನ್ನು ನೀಡುವಂತಹ, ಕೇಳಿ ಕಲಿಯಲು ಸಾಧ್ಯವಿರುವಂತಹ, ಎಲ್ಲರ ಹೃದಯವನ್ನು ಮುಟ್ಟುವಂತಹ, ಆರೋಗ್ಯದಾಯಕ

ಪರಿಸರವನ್ನು ನಿರ್ಮಿಸುವಂತಹ, ಭಕ್ತಿ ರಚನೆಗಳ ಹಾಗೂ ಭಕ್ತಿ ಸಂಗೀತದ ಅವಶ್ಯಕತೆ, ಹಿಂದೆಯೂ ಇತ್ತು, ಮುಂದೆಯೂ ಬೇಕಾಗಿದೆ.

ಅಯ್ಯಪ್ಪ ದೇವರ, ಸಿದ್ಧಲಿಂಗೇಶ್ವರರ, ಮಲೆ ಮಹದೇಶ್ವರರ, ಮಂಜುನಾಥ ಸ್ವಾಮಿಯ, ಗುರುರಾಯರ ಹೀಗೆ ಅನೇಕ ದೇವತೆಗಳನ್ನು ಕುರಿತಾದಂತಹ ಭಕ್ತಿ ಹಾಡುಗಳು ಬಳಕೆಯಲ್ಲಿವೆ.

ಒಟ್ಟಿನಲ್ಲಿ ಭಕ್ತಿ ಸಂಗೀತವು ಮಾನವರನ್ನು ಸತ್ಕ್ರಿಯೆಯನ್ನಾಚರಿಸಲು, ಉತ್ತಮ ಬಾಳು ಬೆಳಗಲು ಪ್ರೇರೇಪಿಸುತ್ತದೆ. ಮನಸ್ಸನ್ನು ಆನಂದಕ್ಕೆ ಗುರಿ ಪಡಿಸುತ್ತದೆ. ಇಂತಹ ರಚನೆಗಳ ಹಾಗೂ ಸಂಗೀತದ ಬೆಲೆ ಅತ್ಯಮೂಲ್ಯವಾದುದು. ಶತಮಾನ ಶತಮಾನಗಳೇ ಉರುಳಿದರೂ ಇವೆಂದೂ ಶಾಶ್ವತ.

'ಬ' ಎಂದೊಡಾಯಿತ್ತು ನಾದ, 'ಸ' ಎಂದೊಡಾಯಿತ್ತು ಬಿಂದು 'ವ' ಎಂದೊಡಾಯಿತ್ತು ಕಲಾ, ಇಂತು ನಾದಬಿಂದು ಕಲಾತ್ಮಸ್ವರೂಪಿ.

★ ★

ಜನ್ಮ ಜನ್ಮಾಂತರಗಳ ಸಂಚಿತಕರ್ಮ
ಶಿವಶಿವಾ ಎಂದರೆ ಬಿಡದು, ಹರಹರಾ ಎಂದರೆ ಬಿಡದು.

"ಕರ್ನಾಟಕ ವಿಜಯ ವೈಜಯಂತ"–ರಂಗದರ್ಶನದ ಒಂದು ಇಣುಕು ನೋಟ

ಡಾ॥ ಹೆಚ್. ಕೆ. ರಂಗನಾಥ್

(ಕಿತ್ತೂರ ಲಾವಣಿ ಅಥವಾ ಗೀ ಗೀ)

ಕನ್ನಡಿಗ : ಎಷ್ಟು ಸವಿಯಾದ ತಿಳಿಗನ್ನಡದಲ್ಲಿ—ಏನೆಂಥ ವೀರಗತೆ !

ಕನ್ನಡತಿ : ಹೌದು, ಕನ್ನಡ ನುಡಿ ಹಾಲೋಗರದಂತೆ ಬಲು ಸವಿ. ವೀಣೆಯ ಮಿಡಿತದಂತೆ ಮಂಜುಳ.

ಕ್ರಿ. ಶ. 450 ರ ಹಲ್ಮಿಡಿ ಶಾಸನ ಕನ್ನಡಲಿಪಿಯಲ್ಲಿದೆ. ನೆತ್ತರಕತ್ತಿಯನ್ನು ತೊಳೆದುದಕ್ಕಾಗಿ ವಿಜಯರಸನ ದತ್ತಿಗಲ್ಲು ಅದು. ಲಿಪಿಯನ್ನು ವಿವೇಚಿಸಿದರೆ, ಕನ್ನಡ ಅಕ್ಷರಕ್ಕೆ ಮತ್ತೂ ಸಾವಿರ ವರುಷಗಳ ಹಳಮೆಯನ್ನು ತೊಡಿಸಬೇಕಾಗುತ್ತದೆ.

ಕನ್ನಡಿಗ : ಕನ್ನಡವೆಂದರೆ ಕಸ್ತೂರಿ, ನೇಮಿಚಂದ್ರ ನುಡಿದಂತೆ, ಭುವನದ ಭಾಗ್ಯದಿಂದ ಬೆಳೆದು ಬಂದ ಭಾಷೆ ಇದು. ಕನ್ನಡದಲ್ಲಿನ ಕಾವ್ಯಪರಂಪರೆಯಾದರೂ, ನಾಡಿಗೆ ಕೋಡು ಮೂಡಿಸುವಂಥದು. ಸಹಜಕಾವ್ಯ ಅದು.

ದೇವವಾಣಿಯಾಗಿದ್ದ ಕನ್ನಡ ಕಾವ್ಯ–ಜನವಾಣಿಯೂ ಆಗಲು ಶ್ರಮಿಸ ಬೇಕಾಗಲಿಲ್ಲ. ನಮ್ಮ ಕವಿಗಳಂತೂ ಅಸಾಮಾನ್ಯರು.

ಧ್ವನಿ : ರತ್ನಪರೀಕ್ಷಕನಾಂ, ಕೃತಿ
ರತ್ನಪರೀಕ್ಷಕನೆಂದು, ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಳ್ ಪರೀಕ್ಷಪಂಗೇಂಟಿರ್ದಯೆ ?

ಧ್ವನಿ 2 : ಹಲಗೆ ಬಳಪವ ಹಿಡಿಯದೊಂದ
ಗ್ಗಳಿಕೆ ಪದವಿಟ್ಟಳಿಸದೊಂದ
ಗ್ಗಳಿಕೆ ಪರರೊಡ್ಡವರ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠ ಪತ್ರದ
ಉಲುಹುಗಡೆದಗ್ಗಳಿದೆಯೆಂಬೀ
ಬಲುಹುಗದುಗಿನ ವೀರನಾರಾಯಣನ ಕಿಂಕರಗೆ

ಧ್ವನಿ 3 : ಬೆಲೆಯಿಂದಕ್ಕುಮೆ ಕೃತಿ, ಗಾ
ವಿಲ, ಭುವನದ ಭಾಗ್ಯದಿಂದಮಕ್ಕುಂ, ಸೊಳ್ಪಂ
ಬೆಲೆಗೊಟ್ಟು ತಾರ ಮಧುವ
ಮಲಯಾನಿಲನಂ ಮನೋಜನಂ ಕೌಮುದಿಯುಂ.

ಧ್ವನಿ : ಅಯ್ಯಯ್ಯಾ ಚೆನ್ನಾದುದೇನೆ ಕನ್ನಡಿಗರು
ರಯ್ಯಾ, ಮಂಚದಿಯೆನ್ ತಲಗ
ಅಯ್ಯಯ್ಯ ಎಂಚಪೊರ್ಲರ್ಂಡೊದು ತುಳುವರು
ಮೈಯುಬ್ಬಿ ಕೇಳಬೇಕಣ್ಣಾ
ನರಕಕೆ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನ್
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್‌ಮನಸನ್ ನೀಕಾಣೆ—

ಕನ್ನಡತಿ : ಇಂಥದೊಂದು ಛಲದಿಂದಾಗಿ ಕನ್ನಡ ಬೆಳೆಯಿತು ; ಕನ್ನಡದ ಪರಿಮಳ ಪಸರಿಸಿತು, ಕನ್ನಡ ಕಾವ್ಯ, ನಾಟಕ, ಸಾಹಿತ್ಯದ ಬೆಳೆಸಂ ಸೊಂಪಾಗಿ ನಾಡಿನ ಉದ್ದಗಲದಲ್ಲಿ ವ್ಯಪಿಸಿತ್ತಲ್ಲಾ ! ಅದನ್ನು ಧ್ವನಿಯೆತ್ತಿ ಹಾಡಿ, ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಜೋಳದರಾಶಿ ದೊಡ್ಡನ ಗೌಡರು–ನಾಡಿನ ಮೈ ನವಿರೇಳುವಂತೆ ಮಾಡಿದರು.

—★—

ರಾಷ್ಟ್ರಪ್ರೇಮ—
ಒಂದು ಚಿಂತನೆ

ಪ್ರೊ|| ಜಿ. ಎಸ್. ಸಿದ್ಧಲಿಂಗಯ್ಯ

ರಾಷ್ಟ್ರಪ್ರೇಮದ ಬಗ್ಗೆ ಉದ್ದುದ್ದನೆಯ ಭಾಷಣಮಾಡಬಹುದು. ವಿಶ್ವ ಪ್ರೇಮದ ಇದಿರಿನಲ್ಲಿ ರಾಷ್ಟ್ರಪ್ರೇಮ ಎಂಬುದು ತೀರ ಸಂಕುಚಿತವಾದುದೆಂದು ವ್ಯಾಖ್ಯಾನಿಸಬಹುದು. ಇಂಥ ವ್ಯಾಖ್ಯಾನಗಳು ಎಷ್ಟೋ ವೇಳೆ ವಾದಮಾಡುವವರ ಮೂಗಿನನೇರಕ್ಕೇ ಇರುವುದು ಆಶ್ಚರ್ಯಕರವಾದರು, ನಿಜವಾದ ಸಂಗತಿ.

ರಾಷ್ಟ್ರಪ್ರೇಮದ ವ್ಯಾಖ್ಯಾನವಾಗುವಾಗ ಅದು ತನಗೆ ತಾನೇ ಅನೇಕ ಬಣ್ಣಗಳನ್ನು ಪಡೆದುಕೊಂಡು ಬಿಡುತ್ತದೆ. ಅದರ ಬದಲು ಕೆಲವು ಘಟನೆಗಳನ್ನು ಗಮನಿಸಿದಾಗ, ಅಲ್ಲಿನ ಜನರ ವರ್ತನೆಗಳ ಹಿನ್ನೆಲೆಯಲ್ಲಿರುವ ಪ್ರೇರಕ ಶಕ್ತಿಗಳನ್ನು ಗಮನಿಸಿದಾಗ ಬಹುಶಃ ವಾಸ್ತವ ಚಿತ್ರ ನಮಗೆ ದೊರಕಿತೇನೋ.

ಎರಡನೆಯ ಮಹಾಯುದ್ಧದ ಸಮಯ. ಸುಮಾರು ಆರುವರ್ಷಗಳಷ್ಟು ದೀರ್ಘಕಾಲ ನಡೆದ ಆ ಮಹಾಯುದ್ಧದ ಸಂದರ್ಭದಲ್ಲಿ ಕಣ್ಣಿಟ್ಟು ನೋಡಿದರೆ ಘಟನೆಗಳ ಸರಮಾಲೆಯೇ ನಮ್ಮೆದುರಾಗುತ್ತದೆ. ಅದರಲ್ಲಿನ ಒಂದ ಘಟನೆ ಇದು.

ಒಂದಾದ ಮೇಲೊಂದು ಕಡೆ ವಿಜಯದ ಪತಾಕೆಯನ್ನು ಹಾರಿಸುತ್ತಾ ನಡೆದಿದ್ದ ಜರ್ಮನಿ ತನ್ನ ನಿರ್ದೇಶಿತ ಕ್ಷಿಪಣಿಗಳಿಂದ ಲಂಡನ್ ನಗರವನ್ನು ಧೂಳೀಪಟಮಾಡಲು ತೊಡಗಿದ್ದ ಸಮಯ. 'ಸೂರ್ಯಮುಳುಗದ ಸಾಮ್ರಾಜ್ಯ' ಎಂದು ಖ್ಯಾತವಾಗಿದ್ದ ಬ್ರಿಟನ್ನಿನ ಹೃದಯಕ್ಕೆ ಹೊಡೆತ ಬೀಳುತ್ತಿದ್ದ ಆತಂಕದ ದಿನಗಳು ಅವು. ದೀರ್ಘಕಾಲದ ಯುದ್ಧದ ಕಾರಣದಿಂದಾಗಿ ಬ್ರಿಟನ್ನಿನ ಸಂಪನ್ಮೂಲಗಳು ಕ್ರಮಬದ್ಧವಾಗಿ ನಾಶವಾಗುತ್ತಿದ್ದ ಕಾಲ. ಆಹಾರ ಮಾತ್ರವಲ್ಲ, ಬೆಳಗಿನ ಕಾಫಿ ಕೂಡ ಕಹಿಯಾಗುತ್ತಿದ್ದ ದಿನಗಳವು. ಲಂಡನ್ನಿನ ಹೋಟೆಲೊಂದರಲ್ಲಿ ಭಾರತೀಯನೊಬ್ಬ ಕಾಫಿಗೆ ಆದೇಶ ನೀಡಿದ. ಆತನ ಪಕ್ಕದಲ್ಲೇ ಬ್ರಿಟನ್ನಿನವನೊಬ್ಬ ಕುಳಿತಿದ್ದ. ಹೋಟೆಲಿನ ಮಾಣಿ ಕಾಫಿಯನ್ನು ತಂದಿಟ್ಟ. ಅಲ್ಲಿನ ಕಾಫಿಯ ಕ್ರಮ ಅಪರಿಚಿತವಾದದ್ದೇನೂ ಅಲ್ಲ. ಒಂದು ಬಟ್ಟಲಿನಲ್ಲಿ ಕಾಫಿ ಡಿಕಾಕ್ಷನ್, ಇನ್ನೊಂದು ಬಟ್ಟಲಿನಲ್ಲಿ ಹಾಲು, ಮತ್ತೆರಡು ಬಟ್ಟಲುಗಳು, ಒಂದರಲ್ಲಿ ಸ್ಯಾಕರೀನ್ ಗುಳಿಗೆಗಳು, ಮತ್ತೊಂದರಲ್ಲಿ ಸಕ್ಕರೆ. ಭಾರತೀಯ ಸಹಜವಾಗಿಯೇ, ಸಕ್ಕರೆಯ ಬಟ್ಟಲನ್ನೆಳೆದು ಒಂದು ಚಮಚೆ ಹಾಕಿಕೊಂಡ. ತನಗೆ ಅಗತ್ಯವಾದಷ್ಟು ಹಾಲು ಬಗ್ಗಿಸಿಕೊಂಡ. ಕಾಫಿಯನ್ನು ಇನ್ನೇನು ಗುಟುಕರಿಸಬೇಕು, ಎದುರಿಗೆ ಕುಳಿತಿದ್ದ ಬ್ರಿಟನ್ನಿನವನ ವರ್ತನೆ ಅವನಿಗೆ ಆಶ್ಚರ್ಯಕರವಾಗಿ ಕಂಡಿತು. ಇನ್ನೂ ಯುವಕನಾಗಿದ್ದ ಆತ ಸಕ್ಕರೆಯ ಬಟ್ಟಲನ್ನು ಮುಟ್ಟಲಿಲ್ಲ. ಸ್ಯಾಕರೀನ್ ಬಟ್ಟಲನ್ನು ತೆಗೆದುಕೊಂಡು, ಅದರಿಂದ ಒಂದು ಗುಳಿಗೆಯನ್ನು ತನ್ನ ಕಾಫಿ ಬಟ್ಟಲಿಗೆ ಹಾಕಿಕೊಂಡು ಅದಕ್ಕೆ ಹಾಲು ಬೆರೆಸಿ ಚಮಚದಿಂದ ಅದನ್ನು ಕರಗಿಸತೊಡಗಿದ.

ಕುತೂಹಲಿತನಾದ ಭಾರತೀಯ ಕೇಳಿದ, 'ಏನುಸ್ವಾಮಿ ನಿಮಗೆ ಸಕ್ಕರೆ ಖಾಯಿಲೆಯೆ ?'

ಏಕೆ ಆ ಪ್ರಶ್ನೆ ಕೇಳುತ್ತೀರಿ ?

'ಸಕ್ಕರೆ ಬಟ್ಟಲು ಮುಂದಿದೆ. ಆದರೂ ಸ್ಯಾಕರೀನ್ ಬಳಸುತ್ತಿದ್ದೀರಿ ಅದಕ್ಕಾಗಿ ಕೇಳಿದೆ ಅಷ್ಟೆ.'

'ನನಗೇನೂ ಸಕ್ಕರೆ ಖಾಯಿಲೆಯಿಲ್ಲ ಸ್ವಾಮಿ'

'ಮತ್ತೆ ಸ್ಯಾಕರೀನ್'

'ನೋಡಿ, ಮೊನ್ನೆ ನಮ್ಮ ಪ್ರಧಾನಿ ಆಕಾಶವಾಣಿ ಮೂಲಕ ನಮ್ಮನ್ನೆಲ್ಲಾ ಕೇಳಿಕೊಂಡಿದ್ದಾರೆ.'

'ಏನು ?'

'ನಮ್ಮ ದೇಶದ ಸಂಪನ್ಮೂಲಗಳನ್ನು ಉಳಿತಾಯ ಮಾಡಬೇಕು. ಅವುಗಳಲ್ಲಿ ಸಕ್ಕರೆ ಕೂಡ ಒಂದು. ನಾವು ಅದನ್ನು ಭರಿಸಿದರೆ ಹೊರದೇಶಗಳಿಗೆ ರಫ್ತುಮಾಡಿ ಸಂಪನ್ಮೂಲಗಳನ್ನು ರೂಢಿಸಿಕೊಂಡು, ನಮ್ಮ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸಿ

ಕೊಳ್ಳಬೇಕು. ಎಷ್ಟೆಷ್ಟು ಉಳಿತಾಯ ಮಾಡಬಲ್ಲೆವು, ಅಷ್ಟಷ್ಟು ಸಂಪನ್ಮೂಲ ಹೆಚ್ಚು ಮಾಡಬಹುದು. ಯುದ್ಧ ಹೀಗೆಯೆ ಮುಂದುವರಿದರೂ ರಾಷ್ಟ್ರದ ಅಗತ್ಯವಾದ ಶಸ್ತ್ರಸಜ್ಜಿಕೆಯನ್ನು ಮಾಡಬಹುದು' ಹಾಗೆಯೇ ಹೋಟೇಲಿನ ಎಲ್ಲಾ ಟೇಬಲ್ಲುಗಳ ಕಡೆಯೂ ಕಣ್ಣು ಹಾಯಿಸಿದಾಗ ಬ್ರಿಟನ್ನಿನವರೆಲ್ಲಾ ಸ್ಯಾಕರೀನ್‌ನನ್ನೆ ಬಳಸುತ್ತಿದ್ದರು. ಸಕ್ಕರೆಯ ಬಟ್ಟಲುಗಳು ಹಾಗೆಯೇ ತುಂಬಿ ಉಳಿದಿದ್ದವು.

ಅಷ್ಟು ಚಿಕ್ಕದಾದ ದೇಶ, ವಿಶ್ವದ ಅರ್ಧ್ಯೊಂದು ರಾಷ್ಟ್ರಗಳ ಮೇಲೆ ಹೇಗೆ ನೂರಾರು ವರ್ಷಗಳ ಆಡಳಿತಮಾಡಿತೆಂಬ ಬಗ್ಗೆ ಯೋಚಿಸತೊಡಗಿದೆ. ಕಣ್ಣೆದುರಿಗೆ ಕಂಡದ್ದು ಸ್ಯಾಕರೀನ್ ಸಕ್ಕರೆಗಳಲ್ಲ; ರಾಷ್ಟ್ರಕ್ಕಾಗಿ ಏನನ್ನಾದರೂ ತ್ಯಾಗ ಮಾಡಲು ಸಿದ್ಧವಿರುವ ರಾಷ್ಟ್ರಪ್ರೇಮವೇ ಎಲ್ಲ ಕಡೆಗಳಲ್ಲೂ ಪ್ರತಿಫಲಿಸತೊಡಗಿತು.

ನೈತಿಕವೆಂಬುದೇ ಗುರು, ಧಾರ್ಮಿಕವೆಂಬುದೇ ಲಿಂಗ, ಸಾಮಾಜಿಕವೆಂಬುದೇ ಜಂಗಮ.

★ ★

ರಂಜನೆಗೆ ಸೊಕ್ಕಿದೀ ಮನ ನಿರಂಜನೆಗೆ ಸಿಕ್ಕದಂತಿಹುದು. ರಂಜನೆ ನಿರಂಜನೆಯು ನೀನೆಯಾಗಿಪ್ಪೆ.

ಈ ಸಂಚಿಕೆಯ ಲೇಖಕರು

1. ಎಚ್. ಚನ್ನವೀರಗೌಡ
ಜೋಳದರಾಶಿ
ಬಳ್ಳಾರಿ ಜಿಲ್ಲೆ–583 111.

2. ಡಾ॥ ಎಚ್. ಚಂದ್ರಶೇಖರ
"ಅರ್ಪಿತಾ" ದಯಾನಂದ ಪ್ರೆಸ್
ಎದುರು ರಸ್ತೆ, ವಿನೋಬ ನಗರ,
ಶಿವಮೊಗ್ಗ.

3. ಡಾ॥ ಸಿದ್ಧಯ್ಯ ಪುರಾಣಿಕ
"ಶ್ರೀಗಿರಿ" 4/5ಎ,
ಅಲಿಅಸ್ಕರ್ ರೋಡ್,
ಬೆಂಗಳೂರು–560 052.

4. ನಿರಂಜನ ಮತ್ತು
ಡಾ॥ ಅನುಪಮ ನಿರಂಜನ
"ಕಥೆ" 515, 7ನೇ ಮೆಯಿನ್,
46ನೇ ಕ್ರಾಸ್, 5ನೇ ಬ್ಲಾಕ್,
ಜಯನಗರ.
ಬೆಂಗಳೂರು–560 041.

5. ತೊಗರಿ ಸರ್ವಮಂಗಳಮ್ಮ
ಕಮಿಂಗ್ ರೋಡ್, ಬಳ್ಳಾರಿ.

6. ಗೌಡರ ತಿಪ್ಪೇಸ್ವಾಮಿ
"ಸಾಹಿತ್ಯ ಸಂಪದ", ತುರುವನೂರು
ಚಿತ್ರದುರ್ಗ ಜಿಲ್ಲೆ.

7. ಬಿ. ಶ್ರೀನಿವಾಸಮೂರ್ತಿ
73 ಮಹಡಿ, ರತ್ನವಿಲಾಸ ರಸ್ತೆ,
ಬಸವನಗುಡಿ,
ಬೆಂಗಳೂರು-560 004.

8. ಪಿ. ಸುಬ್ಬಾಶಾಸ್ತ್ರಿ
ನಿವೃತ್ತ ಮುಖ್ಯೋಪಾಧ್ಯಾಯ
ರಾಯದುರ್ಗ–(ಎ. ಪಿ.)

9. ದಾಕ್ಷಾಯಿಣಿ ಜಯದೇವಪ್ಪ
C/o. H.M. ಮಲ್ಲಿಕಾರ್ಜುನಪ್ಪ
ಅಶೋಕ ರಸ್ತೆ, ಶಿವಮೊಗ್ಗ.

10 ಎಂ. ಶರಭಯ್ಯ
C/o. ಯು. ಶಿವಕುಮಾರಗೌಡ
ಗಾಂಧಿನಗರ, ಬಳ್ಳಾರಿ.

11. ಜಯಾ ಎಸ್. ರಾವ್
"ಸೀತಾ" 2ನೇ ಕ್ರಾಸ್,
ಜಯನಗರ, ಶಿವಮೊಗ್ಗ.

12. ಜೆ. ಹನುಮಂತಶಾಸ್ತ್ರಿ
1/74 ಎ, ಗಾಂಧಿನಗರ,
ಕಡಪ–516 004.

13. ಶಕುಂತಲಾಬಾಯಿ ಪಾಂಡುರಂಗರಾವ್
825–"ಇ" ಬ್ಲಾಕ್,
3ನೇ ಮುಖ್ಯರಸ್ತೆ, 2ನೇ ಸ್ಟೇಜ್,
ರಾಜಾಜಿನಗರ,
ಬೆಂಗಳೂರು–560 010.

14. ಎಂ. ಜಿ. ನಂಜುಂಡಾರಾಧ್ಯ
ಪ್ರಬೋಧ ಪುಸ್ತಕ ಪ್ರಕಟನಾಲಯ
ಬಸವೇಶ್ವರ ರಸ್ತೆ, ಮೈಸೂರು.

15. ಜಿ. ವಿ. ಜಯರಾಜಶೇಖರ್
W/o. ಡಾ॥ ವೈ. ರಾಜಶೇಖರ್
6, 15ನೇ ಕ್ರಾಸ್, 3ನೇ ಬ್ಲಾಕ್,
ಜಯನಗರ,
ಬೆಂಗಳೂರು–560 011.

16. ಶ್ರೀ ಎನ್ಕೆ
"ಪಾರಿಜಾತ"
ರೈಲ್ವೆ ಗುಡ್ಸ್‌ಷೆಡ್ ಹತ್ತಿರ, ಧಾರವಾಡ.

17. ಶಿ. ವ. ಚನ್ನಬಸವೇಶ್ವರ
ಕಂಬಳಿ ಬಜಾರ
(ಮಾರಮ್ಮನ ಗುಡಿ ಹತ್ತಿರ), ಬಳ್ಳಾರಿ.

18. ಸರೋಜ ವಿ. ನಾಯ್ಡು
168/A, 8ನೇ "ಬಿ" ಮುಖ್ಯರಸ್ತೆ,
ರಾಜಮಹಲ್ ವಿಲಾಸ ಬಡಾವಣೆ,
ಬೆಂಗಳೂರು-560 080,

19. ಪ್ರೊ ಜಿ. ವೆಂಕಟಸುಬ್ಬಯ್ಯ
58, 3ನೇ ಕ್ರಾಸ್,
7ನೇ ಬ್ಲಾಕ್, ಜಯನಗರ,
ಬೆಂಗಳೂರು–560 011.

20. ಅ. ನ. ಕೃ.
"ಅನ್ನಪೂರ್ಣ" ವಿಶ್ವೇಶ್ವರಪುರಂ,
ಬೆಂಗಳೂರು–560 004.

21. ಡಾ|| ಸಾ. ಶಿ. ಮರುಳಯ್ಯ
"ರಾಗಿಣಿ" ಸರ್ವಿಸ್ ರೋಡ್,
ವಿಜಯನಗರ ಪೂರ್ವ, ಬೆಂಗಳೂರು.

22. ಡಾ|| ಎಸ್. ವಿದ್ಯಾಶಂಕರ್
138, 7'ಸಿ' ಮುಖ್ಯರಸ್ತೆ,
2ನೇ ಸ್ಟೇಜ್, ವಿಜಯನಗರ,
ಬೆಂಗಳೂರು-560 040.

23. ಶ್ರೀಮತಿ ಶಾಂತಾದೇವಿ ಮಾಳವಾಡ
ಕಲ್ಯಾಣನಗರ, ಧಾರವಾಡ.

24. ಡಾ|| ಮಲ್ಲಿಕಾರ್ಜುನ ಸಿ. ಲಠ್ಠೆ
ಪ್ರೊಫೆಸರ್
ಗುಲಬರ್ಗಾ ವಿಶ್ವವಿದ್ಯಾನಿಲಯ,
ಗುಲಬರ್ಗಾ.

25. ಜಿ. ಚಂದ್ರಶೇಖರರೆಡ್ಡಿ
12. ಎಂ. ಐ. ಜಿ. ಹೆಚ್.
ಮೆಹದಿಪಟ್ನಂ,
ಹೈದರಾಬಾದ್-500 028.

26. ಶಂಭು ಬಳಿಗಾರ
ಕನ್ನಡ ಪ್ರಾಧ್ಯಾಪಕ,
ಶ್ರೀ ವಿ. ಮ. ಮಹಾವಿದ್ಯಾಲಯ,
ಇಲಕಲ್ಲ-587 125
(ಬಿಜಾಪುರ ಜಿಲ್ಲೆ).

27. ಶಾಂತರಸ
ಆಜಾದನಗರ,
ರಾಯಚೂರು-584 101.

28. ಶ್ರೀ ಚನ್ನವೀರ ಕಣವಿ
"ಚಂಬೆಳಕು", ಕಲ್ಯಾಣನಗರ,
ಧಾರವಾಡ.

29. ಡಾ|| ಹಾ. ಮಾ. ನಾಯಕ
"ಗೋಧೂಳಿ" ಜಯಲಕ್ಷ್ಮಿಪುರಂ,
ಮೈಸೂರು.

30. ಎನ್. ಎಂ. ಕೆ. ಸೋಗಿ
664, 10ನೇ ಕ್ರಾಸ್,
ವೆಸ್ಟ್ಆಫ್ ಕಾರ್ಡ್ ರೋಡ್,
2ನೇ ಸ್ಟೇಜ್,
ಬೆಂಗಳೂರು-560 086.

31. ಪಂಡಿತ ಕೆ. ಪಿ. ಶಿವಲಿಂಗಯ್ಯ
425/1 "ಕುಮಾರ ನಿಲಯ"
ವಿಜಯನಗರ,
ಬೆಂಗಳೂರು-560 040.

32. ಬಿ. ಎಸ್. ಚಂದ್ರಕಲಾ
233, I "A" ಮುಖ್ಯರಸ್ತೆ,
ರಾಜಾಜಿನಗರ II ಸ್ಟೇಜ್,
ಬೆಂಗಳೂರು-560 010.

33. ಎಸ್. ಸಣ್ಣಸುಂಕಪ್ಪ
ನಿವೃತ್ತ ಉಪಾಧ್ಯಾಯ,
ಉಪ್ಪಾರಹಟ್ಟಿ.

34. ಡಾ|| ಅಂಗಡಿ ನಾಗಪ್ಪ
"ಮೃತ್ಯುಂಜಯ ಕೃಪಾ"
ವೀರಶೈವ ಜಾಗೃತಿ ಸಂಘ,
ಬಳ್ಳಾರಿ.

35. ಡಾ|| ಕೆ. ದೊಡ್ಡನಗೌಡ
ಜೋಳದರಾಶಿ,
ಬಳ್ಳಾರಿ ಜಿಲ್ಲೆ-583 111.

36. ರಾ. ಸತ್ಯನಾರಾಯಣ
"ತ್ರಾಯಿಲಕ್ಷ್ಮಿ" 9ನೇ ಕ್ರಾಸ್,
ಜಯನಗರ,
ಮೈಸೂರು-570 014.

37. ಸರ್ವಮಂಗಳಾ ಶಂಕರ್
364/A 5ನೇ ಮೆಯಿನ್,
ಆರ್. ಪಿ. ಸಿ. ಲೇಔಟ್,
ವಿಜಯನಗರ,
ಬೆಂಗಳೂರು-560 040.


38. ಡಾ|| ಹೆಚ್. ಕೆ. ರಂಗನಾಥ್
942, 23ನೇ ಮುಖ್ಯರಸ್ತೆ,
IV"ಟಿ" ಬ್ಲಾಕ್, ಜಯನಗರ.
ಬೆಂಗಳೂರು-560 004.

39. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
"ಲಲಿತಾ ಕೃಪ"
203, 7"A" ಮುಖ್ಯರಸ್ತೆ,
II ಸ್ಟೇಜ್, ವಿಜಯನಗರ,
ಬೆಂಗಳೂರು-560 040.

ತಿದ್ದುಪಡಿ

ಪುಟ ಸಂಖ್ಯೆ	ಸಾಲಿನ ಸಂಖ್ಯೆ	ತಪ್ಪು	ಒಪ್ಪು
3	5	ನಾನಾರಂಗಳಲ್ಲಿ	ನಾನಾರಂಗಗಳಲ್ಲಿ
4	12	ಮುಂದೇ	ಮುಂದೆ
5	15	ಚಾಸ್ಕರಾಭಾರ್ಯ	ಭಾಸ್ಕರಾಚಾರ್ಯ
11	21	ಪ್ರಜ್ಜಲಿಸುವಂತೆ	ಪ್ರಜ್ವಲಿಸುವಂತೆ
11	23	ಗ ರುಗಳೇ	ಗುರುಗಳೇ
14	23	ನೊ ಡಪ್ಪ	ನೋಡಪ್ಪ
20	15	ಧೀರ್ಘಕಾಲ	ದೀರ್ಘಕಾಲ
24	14	ಆಕಾರ	ಅಕಾರ
25	20	ಬೇತನವೊಂದು	ಚೇತನವೊಂದು
27	14	ಶಬ್ಧ	ಶಬ್ದ
36	14	ನಡೆದಿತು.	ನಡೆದಿತ್ತು.
36	22	ಗುಡ್ದದ	ಗುಡ್ಡದ
38	14	ಇವಳ	ಇವರ
40	28	ಸುಧ್ರಾವರ್ಷ	ಸುಧಾವರ್ಷ
44	9	ಅಧಕ್ಷ	ಅಧ್ಯಕ್ಷ
45	6	ಡಿಪ್ಯೂಟಿ	ಡೆಪ್ಯೂಟಿ
47	8	ಆಧರಿಸಿ	ಆದರಿಸಿ
47	21	ಉದ್ಧಗಲಕ್ಕೂ	ಉದ್ದಗಲಕ್ಕೂ
48	2	ಆಮೃತೋಕ್ತಿ	ಅಮೃತೋಕ್ತಿ
49	6	ಇಚ್ಚಿಸಿರುವೆ.	ಇಚ್ಛಿಸಿರುವೆ.
49	22	ಪಾಠಶಾಲೆಯಿರುತಿತ್ತು.	ಪಾಠಶಾಲೆಯಿರುತ್ತಿತ್ತು.
51	15	ಆದು	ಅದು
53	14	ಯಮೋಲ್ಲಚುವಂ	ಯಮೋಲರಚುವಂ
57	12	ಇದ್ದುರ	ಇದ್ದೂರ
59	19	ಅಡ್ವೇಕೇಟರಾಗಿದ್ದ	ಅಡ್ವೋಕೇಟರಾಗಿದ್ದ
60	1	ವಾವದ್ದು	ವಾದದ್ದು
69	24	ಛಂಧಸ್ಸುಗಳ	ಛಂದಸ್ಸುಗಳ
76	16	1946 ರರಲ್ಲಿ	1946 ರಲ್ಲಿ
78	27	ಸಹಕಾರವಿತ್ತುದನು	ಸಹಕಾರವಿತ್ತುದನ್ನು
82	5	ಸಹಕರಿಹಿಸುತ್ತಿದ್ದರು.	ಸಹಕರಿಸುತ್ತಿದ್ದರು.
82	15	ಪ್ರಯಾಣಸಿ	ಪ್ರಯಾಣಿಸಿ
86	12	ಸಮೂಧಿಸಿದ್ದೆ.	ನಮೂದಿಸಿದ್ದೆ.

ಪುಟ ಸಂಖ್ಯೆ	ಸಾಲಿನ ಸಂಖ್ಯೆ	ತಪ್ಪು	ಒಪ್ಪು
87	27	ತಂಜದದಿಂದ	ಜಂಜಡದಿಂದ
87	28	ಜುಂಬಿಕೊಂಡು	ತುಂಬಿಕೊಂಡು
87	29	ಬರ	ಚಿರ
91	6	ಪಡುಳವೆರಸಿ	ಪದುಳವೆರಸಿ
101	24	ವ್ಯಾಖಾನ	ವ್ಯಾಖ್ಯಾನ
114	21	ಮುಂತ್ತುಗಳನ್ನಾಯ್ದು	ಮುತ್ತುಗಳನ್ನಾಯ್ದು
116	3	ಅಂದೊಂದು	ಅದೊಂದು
122	7	ಶ್ರೇಷ್ಟತಮ	ಶ್ರೇಷ್ಠತಮ
126	20	ಆಭಿಮಾನದಿಂದ	ಅಭಿಮಾನದಿಂದ
129	25	ಶೃಂಗಾರಚೆ ಷ್ಟೆಗಳಿಂದ	ಶೃಂಗಾರಚೇಷ್ಟೆಗಳಿಂದ
131	13	ಪ್ರವಚಿನ	ಪ್ರವಚನ
131	28	ಅಂತಂಗದ	ಅಂತರಂಗದ
137	29	"ಮಾತಿಲಿನಗಾಂಧಿ	"ಮಾತಿನಲಿಗಾಂಧಿ
148	11	ಕಾಬುತ್ತೇವೆ	ಕಾಣುತ್ತೇವೆ,
154	4	ವಿಶ್ವವಿದ್ಯಾಲಯುದಿಂದ	ವಿಶ್ವವಿದ್ಯಾಲಯದಿಂದ
155	10	ನಟ–ನಿರ್ದೇಶಕರಾಗಿ	ನಟ–ನಿರ್ದೇಶಕರಾಗಿ
160	30	ಡಿ. ಎ. ಜಿ. ವೈ.,	ಡಿ. ಎ. ಜಿ., ವೈ.
161	5	ಆತ್ಮಕ್ಥನ	ಆತ್ಮಕಥನ
162	3	ಅನಾರೋಗ್ಯದ	ಅನಾರೋಗ್ಯದ
163	2	ಎುಬ	ಎಂಬ
172	22	ಪಶ್ಚಾತ್ತಾಪವನ್ನು	ಪಶ್ಚಾತ್ತಾಪವನ್ನು
174	16	ಕೊನೆಯಿಲ್ಲದ	ಕೊನೆಯಿಲ್ಲದ
177	5	ಉತ್ಮಾಹದ	ಉತ್ಸಾಹದ
177	17	ಒಂದೊದಾಗಿ	ಒಂದೊಂದಾಗಿ
185	21	ಸೌಖ್ಯಾಮೃತ	ಸೌಖ್ಯಾಮೃತ
187	32	ಪ್ರಕಟಿತ	ಪ್ರಕಟಿತ
191	1	ಚಾಕುಚಕ್ಯತೆಯಾದರೂ	ಚಾಕಚಕ್ಯತೆಯಾದರೂ
191	27	ವಿಶಿಷ್ಟತೆಯುಟಾಗುವುದು	ವಿಶಿಷ್ಟತೆಯುಂಟಾಗುವುದು
192	22	ಅಂತೆಯಾಯಿತು	ಅಂತೆಯಾಯಿತು
194	9	ಮಾರ್ಪಡುವುದನ್ನ	ಮಾರ್ಪಡುವುದನ್ನು
194	27	ಆದಾಯ	ಆದಾಯ
214	7	ಅರ್ಥವಾಗುವುವುದಿಲ್ಲ	ಅರ್ಥವಾಗುವುದಿಲ್ಲ
224	22	ಪರಿಶ್ರಮ	ಪರಿಶ್ರಮ
224	28	ಅಗಿರಬೇಕು	ಆಗಿರಬೇಕು



ಲೋಕದಂತೆ ನನಗೆ ಮಕ್ಕಳಿಲ್ಲದಿದ್ದರೂ ನಾನು ನಿಸ್ಸಂತಾನಿಯಲ್ಲ. ಕಾವ್ಯಸಂತಾನಿ ; ಕಲಾಸಂತಾನಿ. ಭಾವ ಸುಂದರಿಯಿಂದ ಪಡೆದ ಈ ನನ್ನ ಸಂತಾನ ನನ್ನ ಕುಟುಂಬಕ್ಕೆ ಸೀಮಿತವಾಗದೆ, ರಾಷ್ಟ್ರ ಕುಟುಂಬಕ್ಕೆ ಸಲ್ಲುವ ಸಂತಾನ. ರಾಷ್ಟ್ರದ ಸಂಸ್ಕೃತಿಯ ಪರಂಪರೆಯನ್ನು ಬೆಳೆಯಿಸುವ ಸತ್ಸಂತಾನ. ಈ ಸಂತಾನವು ಪಿಂಡ ಸಂತಾನದಂತೆ ಅಲ್ಪಾಯುಷಿಯಲ್ಲ. ಒಲವು, ಛಲವು, ಬಲವು ಇದ್ದುದಾದರೆ ಅಖಂಡಾಯುಷ್ಯದಿಂದ ಲೋಕದ ಸಂತಾನವಾಗಿ ಬಾಳುತ್ತದೆ; ಎಂಬ ನನ್ನ ಧ್ಯೇಯವು ದೃಢಗೊಂಡಿದ್ದರಿಂದ, ಆನುವಂಶಿಕ ಕುಟುಂಬದ ಹಕ್ಕು, ಬಾಧ್ಯತೆಗಳಿಗಾಗಿ ಪಡೆಯುವ, ಮಕ್ಕಳ ಬಯಕೆಯ ಬಂಧನದಿಂದ ದೂರಾದೆ.

— ಡಾ॥ ಜೋಳದರಾಶಿ ದೊಡ್ಡನಗೌಡ